ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 20 ಏಪ್ರಿಲ್ 2026
ಸಂಪುಟ 48, ಸಂಚಿಕೆ 32 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸೋನಿಯಾ, ರಾಗಾ ವಿರುದ್ಧ ವಿಚಾರಣೆ ಇಂದು | ೦೭
ಅಮೆರಿಕ ಪ್ರಜೆಗಳಿಬ್ಬರ ಸೆರೆ | ೦೭
ಪವನ್ ಕಲ್ಯಾಣ್ ಅಸ್ವಸ್ಥ, ಚೇತರಿಕೆ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ ಉಪರಿ ಚೌತಿ, ನಕ್ಷತ್ರ: ರೋಹಿಣಿ

ದಿನದ ಮಾತು

ಸತ್ಯವು ಅಪರೂಪಕ್ಕೊಮ್ಮೆ ನೇರವಾಗಿರುತ್ತದೆ. ಎಂದಿಗೂ ಸರಳವಾಗಿರುವುದಿಲ್ಲ.

▲ಸುಭಾಷಿತ

ಬಯಲಿಗೆ ಬಂತು 'ಕಾರ್ಪೊರೇಟ್ ಜಿಹಾದ್'

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಕೆ.ಆರ್.ನಗರದಲ್ಲಿ ಆರು ಮಂದಿ ಕಾವೇರಿ ಪಾಲು

• **ಕೆ.ಆರ್.ನಗರ:** ಪಟ್ಟಣದ ಹೊರ ವಲಯದ ಹಳೆ ಎಡತೊರೆಯಲ್ಲಿರುವ ಸೈಯದ್ ಖಾದರ್ ಲಿಂಗಾವಲಿ ದರ್ಗದಲ್ಲಿ ನಡೆಯುವ ಉರುಸ್ ಕಾರ್ಯಕ್ರಮ ಮತ್ತು ಖವಾಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆರು ಮಂದಿ ಭಾನುವಾರ ಕಾವೇರಿ ನದಿಯಲ್ಲಿ ಈಜುವಾಗ ನೀರುಪಾಲಾಗಿದ್ದಾರೆ. ಬೆಂಗಳೂರಿನವರಾದ ಐಮಾ(13), ಯಾಸಿನ್(23), ನೇಹಾ(20), ಊಟಿಯ ಸೈಯದ್‌ಫಾತಿಮಾ(35), ಮೈಸೂರಿನ ಉಮ್ಮೇರಾ(7), ಕೆ.ಆರ್.ನಗರದ ಅಫಿಬಾ(20) ಮೃತರು. ಘಟನೆಯಿಂದ ಆಘಾತಕ್ಕೊಳಗಾಗಿ ಅಸ್ವಸ್ಥಗೊಂಡ ಇಬ್ಬರನ್ನು ಮೈಸೂರಿನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ➡ಪುಟ ೪



ಮಹಿಳಾ ಮೀಸಲಾತಿ ಮಸೂದೆ ಅವಶ್ಯಕತೆ

ಮಹಿಳಾ ಮೀಸಲಾತಿ ಪುನರಾವೃತ ಪ್ರಶ್ನೆಗಳು

• ಪುಟ ೭

ಸುದ್ದಿ ಸಮಗ್ರ

ಕಾಂಗ್ರೆಸ್, ಟಿಎಂಸಿ, ಡಿಎಂಕೆ ವಿರುದ್ಧ ಮೋದಿ, ಶಾ ವಾಗ್ದಾಳಿ

ಮಹಿಳೆಯರಿಗೆ ಮೋಸ

• **ಬಂಕುರಾ/ವಾಸುದೇವನಲ್ಲೂರು/ಈರೋಡ್:** ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಸೋಲಿನ ನಂತರ, ವಿರೋಧ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಯುತ್ತಿದ್ದು, ಮಹಿಳೆಯರಿಗೆ ಕಾಂಗ್ರೆಸ್, ಟಿಎಂಸಿ ಮತ್ತು ಡಿಎಂಕೆ ಸೇರಿದಂತೆ ವಿಪಕ್ಷಗಳು ವಂಚನೆ ಮಾಡಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದ ಬಂಕುರಾದಲ್ಲಿ ನಡೆದ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಮಹಿಳೆಯರಿಗೆ ಮೀಸಲಾತಿ



ನೀಡುವ ಮಸೂದೆಯನ್ನು ತಡೆದು, ಟಿಎಂಸಿ ಮಹಿಳೆಯರನ್ನು ವಂಚಿಸಿದೆ ಎಂದು ಆರೋಪಿಸಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರು ಇದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ದೇಶ ನಿರ್ಮಾಣದಲ್ಲಿ ನಮ್ಮ ಹೆಣ್ಣುಮಕ್ಕಳ ಪಾತ್ರವನ್ನು ವಿಸ್ತರಿಸಲು ನಾವು ಬಯಸುತ್ತೇವೆ. ಆದರೆ ಸಂಸತ್ತಿನಲ್ಲಿ ಏನಾಯಿತೆಂಬುದನ್ನು ನೀವು ನೋಡಿದ್ದೀರಿ. ಟಿಎಂಸಿ ಮತ್ತೆ ಪಶ್ಚಿಮ ಬಂಗಾಳದ ಮಹಿಳೆಯರನ್ನು ವಂಚಿಸಿದೆ ಎಂದು ಹೇಳಿದರು. 2029ರಿಂದ ಮೀಸಲಾತಿ ಜಾರಿಯಾಗಬೇಕೆಂಬ ಜನರ ಆಸೆಯನ್ನು ಟಿಎಂಸಿ ತಡೆದಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಕೊರತೆ ವಿರುದ್ಧ ಮಹಿಳೆಯರು ಧ್ವನಿ ಎತ್ತುತ್ತಿರುವುದರಿಂದ ಟಿಎಂಸಿ ಆತಂಕದಲ್ಲಿದೆ ಎಂದು ಹೇಳಿದರು.

ಕಾಂಗ್ರೆಸ್, ಡಿಎಂಕೆ ವಿರುದ್ಧ ರಾಜನಾಥ್ ಕಿಡಿ: ತಮಿಳುನಾಡಿನ ವಾಸುದೇವನಲ್ಲೂರಿನಲ್ಲಿ ನಡೆದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಾಂಗ್ರೆಸ್, ಡಿಎಂಕೆ ಸೇರಿದಂತೆ ಹಲವು ಪಕ್ಷಗಳನ್ನು ಟೀಕಿಸಿದರು. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಕ್ಕೆ ವಿರೋಧ ವ್ಯಕ್ತಪಡಿಸಿದವರನ್ನು ಅವರು ಗುರಿಯಾಗಿಸಿಕೊಂಡರು.

ನಮ್ಮ ಸರ್ಕಾರ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಲು ಬದ್ಧವಾಗಿದೆ. ➡ಪುಟ ೪



ಪಶ್ಚಿಮ ಬಂಗಾಳದ ಝೂರ್‌ಗ್ರಾಮದಲ್ಲಿ ಪ್ರಧಾನಿ ಮೋದಿ ಝುಲ್‌ಮುರಿ (ಚುರ್‌ಮುರಿ ರೀತಿಯ ಬೀದಿ ಬದಿ ತಿನಿಸು) ಸವಿದ ಅಪರೂಪದ ಕ್ಷಣ.

ಇಂಡಿ ಒಕ್ಕೂಟದ ಮಾನಸಿಕ ಸ್ಥಿತಿ ಅನಾವರಣ: ಸಂಸದ ಅನುರಾಗ್

• **ಬೆಂಗಳೂರು:** ಕಾಂಗ್ರೆಸ್ ಪಕ್ಷ ಹಾಗೂ ಅವರ ಮಿತ್ರ ಪಕ್ಷಗಳು ದೇಶದಲ್ಲಿ ಶೇ.50 ರಷ್ಟಿರುವ ಮಹಿಳೆಯರಿಗೆ ದ್ರೋಹವೆಸಗಿದ್ದಾರೆ. ಇಂಡಿ ಒಕ್ಕೂಟದ ಪಕ್ಷಗಳ ಮಹಿಳಾ



ವಿರೋಧಿ ಮಾನಸಿಕ ಸ್ಥಿತಿ ಅನಾವರಣಗೊಂಡಿದೆ ಎಂದು ಸಂಸದ ಅನುರಾಗ್ ಸಿಂಗ್ ಠಾಕೂರ್ ಕಿಡಿಕಾರಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆ ಸೋಲಲು ಕಾರಣರಾದ ಕಾಂಗ್ರೆಸ್ ಪಕ್ಷ ಹಾಗೂ ಅವರ ಮಿತ್ರ ಪಕ್ಷದವರನ್ನು ದೇಶದ ತಾಯಂದಿರು ಮತ್ತು ಸೋದರಿಯರು ಯಾವತ್ತೂ ಕ್ಷಮಿಸಲಾರರು ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಸೂದೆ ಕುರಿತು 2 ದಿನ ಚರ್ಚೆ ನಡೆದಿತ್ತು. 2023ರಲ್ಲಿ ವಿಪಕ್ಷಗಳು 2024ರ ಚುನಾವಣೆ ಕಾರಣಕ್ಕಾಗಿ ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸಿದ್ದವು. ➡ಪುಟ ೪

> ನೀತಿ ನಿರೂಪಣೆಯಲ್ಲಿ ಮಹಿಳೆಯರಿಗೆ ಅವಕಾಶ ನೀಡುವ ಆಶಯ ಪ್ರಧಾನಿ ಮೋದಿ ಅವರದಾಗಿತ್ತು. ಆದರೆ, ವಿಪಕ್ಷಗಳು ಅದಕ್ಕೆ ಅವಕಾಶ ಕೊಟ್ಟಿಲ್ಲ. ಕಾಂಗ್ರೆಸ್ ಮತ್ತಿತರ ಪಕ್ಷಗಳು ಮಹಿಳೆಯರಿಗೆ ನಿರಂತರವಾಗಿ ದ್ರೋಹವೆಸಗಿವೆ.
>
> ■ ದೀಪ್ತಿ ರಾವತ್ ಭಾರದ್ವಾಜ್, ಮಹಿಳಾ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಧರ್ಮಸಭೆ ಕಾರ್ಯಕ್ರಮದಲ್ಲಿ ಸಿಎಂ ಸಲಹೆ

ಮೂಢನಂಬಿಕೆ ಬಿಡಿ ದೇವರಪೂಜೆ ಮಾಡಿ



• **ರಾಣೇಬೆನ್ನೂರು:** ಮಾನವ ಸಮಾಜ ನಿರ್ಮಾಣದಲ್ಲಿ ಎಲ್ಲರೂ ಪಾಲುದಾರರಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ರಾಣೇಬೆನ್ನೂರಿನ ನಿಟ್ಟೂರು ಗ್ರಾಮದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಶ್ರೀ ಬೀರೇಶ್ವರ ಸ್ವಾಮಿ ದೇವಸ್ಥಾನದ 50ನೇ ವರ್ಷದ ಸುವರ್ಣ ಮಹೋತ್ಸವ ಹಾಗೂ ಶ್ರೀ ಭಕ್ತ ಕನಕದಾಸರ ಮಹಾದ್ವಾರದ ಉದ್ಘಾಟನೆ ಹಾಗೂ ಧರ್ಮಸಭೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಮ್ಮ ನಾಡು, ನಮ್ಮ ದೇಶ ಸರ್ವಜನಾಂಗದ ಶಾಂತಿಯ ತೋಟವಾಗಬೇಕೆಂದು ಬುದ್ಧ, ಬಸವ, ಮಹಾತ್ಮ ಗಾಂಧಿ, ಅಂಬೇಡ್ಕರ್, ಕುವೆಂಪು ಬಯಸಿದ್ದರು. ಅದನ್ನೇ ನಮ್ಮ ಸರ್ಕಾರ ಪಾಲಿಸುತ್ತಿದೆ ಎಂದರು.

ನಿಟ್ಟೂರಿನಲ್ಲಿ ಕೇವಲ 13 ಕುರುಬರ ಮನೆಗಳಿವೆ. ಆದರೆ, ಬೀರಲಿಂಗೇಶ್ವರ ದೇವಾಲಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಊರಿನ ಸಾಮರಸ್ಯಕ್ಕೆ ದ್ಯೋತಕವಾಗಿದೆ. ದೇವರನ್ನು ನಂಬಿ, ಮೂಢನಂಬಿಕೆಗಳನ್ನು ತ್ಯಜಿಸಿ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ವಿಚಾರಗಳು ಸಂವಿಧಾನದ ಆಧಾರ ಸ್ತಂಭಗಳು. ದೇವರ ಪೂಜೆ ಮಾಡಿ, ಆದರೆ ಮೂಢನಂಬಿಕೆಗಳನ್ನು ಇಟ್ಟುಕೊಳ್ಳದಿರಿ, ಬಸವಣ್ಣ ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದ್ದರು ಎನ್ನುವುದನ್ನು ಸ್ಮರಿಸಿಕೊಳ್ಳಿ ಎಂದು ಸಲಹೆ ನೀಡಿದರು. ನಾನು ಬಸವಣ್ಣನ ಅನುಯಾಯಿ, ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ನಮ್ಮ ಸರ್ಕಾರ ಘೋಷಣೆ ಮಾಡಿದೆ. ➡ಪುಟ ೪

ಉನ್ನತ ವಿದ್ಯೆ ಕಲಿತವರಿಂದಲೇ ಜಾತಿ ವ್ಯವಸ್ಥೆ ಪೋಷಣೆ

ದೇಶದ ಸ್ವಾತಂತ್ರ್ಯ, ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯದ ತಳಹದಿಯ ಮೇಲೆ ನಿಂತಿದೆ. ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಲ್ಲ ಎಂದು ಅಂಬೇಡ್ಕರ್ ಹೇಳಿದ್ದರು. ಸಮಾನತೆಯ ಆಶಯದಿಂದಲೇ ಭಾಗ್ಯಗಳನ್ನು, ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದರು. ಹಿಂದು, ಕ್ರಿಶ್ಚಿಯನ್, ಇಸ್ಲಾಂ, ಧರ್ಮಗಳು ಜನರನ್ನು ಪ್ರೀತಿಸಬೇಕೆಂದು ಬೋಧಿಸುತ್ತವೆ. ಇದು ಆದಾಗ ಮಾತ್ರ ಮಾನವ ಸಮಾಜ ನಿರ್ಮಾಣ ಸಾಧ್ಯ. ಸೈದ್ಧಾಂತಿಕವಾಗಿ ನಮ್ಮ ವಿರೋಧಿಗಳಾದರೂ ಜನರನ್ನು ಪ್ರೀತಿಸಬೇಕು. ಕುಲದ ನೆಲೆಯನ್ನು ಬಲ್ಲಿರಾ ಎಂದ ಕನಕದಾಸರ ಹಾಗೂ ಇವ ನಮ್ಮವ ಎಂಬ ಬಸವಣ್ಣನ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉನ್ನತ ವಿದ್ಯೆ ಕಲಿತವರೇ ಜಾತಿ ವ್ಯವಸ್ಥೆಯನ್ನು ಪೋಷಿಸುವುದು ನಮ್ಮ ಸಮಾಜದ ದುರಂತ ಎಂದರು.

ದೇಶದ ಮೂಲಭೂತ ಸೌಕರ್ಯಗಳ ಮೇಲೆ ದಾಳಿ ಎಚ್ಚರಿಕೆ

ಇರಾನ್‌ಗೆ ಟ್ರಂಪ್ ಮತ್ತೆ ಬೆದರಿಕೆ

• **ಹೊಸದಿಲ್ಲಿ:** ಪ್ರಸ್ತಾವಿತ ಒಪ್ಪಂದವನ್ನು ತಿರಸ್ಕರಿಸಿದರೆ ಇರಾನ್‌ನ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳನ್ನು ನಾಶಪಡಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಅತ್ಯಂತ ನ್ಯಾಯಯುತ ಮತ್ತು ಸಮಂಜಸ ಒಪ್ಪಂದವನ್ನು ಒಪ್ಪಿಕೊಳ್ಳದಿದ್ದರೆ, ಇನ್ನು




ಮುಂದೆ ನಾನು ಸಭ್ಯನಾಗಿ ಇರುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಟೆಹ್ರಾನ್ ಪ್ರಸ್ತುತ ಮಾತುಕತೆಯ ನಿಯಮಗಳನ್ನು ಒಪ್ಪಿಕೊಳ್ಳದಿದ್ದರೆ ಇರಾನ್ ವಿರುದ್ಧ ಭೀಕರ ದಾಳಿ ನಡೆಸುತ್ತೇವೆ. ಹಾರ್ಮುಜ್ ಜಲಸಂಧಿಯಲ್ಲಿ ಫ್ರೆಂಚ್ ಮತ್ತು ಯುಕೆ ಹಡಗುಗಳ ಮೇಲೆ ಗುಂಡು ಹಾರಿಸುವ ಮೂಲಕ ಇರಾನ್ ಕದನ ವಿರಾಮ ಒಪ್ಪಂದ ಉಲ್ಲಂಘಿಸಿದೆ ಎಂದು ಅವರು ಹೇಳಿದರು. ಯುಎಸ್ ಪ್ರತಿನಿಧಿಗಳು ಮುಂದಿನ ಮಾತುಕತೆಗಾಗಿ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ತಲುಪುವುದು ನಿಗದಿಯಾಗಿದೆ.

ಹಾರ್ಮುಜ್ ಜಲಸಂಧಿ ದಿಗ್ಬಂಧನ: ಇರಾನ್ ಬಂದರುಗಳ ಮೇಲೆ ಯುಎಸ್ ವಿಧಿಸಿರುವ ನೌಕಾ ದಿಗ್ಬಂಧನಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಹಾರ್ಮುಜ್ ಜಲಸಂಧಿಯ ನಿರ್ಬಂಧವನ್ನು ಮುಂದುವರಿಸಿದೆ. ➡ಪುಟ ೪

ಶಾಂತಿ ಮಾತುಕತೆಗೆ ಪಾಕ್ ಸಕಲ ಸಿದ್ಧತೆ

• **ಇಸ್ಲಾಮಾಬಾದ್:** ಅಮೆರಿಕ-ಇರಾನ್ ನಡುವಿನ ಎರಡನೇ ಹಂತದ ಕದನ



ವಿರಾಮ ಮಾತುಕತೆ ಪಾಕಿಸ್ತಾನದಲ್ಲಿ ಸೋಮವಾರ ನಡೆಯಲಿದ್ದು, ವಿದೇಶಿ ಪ್ರತಿನಿಧಿಗಳ ಆಗಮನ ಹಿನ್ನೆಲೆಯಲ್ಲಿ ಪಾಕಿಸ್ತಾನ ಕಠಿಣ ಭದ್ರತಾ ಕ್ರಮಗಳನ್ನು ಜಾರಿಗೊಳಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. • ವಿವರ ಪುಟ ೭

ಆರೆಸ್ಸೆಸ್ ಶತಮಾನೋತ್ಸವ ಹಿನ್ನೆಲೆ | ವಿದೇಶದಲ್ಲಿ ಸಂವಾದ

ದೇಶ ನಿಷ್ಠೆ ಇರಲಿ: ಹೊಸಬಾಳೆ

• **ಸ್ಟ್ಯಾನ್‌ಫೋರ್ಡ್:** ವಿದೇಶದಲ್ಲಿರುವ ಭಾರತೀಯರ ಕುರಿತು ಮಾತನಾಡಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ಸಂಘದ ದೃಷ್ಟಿಕೋನ ಎರಡು ಮುಖಗಳನ್ನು ಹೊಂದಿದೆ ಎಂದು ವಿವರಿಸಿದರು. ಮೊದಲನೆಯದಾಗಿ,



ಭಾರತೀಯ ಮೂಲದವರು ತಾವು ವಾಸಿಸುವ ದೇಶಕ್ಕೆ ಸಂಪೂರ್ಣ ನಿಷ್ಠೆ ತೋರಿಸಿ, ಆ ದೇಶದ ಪ್ರಗತಿ ಮತ್ತು ಸಮೃದ್ಧಿಗೆ ಕೆಲಸ ಮಾಡಬೇಕು. ಎರಡನೆಯದಾಗಿ, ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯೊಂದಿಗೆ ತಮಗೆ ಇರುವ ಸಂಬಂಧವನ್ನು ಕಾಪಾಡಿಕೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಶತಮಾನೋತ್ಸವದ ಹಿನ್ನೆಲೆಯಲ್ಲಿ ಅವರು ವಿದೇಶದಲ್ಲಿ ನೀಡಿದ ಸಂವಾದವೊಂದರಲ್ಲಿ, ಸ್ಥಳೀಯ ಸಮಾಜದೊಂದಿಗೆ ಹೊಂದಾಣಿಕೆ ಸಾಧಿಸುವುದರ ಜತೆ ಸ್ಥಳೀಯ ಹಿಂದು ಸಮುದಾಯವನ್ನು ಸಂಘಟಿಸುವುದು, ಸಾಮಾಜಿಕ ಅಭಿವೃದ್ಧಿಗೆ ಕೈಜೋಡಿಸುವುದು ಮತ್ತು ಸಂಸ್ಕೃತಿಯ ಮೂಲಕ ಭಾರತಕ್ಕೂ ಸೇವೆ ಸಲ್ಲಿಸುವುದು ಈ ದೃಷ್ಟಿಕೋನದ ಭಾಗವೆಂದು ಹೇಳಿದರು. ➡ಪುಟ ೪

ಮೊದಲು ರಾಷ್ಟ್ರ ಹಿತ, ಜತೆಗೆ ಸಂಸ್ಕೃತಿ ನಂಟು

• **ಸ್ಟ್ಯಾನ್‌ಫೋರ್ಡ್/ವಾಷಿಂಗ್ಟನ್:** ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಲವು ಪ್ರಮುಖ ರಾಷ್ಟ್ರೀಯ ಮತ್ತು ಜಾಗತಿಕ ಪ್ರಶ್ನೆಗಳ ಕುರಿತು ಸಮಗ್ರ ಸಂದೇಶ ನೀಡಿದ್ದಾರೆ. ವಿದೇಶಗಳಲ್ಲಿ ವಾಸಿಸುವ ಭಾರತೀಯರು ತಾವು ನೆಲೆಸಿರುವ ದೇಶದ ಹಿತಾಸಕ್ತಿ, ಕಲ್ಯಾಣ ಮತ್ತು ಪ್ರಗತಿಗೆ ಮೊದಲ ಆದ್ಯತೆ ನೀಡಬೇಕು. ಅದರ ಜತೆಯಲ್ಲೇ ಭಾರತೀಯ ಸಂಸ್ಕೃತಿಯೊಂದಿಗೆ ಜೀವಂತ ನಂಟು ಉಳಿಸಿಕೊಳ್ಳಬೇಕು ಎಂದು ಅವರು ಕರೆನೀಡಿದ್ದಾರೆ. • ವಿವರ ಪುಟ ೨

ತೃತೀಯ ಭಾಷಾ ಪರೀಕ್ಷೆಗೆ ಅಂಕ: ಹೈಗೆ ಸರ್ಕಾರ ಅರ್ಜಿ

ಗ್ರೇಡ್ ಬದಲು ಅಂಕ ನೀಡಲು ನಿರ್ದೇಶನ ನೀಡಿದ್ದ ಹೈಕೋರ್ಟ್

• **ಬೆಂಗಳೂರು:** ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಗ್ರೇಡ್ ಬದಲಿಗೆ ಅಂಕ ನೀಡಲು ನಿರ್ದೇಶಿಸಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ರಾಜ್ಯ ಸರ್ಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದು, ತುರ್ತಾಗಿ ವಿಚಾರಣೆ ನಡೆಸುವಂತೆ ನ್ಯಾ. ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠಕ್ಕೆ ಕೋರಲು ಸಿದ್ಧತೆ ನಡೆಸಿದೆ. ➡ಪುಟ ೪

ಪಟಾಕಿ ಘಟಕದಲ್ಲಿ ಭಾರೀ ಸ್ಫೋಟ: 18 ಮಂದಿ ಬಲಿ

• **ಚೆನ್ನೈ:** ತಮಿಳುನಾಡಿನ ವಿರುಧುನಗರ್ ಜಿಲ್ಲೆಯ ಪಟಾಕಿ ತಯಾರಿಕಾ ಘಟಕದಲ್ಲಿ ಭಾನುವಾರ ಸಂಭವಿಸಿದ ಭಾರೀ ಸ್ಫೋಟದಲ್ಲಿ 18 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಈಗಾಗಲೇ 18 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಆರು ಗಾಯಾಳುಗಳ ಪೈಕಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ವಿರುಧುನಗರ್ ಜಿಲ್ಲೆಯ ಕತ್ತನಾರ್‌ಪಟ್ಟಿ ಪ್ರದೇಶದ ವನಜಾ ಫೈರ್‌ವರ್ಕ್ಸ್ ಪಟಾಕಿ ಕಾರ್ಖಾನೆಯಲ್ಲಿ ಈ ಸ್ಫೋಟ ಸಂಭವಿಸಿದೆ. ➡ಪುಟ ೪

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ
20 ಏಪ್ರಿಲ್ 2026
ಮಂಗಳೂರು



ಮೊದಲು ರಾಷ್ಟ್ರ ಹಿತ, ಜೊತೆಗೆ ಸಂಸ್ಕೃತಿ ನಂಟು

ವಿದೇಶದ ಭಾರತೀಯರ ನಿಷ್ಠೆ, ಒಂದು ರಾಷ್ಟ್ರ ಒಂದು ಚುನಾವಣೆ ಬಗ್ಗೆ ಮಾತು, ಮಹಿಳಾ ಪ್ರತಿನಿಧಿತ್ವ, ಏನಾಸಂ, ಮನಸ್ಸಿನ ವಸಾಹತುಶಾಹಿ ನಿರ್ಮೂಲನೆ, ವಿಜ್ಞಾನ -ಆಧ್ಯಾತ್ಮ ಸಮನ್ವಯ, ತಂತ್ರಜ್ಞಾನಕ್ಕೆ ನೈತಿಕ ದಿಕ್ಕು, ಕುಟುಂಬ ಸಾಮಾಜಿಕ ಸಮರಸತೆ, ಪರಿಸರ ಸಮತೋಲನ ಸೇರಿದಂತೆ ಅನೇಕ ಅಂಶಗಳ ಮೇಲೆ ವಿಶದ ಅಭಿಪ್ರಾಯ.

ಆರ್‌ಎಸ್‌ಎಸ್ ಶತಮಾನೋತ್ಸವ ಹಿನ್ನೆಲೆ ದತ್ತಾತ್ರೇಯ ಹೊಸಬಾಳೆ ಸಮಗ್ರ ಸಂದೇಶ



ಸ್ಟ್ಯಾನ್‌ಫೋರ್ಡ್/ವಾಷಿಂಗ್ಟನ್: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವದ ಹಿನ್ನೆಲೆಯಲ್ಲಿ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಲವು ಪ್ರಮುಖ ರಾಷ್ಟ್ರೀಯ ಮತ್ತು ಜಾಗತಿಕ ಪ್ರಶ್ನೆಗಳ ಕುರಿತು ಸಮಗ್ರ ಸಂದೇಶ ನೀಡಿದ್ದಾರೆ. ವಿದೇಶಗಳಲ್ಲಿ ವಾಸಿಸುವ ಭಾರತೀಯರು ತಾವು ನೆಲೆಸಿರುವ ದೇಶದ ಹಿತಾಸಕ್ತಿ, ಕಲ್ಯಾಣ ಮತ್ತು ಪ್ರಗತಿಗೆ ಮೊದಲ ಆದ್ಯತೆ ನೀಡಬೇಕು. ಆದರ ಜತೆಯಲ್ಲೇ ಭಾರತೀಯ ಸಂಸ್ಕೃತಿಯೊಂದಿಗೆ ಜೀವಂತ ನಂಟು ಉಳಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದ್ದಾರೆ. ರಾಜಕೀಯ ಸುಧಾರಣೆಗಳ ವಿಚಾರದಲ್ಲಿ 'ಒಂದು ರಾಷ್ಟ್ರ ಒಂದು ಚುನಾವಣೆ', ಮಹಿಳೆಯರಿಗೆ ಹೆಚ್ಚಿನ ಪ್ರತಿನಿಧಿತ್ವ, ಏಕರೂಪದ ನಾಗರಿಕ ಸಂಹಿತೆ, ನಾಗರಿಕ ಕರ್ತವ್ಯಬೋಧೆ ಮತ್ತು ರಾಜಕೀಯ ಶಿಕ್ಷಣದ ಅಗತ್ಯವನ್ನು ಒತ್ತಿಹೇಳಿರುವ ಅವರು, ಮತ್ತೊಂದೆಡೆ ಭಾರತದ ಇತಿಹಾಸ, ಸಂಸ್ಕೃತಿ, ನಾಗರೀಕತೆಯ ಬಗ್ಗೆ ಹರಡಿರುವ 'ವಿಕೃತ ನ್ಯಾರೇಟಿವ್'ಗಳನ್ನು ಸರಿಪಡಿಸುವ ಮನಸ್ಸಿನ ವಸಾಹತುಶಾಹಿ ನಿವಾರಣೆಗೆ ಹೊಸ ಒತ್ತು ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆಧ್ಯಾತ್ಮ, ಕುಟುಂಬ ವ್ಯವಸ್ಥೆ, ಸಾಮಾಜಿಕ ಏಕತೆ, ಪರಿಸರ ಸಮತೋಲನ ಮತ್ತು ಜಾಗತಿಕ ಸವಾಲುಗಳ ಕುರಿತೂ ಅವರು ವಿಶದವಾಗಿ ಮಾತನಾಡಿದ್ದಾರೆ.

ಒಂದು ರಾಷ್ಟ್ರ ಒಂದು ಚುನಾವಣೆಗೆ ಬೆಂಬಲ

ದೇಶೀಯ ರಾಜಕೀಯದ ಪ್ರಶ್ನೆಯಲ್ಲಿ ಆರ್‌ಎಸ್‌ಎಸ್ 'ಒಂದು ರಾಷ್ಟ್ರ ಒಂದು ಚುನಾವಣೆ'ಗೆ ಬೆಂಬಲ ಸೂಚಿಸಿದೆ. ದೇಶಾದ್ಯಂತ ಒಂದೇ ಅವಧಿಯಲ್ಲಿ ಚುನಾವಣೆ ನಡೆಸುವುದರಿಂದ ಆಡಳಿತ ವ್ಯವಸ್ಥೆಯ ನಿರಂತರತೆ ಹೆಚ್ಚಿ, ರಾಜಕೀಯ ವ್ಯತ್ಯಯಗಳು ಕಡಿಮೆಯಾಗುತ್ತವೆ ಮತ್ತು ಪ್ರಜಾಪ್ರಭುತ್ವದ ಕಾರ್ಯಕ್ಷಮತೆ ಬಲಪಡುತ್ತದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ಇದು ಕೇವಲ ಚುನಾವಣಾ ಯಾಂತ್ರಿಕತೆ ಕುರಿತ ಚರ್ಚೆಯಲ್ಲ; ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಅಗತ್ಯವಿರುವ ಮಹತ್ವದ ಸುಧಾರಣೆ ಎಂದೂ ಅವರು ಹೇಳಿದರು.

ಮಹಿಳಾ ಮೀಸಲಾತಿ

ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ವಿಸ್ತರಿಸುವ ಅಗತ್ಯವನ್ನು ಉಲ್ಲೇಖಿಸಿದ ಅವರು, ಶೇ.33 ಮಹಿಳಾ ಪ್ರತಿನಿಧಿತ್ವವು ಕೇವಲ ಸಂಖ್ಯಾತ್ಮಕ ಹೆಚ್ಚಳವಾಗದೆ, ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ದಾರಿ ಮಾಡಿಕೊಡಬಲ್ಲ ಕ್ರಮ ಎಂದರು. ಹೊಸಬಾಳೆ ಅವರ ಪ್ರಕಾರ ಪ್ರಜಾಪ್ರಭುತ್ವವು ಕೇವಲ ಚುನಾವಣೆಗೆ ಸೀಮಿತವಲ್ಲ; ಅದು ಜವಾಬ್ದಾರಿ, ರಾಷ್ಟ್ರ ಪ್ರಥಮ ಮನೋಭಾವ ಮತ್ತು ದೈನಂದಿನ ನಾಗರಿಕ ಜೀವನದ ಭಾಗವಾಗಬೇಕು. ಜನರಲ್ಲಿ ರಾಜಕೀಯ ಶಿಕ್ಷಣ ಮತ್ತು ಜಾಗೃತಿ ಹೆಚ್ಚಬೇಕು, ಸಮಾಜ ಮತ್ತು ರಾಷ್ಟ್ರ ಕ್ಕೆ ಯಾವುದು ಅಗತ್ಯ ಎಂಬ ಅರಿವು ಜನಸಾಮಾನ್ಯರಲ್ಲೂ ವೃದ್ಧಿಯಾಗಬೇಕು ಎಂದು ಅವರು ಹೇಳಿದರು. ರಾಜಕೀಯ ಪಕ್ಷಗಳು ತಮ್ಮ ಪಕ್ಷಪರ ಲಾಭಕ್ಕಿಂತ ಮೊದಲು ರಾಷ್ಟ್ರ ಹಿತವನ್ನು ಪ್ರಮುಖವಾಗಿಡಬೇಕು ಎಂಬುದನ್ನೂ ಅವರು ಸ್ಪಷ್ಟಪಡಿಸಿದರು.

ಓಲೈಕೆ ರಾಜಕೀಯ ಸಲ್ಲದು

ರಾಜಕಾರಣಿಗಳ 'ಓಲೈಕೆ ರಾಜಕೀಯ'ವನ್ನು ಟೀಕಿಸಿದ ಅವರು, ಅದು ದೇಶದ ಸಾಮಾಜಿಕ ಏಕತೆ ಮತ್ತು ದೀರ್ಘಕಾಲಿಕ ಹಿತಾಸಕ್ತಿಗೆ ಹಾನಿ ಉಂಟುಮಾಡಿದೆ ಎಂದರು. ಧರ್ಮ ಅಥವಾ ಹಿನ್ನೆಲೆಯನ್ನು ಬಿಟ್ಟು ಎಲ್ಲ ಭಾರತೀಯರೂ ಸಮಾನ ಹಕ್ಕುಗಳನ್ನು ಹೊಂದಿದ್ದು, ಯಾರೂ ದ್ವಿತೀಯ ದರ್ಜೆಯ ನಾಗರಿಕರಲ್ಲ ಎಂಬ ಮಾತನ್ನು ಅವರು ಪುನರುಚ್ಚರಿಸಿದರು. ಏಕರೂಪ ನಾಗರಿಕ ಸಂಹಿತೆ ಈ ಸಮಾನತೆಯ ತಾತ್ವಿಕ ಕಾನೂನು ಆಧಾರವನ್ನು ಬಲಪಡಿಸುವ ಹೆಜ್ಜೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಪ್ರಜಾಪ್ರಭುತ್ವ ಒಂದು ಜೀವನ ಶೈಲಿ

ಭಾರತದ ಪ್ರಜಾಸತ್ತಾತ್ಮಕ ಯಶಸ್ಸಿನ ಮೂಲಗಳ ಬಗ್ಗೆ ಮಾತನಾಡಿದ ಹೊಸಬಾಳೆ, ಭಾರತೀಯ ಪ್ರಜಾಪ್ರಭುತ್ವವು ಪಾಶ್ಚಾತ್ಯ ಮಾದರಿಗಳ ಪ್ರತಿಕೃತಿಯಲ್ಲ; ಅದು ದೇಶದ ನಾಗರಿಕತೆ, ಸಂಸ್ಕೃತಿ ಮತ್ತು ಹಿಂದೂ ತತ್ವಶಾಸ್ತ್ರದಲ್ಲಿ ನೆಲೆಯೂರಿದ ವಿಶಿಷ್ಟ ಮನೋಭಾವದ ಫಲ ಎಂದು ಹೇಳಿದರು. ವಿವಿಧ ದೇಶಗಳಲ್ಲಿ ಪ್ರಜಾಪ್ರಭುತ್ವ ವಿಭಿನ್ನ ರೂಪಗಳನ್ನು ತಾಳಿದರೂ, ಭಾರತದ ಬಲ ಅದರ ವೈವಿಧ್ಯತೆಯ ನಡುವೆ ಏಕತೆಯನ್ನು ಉಳಿಸಿಕೊಂಡಿರುವ ಸಾಂಸ್ಕೃತಿಕ ದೃಷ್ಟಿಕೋನದಲ್ಲಿದೆ ಎಂದರು. 'ಪ್ರಜಾಪ್ರಭುತ್ವ ಒಂದು ಜೀವನಶೈಲಿ' ಎಂಬುದಾಗಿ ಅವರು ಅದನ್ನು ವಿವರಿಸಿದರು. 1947ರಲ್ಲಿ ಭಾರತದಿಂದ ಬೇರ್ಪಟ್ಟ ಕೆಲವು ರಾಷ್ಟ್ರ ಗಳಲ್ಲಿ ಪ್ರಜಾಪ್ರಭುತ್ವವು ಸ್ಥಿರತೆಯನ್ನು ಕಳೆದುಕೊಂಡ ಸಂದರ್ಭಗಳನ್ನು ಉಲ್ಲೇಖಿಸಿ, ಭಾರತದಲ್ಲಿ ಅದು ಸಂಕಷ್ಟಗಳ ನಡುವೆಯೂ ಉಳಿದುಕೊಂಡಿದ್ದರೆ ಇದಕ್ಕೆ ಸಮಾಜದ ಆಂತರಿಕ ಮನೋಭಾವವೇ ಕಾರಣ ಎಂದರು. ಒಮ್ಮೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಯತ್ನ ನಡೆದರೂ ಜನರು ಅದನ್ನು ತಿರಸ್ಕರಿಸಿದ್ದರು ಎಂಬ ಉಲ್ಲೇಖದ ಮೂಲಕ ಅವರು ಜನಮನದಲ್ಲಿ ಪ್ರಜಾತಾಂತ್ರಿಕ ಚೈತನ್ಯ ಗಾಢವಾಗಿದೆ ಎಂದು ಹೇಳಿದರು.

ವಸಾಹತುಶಾಹಿ ಮನೋಭಾವ ನಿವಾರಣೆ

ಆರ್‌ಎಸ್‌ಎಸ್ ಶತಮಾನೋತ್ಸವದ ಪ್ರಮುಖ ಬೌದ್ಧಿಕ ಸಂದೇಶವಾಗಿ ಮನಸ್ಸಿನ ವಸಾಹತುಶಾಹಿ ನಿವಾರಣೆಯ ಪ್ರಶ್ನೆಯನ್ನು ಹೊಸಬಾಳೆ ಮುಂದಿಟ್ಟಿದ್ದಾರೆ. ರಾಜಕೀಯ ಸ್ವಾತಂತ್ರ್ಯ ಭಾರತಕ್ಕೆ ದೊರೆತಿದ್ದರೂ ಬೌದ್ಧಿಕ, ಸಾಂಸ್ಕೃತಿಕ ಮತ್ತು ಮನೋವೈಚಾರಿಕ ಮಟ್ಟದಲ್ಲಿ ವಸಾಹತುಶಾಹಿ ಅವಶೇಷಗಳು ಇನ್ನೂ ಉಳಿದಿವೆ ಎಂದು ಅವರು ಹೇಳಿದರು. ಭಾರತದ ಇತಿಹಾಸ, ಸಂಸ್ಕೃತಿ ಮತ್ತು ಗುರುತಿನ ಬಗ್ಗೆ ವಕ್ರ ನರೇಟಿವ್‌ಗಳು ಇನ್ನೂ ಶಿಕ್ಷಣ, ಸಾರ್ವಜನಿಕ ಚರ್ಚೆ ಮತ್ತು ಬೌದ್ಧಿಕ ವಲಯಗಳಲ್ಲಿ ಪ್ರಭಾವ ಬೀರುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಬಗ್ಗೆ ಸರಿಯಾದ ನರೇಟಿವ್ ನಿರ್ಮಾಣವಾದರೆ ಮನಸ್ಸಿನ ವಸಾಹತುಶಾಹಿ ಕ್ರಮೇಣ ನಿವಾರಣೆಯಾಗುತ್ತದೆ ಎಂದು ಹೊಸಬಾಳೆ ಅವರು ಹೇಳಿದ್ದಾರೆ. ಭಾರತೀಯರು ತಮ್ಮನ್ನು 'ರೂಪುಗೊಳ್ಳುತ್ತಿರುವ ಹೊಸ ರಾಷ್ಟ್ರ'ವೆಂದು ಅಲ್ಲ, ಸಾವಿರಾರು ವರ್ಷಗಳ ನಾಗರಿಕತಾಧಾರಿತ ನಿರಂತರ ರಾಷ್ಟ್ರ ವೆಂದು ಅರಿಯಬೇಕು ಎಂಬುದು ಅವರ ನಿಲುವಾಗಿದೆ. ಶಿಕ್ಷಣ ವ್ಯವಸ್ಥೆ ಮತ್ತು ಸಾರ್ವಜನಿಕ ಅರಿವಿನಲ್ಲಿ ದೀರ್ಘಕಾಲದಿಂದ ಇರುವ ವಕ್ರತೆಗಳನ್ನು ಅವರು ಉಲ್ಲೇಖಿಸಿದರು. ವಿಶೇಷವಾಗಿ ಆರ್ಯರ ಆಕ್ರಮಣ ಸಿದ್ಧಾಂತದ ಬೋಧನೆಯನ್ನು ಉದಾಹರಿಸಿ, 'ಇಂದಿಗೂ ಕೆಲವರು ಭಾರತದಲ್ಲಿ ಆರ್ಯರ ಆಕ್ರಮಣ ನಡೆದಿತ್ತು ಎಂದು ನಂಬುತ್ತಾರೆ; ಆದರೆ ಆದಕ್ಕೆ ಯಾವುದೇ ದೃಢವಾದ ಸಾಕ್ಷ್ಯವಿಲ್ಲ,' ಎಂದರು. ವಸಾಹತುಶಾಹಿ ಮನೋಭಾವದಿಂದಾಗಿ ಭಾರತೀಯ ನಾಗರಿಕತೆಯ ನಿಜವಾದ ಇತಿಹಾಸ ಮತ್ತು ಅನುಭವಗಳಿಗೆ ವಿರುದ್ಧವಾದ ಕಥನಗಳು ಹರಡಿವೆ ಎಂದು ಅವರು ಹೇಳಿದರು. 'ರಾಜಕೀಯ ಸ್ವಾತಂತ್ರ್ಯವು ಸಾಂಸ್ಕೃತಿಕ ಸೇರಿದಂತೆ ಇತರೆ ಸ್ವಾತಂತ್ರ್ಯಗಳಿಗೆ ದಾರಿ ತೆರೆಬೇಕು,' ಎಂದು ಅವರು ನುಡಿದರು. 'ಆರ್‌ಎಸ್‌ಎಸ್‌ನ ಪ್ರಭಾವವೆಂದರೆ ಹಿಂದೂ ರಾಷ್ಟ್ರೀಯತೆ ನಮ್ಮ ರಾಷ್ಟ್ರ, ಸಂಸ್ಕೃತಿ ಮತ್ತು ನಾಗರಿಕತೆಯ ಮೌಲ್ಯಗಳ ಬಗ್ಗೆ ಹೆಮ್ಮೆ,' ಎಂದು ಅವರು ಹೇಳಿದರು. ಇವು ಇಂದಿಗೂ ಪ್ರಸ್ತುತವಾಗಿದ್ದು, ದೇಶೀಯ ಆದ್ಯತೆಗಳು ಮತ್ತು ಜಾಗತಿಕ ಪಾತ್ರವನ್ನು ಮಾರ್ಗದರ್ಶನ ಮಾಡಬೇಕು ಎಂದು ಅವರು ಹೇಳಿದರು.

ಜ್ಞಾನದ ಪ್ರಜಾಪ್ರಭುತ್ವೀಕರಣ

ತಂತ್ರಜ್ಞಾನ ಮತ್ತು ಜ್ಞಾನ ಪ್ರಜಾಸತ್ತೀಕರಣದ ವಿಷಯದಲ್ಲಿ ಹೊಸಬಾಳೆ ಎಚ್ಚರಿಕೆಯಿಂದಿರುವ ಧ್ವನಿಯನ್ನು ಹೊರಹಾಕಿದ್ದಾರೆ. ಜ್ಞಾನದ ಪ್ರಜಾಸತ್ತೀಕರಣ ಅಗತ್ಯವಾದರೂ ಅದು ಆರ್ಥಿಕತೆ, ಸಮಾನತೆ ಮತ್ತು ನೈತಿಕತೆ ಎಂಬ ಮೂರು ಮಾನದಂಡಗಳ ಆಧಾರದ ಮೇಲೆ ನಡೆಯಬೇಕು ಎಂದು ಅವರು ಹೇಳಿದ್ದಾರೆ. ತಂತ್ರಜ್ಞಾನ ಮತ್ತು ಶಿಕ್ಷಣಕ್ಕೆ ಸಮಾನ ಪ್ರವೇಶವಿಲ್ಲದಿದ್ದರೆ ಈಗಾಗಲೇ ಸಮಾಜದಲ್ಲಿ ಇರುವ ಅಸಮಾನತೆಗಳು ಇನ್ನಷ್ಟು ಗಾಢವಾಗುತ್ತವೆ. ಆದಾಯ, ಅವಕಾಶ, ಶಿಕ್ಷಣದ ಗುಣಮಟ್ಟ ಮತ್ತು ಜೀವನಮಟ್ಟದ ಅಂತರ ವಿಸ್ತರಿಸುತ್ತದೆ ಎಂದು ಅವರು ಹೇಳಿದರು. ಹೀಗಾಗಿ ಸರ್ಕಾರಗಳು ನವೋತ್ಪಾದನೆಯನ್ನು ಕೇವಲ ಆರ್ಥಿಕ ಲಾಭದ ದೃಷ್ಟಿಯಿಂದ ಮಾತ್ರ ಅಳೆಯದೆ, ಆದರ ಸಾಮಾಜಿಕ ಪರಿಣಾಮ, ನೈತಿಕ ಅರ್ಥ ಮತ್ತು ಪರಿಸರಪರ ಪರಿಣಾಮಗಳ ದೃಷ್ಟಿಯಿಂದಲೂ ಮೌಲ್ಯಮಾಪನ ಮಾಡಬೇಕು ಎಂದರು. ಸಮಾಜದ ಸಮತೋಲನ ಹಾಳುಮಾಡುವ, ಪ್ರಕೃತಿಯನ್ನು ದುರುಪಯೋಗಪಡಿಸುವ ಅಥವಾ ನೈತಿಕತೆ ಕಳೆದುಕೊಂಡ ತಂತ್ರಜ್ಞಾನವನ್ನು ಮರುಪರಿಶೀಲಿಸಬೇಕೆಂದು ಅವರು ಸಲಹೆ ನೀಡಿದರು.

ದೀರ್ಘಕಾಲದ ವಿಕೃತತೆ

ಇದನ್ನು ವಿವರಿಸಲು ಅವರು ಶಿಕ್ಷಣ ವ್ಯವಸ್ಥೆಯಲ್ಲಿನ ದೀರ್ಘಕಾಲದ ವಿಕೃತತೆಗಳನ್ನು ಉಲ್ಲೇಖಿಸಿದರು. ವಿಶೇಷವಾಗಿ 'ಆರ್ಯರ ಆಕ್ರಮಣ ಸಿದ್ಧಾಂತ'ದ ಕುರಿತು, ಆದಕ್ಕೆ ದೃಢವಾದ ಸಾಕ್ಷ್ಯವಿಲ್ಲದಿದ್ದರೂ ಇನ್ನೂ ಅನೇಕರು ಅದನ್ನು ಸತ್ಯವೆಂದು ನಂಬುತ್ತಿರುವುದನ್ನು ಉದಾಹರಣೆಯಾಗಿ ಹೇಳಿದರು. ಭಾರತೀಯ ವೈಜ್ಞಾನಿಕ ಪರಂಪರೆ, ಪ್ರಾಚೀನ ಜ್ಞಾನಪದ್ಧತಿ ಮತ್ತು ನಾಗರಿಕತೆಯ ಕೊಡುಗೆಗಳ ಬಗ್ಗೆ ಸಮಗ್ರ ಅರಿವು ಇಲ್ಲದಿರುವುದು ರಾಷ್ಟ್ರೀಯ ಆತ್ಮವಿಶ್ವಾಸ ಕುಗ್ಗಲು ಕಾರಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾಷೆಯ ವಿಚಾರದಲ್ಲೂ ಉಪನಿವೇಶ ಮನೋಭಾವ ಮುಂದುವರಿದಿದ್ದು, ಭಾರತೀಯ ಭಾಷೆಗಳಲ್ಲಿ ಮಾತನಾಡಿದರೆ ಕಡಿಮೆ ವಿದ್ಯಾವಂತರೆಂಬ ಭ್ರಮೆ ವಿದ್ಯಾವಂತರಲ್ಲಿಯೂ ಹೀನ ಮನೋಭಾವ ಹುಟ್ಟಿಸಿದೆ ಎಂದು ಅವರು ಹೇಳಿದರು. ಹೀಗಾಗಿ ಶಿಕ್ಷಣ, ಮಾಧ್ಯಮ ಮತ್ತು ನಾಗರಿಕ ಸಮಾಜದ ಮಟ್ಟದಲ್ಲಿ ದೀರ್ಘಕಾಲಿಕ ಪ್ರಯತ್ನಗಳ ಮೂಲಕ ಇತಿಹಾಸ ಸಂಸ್ಕೃತಿ ಭಾಷಾ ಗೌರವವನ್ನು ಮರುಸ್ಥಾಪಿಸಬೇಕಾಗಿದೆ ಎಂದು ಒತ್ತಿ ಹೇಳಿದರು. ಹೊಸಬಾಳೆ ಅವರ ಅಭಿಪ್ರಾಯದಲ್ಲಿ, ಈ ಬೌದ್ಧಿಕ ಮುಕ್ತತೆ ಕೇವಲ ಭಾರತಕ್ಕೆ ಸಂಬಂಧಿಸಿದ ವಿಷಯವಲ್ಲ; ಜಾಗತಿಕ ಮಟ್ಟದಲ್ಲೂ ಗುರುತು ಸಂಘರ್ಷಗಳು, ಸಿದ್ಧಾಂತಾತ್ಮಕ ವಿಭಜನೆಗಳು ಮತ್ತು ಸಾಮಾಜಿಕ ವೈಮನಸ್ಸುಗಳನ್ನು ಎದುರಿಸಲು ಸಮತೋಲನಯುತ ಇತಿಹಾಸ ಮತ್ತು ಸಂಸ್ಕೃತಿ ಅರಿವು ಅಗತ್ಯ. ಆರ್‌ಎಸ್‌ಎಸ್‌ನ ಶತಮಾನಕಾಲದ ಕಾರ್ಯದಲ್ಲಿ ಸಾಂಸ್ಕೃತಿಕ ಜಾಗೃತಿ, ಆತ್ಮಗೌರವ ಮತ್ತು ನಾಗರಿಕತೆಯ ಮೌಲ್ಯಗಳ ಕುರಿತ ಹೆಮ್ಮೆಯನ್ನು ಬೆಳೆಸುವ ಪ್ರಯತ್ನಗಳು ಇದಕ್ಕಾಗಿ ನಡೆದಿವೆ ಎಂದು ಅವರು ಹೇಳಿದ್ದಾರೆ.

ಹಿಂದೂ ರಾಷ್ಟ್ರೀಯತೆ

'ಹಿಂದೂ ರಾಷ್ಟ್ರೀಯತೆ' ಎಂದರೆ ರಾಷ್ಟ್ರ, ಸಂಸ್ಕೃತಿ ಮತ್ತು ನಾಗರೀಕತೆಯ ಮೌಲ್ಯಗಳ ಬಗ್ಗೆ ಹೆಮ್ಮೆ ಎಂಬ ಅರ್ಥದಲ್ಲಿ ಸಂಘದ ಚಿಂತನೆ ಇದೆ ಎಂದು ಅವರು ವಿವರಿಸಿದರು. ಈ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿದ್ದು, ದೇಶೀಯ ಆದ್ಯತೆಗಳಿಗೂ, ಜಾಗತಿಕ ವೇದಿಕೆಯಲ್ಲಿ ಭಾರತದ ಪಾತ್ರಕ್ಕೂ ಮಾರ್ಗದರ್ಶನ ಮಾಡಬೇಕು ಎಂದರು. ಶಿಕ್ಷಣ, ವಿಜ್ಞಾನ ಮತ್ತು ಆಧ್ಯಾತ್ಮದ ಸಂಬಂಧವನ್ನು ಹೊಸಬಾಳೆ ವಿಶೇಷವಾಗಿ ಒತ್ತಿಹೇಳಿದರು. ಭಾರತೀಯ ಜ್ಞಾನ ಪರಂಪರೆಯಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ಪರಸ್ಪರ ವಿರೋಧಿಗಳಲ್ಲ; ಅವು ಒಂದನ್ನೊಂದು ಪೂರೈಸುವ ಕ್ಷೇತ್ರಗಳೆಂದು ಅವರು ಹೇಳಿದರು. ಪಶ್ಚಿಮದ ಅನೇಕ ಸಮಾಜಗಳಲ್ಲಿ ಧರ್ಮ ಮತ್ತು ವಿಜ್ಞಾನ ನಡುವೆ ಇತಿಹಾಸಾತ್ಮಕ ಸಂಘರ್ಷ ಕಂಡುಬಂದಿದ್ದರೂ, ಭಾರತೀಯ ನಾಗರಿಕತೆಯಲ್ಲಿ ಜ್ಞಾನಾನ್ವೇಷಣೆ, ಯುಕ್ತಿ, ಅನುಭವ ಮತ್ತು ಆತ್ಮೀಯತೆ ಸಮನ್ವಯಗೊಂಡಿರುವ ಪರಂಪರೆ ಇದೆ ಎಂದರು. ಮಾನವ ಜ್ಞಾನದ ಮಿತಿಗಳನ್ನು ಮೀರಿದ ಅಂಶಗಳನ್ನು ಒಪ್ಪಿಕೊಳ್ಳುವ ಸಾಮರ್ಥ್ಯವೂ ಭಾರತೀಯ ಚಿಂತನೆಯ ಭಾಗವಾಗಿದೆ ಎಂದು ಅವರು ವಿವರಿಸಿದರು. ಇಂತಹ ಜ್ಞಾನಪದ್ಧತಿಯನ್ನು ಶಿಕ್ಷಣ ಮತ್ತು ಪಠ್ಯಕ್ರಮಗಳಲ್ಲಿ ಅರ್ಥಪೂರ್ಣವಾಗಿ ಒಳಗೊಳ್ಳಿಸುವುದು ಅಗತ್ಯ, ಇಲ್ಲವಾದರೆ ಹಳೆಯ ವೈಜ್ಞಾನಿಕ ಅನ್ವೇಷಣೆಗಳನ್ನೇ ಅಂಧಶ್ರದ್ಧೆ ಎಂದು ತಳ್ಳಿಹಾಕುವ ಅಪಾಯವಿದೆ ಎಂದು ಎಚ್ಚರಿಸಿದರು.

ಮತಾಂತರ

ಮತಾಂತರ ಸಂಬಂಧಗಳು ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಮಾತನಾಡಿದ ಹೊಸಬಾಳೆ, ಧರ್ಮ ಮತ್ತು ಆತ್ಮೀಯತೆ ಪರಸ್ಪರ ಒಂದೇ ಅರ್ಥದಲ್ಲಿಲ್ಲ ಎಂದು ಹೇಳಿದರು. ಆಧ್ಯಾತ್ಮಿಕತೆ ಧರ್ಮದ ಮೀರಿದ ವ್ಯಾಪಕ ಅರ್ಥ ಹೊಂದಿದ್ದು, ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಮಾನವಕುಲದ ಏಕತೆ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಪರಂಪರೆಯ ಬಲವೇ ಇದೇ ಸಮನ್ವಯಶೀಲತೆ; ವೈವಿಧ್ಯತೆಯನ್ನು ಅಳವಡಿಸಿಕೊಂಡಿದ್ದರೂ ಆಂತರಿಕ ಏಕತೆಯನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಎಂದು ಅವರು ಸೂಚಿಸಿದರು. ಇದೇ ಮನೋಭಾವವನ್ನು ಸಮಾಜದಲ್ಲಿ, ಆಡಳಿತದಲ್ಲಿ ಮತ್ತು ಜಾಗತಿಕ ಸಂವಾದದಲ್ಲೂ ಪ್ರತಿಬಿಂಬಿಸಬೇಕು ಎಂದು ಅವರು ಹೇಳಿದರು.





ಸಾಮಾಜಿಕ ಜವಾಬ್ದಾರಿ

ಸಾಮಾಜಿಕ ಜವಾಬ್ದಾರಿ ಮತ್ತು ಸಂಘಟನಾ ದೃಷ್ಟಿಯಿಂದ ದೇಶ ಇನ್ನೂ ಹೆಚ್ಚು ಬೆಳೆಯಬೇಕಿದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ನಾಗರಿಕ ಶಿಸ್ತು, ಕರ್ತವ್ಯಬೋಧೆ ಮತ್ತು ಸಮಾಜಪರ ಹೊಣೆಗಾರಿಕೆಯ ಮನೋಭಾವವನ್ನು ಬಲಪಡಿಸುವುದು ಅಗತ್ಯ ಎಂದರು. ಸಂಘವು ಇದೀಗ ಸಾಮಾಜಿಕ ಸಮರಸತೆ, ಕುಟುಂಬ ಬಲಪಡಿಕೆ, ಪರಿಸರ ಸ್ನೇಹಿ ಜೀವನಶೈಲಿ, ಆತ್ಮನಿರ್ಭರತೆ ಹಾಗೂ ನಾಗರಿಕ ಕರ್ತವ್ಯಗಳಂತಹ ಐದು ಪ್ರಮುಖ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ಕಾಲಾನುಸಾರವಾಗಿ ತನ್ನ ಕಾರ್ಯಪದ್ಧತಿಯನ್ನು ಬದಲಿಸಿಕೊಂಡಿರುವ ಆರ್‌ಎಸ್‌ಎಸ್ ಸೇವೆ, ಮಾಧ್ಯಮ ಮತ್ತು ಸಂಪರ್ಕಕ್ಕೆ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸಿರುವುದನ್ನೂ ಅವರು ಉಲ್ಲೇಖಿಸಿದರು. ಒಳ್ಳೆಯ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ದೇಶದಲ್ಲಿ ಬೇರೆ ಬೇರೆ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳನ್ನು ಜಾಲತಾಣದ ಮೂಲಕ ಪರಸ್ಪರ ಸಂಪರ್ಕಗೊಳಿಸಿ ಒಂದು ಬೃಹತ್ ಸಾಮಾಜಿಕ ಶಕ್ತಿಯಾಗಿ ರೂಪಿಸುವುದು ಅಗತ್ಯವೆಂದು ಹೇಳಿದರು. ಸಂಘವನ್ನು ಕೇವಲ ಒಂದು ಸಂಘಟನೆಯಷ್ಟೇ ಅಲ್ಲ, ಮೌಲ್ಯಾಧಾರಿತ ಜೀವನದ ಶೈಲಿಯಂತೆ ರೂಪುಗೊಂಡ ವ್ಯವಸ್ಥೆಯಾಗಿ ಅವರು ಚಿತ್ರಿಸಿದರು. ಒಟ್ಟಿನಲ್ಲಿ, ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನಲೆಯಲ್ಲಿ ದತ್ತಾತ್ರೇಯ ಹೊಸಬಾಳೆ ನೀಡಿರುವ ಸಂದೇಶವು ಕೇವಲ ಸಂಘದ ಆತ್ಮಪರಿಚಯವಲ್ಲ; ಅದು ರಾಷ್ಟ್ರ ನಿರ್ಮಾಣ, ರಾಜಕೀಯ ಸುಧಾರಣೆ, ನಾಗರಿಕತೆ ಸಂಸ್ಕೃತಿ ಮರುಪರಿಶೀಲನೆ, ಶಿಕ್ಷಣ ಪರಿವರ್ತನೆ, ತಂತ್ರಜ್ಞಾನಕ್ಕೆ ನೈತಿಕ ದಿಕ್ಕು, ಜಾಗತಿಕ ಭಾರತೀಯರ ಪಾತ್ರ, ಕುಟುಂಬ ಮತ್ತು ಸಮಾಜದ ಪುನರ್‌ಬಲಿಕರಣ, ಸಮಾನತೆ ಮತ್ತು ಪರಿಸರ ಸಮತೋಲನದ ಕುರಿತ ಬಹುಆಯಾಮದ ದೃಷ್ಟಿಪತ್ರದಂತಿದೆ. ತಾವು ನೆಲೆಸಿರುವ ದೇಶಕ್ಕೆ ಪೂರ್ಣ ನಿಷ್ಠೆ ತೋರಬೇಕು ಎನ್ನುವ ವಿದೇಶದ ಭಾರತೀಯರಿಗೆ ನೀಡಿದ ಸಂದೇಶದಿಂದ ಹಿಡಿದು, ಭಾರತ ತನ್ನ ಸ್ವಂತ ನಾಗರಿಕತೆಯ ಚೌಕಟ್ಟಿನಲ್ಲಿ ಭವಿಷ್ಯವನ್ನು ರೂಪಿಸಬೇಕು ಎನ್ನುವ ಬೌದ್ಧಿಕ ಕರೆವರೆಗೆ, ಹೊಸಬಾಳೆ ಅಭಿಪ್ರಾಯಗಳು ಸಂಘದ ಎರಡನೇ ಶತಮಾನ ಪ್ರವೇಶದ ರಾಜಕೀಯ– ಸಾಂಸ್ಕೃತಿಕ ಸಂಕೇತಗಳಾಗಿ ಹೊರಹೊಮ್ಮಿವೆ.

ಜಾಗತಿಕ ಸವಾಲುಗಳ ಆತಂಕ

ಜಾಗತಿಕ ಸವಾಲುಗಳ ಕುರಿತು ಹೊಸಬಾಳೆ ಹಲವಾರು ಆತಂಕಗಳನ್ನು ಹೊರಹಾಕಿದರು. ಧರ್ಮದ ಹೆಸರಿನಲ್ಲಿ ನಡೆಯುವ ಹಿಂಸಾಚಾರ ಇನ್ನೂ ಮಾನವಕುಲಕ್ಕೆ ದೊಡ್ಡ ಬೆದರಿಕೆಯಾಗಿದೆ ಎಂದು ಅವರು ಹೇಳಿದರು. ಭೌಗೋಳಿಕ ರಾಜಕೀಯ ಒತ್ತಡಗಳು, ಜಾಗತಿಕ ಶಕ್ತಿ ಅಸಮತೋಲನ, ಗುರುತು ಸಂಘರ್ಷಗಳು ಮತ್ತು ಸಾಮಾಜಿಕ ಏಕತೆಯ ಕುಸಿತವು ವಿಶ್ವವನ್ನು ಸೂಕ್ಷ್ಮ ಹಾಗೂ ಅಪಾಯಕಾರಿ ಹಂತಕ್ಕೆ ತಳ್ಳಿವೆ ಎಂದರು. ಕುಟುಂಬ ವ್ಯವಸ್ಥೆಯ ಕುಸಿತವನ್ನೂ ಅವರು ಪ್ರಮುಖ ಜಾಗತಿಕ ಸಮಸ್ಯೆಯಾಗಿ ಗುರುತಿಸಿದರು. ಗ್ರಾಹಕತ್ವದ ಸಂಸ್ಕೃತಿ, ನಂಬಿಕೆಯ ಕುಸಿತ ಮತ್ತು ಸಾಮಾಜಿಕ ಬಂಧಗಳ ದುರ್ಬಲತೆಯಿಂದ ಕುಟುಂಬಗಳು ಅಸ್ವಸ್ಥವಾಗುತ್ತಿವೆ; ಆದರೆ ಕುಟುಂಬ ಆರೋಗ್ಯವಾಗಿದ್ದರೆ ಸಮಾಜವೂ ಆರೋಗ್ಯವಾಗಿರುತ್ತದೆ, ರಾಷ್ಟ್ರ ವೂ ಬಲವಾಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಪರಿಸರ ಸಮತೋಲನದ ಪ್ರಶ್ನೆಯಲ್ಲಿ ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿ ಅನಿವಾರ್ಯವಾದರೂ ಅದು ಪ್ರಕೃತಿ ಹಾನಿಗೆ ಕಾರಣವಾಗಬಾರದು ಎಂಬ ಎಚ್ಚರಿಕೆಯನ್ನು ನೀಡಿದರು.

ವ್ಯತ್ಯಾಸ ಬಗೆಹರಿಯಲಿ

ಅಂಧಶ್ರದ್ಧೆ ಬಗ್ಗೆ ಮಾತನಾಡಿದ ಅವರು, ಶಿಕ್ಷಣ ವ್ಯವಸ್ಥೆಗಳು ನಾಗರಿಕತೆಯ ವೈಜ್ಞಾನಿಕ ಸಾಧನೆಗಳನ್ನು ಸಮರ್ಪಕವಾಗಿ ಪರಿಚಯಿಸಲು ವಿಫಲವಾದಾಗಲೇ ಮೂಢನಂಬಿಕೆಗಳಿಗೆ ಅವಕಾಶ ಸಿಗುತ್ತದೆ ಎಂದರು. ಶಿಕ್ಷಣವು ನಿಜವಾದ ವೈಜ್ಞಾನಿಕ ಅನ್ವೇಷಣೆ ಮತ್ತು ಅಂಧಶ್ರದ್ಧೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಬೇಕು. ಭಾರತೀಯ ಜ್ಞಾನಪದ್ಧತಿಯಲ್ಲಿ ಅಡಕವಾಗಿರುವ ಹಳೆಯ ವೈಜ್ಞಾನಿಕ ಸಂಶೋಧನೆಗಳು, ಅನುಭವಾಧಾರಿತ ತಿಳುವಳಿಕೆ ಮತ್ತು ಸಮಾಜಜೀವನಕ್ಕೆ ಸಂಬಂಧಿಸಿದ ಜ್ಞಾನವನ್ನು ಪುನರುಜ್ಜೀವನಗೊಳಿಸುವ ಆಗತ್ಯವಿದೆ ಎಂದು ಅವರು ಹೇಳಿದರು. ಶಿಕ್ಷಣದ ಮೂಲಕ ಪೂರ್ವಾಗ್ರಹಗಳು ಮತ್ತು ಅಜ್ಞಾನವನ್ನು ಕಡಿಮೆ ಮಾಡಿ, ವೈಜ್ಞಾನಿಕ ಮನೋಭಾವವನ್ನು ಬಲಪಡಿಸಬೇಕು; ಇಲ್ಲದಿದ್ದರೆ ವೈಜ್ಞಾನಿಕ ಪ್ರಗತಿಯಾದರೂ ಸಮಾಜದಲ್ಲಿ ಅಸಮಾನತೆ, ಗೊಂದಲ ಮತ್ತು ತಪ್ಪುಭಾವನೆಗಳು ಹೆಚ್ಚುತ್ತವೆ ಎಂದು ಅವರು ಸೂಚಿಸಿದರು.

ಕಿರುಸುದ್ದಿ

ವಿಪಕ್ಷಗಳಿಗೆ ಮಹಿಳಾ ಶಕ್ತಿ ಪಾಠ ಕಲಿಸಲಿದೆ: ಶಾಸಕ ಕಾಮತ್



ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ನಾರಿ ಶಕ್ತಿ ವಂದನಾ' ಕಾಯ್ದೆಗೆ ಲೋಕಸಭೆಯಲ್ಲಿ ಸೋಲುಂಟಾಗಿರುವುದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ದಿನ ಎಂದು ಶಾಸಕ ವೇದವ್ಯಾಸ ಕಾಮತ್ ಬೇಸರ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯ ನಂತರದಿಂದಲೂ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು, ಪ್ರಜಾಪ್ರಭುತ್ವದ ನೈಜ ಉದ್ದೇಶವನ್ನು ಹಾಳುಗೆಡವುದು, ಸರ್ವಾಧಿಕಾರ ಮೆರೆಯುವುದು, ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದು ಕಾಂಗ್ರೆಸ್‌ನ ಸಂಸ್ಕೃತಿಯಾಗಿದೆ. ಮೋದಿಯವರ ನಾರಿಕುಲದ ಬಗೆಗಿನ ಮಹಾ ಸಂಕಲ್ಪದ ನೈಜ ಕಾಳಜಿ ದೇಶದ ಮುಂದೆ ಅನಾವರಣಗೊಂಡಿದ್ದು, ಕಾಂಗ್ರೆಸ್‌ನ ಸ್ತ್ರೀ ಕುಲದ ವಿರುದ್ಧದ ಧೋರಣೆ ಸಾಬೀತಾಗಿದೆ ಎಂದರು. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮಹಿಳಾ ಮೀಸಲಾತಿಯನ್ನು ಬಲಿಕೊಟ್ಟ ಕಾಂಗ್ರೆಸ್ ಹಾಗೂ ಇತರ ಪಕ್ಷಗಳಿಗೆ ಭವಿಷ್ಯತ್ತಿನಲ್ಲಿ ದೇಶದ ಮಹಿಳಾಶಕ್ತಿ ತಕ್ಕ ಪಾಠ ಕಲಿಸಲಿದ್ದಾರೆ. ಎಪ್ಪತ್ತು ಕೋಟಿ ಮಹಿಳೆಯರ 33% ಮೀಸಲಾತಿ ಹಕ್ಕನ್ನು ಕಸಿದುಕೊಂಡವರನ್ನು ಇತಿಹಾಸ ಎಂದಿಗೂ ಮರೆಯುವುದಿಲ್ಲ ಎಂದು ಶಾಸಕರು ಹೇಳಿದ್ದಾರೆ.

ನಾಳೆ ಶ್ರೀಶಂಕರಾಚಾರ್ಯ ಜಯಂತಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಹವ್ಯಕ ಮಂಡಲ ಮಂಗಳೂರು ಇವರ ಸಹಕಾರದೊಂದಿಗೆ ಏ.21 ರಂದು ಬೆಳಿಗ್ಗೆ 10.30 ಗಂಟೆಗೆ ಶ್ರೀ ಶಂಕರಾಚಾರ್ಯ ಜಯಂತಿಯನ್ನು ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯ ಶಂಕರಶ್ರೀ ಸಭಾಭವನದಲ್ಲಿ ಆಯೋಜಿಸಲಾಗಿದೆ. ವಿಧಾನಸಭೆ ಸ್ಪೀಕರ್ ಯು.ಟಿ ಖಾದರ್ ಉಪಸ್ಥಿತಿಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಡಿ.ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಅನಂತಸುಬ್ರಹ್ಮಣ್ಯ ಶರ್ಮ ಅವರು ಜಯಂತಿ ಸಂದೇಶವನ್ನು ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನ್ನದ ಪದಕ ಪಡೆದ ರಿಶಲ್ ತಾವ್ರೊಗೆ ಸನ್ಮಾನ

ಮಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಕೂವೆ ಹಳ್ಳಿಯ ರಿಶಲ್ ತಾವ್ರೊ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮಶೀನ್ ಲರ್ನಿಂಗ್ ಡಿಗ್ರಿಯಲ್ಲಿ ಚಿನ್ನದ ಪದಕದೊಂದಿಗೆ ಉತ್ತೀರ್ಣರಾಗಿದ್ದು, ಅವರನ್ನು ಕೊಂಕಣಿ ಭಾಷಾ ಮಂಡಳ್ ಕರ್ನಾಟಕ ಮತ್ತು ತಾವ್ರೊ ಕುಟುಂಬದ ಸದಸ್ಯರ ವತಿಯಿಂದ ಸನ್ಮಾನಿಸಲಾಯಿತು.

ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ, ಶ್ರೀನಿವಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿನಿಯಾದ ರಿಶಲ್ ತಾವ್ರೋ ಅವರನ್ನು ಕೊಂಕಣಿ ಭಾಷಾ ಮಂಡಳ್ ಕರ್ನಾಟಕ ಅಧ್ಯಕ್ಷ, ಬಹುಭಾಷಾ ಸಾಹಿತಿ- ಪತ್ರಕರ್ತ ರೇಮಂಡ್ ಡಿಕುನ್ಹ ತಾಕೊಡೆ ಸನ್ಮಾನಿಸಿದರು. ತಾವ್ರೊ ಕುಟುಂಬದ ಹಿರಿಯರು ಜೋನ್ ತಾವ್ರೊ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿಯ ತಂದೆ ಜೊಸೆಫ್ ತಾವ್ರೊ, ಅಜ್ಜ ಆ್ಯಂಟನಿ ವಾಲ್ಡರ್ ಉಪಸ್ಥಿತರಿದ್ದರು. ರಾಜ್ಯ ಶಿಕ್ಷಕರ ಯೂನಿಯನ್ ನಿಕಟಪೂರ್ವ ಉಪಾಧ್ಯಕ್ಷ ಸ್ಟೇನಿ ತಾವ್ರೊ ಕಾರ್ಯಕ್ರಮ ನಿರೂಪಿಸಿದರು.

ಪಾವಂಜೆ: ಬಸ್ ಡಿಕ್ಕಿ; ಪಾದಚಾರಿ ಗಂಭೀರ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಹಳೆಯಂಗಡಿ ಸಮೀಪದ ಪಾವಂಜೆ ಜಂಕ್ಷನ್ ಬಳಿ ಪಾದಚಾರಿಗೆ ಬಸ್ ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಗೊಂಡವರನ್ನು ಗಣೇಶ್ ಹೊಳ್ಳ (70) ಎಂದು ಗುರುತಿಸಲಾಗಿದೆ. ಗಾಯಾಳು ಗಣೇಶ್ ಹೊಳ್ಳ ತಮ್ಮ ಕಾರನ್ನು ಪಾವಂಜೆ ದೇವಸ್ಥಾನದ ಹತ್ತಿರ ನಿಲ್ಲಿಸಿ ರಸ್ತೆ ದಾಟುತ್ತಿದ್ದ ಸಂದರ್ಭ ಹಳೆಯಂಗಡಿ ಕಡೆಯಿಂದ ಬಂದ ಬಸ್ಸು ಡಿಕ್ಕಿ ಹೊಡೆದಿದೆ. ಅಪಘಾತದಿಂದ ಗಣೇಶ್ ರಸ್ತೆಗೆ ಬಿದ್ದು ತಲೆಗೆ ಗಂಭೀರ ಗಾಯವಾಗಿದ್ದು ಮುಕ್ಕ ಶ್ರೀನಿವಾಸ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾರೆ. ಈ ಬಗ್ಗೆ ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ದಿನಾಂಕ ಘೋಷಣೆ

ಫೆಬ್ರವರಿ 18ರಿಂದ 28ರವರೆಗೆ ಸಂಭ್ರಮ

ಕಾರ್ಕಳ: ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕವು ಕಾರ್ಕಳದಲ್ಲಿ 2027ರ ಫೆಬ್ರವರಿ 18ರಿಂದ 28ರವರೆಗೆ ವಿಜೃಂಭಣೆಯಿಂದ ನಡೆಯಲಿದೆ ಎಂದು 'ರಾಜಗುರು', 'ಧ್ಯಾನಯೋಗಿ' ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಅಧಿಕೃತವಾಗಿ ಘೋಷಿಸಿದರು.

ಕಾರ್ಕಳದ ಬಾಹುಬಲಿ ಪ್ರವಚನ ಮಂದಿರದಲ್ಲಿ ನಡೆದ ಮಹಾಮಸ್ತಕಾಭಿಷೇಕ ಕಾರ್ಯಾಲಯ ಉದ್ಘಾಟನೆ ಹಾಗೂ ದಿನಾಂಕ ಘೋಷಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ದೇವರ ಸಾನ್ನಿಧ್ಯವನ್ನು ಸದಾ ಮನಸ್ಸಿನಲ್ಲಿ ನೆನೆಸಿಕೊಳ್ಳಬೇಕು, ಶಾಂತಿ ಮತ್ತು ಅಹಿಂಸೆಯೇ ಜೀವನದ ಮೂಲ ಮೌಲ್ಯಗಳು ಎಂದು ಹೇಳಿದರು.

ಮಹಾಮಸ್ತಕಾಭಿಷೇಕ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಡಿ. ಹರ್ಷೇಂದ್ರ ಕುಮಾರ್ ಅವರು, ವೇಣೂರು, ಧರ್ಮಸ್ಥಳ ಹಾಗೂ ಕಾರ್ಕಳದ ಗೊಮಟೇಶ್ವರ ಮೂರ್ತಿಯ ಮಸ್ತಕಾಭಿಷೇಕವು 21ನೇ ಶತಮಾನದಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ. ದೇಶ-ವಿದೇಶಗಳಿಂದ ಆಗಮಿಸುವ ಭಕ್ತರಿಗೆ ಉತ್ತಮ ವ್ಯವಸ್ಥೆ ಕಲ್ಪಿಸುವುದು ನಮ್ಮ ಕರ್ತವ್ಯ. ಸಭೆಗಳಲ್ಲಿ ಸಮಯಪಾಲನೆ ಹಾಗೂ ಕಾರ್ಯನಿರ್ವಹಣೆಯಲ್ಲಿ ಶಿಸ್ತು ಮುಖ್ಯ ಎಂದು ಸಲಹೆ ನೀಡಿದರು.

ಅದಾನಿ ಗ್ರೂಪ್ ಅಧ್ಯಕ್ಷ ಕಿಶೋರ್ ಆಳ್ವಾ ಮಾತನಾಡಿ, ಇದು ಐತಿಹಾಸಿಕ ಕ್ಷಣವಾಗಿದ್ದು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜೈನ ಸಮುದಾಯವು ಸಮಾಜಕ್ಕೆ ಮಹತ್ವದ ಕೊಡುಗೆ ನೀಡಿದೆ. ಜಿಲ್ಲೆಯ ಅಭಿವೃದ್ಧಿಯಲ್ಲಿಯೂ ಜೈನ ಧರ್ಮದ ಪಾತ್ರ ಅಪಾರವಾಗಿದೆ. ಎಲ್ಲ ಧರ್ಮದವರೂ ಕೈಜೋಡಿಸಿ ಈ ಮಹೋತ್ಸವ ವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.



> ತಮ್ಮ ಜೀವನದಲ್ಲಿ ನಾಲ್ಕು ಬಾರಿ ಮಹಾಮಸ್ತಕಾಭಿಷೇಕವನ್ನು ನೋಡುವ ಅವಕಾಶ ಸಿಕ್ಕಿರುವುದು ಪುಣ್ಯಕರ. ಡಾ. ರಾಜೇಂದ್ರ ಕುಮಾರ್ ಅವರ ನೇತೃತ್ವದಲ್ಲಿ ಈ ಬಾರಿ ಕೂಡ ಯಶಸ್ವಿಯಾಗಿ ನಡೆಯಲಿದೆ. ಆಳ್ವಾಸ್ ಸಂಸ್ಥೆಯು ಸಂಪೂರ್ಣ ಸಹಕಾರ ನೀಡಲಿದೆ
> ■ ಡಾ. ಮೋಹನ ಆಳ್ವ, ಆಳ್ವಾಸ್ ಪ್ರತಿಷ್ಠಾನದ ಅಧ್ಯಕ್ಷ

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಮಹಾಮಸ್ತಕಾಭಿಷೇಕವನ್ನು ರಾಷ್ಟ್ರೀಯ ಹಬ್ಬದಂತೆ ಆಚರಿಸಬೇಕು. ಭಗವಾನ್ ಬಾಹುಬಲಿ ವಿಶ್ವಶಾಂತಿಯ ಸಂದೇಶ ನೀಡಿದ ಮಹಾನ್ ವ್ಯಕ್ತಿ. ಕೇಂದ್ರ ಸರ್ಕಾರದಿಂದ ಕಾರ್ಕಳಕ್ಕೆ ಅಗತ್ಯವಾದ ಸಹಕಾರವನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದರು. ಜೈನ ಸಮುದಾಯವು ಶಾಂತಿಯ ಪ್ರತೀಕವಾಗಿದ್ದು, ಜಗತ್ತಿಗೆ ಉತ್ತಮ ಸಂದೇಶ ನೀಡಿದ ಸಮುದಾಯವಾಗಿದೆ ಎಂದು ಕೊಂಡಾಡಿದರು.

> ಮಹಾಮಸ್ತಕಾಭಿಷೇಕಕ್ಕೆ ಇನ್ನೂ 305 ದಿನಗಳು ಬಾಕಿ ಇವೆ. ಈ ಮಹೋತ್ಸವವನ್ನು ಯಶಸ್ವಿಗೊಳಿಸಲು ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಬೇಕು. ಎಸ್‌ಡಿಸಿಸಿ ಬ್ಯಾಂಕ್ ರಾಜ್ಯದಲ್ಲಿ ಮಹಿಳೆಯರ ಸಹಕಾರದಿಂದ ಬೆಳೆದಿರುವುದು ಒಂದು ಉದಾಹರಣೆ. ಸಮಾಜವು ಸಂಕಷ್ಟಗಳನ್ನು ಎದುರಿಸಿ ಬೆಳೆದಿದೆ. ಸರ್ಕಾರದಿಂದಲೂ ಎಲ್ಲಾ ರೀತಿಯ ಸೌಲಭ್ಯಗಳು ಮತ್ತು ಅನುದಾನಗಳು ಲಭ್ಯವಾಗುತ್ತಿದ್ದು, ಅವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು
> ■ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಸಮಿತಿಯ ಕಾರ್ಯಾಧ್ಯಕ್ಷ

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾತನಾಡಿ, ಜಿಲ್ಲಾಡಳಿತವು ಈ ಮಹೋತ್ಸವಕ್ಕೆ ಸಂಪೂರ್ಣ ಸಹಕಾರ ನೀಡಲು ಸಿದ್ಧವಾಗಿದೆ. ರಾಜ್ಯ ಸರ್ಕಾರ ನೀಡಿರುವ ಅನುದಾನಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದರು.

ಮುನಿಯಾಲು ಉದಯ ಕುಮಾರ್ ಶೆಟ್ಟಿ, ಮಾಜಿ ಸಚಿವ ಅಭಯಚಂದ್ರ ಜೈನ್ ಸೇರಿದಂತೆ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

> ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ಮಹಾಮಸ್ತಕಾಭಿಷೇಕಕ್ಕಾಗಿ ರೂ. 3 ಲಕ್ಷ ದೇಣಿಗೆ ನೀಡುವ ಮೂಲಕ ಮಹೋತ್ಸವದ ಯಶಸ್ಸಿಗೆ ತಮ್ಮ ಕೊಡುಗೆಯನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಅಳದಂಗಡಿ ಪದ್ಮಪ್ರಸಾದ್ ಅಜಿಲ, , ಜೀವಂಧರ ಬಲ್ಲಾಳ್, ರತ್ನಾಕರ ರಾಜ್ ಅರಸರು, ಹೆಚ್ಚುವರಿ ಎಸ್‌ಪಿ ಸುಧಾಕರ ನಾಯ್ಕ್, ಶಶಿಪ್ರಸಾದ್, ಗುಣಪಾಲ ಕಡಂಬ, ಸಿ.ಕೆ. ಬಳ್ಳಾಲ್, ಪ್ರವೀಣ್ ಕುಮಾರ್ ಇಂದ್ರ, ಶ್ರೀಧರ ಕಡಂಬ, ವೈ. ಸೂರಜ್ ಕುಮಾರ್, ಅನಂತರಾಜ ಪುವಣಿ, ಸಂಪತ್ ಸಾಮ್ರಾಜ್ಯ, ಸುಧೀರ್ ಪಡಿವಾಳ್, ಜಿಪಂ ಸಿಇಒ ಪ್ರತೀಕ್ ಬಾಯಲ್, ಡಿವೈಎಸ್ಪಿ ಮಹೇಶ್ ಪ್ರಸಾದ್, ದೇವಿಪ್ರಸಾದ್ ಶೆಟ್ಟಿ ಬೆಳಪು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಸರ್ವೇಶ್ ಜೈನ್ ಪ್ರಾರ್ಥನೆ ನೆರವೇರಿಸಿದರು. ಪ್ರಧಾನ ಕಾರ್ಯದರ್ಶಿ ಪುಷ್ಪರಾಜ್ ಜೈನ್ ಸ್ವಾಗತಿಸಿದರು. ಅಜಿತ್ ಕೊಕ್ರಾಡಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಮೋಹನ್ ಪಡಿವಾಳ್ ವಂದಿಸಿದರು.

ಸುಬ್ರಹ್ಮಣ್ಯದ ನಿಯೋಗಕ್ಕೆ ಆರೋಗ್ಯ ಸಚಿವರಿಂದ ಭರವಸೆ

ಕುಕ್ಕೆಗೆ ಶೀಘ್ರ ತುರ್ತು ಚಿಕಿತ್ಸಾ ಘಟಕ



ಸುಬ್ರಹ್ಮಣ್ಯ: ಪುಣ್ಯಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಕ್ತರ ಅನುಕೂಲತೆಗಾಗಿ 24x7 ತುರ್ತು ಚಿಕಿತ್ಸಾ ಘಟಕ ಆರಂಭಿಸಲು ಶೀಘ್ರ ಕ್ರಮ ವಹಿಸಲಾಗುವುದು. ದಿನನಿತ್ಯ ಸಹಸ್ರಾರು ಭಕ್ತರು ಆಗಮಿಸುವ ಕ್ಷೇತ್ರಕ್ಕೆ 24 ಗಂಟೆ ತೆರೆದಿರುವ ತುರ್ತು ಚಿಕಿತ್ಸಾ ಘಟಕ ಅತ್ಯವಶ್ಯಕವಾಗಿರುವುದರಿಂದ ತುರ್ತಾಗಿ ಘಟಕ ಆರಂಭಿಸಲು ವ್ಯವಸ್ಥೆಗಳನ್ನು ಮಾಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

ಸುಬ್ರಹ್ಮಣ್ಯದಲ್ಲಿ 24x7 ತುರ್ತು ಚಿಕಿತ್ಸಾ ಘಟಕವನ್ನು ವ್ಯವಸ್ಥೆ ಮಾಡುವಂತೆ ಸುಬ್ರಹ್ಮಣ್ಯದ ನಿಯೋಗ ಶನಿವಾರ ಮಂಗಳೂರಿನಲ್ಲಿ ಆರೋಗ್ಯ ಸಚಿವರನ್ನು ಭೇಟಿಯಾಗಿ ಮನವಿ ಸಲ್ಲಿಸಿದಾಗ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಭರವಸೆ ನೀಡಿದರು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ದಕ್ಷಿಣ ಭಾರತದ ನಾಗರಾಧನೆಯ ಪವಿತ್ರ ಪುಣ್ಯಕ್ಷೇತ್ರವಾಗಿದೆ. ಇಲ್ಲಿಗೆ ದಿನನಿತ್ಯ ಸಾವಿರಾರು ಭಕ್ತಾದಿಗಳು ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಬಂದು ಸೇವೆಗಳನ್ನು ಪೂರೈಸುತ್ತಾರೆ. ಆದರೆ ಇಲ್ಲಿ ಅನಾರೋಗ್ಯಕ್ಕೆ ತುತ್ತಾದ ಭಕ್ತರಿಗೆ ಅಥವಾ ತೀವ್ರತರವಾದ ಆರೋಗ್ಯದ ತೊಂದರೆ ಸಂಭವಿಸಿದಲ್ಲಿ ಭಕ್ತರಿಗಾಗಲಿ, ಸಾರ್ವಜನಿಕರಿಗೆ ಆಗಲಿ 24x7 ತುರ್ತು ಚಿಕಿತ್ಸಾ ಘಟಕ ಇಲ್ಲದೆ ಈ ಹಿಂದೆ ಹಲವು ಮರಣಗಳು ಸಂಭವಿಸಿದ ನಿದರ್ಶನಗಳಿವೆ. ಈ ಹಿಂದೆ ಹಲವು ಬಾರಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದರೂ ಇಲ್ಲಿಯವರೆಗೆಏನುಪ್ರಯೋಜನವಾಗಿಲ್ಲ. ಆದುದರಿಂದ ರಾಜ್ಯ ಆರೋಗ್ಯ ಸಚಿವರು ಇದರ ಬಗ್ಗೆ ಕೂಡಲೇ ಗಮನ ಹರಿಸಿ ಇಲ್ಲಿಗೆ ಅಗತ್ಯ 24x7 ತುರ್ತು ಚಿಕಿತ್ಸಾ ಘಟಕವನ್ನು ವ್ಯವಸ್ಥೆ ಮಾಡಬೇಕು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ನಿಯೋಗದಲ್ಲಿ ಶಿವರಾಮ ರೈ, ರಾಜೇಶ್ ಎನ್.ಎಸ್, ಡಾ. ಶಿವಕುಮಾರ್ ಹೊಸಳಿಕೆ, ಡಾ. ರವಿ ಕಕ್ಕೆಪದವು, ಪವನ್ ಎಂ.ಡಿ, ಚಂದ್ರಶೇಖರ ನಾಯರ್, ಸುಬ್ರಹ್ಮಣ್ಯ ಅತ್ಯಾಡಿ, ಲೋಕೇಶ ಬಿ.ಎನ್, ಭರತ್ ಕಲ್ಲಗುಡ್ಡೆ, ದಿನೇಶ್ ಅತ್ಯಾಡಿ ಇದ್ದರು.

ಅಂತಾರಾಷ್ಟ್ರೀಯ ಕರಾಟೆ ಸ್ಪರ್ಧೆ: ಅದ್ಭುತ ಗೆಲುವು ದಾಖಲಿಸಿದ ಕುಂಬಳೆ ಜೆಎಸ್‌ಕೆಎ



ಕುಂಬಳೆ: ತೃಶೂರ್ ಟೆನಿಸ್ ಕ್ಲಬ್‌ನಲ್ಲಿ ನಡೆದ 48ನೇ ಅಂತಾರಾಷ್ಟ್ರೀಯ ಶೋಟೋಕಾನ್ ಕರಾಟೆ ಸ್ಪರ್ಧೆಯಲ್ಲಿ ಕುಂಬಳೆ ಜೆಎಸ್‌ಕೆಎ ವಿದ್ಯಾರ್ಥಿಗಳು ಏಳು ಚಿನ್ನ ಸೇರಿದಂತೆ 16 ಪದಕಗಳೊಂದಿಗೆ ಅದ್ಭುತ ಗೆಲುವು ಸಾಧಿಸಿದ್ದಾರೆ. ಕಾಸರಗೋಡಿನ ಜೆಎಸ್‌ಕೆಎ, ಕಟಾ ಮತ್ತು ಕುವೈಟ್ ವಿಭಾಗಗಳಲ್ಲಿ ಒಂಬತ್ತು ಸ್ಪರ್ಧಿಗಳನ್ನು ಕಣಕ್ಕಿಳಿಸುವ ಮೂಲಕ ದೇಶಕ್ಕಾಗಿ ಈ ಮಹಾನ್ ಸಾಧನೆ ದಾಖಲಿಸಲಾಗಿದೆ.

ಹಸಿರು ಮತ್ತು ಕಂದು ಬೆಲ್ಟ್ ಹೊಂದಿರುವ ಮಕ್ಕಳ ಸ್ಪರ್ಧೆಗಳಲ್ಲಿ, ಚರಿತ್ (ಆರು) ಮತ್ತು ಮೊಹಮ್ಮದ್ ಸಯಾನ್ ಇಸ್ಮಾಯಿಲ್ (12) ಎರಡೂ ವಿಭಾಗಗಳಲ್ಲಿ ಚಿನ್ನ ಗೆದ್ದರು. ಕಂದು ಬೆಲ್ಟ್ ಹೊಂದಿರುವ ಅಕುಲ್‌ರಾಜ್ (11) ಒಂದು ಚಿನ್ನ ಮತ್ತು ಒಂದು ಬೆಳ್ಳಿ ಗೆದ್ದರು.

ಕಪ್ಪು ಬೆಲ್ಟ್ ಹೊಂದಿರುವ ಆಟಗಾರ್ತಿ ಶೋಭಿತಾ ಆಳ್ವ (16) ಒಂದು ಚಿನ್ನ ಮತ್ತು ಒಂದು ಕಂಚು ಗೆದ್ದರು. ಹಸಿರು ಬೆಲ್ಟ್ ಹೊಂದಿರುವ ಆರ್ಯನ್ ಕೆ. ವಿಜಯ್ (7) ಒಂದು ಬೆಳ್ಳಿ ಮತ್ತು ಒಂದು ಕಂಚು ಗೆದ್ದರು. ಕೆ.ಅನುಸ್ವೇತಾ (11) ನೇರಳೆ ಬೆಲ್ಟ್ ವಿಭಾಗದಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು.

> ಭಾರತ, ಶ್ರೀಲಂಕಾ ಮತ್ತು ಏಷ್ಯಾದ ಇತರ ಮಧ್ಯಪ್ರಾಚ್ಯ ದೇಶಗಳಿಂದ ಸಾವಿರಕ್ಕೂ ಹೆಚ್ಚು ಸ್ಪರ್ಧೆಗಳು ಭಾಗವಹಿಸಿದ್ದರು.

ಬ್ರೌನ್ ಬೆಲ್ಟ್ ಮಕ್ಕಳ ಸ್ಪರ್ಧೆಯಲ್ಲಿ, ಸಾಕ್ಷಿ ಶೆಟ್ಟಿ (13) ಒಂದು ಚಿನ್ನ ಮತ್ತು ಒಂದು ಕಂಚು ಗೆದ್ದರೆ, ಅವನಿ ಪೈ (9) ಮತ್ತು ಭೂಮಿಕಾ (13) ತಲಾ ಒಂದು ಬೆಳ್ಳಿ ಗೆದ್ದರು.

ಈ ತಿಂಗಳ 11 ಮತ್ತು 12 ರಂದು ಸ್ಪರ್ಧೆಗಳು ನಡೆದವು. ಭಾರತ, ಶ್ರೀಲಂಕಾ ಮತ್ತು ಏಷ್ಯಾದ ಇತರ ಮಧ್ಯಪ್ರಾಚ್ಯ ದೇಶಗಳಿಂದ ಸಾವಿರಕ್ಕೂ ಹೆಚ್ಚು ಸ್ಪರ್ಧೆಗಳು ಭಾಗವಹಿಸಿದ್ದರು.

48 ವರ್ಷಗಳಿಂದ ಕರಾಟೆ ತರಬೇತಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಜಿಲ್ಲೆಯ ಮುಖ್ಯ ತರಬೇತುದಾರ ಸದಾನಂದ, ಸಹಾಯಕ ತರಬೇತುದಾರ ಅಕ್ಷಯ್ ಕುಮಾರ್, ಜೆಎಸ್‌ಕೆಎ ಜಿಲ್ಲಾ ಪ್ರಧಾನ ಕಾರ್ಯದರ್ಶಿತುಳಸಿಪೈ,ಕಾರ್ಯದರ್ಶಿ ಅಬ್ದುಲ್ ರಜಾಕ್ ಪೆರುವಾಯಿ ಮತ್ತು ಕಾರ್ಯಕಾರಿ ಸದಸ್ಯ ವಿನುರಾಜ್ ಆರ್. ಪಿ. ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಸಂತಸ ಹಂಚಿಕೊಂಡರು.

ಬೆಂಗಳೂರಿನಲ್ಲಿ ಕರಾವಳಿ ಜಾನಪದ ವೈಭವ

ಮಂಗಳೂರು: ವೈಟ್ ಲೋಟಸ್ ಫೌಂಡೇಶನ್ ಟ್ರಸ್ಟ್ ಮತ್ತು ಕರ್ನಾಟಕ ಜಾನಪದ ಪರಿಷತ್ ದ.ಕ ಜಿಲ್ಲಾ ಘಟಕ ಹಾಗೂ ಬಂಟ್ವಾಳ ತಾಲೂಕು ಘಟಕಗಳ ಸಹಯೋಗದಲ್ಲಿ ಏ.24ರಿಂದ 26ರ ವರೆಗೆ ಬೆಂಗಳೂರಿನ ಬಸವೇಶ್ವರ ನಗರದ ಸುಭಾಷ್ ಚಂದ್ರ ಬೋಸ್ ಮೈದಾನದಲ್ಲಿ ಕರಾವಳಿ ಜಾನಪದ ವೈಭವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ ಅಧ್ಯಕ್ಷ ಪ್ರವೀಣ್ ಕುಮಾರ್ ಕೊಡಿಯಾಲಬೈಲ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕರಾವಳಿ ಜಿಲ್ಲೆಗಳ, ಸಂಸ್ಕೃತಿ, ಜನಪದ ಕಲೆ, ಯಕ್ಷಗಾನ, ಆರಾಧನೆ, ಹುಲಿ ಕುಣಿತ, ಆಹಾರ ಮೇಳ, ಆಚಾರ- ವಿಚಾರ, ತುಳು ಪಾಡ್ದನ, ಜನಪದ ನಲಿಕೆ ತುಳು ಜನಪದ ಭಾಷೆ ಒಟ್ಟಾರೆಯಾಗಿ ಕರಾವಳಿ ಸೌಂದರ್ಯದ ಚಿತ್ರಣವನ್ನು ಬೆಂಗಳೂರಿನ ರಾಜಧಾನಿ ಬೆಂಗಳೂರಿನಲ್ಲಿ ಕರಾವಳಿ ಜಾನಪದ ವೈಭವ ಎಂಬ ಶೀರ್ಷಿಕೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಪರಿಷತ್ ಪ್ರಧಾನ ಕಾರ್ಯದರ್ಶಿ ರಾಜೇಶ್ ಸ್ಕೈಲಾರ್ಕ್ ಮಾತನಾಡಿ, 24ರಂದು ಸಂಜೆ 4 ಗಂಟೆಗೆ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಉದ್ಘಾಟಿಸಲಿದ್ದು, ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಒಡಿಯೂರು ಗುರುದೇವಾನಂದ ಸ್ವಾಮೀಜಿ, ಮಾಣಿಲ ಮೋಹನದಾಸ ಪರಮಹಂಸ ಸ್ವಾಮೀಜಿ, ರಾಜಾಜಿ ನಗರ ಶಾಸಕ ಸುರೇಶ್ ಕುಮಾರ್ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ವೈಟ್ ಲೋಟಸ್ ಫೌಂಡೇಶನ್ ಅಧ್ಯಕ್ಷೆ ಪ್ರಮೀಳಾ ಸಾಯಿ ಪ್ರಿಯಾ ಮಾತನಾಡಿ, ಕಂಗೀಲು ನೃತ್ಯ, ಮಾಯಾ ಲೋಕ, ಪರಮಾತ್ಮೆ ಪಂಜುರ್ಲಿ ನಾಟಕ, ಹುಲಿ ಕುಣಿತ, ತುಳುನಾಡ ಸಂಸ್ಕೃತಿ ವೈಭವ ಪ್ರದರ್ಶನಗೊಳ್ಳಲಿದೆ ಎಂದರು.

ಪ್ರಮುಖರಾದ ಸಂದೀಪ್ ಶೆಟ್ಟಿ, ಪ್ರವೀಣ್ ಕಂದಾವರ, ಪ್ರತಿಭಾ ಶೆಟ್ಟಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ವೇಗ | ಸುವ್ಯವಸ್ಥಿತ ವೃತ್ತ ನಿರ್ಮಾಣದ ಭರವಸೆ

ಇತಿಹಾಸ ಪುಟ ಸೇರಿದ ಉಜಿರೆ ಸರ್ಕಲ್!

ಬೆಳ್ತಂಗಡಿ: ತಾಲೂಕಿನ ಪ್ರಮುಖ ಪೇಟೆಯಾದ ಉಜಿರೆಯಲ್ಲಿದ್ದ ವೃತ್ತವನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಾಗಿ ತೆರವುಗೊಳಿಸಲಾಗಿದೆ.

ಚಾರ್ಮಾಡಿ, ಧರ್ಮಸ್ಥಳ, ಬೆಳ್ತಂಗಡಿ ಕಡೆಯಿಂದ ಹೋಗುವ ಮತ್ತು ಬರುವ ವಾಹನಗಳು ಸುಲಭವಾಗಿ ಸಂಚರಿಸಲು ಇಲ್ಲಿ ಅನೇಕ ವರ್ಷಗಳ ಹಿಂದಿನಿಂದ ವೃತ್ತಾಕಾರದ ಸರ್ಕಲ್ ಇತ್ತು. ಸುಮಾರು 15 ವರ್ಷಗಳ ಹಿಂದೆ ಈ ವೃತ್ತಾಕಾರದ ಸರ್ಕಲ್‌ನ್ನು ತೆರವುಗೊಳಿಸಿ ಬೇರೆ ಬೇರೆ ಭಾಗಗಳಿಂದ ಆಗಮಿಸುವ ವಾಹನಗಳಿಗೆ ಸರ್ಕಲ್ ಪ್ರದೇಶದಲ್ಲಿ ಪ್ರತ್ಯೇಕ ರಸ್ತೆ ನಿರ್ಮಿಸಲಾಯಿತು. ಆದರೆ ಇದು ತೀರಾ ಅವೈಜ್ಞಾನಿಕವಾಗಿ ನಿರ್ಮಾಣವಾದ ಕಾರಣ ವಾಹನ ಸವಾರರು ಪರದಾಡುವ ಜತೆ ಸಾಕಷ್ಟು ಅಪಘಾತಗಳು ಸಂಭವಿಸಿದವು. ಬಳಿಕ ಕಳೆದ ಹತ್ತು ವರ್ಷಗಳ ಹಿಂದೆ ಆ ರಸ್ತೆಗಳನ್ನು ತೆರೆವುಗೊಳಿಸಿ ಅದೇ ಸ್ಥಳದಲ್ಲಿ ಮತ್ತೆ ಸರ್ಕಲ್ ನಿರ್ಮಿಸಲಾಯಿತು. ಇದೀಗ ಆ ಸರ್ಕಲ್‌ನ್ನು ತೆರೆವುಗೊಳಿಸಲಾಗಿದೆ. ಉಜಿರೆಯಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಇಲ್ಲದ ಕಾರಣ ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣಿಸುವ ಬಸ್ ಗಳನ್ನು ಅಲ್ಲಲ್ಲಿ ನಿಲ್ಲಿಸಲಾಗುತ್ತದೆ. ಇಲ್ಲಿ ಬಸ್ ನಿಲ್ದಾಣವಿದ್ದರೂ ಎಲ್ಲಾ ಕಡೆಗೆ ಹೋಗುವ ವಾಹನಗಳು ಬಸ್ ನಿಲ್ದಾಣವನ್ನು ಪ್ರವೇಶಿಸುವುದಿಲ್ಲ. ಹಲವು ಬಸ್‌ಗಳು ಸರ್ಕಲ್ ಇದ್ದ ಪ್ರದೇಶದಲ್ಲಿ ನಿಲ್ಲುವುದರಿಂದ ಟ್ರಾಫಿಕ್ ಜಾಮ್ ಸಮಸ್ಯೆ ಉಂಟಾಗುತ್ತಿತ್ತು. ಹಲವು ವಾಹನ ಸವಾರರು ಸರ್ಕಲ್ ನಿಯಮ ಪಾಲಿಸದೆ ಬೇಕಾಬಿಟ್ಟಿ ಸಂಚಾರ ನಡೆಸುವುದರಿಂದ ಹಲವಾರು ಸಮಸ್ಯೆಗಳು ಉಂಟಾಗುತ್ತಿದ್ದವು.



ಬೇಕಿದೆ ವ್ಯವಸ್ಥಿತ ಸರ್ಕಲ್

ಉಜಿರೆಯಲ್ಲಿ ವ್ಯವಸ್ಥಿತವಾದ ಸರ್ಕಲ್ ನಿರ್ಮಿಸುವುದು ಅತ್ಯಗತ್ಯವಾಗಿದೆ. ಉಜಿರೆ ಮೂಲಕ ದಿನಂಪ್ರತಿ ಹಲವು ಸಾವಿರ ವಾಹನಗಳ ಓಡಾಟ ಇದೆ.ಆದರೆ ಇಲ್ಲಿ ಸರಿಯಾದ ಸಂಚಾರ ವ್ಯವಸ್ಥೆ, ಬಸ್ ನಿಲ್ದಾಣ ಇಲ್ಲದ ಕಾರಣ ಸ್ಥಳೀಯರು ಹಾಗೂ ಪ್ರವಾಸಿಗರು ವಾಹನ ಸವಾರರು ಸಾಕಷ್ಟು ಬವಣೆ ಪಡುವಂತಾಗಿದೆ. ಈ ಕಾರಣದಿಂದ ಉಜಿರೆಗೆ ವ್ಯವಸ್ಥಿತ ಸರ್ಕಲ್, ಬಸ್ ನಿಲ್ದಾಣದ ಅಗತ್ಯ ಇದೆ. ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ವಾರ್ಷಿಕ ಜಾತ್ರೆ ಸಮಯ ಸರ್ಕಲ್‌ನಲ್ಲಿ ದೇವರಿಗೆ ಪ್ರತಿ ವರ್ಷ ಪೇಟೆ ಸವಾರಿ ಬಳಿಕ ಕಟ್ಟೆ ಪೂಜೆಯು ನಡೆಯುತ್ತದೆ.

ಕಾಲೇಜು ರಸ್ತೆ ಬಸ್ ನಿಲ್ದಾಣದ ದುರವಸ್ಥೆ

ಉಜಿರೆಯ ಕಾಲೇಜು ರಸ್ತೆಯಲ್ಲಿ ಪ್ರತಿಷ್ಠಿತ ಸಂಸ್ಥೆಯೊಂದು ಹಲವು ವರ್ಷಗಳ ಹಿಂದೆ ಬಸ್ ನಿಲ್ದಾಣವೊಂದನ್ನು ನಿರ್ಮಿಸಿ ಕೊಟ್ಟಿದೆ. ಧರ್ಮಸ್ಥಳ ಕಡೆ ಹೋಗುವ ಎಲ್ಲಾ ಬಸ್ ಹಾಗೂ ರಾತ್ರಿ ಬೆಂಗಳೂರಿಗೆ ತೆರಳುವ ಖಾಸಗಿ ಕೆಎಸ್ಸಾರ್ಟಿಸಿ ಬಸ್‌ಗಳಿಗೆ ಇಲ್ಲಿ ನಿಲುಗಡೆ ನೀಡಲಾಗುತ್ತದೆ. ಪ್ರಸ್ತುತ ಈ ಬಸ್ ನಿಲ್ದಾಣ ಕುಡುಕರ ಕೇಂದ್ರವಾಗಿ ಮಾರ್ಪಟ್ಟಿದೆ. ರಾತ್ರಿ ಹೊತ್ತು ಕುಡುಕರಿಂದ ತುಂಬಿರುವ ಈ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಪ್ರವೇಶಿಸಲು ಹಿಂಜರಿಯುತ್ತಾರೆ. ಮಕ್ಕಳು ಒಂಟಿ ಮಹಿಳೆಯರು ಇಲ್ಲಿ ಬಸ್ ಕಾಯಲು ಸಾಧ್ಯವಾಗದ ಪರಿಸ್ಥಿತಿ ಇದೆ. ಇದಲ್ಲದೆ ಈ ಬಸ್ ನಿಲ್ದಾಣದಲ್ಲಿ ದೀಪಗಳ ವ್ಯವಸ್ಥೆಯು ಇಲ್ಲದಿರುವುದು ವಿಪರ್ಯಾಸವಾಗಿದೆ.

ಹಗಲು ಹೊತ್ತು ಈ ಬಸ್ ನಿಲ್ದಾಣದ ಪ್ರದೇಶದಲ್ಲಿ ಸಾಕಷ್ಟು ಬಾಡಿಗೆ ಹಾಗೂ ಖಾಸಗಿ ವಾಹನಗಳು ನಿಲ್ಲುವುದರಿಂದ ಬಸ್‌ಗಳು ರಸ್ತೆ ಮಧ್ಯೆ ನಿಂತು ಪ್ರಯಾಣಿಕರನ್ನು ಹತ್ತಿಸಿ ಇಳಿಸಬೇಕಿದೆ. ಇದು ಟ್ರಾಫಿಕ್ ಜಾಮ್ ಸಮಸ್ಯೆಗೂ ಕಾರಣವಾಗುತ್ತಿದೆ.

> ಸುವ್ಯವಸ್ಥಿತ ಸರ್ಕಲ್
> ಕಾಮಗಾರಿಗಾಗಿ ಸರ್ಕಲ್‌ನ್ನು ತೆರವುಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇಲ್ಲಿ ಸುವ್ಯವಸ್ಥಿತ ಸರ್ಕಲ್ ನಿರ್ಮಾಣವಾಗಲಿದೆ
> ■ ಕೆ.ಟಿ. ಚಂದ್ರಶೇಖರ್, ಇಇ, ರಾಷ್ಟ್ರೀಯ ಹೆದ್ದಾರಿ ಇಲಾಖೆ, ದಕ

ಮಹಿಳಾ ಮೀಸಲಾತಿಗೆ ವಿರೋಧವಿಲ್ಲ: ಸಿಎಂ

ರಾಣೇಬೆನ್ನೂರು: ಮಹಿಳಾ ಮೀಸಲಾತಿ ಮಸೂದೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ 2023ರಲ್ಲಿಯೇ ಅಂಗೀಕಾರವಾಗಿದೆ. ಪ್ರಸ್ತುತ ಕ್ಷೇತ್ರ ಮರುವಿಂಗಡನೆಯನ್ನು ಸೇರಿಸಿ ಮಂಡಿಸಿದ್ದಾರೆ. ನಾವು ಮಹಿಳಾ ಮೀಸಲಾತಿಗೆ ವಿರೋಧವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಅವರು ರಾಣೇಬೆನ್ನೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ , ಸಂವಿಧಾನದ 73,74 ನೇ ತಿದ್ದುಪಡಿಗಳನ್ನು ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ತಂದಿದ್ದರು. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ. ಈಗ ಮಾತ್ರ ಮಹಿಳಾ ಮೀಸಲಾತಿಗೆ ಒತ್ತಾಯಿಸಿ ರಾಜಕೀಯ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕ್ಷೇತ್ರ ಮರುವಿಂಗಡನೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ: ಕ್ಷೇತ್ರ ಮರುವಿಂಗಡನೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ದಕ್ಷಿಣದಲ್ಲಿ 50% ಮಾಡಿದರೆ ಉತ್ತರ ಪ್ರದೇಶದಲ್ಲಿ 80 ಸ್ಥಾನಗಳಿವೆ. ಅಲ್ಲಿಗೆ 120 ಸ್ಥಾನಗಳಾಗುತ್ತವೆ. ಕರ್ನಾಟಕದಲ್ಲಿ 42 ಸ್ಥಾನಗಳಾಗುತ್ತವೆ. ಉತ್ತರ ಭಾರತದಲ್ಲಿ ಸ್ಥಾನಗಳು ಹೆಚ್ಚಾಗುವುದರ ಬಗ್ಗೆ ನಮ್ಮ ವಿರೋಧವೇ ಹೊರತು ಮಹಿಳಾ ಮೀಸಲಾತಿಗೆ ವಿರೋಧವಿಲ್ಲ. ಅದರ ಪರವಾಗಿದ್ದೇವೆ ಎಂದರು.

ಸಂವಿಧಾನ ತಿದ್ದುಪಡಿಗೆ ಮೂರನೇ ಎರಡರಷ್ಟು ಬಹುಮತ ಲೋಕಸಭೆಯಲ್ಲಿ ಇರಬೇಕು. 50% ರಾಜ್ಯಗಳು ಇದಕ್ಕೆ ಒಪ್ಪಿಗೆ ನೀಡಬೇಕು ಎಂದರು. ಕ್ಷೇತ್ರ ಮರು ವಿಂಗಡಣೆಗೆ ವಿರೋಧ ಮಾಡಿದ್ದೇವೆ ಹೊರತು ಮಹಿಳಾ ಮೀಸಲಾತಿಗೆ ನಮ್ಮ ವಿರೋಧವಿಲ್ಲ ಎಂದರು.



ಮೇಲ್ಮನವಿಗೆ ಅವಕಾಶ

ಜನಪ್ರತಿನಿಧಿಗಳು ಜೈಲು ಸೇರುತ್ತಿರುವುದರ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದರು.


ಮಟ್ಕಾ ದಂಧೆ ನಿಯಂತ್ರಣದಲ್ಲಿದೆ

ರಾಣೇಬೆನ್ನೂರು ಸುತ್ತ ಮುತ್ತ ಮಟ್ಕಾ ದಂಧೆ ವ್ಯಾಪಕವಾಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಸ್ಥಳೀಯ ಶಾಸಕರು ಕ್ರಮ ಕೈಗೊಂಡಿದ್ದಾರೆ ಎಂದರು. ಪ್ರಸ್ತುತ ಮಟ್ಕಾ ದಂಧೆ ನಿಯಂತ್ರಣದಲ್ಲಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ರಾಜಕೀಯ ಮಾಡ್ತಿದ್ದಾರೆ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿಗಳು ಎಂದು ಭಾಷಣ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ತಮಿಳುನಾಡು , ಪಶ್ಚಿಮ ಬಂಗಾಳದ ಚುನಾವಣೆ ಇರುವುದರಿಂದ ರಾಜಕೀಯ ಮಾಡುತ್ತಿದ್ದಾರೆ ಎಂದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ವಿರೋಧ ಪಕ್ಷಗಳು ಮಹಿಳಾ ಮೀಸಲಾತಿ ಎಂಬ ಭ್ರೂಣವನ್ನು ಹತ್ಯೆ ಮಾಡಿವೆ
– ಮೋದಿ
– ಸಹಸ್ರಾರು ದೇಶಭಕ್ತರ, ಧಾರ್ಮಿಕ ನಾಯಕರ, ವೀರ ಸೈನಿಕರ ಹತ್ಯೆಗಳಾದಾಗ ಮರುಗದ ಮಂದಿಗೆ ಭ್ರೂಣ ಹತ್ಯೆ ಏನು ಮಹಾ?

ದಿನ ಭವಿಷ್ಯ

ಮೇಷ ಸಣ್ಣಪುಟ್ಟ ಗಾಯಗಳಾಗುವ ಸಾಧ್ಯತೆ ಬಗ್ಗೆ ಎಚ್ಚರ ವಹಿಸಿ. ಆರ್ಥಿಕ ಉನ್ನತಿ. ಕೌಟುಂಬಿಕ ಭಿನ್ನಮತ ಶಾಂತಿಯಿಂದ ಬಗೆಹರಿಸಿ.

ವೃಷಭ ಮನಬಂದಂತೆ ಖರ್ಚು ಮಾಡದಿರಿ. ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡುವ ಯೋಗವಿದೆ. ಸಾಂಸಾರಿಕ ಸೌಹಾರ್ದ, ಸಾಮರಸ್ಯ.

ಮಿಥುನ ಸಕಾಲದಲ್ಲಿ ಕಾರ್ಯ ಮುಗಿಸಿ. ಇತರರ ಜತೆ ವ್ಯವಹಾರದಲ್ಲಿ ವಿನಯ ಇರಲಿ. ದಾರ್ಷ್ಟ್ಯ ವರ್ತನೆ ತೋರದಿರಿ. ಹೊಸ ಸ್ನೇಹ ಮೂಡಬಹುದು.

ಕಟಕ ಪಾಸಿಟಿವ್ ಚಿಂತನೆ ಇಂದು ಅವಶ್ಯ. ಸಣ್ಣ ವಿಷಯಕ್ಕೂ ಕಳವಳ ಅನಗತ್ಯ. ಅಂತಿಮವಾಗಿ ಎಲ್ಲವೂ ನಿಮಗೆ ಪೂರಕವಾಗಿ ಸಾಗಲಿದೆ.

ಸಿಂಹ ಆತುರದ ಕ್ರಮ ಬೇಡ. ಯೋಚಿಸಿ ಕಾರ್ಯ ಎಸಗಿ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡಬಹುದು. ಸಹನೆ ಅತಿ ಮುಖ್ಯ.

ಕನ್ಯಾ ಕೌಟುಂಬಿಕ ಶಾಂತಿ, ಸೌಹಾರ್ದ. ಆದಾಯದಲ್ಲಿ ಹೆಚ್ಚಳ. ಶೇರು ವ್ಯವಹಾರದಲ್ಲಿ ಲಾಭ. ಹೊಸ ಸಂಬಂಧ ಬೆಳೆಯುವ ಸಾಧ್ಯತೆ ಕಾಣುತ್ತಿದೆ.

ತುಲಾ ಸ್ವಲ್ಪ ಮಟ್ಟಿನ ಅಶಾಂತ ಮನಸ್ಸು. ಆದರೆ ಅದು ದೀರ್ಘ ಕಾಲ ಉಳಿಯದು. ಇತರ ಹೊಣೆಗಾರಿಕೆ ನಿಮ್ಮನ್ನು ಕಾದಿರುತ್ತದೆ.

ವೃಶ್ಚಿಕ ನಿಮ್ಮ ವ್ಯವಹಾರ ವಿಸ್ತರಿಸುವ ಅವಕಾಶ. ಕಾಲ ಪ್ರಶಸ್ತವಾಗಿದೆ. ಕೌಟುಂಬಿಕ ಪರಿಸರ ಹಿತಕರ. ಯಾವುದೇ ಭಿನ್ನಮತ ಬಾಧಿಸದು.

ಧನು ನಿಮ್ಮ ಕಾರ್ಯದಿಂದ ಇತರರ ಗಮನ ಸೆಳೆಯುವಿರಿ. ನಿಮ್ಮ ಗುರಿ ತಲುಪಲು ಕಠಿಣ ಪ್ರಯತ್ನ ನಡೆಸಿರಿ. ಆರೋಗ್ಯ ಸಮಸ್ಯೆ ಕಾಡಬಹುದು.

ಮಕರ ಆಪ್ತರ ಕುರಿತಂತೆ ಅತಿಯಾದ ಪೊಸೆಸಿವ್ ಧೋರಣೆ ಬಿಡಿ. ಆದರಿಂದ ಸಂಬಂಧ ಹಾಳಾದೀತು. ಮೃದುವಾಗಿ ವರ್ತಿಸುವುದು ಒಳಿತು.

ಕುಂಭ ಕೌಟುಂಬಿಕ ಭಿನ್ನಮತ ಸ್ವಲ್ಪ ಕಾಲ ನಿಮ್ಮ ಮನಸ್ಸು ಉದ್ವಿಗ್ನ ಮಾಡಬಹುದು. ಬಳಿಕ ಅದು ಸರಿಯಾಗಲಿದೆ. ವೃತ್ತಿಯಲ್ಲಿ ಸಾಧನೆ.

ಮೀನ ಏಳುಬೀಳಿನ ಕುರಿತು ಸಮಚಿತ್ತ ಹೊಂದಿರುವುದು ಅವಶ್ಯ. ಏಕೆಂದರೆ ಇಂದು ನೀವು ಏರುಪೇರು ಎರಡನ್ನೂ ಅನುಭವಿಸುವಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 4,9,3,0

ನಗರ ಪ್ರದೇಶಗಳ ತ್ಯಾಜ್ಯದಿಂದ ಕಾಂಪೋಸ್ಟ್ ಗೊಬ್ಬರ ಉತ್ಪಾದನೆ

ರೈತರಿಗೆ ಗೊಬ್ಬರ ವಿತರಣೆ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ನಗರ ಪ್ರದೇಶಗಳಲ್ಲಿ ಉಂಟಾಗುವ ತ್ಯಾಜ್ಯವನ್ನು ಬಳಸಿಕೊಂಡು ಕಾಂಪೋಸ್ಟ್ ಗೊಬ್ಬರ ಉತ್ಪಾದಿಸಿ ರಾಜ್ಯಾದ್ಯಂತ ರೈತರಿಗೆ ಉಚಿತವಾಗಿ ವಿತರಿಸಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಹೆಜ್ಜೆ ಇಟ್ಟಿದೆ.

ಸದ್ಯಕ್ಕೆ ಈ ಉಚಿತ ಕಾಪೋಸ್ಟ್ ಗೊಬ್ಬರ ವಿತರಣೆ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರಿಗೆ ಸಿಗಲಿದ್ದು, ಬೆಂಗಳೂರು ನಗರದಲ್ಲಿ ಉತ್ಪಾದನೆಯಾಗುವ ಗುಣಮಟ್ಟದ ಕಾಂಪೋಸ್ಟ್ ಅನ್ನು ನಿರಂತರವಾಗಿ ಖರೀದಿಸಿ ವಿತರಿಸಲಿದೆ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ವಿಸ್ತರಣೆಗೆ ನಿಗಮ ಯೋಜನೆ ರೂಪಿಸಿದೆ.

ಸಿಎಸ್ಆರ್ ಪಾಲುದಾರಿಕೆಯೊಂದಿಗೆ ತ್ಯಾಜ್ಯವನ್ನು ಸಂಪತ್ತನ್ನಾಗಿ ಪರಿವರ್ತಿಸಲು, ಕರ್ನಾಟಕದ ಸುಸ್ಥಿರ ಕೃಷಿಗಾಗಿ ಕರ್ನಾಟಕ ವಿಷನ್ 2030ರ ಆಶಯದಂತೆ ಮಣ್ಣಿನ ಆರೋಗ್ಯ ಸುಧಾರಣೆ ಮತ್ತು ಸುಸ್ಥಿರ ಕೃಷಿಗೆ ನೆರವಾಗಲು, ರೈತರನ್ನು ಸಬಲೀಕರಣಗೊಳಿಸಲು ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಲು ಇನ್ನಷ್ಟು ಕಾರ್ಪೊರೇಟ್ ಸಂಸ್ಥೆಗಳು ಪಾಲುದಾರರಾಗಿ ನಮ್ಮೊಂದಿಗೆ ಕೈಜೋಡಿಸಲು ಆಹ್ವಾನಿಸುತ್ತೇನೆ ಎಂದು ನಿಗಮದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕಳೆದ ಮುಂಗಾರಿನಲ್ಲಿ ಯೂರಿಯಾ ಗೊಬ್ಬರಕ್ಕೆ ಅತೀ ಹೆಚ್ಚು ಬೇಡಿಕೆ ಬಂದಿದ್ದರಿಂದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಯುದ್ಧದ ಪರಿಣಾಮ ಈ ಬಾರಿಯ ಮುಂಗಾರಿನಲ್ಲಿ ರಸಗೊಬ್ಬರದ ಕೊರತೆ ಉಂಟಾಗುಯವ ಸಾಧ್ಯತೆ ಇರುವುದರಿಂದ ಕಾಂಪೋಸ್ಟ್ ಗೊಬ್ಬರವು ರೈತರಿಗೆ ನೆರವಾಗಲಿದೆ. ರೈತರು ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ದೀರ್ಘಕಾಲೀನ ಇಳುವರಿ ಮತ್ತು ಪರಿಸರ ಸ್ನೇಹಿ ಸಾವಯವ ಕೃಷಿ ಪದ್ಧತಿಗಳತ್ತ ಮರಳಲು ಇದು ಸಹಾಯ ಮಾಡಲಿದೆ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



> ಕಾಂಪೋಟ್ಸ್ ಗೊಬ್ಬರ ವಿತರಣೆ ಕುರಿತು ಸಿಎಂ ಮತ್ತು ಡಿಸಿಎಂ ಗಮನಕ್ಕೆ ತರಲಾಗಿದ್ದು, ತ್ಯಾಜ್ಯ ನಿರ್ವಹಣೆಗೆ ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆಯ ಸಹಯೋಗಬೇಕಿದೆ. ತಾಲ್ಲೂಕುಗಳಲ್ಲಿ 400 ರಿಂದ 500 ಟನ್ ಕಸ ಉತ್ಪಾದನೆಯಾಗುತ್ತಿದೆ.
> ■ ಎ.ಎನ್. ನಟರಾಜ್ ಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ

ಬೆಂಗಳೂರಿನಲ್ಲಿ ದಿನಕ್ಕೆ 250 ಟನ್ ಹಸಿ ತ್ಯಾಜ್ಯ ಸಂಸ್ಕರಣೆ

ಬೆಂಗಳೂರು ನಗರವು ದಿನಕ್ಕೆ ಸುಮಾರು 5,000 ಟನ್ ಘನತ್ಯಾಜ್ಯವನ್ನು ಉತ್ಪತ್ತಿಯಾಗುತ್ತಿದ್ದು, ಆದರಲ್ಲಿ ಸುಮಾರು 1,500 ಟನ್ ಹಸಿತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಕೆಸಿಡಿಸಿ ಸಂಸ್ಥೆಯು ಪ್ರಸ್ತುತ ದಿನಕ್ಕೆ 250 ಟನ್ ಹಸಿ ತ್ಯಾಜ್ಯವನ್ನು ಸ್ವೀಕರಿಸುತ್ತಿದ್ದು, ಇದನ್ನು ಸಂಸ್ಕರಿಸಿ ಅಪ್ಪಟ ಸಾವಯವ ಗೊಬ್ಬರವನ್ನು ತಯಾರಿಸುತ್ತಿದೆ. ಗ್ರೇಟರ್ ಬೆಂಗಳೂರು ಐಟಿ ಕಂಪನಿ ಮತ್ತು ಕೈಗಾರಿಕಾ ಅಸೋಷಿಯಯನ್ ಜೊತೆಗೆ ಕೆಸಿಡಿಸಿಎಲ್ ಒಪ್ಪಂದ ಮಾಡಿಕೊಂಡಿದ್ದು, ಈ ಸಂಸ್ಥೆಯು ಕಾಂಪೋಸ್ಟ್ ಗೊಬ್ಬರವನ್ನು ಪ್ರತಿ ಟನ್‌ಗೆ 3,300 ರಂತೆ ಖರೀದಿಸಿ, ಸರಬರಾಜು ಮಾಡುತ್ತಿದೆ. ಪ್ರತಿ ತಿಂಗಳು 100 ಟನ್ ಗೊಬ್ಬರ ಖರೀದಿಸುತ್ತಿದೆ.

ಮಹಿಳಾ ಮೀಸಲಾತಿಗೆ ಬಿಜೆಪಿ ಆದ್ಯತೆ: ಸಂಸದ

ಬೆಂಗಳೂರು: 1992 ರಿಂದ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಚರ್ಚೆ ನಡೆಯುತ್ತಿದೆ. ಮೀಸಲಾತಿ ವಿಚಾರದಲ್ಲಿ ಆಗಿನಿಂದಲೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಆದಷ್ಟು ಬೇಗ ಕೊಡಬೇಕು ಎಂಬುದು ಬಿಜೆಪಿ ನಿಲುವು ಇದೆ. ಲೋಕಸಭೆಯಲ್ಲಿ ಈ ವಿಧೇಯಕ ಚರ್ಚೆಗೆ ಬಂದಾಗಲೆಲ್ಲಾ ಬಿಜೆಪಿ ಬೆಂಬಲಿಸಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಜೆ.ಪಿ.ನಗರದ ಆರ್.ವಿ.ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಬೆಂಗಳೂರು ಮಹಾನಗರ ಸಬಲ ನಾರಿ– ಸಮರ್ಥ ಭಾರತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್, 1992ರಿಂದ ಸೋಲಿಸುತ್ತಾ ಬರುತ್ತಿದೆ. ಅಂದಿನಿಂದ ಇಲ್ಲಿಯವರೆಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ಪಕ್ಷವು ಹೇಗಾದರೂ ಮಾಡಿ ಸೋಲಿಸುತ್ತಾ ಬರುತ್ತಿದೆ. ಲಾಲೂಪ್ರಸಾದ್, ಮುಲಾಯಂ ಸಿಂಗ್ ಮೂಲಕ ಸೋಲಿಸಿದ್ದರು. ಅವರೆಲ್ಲಾ ಇನ್ನೊಮ್ಮೆ ಸೇರಿ ಲೋಕಸಭೆಯಲ್ಲಿ ಪ್ರತಿ ಹರಿದುಹಾಕಿದರು. ಬಿಜೆಪಿ ಸರ್ಕಾರ 2023ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಅಂಗೀಕಾರಗೊಳಿಸಿತ್ತು. 40 ವರ್ಷದಿಂದ ಬಾಕಿ ಇದ್ದ ಮಸೂದೆಯನ್ನು 2023ರಲ್ಲಿ ಲೋಕಸಭೆಯಲ್ಲಿ ಜಾರಿ ಮಾಡಿದ್ದು ಬಿಜೆಪಿ. ಬಿಜೆಪಿ ವಿಪಕ್ಷ ಆಗಿದ್ದಾಗೆಲ್ಲ ಮಹಿಳಾ ಮೀಸಲಾತಿಗೆ ಬೆಂಬಲಿಸಿದೆ ಎಂದು ತಿಳಿಸಿದರು.



ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ವಿಧಾನಸಭೆಗಳು ಹಾಗೂ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ನಾರೀಶಕ್ತಿ ವಂದನಾ ಮಸೂದೆಯನ್ನು ಲೋಕಸಭೆಯಲ್ಲಿ ಸೋಲಿಸಿರುವ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು. ಮಹಿಳಾ ಮೀಸಲಾತಿ ವಿಧೇಯಕವನ್ನು ಬೆಂಬಲಿಸದೆ, ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂಬುದನ್ನು ಮಸೂದೆಗೆ ವಿರುದ್ಧ ಮತಚಲಾಯಿಸುವ ಮೂಲಕ ಸಾಬೀತುಪಡಿಸಿದೆ ಎಂದರು.

ತೃತೀಯ ಭಾಷಾ ಪರೀಕ್ಷೆಗೆ ಅಂಕ: ಹೈಗೆ ಸರ್ಕಾರ ಅರ್ಜಿ

ಪುಟ ೧➡ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ (ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು)ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪರೀಕ್ಷೆ ನಡೆಯುತ್ತಿದ್ದ ಸಂದರ್ಭದಲ್ಲಿ (ಮಾ.28) ಪ್ರಕಟಿಸಿದ್ದರು. ಸರ್ಕಾರದ ಕ್ರಮ ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್, ಉಡುಪಿಯ ಅನುಷಾ ಮತ್ತು ಸುಧೀಕ್ಷಾ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಏ.15ರಂದು ವಿಚಾರಣೆ ನಡೆಸಿದ್ದ ನ್ಯಾ. ಇ.ಎಸ್.ಇಂದಿರೇಶ್ ಅವರ ಪೀಠವು 2025–26ರ ಎಸ್ಎಸ್ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು. ಹಿಂದಿ ಸೇರಿ ತೃತೀಯ ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥ ಮಾಡಿತ್ತು.

ಈ ಆದೇಶವನ್ನು ಮರು ಪರಿಶೀಲಿಸುವಂತೆ ಕೋರಿ ಹೈಕೋರ್ಟ್‌ಗೆ ಸರ್ಕಾರವು ಮರು ಪರಿಶೀಲನಾ ಅರ್ಜಿ ಸಲ್ಲಿಸಿದೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿಯಮಗಳಿಗೆ ತಿದ್ದುಪಡಿ ತರಲು ಕರಡು ಅಧಿಸೂಚನೆಯನ್ನು ಏ.10ರಂದು ರಾಜ್ಯ ಸರ್ಕಾರ ತನ್ನ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿದೆ. ಈ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೆ ಆದೇಶ ಪಡೆದುಕೊಂಡಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಈಗಾಗಲೇ ವಜಾಗೊಳಿಸಿ, ಅರ್ಜಿದಾರರಿಗೆ ಒಂದು ಲಕ್ಷ ರೂ. ದಂಡ ವಿಧಿಸಿತ್ತು. ಈ ವಿಷಯವನ್ನು ಪ್ರಸ್ತುತ ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೆ ಸತ್ಯಾಂಶ ಮರೆಮಾಚಿದ್ದಾರೆ ಎಂದು ಸರ್ಕಾರ ತನ್ನ ಮರು ಪರಿಶೀಲನಾ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಮೂಲ ಅರ್ಜಿ ಸಂಬಂಧ ನ್ಯಾಯಾಲಯಕ್ಕೆ ತನ್ನ ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ಅವಕಾಶವನ್ನೇ ನೀಡಿಲ್ಲ. ಅರ್ಜಿದಾರರು ಕರಡು ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದು ಸರ್ಕಾರ ಆಕ್ಷೇಪಿಸಿದೆ. ಹಿಂದಿ ಸೇರಿ ಎಲ್ಲಾ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ ವಿಷಯಗಳಲ್ಲಿ 80ಕ್ಕಿಂತ ಅಧಿಕ ಅಂಕ ಪಡೆದರೆ ಎ ಶ್ರೇಣಿ, 50ರಿಂದ 79 ಅಂಕ ಪಡೆದರೆ ಬಿ ಶ್ರೇಣಿ, 49 ಕ್ಕಿಂತ ಕಡಿಮೆ ಅಂಕ ಪಡೆದರೆ ಸಿ ಶ್ರೇಣಿ ಎಂದು ಗ್ರೇಡ್ ನೀಡಲಾಗುತ್ತದೆ. ಆದರೆ, ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣ ಮಾಡುವುದಿಲ್ಲ ಎಂದು ಅರ್ಜಿಯಲ್ಲಿ ಸರ್ಕಾರ ವಿವರಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ನಡುವೆ ಸಮಾನ ಅವಕಾಶ ಕಲ್ಪಿಸಲು ಹಾಗೂ ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡಲು ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ ವಿಷಯಗಳಿಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲು ಉದ್ದೇಶಿಸಲಾಗಿದೆ. ಅಂಕದ ಬದಲು ಗ್ರೇಡ್ ನೀಡುವುದು ಸುಧಾರಣಾ ಕ್ರಮವಾಗಿದೆ. ಇದು ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಸರ್ಕಾರದ ನಡೆಯಿಂದ ತೃತೀಯ ಭಾಷೆ ತಿರಸ್ಕಾರಕ್ಕೆ ಒಳಗಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ. ಆದ್ದರಿಂದ ಏ.15ರಂದು ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಬೇಕು ಎಂದು ಸರ್ಕಾರ ತನ್ನ ಅರ್ಜಿಯಲ್ಲಿ ನ್ಯಾಯಾಲಯವನ್ನು ಕೋರಿದೆ.

ಮಹಿಳೆಯರಿಗೆ ಮೋಸ

ಪುಟ ೧➡ ಯಾವುದೇ ಶಕ್ತಿಗೂ ಇದನ್ನು ತಡೆಯಲು ಸಾಧ್ಯವಿಲ್ಲ ಎಂದ ಅವರು, ಡಿಎಂಕೆ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದರು. ಅಲ್ಲದೆ, ಚುನಾವಣೆಯಲ್ಲಿ ಅದಕ್ಕೆ ತಕ್ಕ ಪಾಠ ಕಲಿಸಲು ಮತದಾರರಿಗೆ ಮನವಿ ಮಾಡಿದರು.

ವಿಪಕ್ಷಗಳಿಂದ ಸಂಚು: ಈರೋಡ್‌ನಲ್ಲಿ ನಡೆದ ರೋಡ್‌ಶೋದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಕಾಂಗ್ರೆಸ್ ಮತ್ತು ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದರು. ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ಸಿಗದಂತೆ ಮಾಡಲು ಈ ಪಕ್ಷಗಳು ಸಂಚು ರೂಪಿಸಿವೆ ಎಂದು ಆರೋಪಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಮಹಿಳೆಯರಿಗೆ ನ್ಯಾಯ ಒದಗಿಸುತ್ತದೆ.

ಈ ಸಂಚು ಯಶಸ್ವಿಯಾಗಲು ನಾವು ಅವಕಾಶ ಕೊಡುವುದಿಲ್ಲ ಎಂದು ಶಾ ಹೇಳಿದರು. ತಮಿಳುನಾಡಿನಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು. ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವುದರ ಜತೆಗೆ ಲೋಕಸಭಾ ಸದಸ್ಯರ ಸಂಖ್ಯೆಯನ್ನು 816ಕ್ಕೆ ಹೆಚ್ಚಿಸುವ ಪ್ರಸ್ತಾವವಿದ್ದ ಈ ತಿದ್ದುಪಡಿ ಮಸೂದೆಗೆ ಶುಕ್ರವಾರ ಸಂಸತ್ತಿನಲ್ಲಿ ಸೋಲಾಗಿದೆ.

ರಾಜ್ಯಗಳ ಪ್ರಾತಿನಿಧ್ಯ ಹೆಚ್ಚಳ

2011ರ ಜನಗಣತಿ ಪರಿಗಣಿಸಿದರೆ ತಮಿಳುನಾಡಿನಲ್ಲಿ ಕೇವಲ 10 ಸೀಟು ಹೆಚ್ಚಾಗಬೇಕಿತ್ತು. ಆದರೆ, ಅದು 59 ಆಗಲಿದೆ. ಕರ್ನಾಟಕದಲ್ಲೂ 28 ಇದ್ದದ್ದು 42 ಆಗಲಿದೆ. ಮಹಿಳೆಯರು, ಎಸ್ಸಿ–ಎಸ್ಟಿಗಳ ಪ್ರಾತಿನಿಧ್ಯ ಹೆಚ್ಚಾಗಲಿದೆ. ರಾಜ್ಯಗಳ ಪ್ರಾತಿನಿಧ್ಯವೂ ಹೆಚ್ಚಾಗುತ್ತದೆ. ಈಗ ಕೆಲವು ಕ್ಷೇತ್ರಗಳು 39 ಲಕ್ಷದಷ್ಟು ಮತದಾರರನ್ನು ಹೊಂದಿವೆ. ಇನ್ನೂ ಕೆಲವು ಸುಮಾರು 2 ಲಕ್ಷ ಮತದಾರರನ್ನು ಹೊಂದಿವೆ ಎಂದು ಠಾಕೂರ್ ತಿಳಿಸಿದರು.

ಮೂಢನಂಬಿಕೆ ಬಿಡಿ ದೇವರಪೂಜೆ ಮಾಡಿ

ಪುಟ ೧➡ ನಮ್ಮ ಸರ್ಕಾರ ಸರ್ವ ಜನಾಂಗದ ಶಾಂತಿಯ ತೋಟವಾಗಿಸಬೇಕೆನ್ನುವ ಉದ್ದೇಶ ಹೊಂದಿದೆ ಎಂದರು.

ನೀರಿನ ಕೊರತೆ ನೀಗಿಸಲು ಸೂಚನೆ: ಈ ಬಾರಿ ಮಳೆ ಕೊರತೆಯಾಗಲಿದೆ ಎಂಬ ಮುನ್ಸೂಚನೆಯಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ರಾಣೇಬೆನ್ನೂರಿನ ವರ್ತುಲ ರಸ್ತೆ ಹಾಗೂ ಸಮುದಾಯ ಭವನಕ್ಕೆ ಅನುದಾನ ನೀಡುವ ಭರವಸೆ ನೀಡಿದರು. ಈ ವೇಳೆ ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕರಾದ ಬಸವರಾಜ ಶಿವಣ್ಣನವರ, ಯು.ಬಿ.ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರಖಾನ ಪಠಾಣ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಮೊದಲಾದವರು ಉಪಸ್ಥಿತರಿದ್ದರು.

ಇಂಡಿ ಒಕ್ಕೂಟದ ಮಾನಸಿಕ ಸ್ಥಿತಿ ಅನಾವರಣ: ಸಂಸದ ಅನುರಾಗ್

ಪುಟ ೧➡ ಆದರೆ, ಮಸೂದೆ ಮತಕ್ಕೆ ಹಾಕಿದಾಗ ಕಾಂಗ್ರೆಸ್ಸಿನವರು ಮಹಿಳೆಯರಿಗೆ ಹಿಂದಿನಿಂದ ಬಂದು ಚೂರಿಯಿಂದ ಇರಿಯುವ ಕೆಲಸ ಮಾಡಿದ್ದಾರೆ. ಮಹಿಳೆ ಯರಿಗೆ ರಾಜಕೀಯ ಪ್ರಾತಿನಿಧ್ಯವು ಸಹಜ ಹಕ್ಕಾಗಿದೆ. ಈ ಹಕ್ಕು ನೀಡುವಲ್ಲಿ ವಿಳಂಬವಾಗಿದ್ದು, ಇದಕ್ಕೆ ಕಾಂಗ್ರೆಸ್ ಮತ್ತಿತರ ಪಕ್ಷಗಳೇ ಕಾರಣ ಎಂದು ದೂರಿದರು.

ಜಾತಿ, ಮತದ ಆಧಾರದಲ್ಲಿ ಒಡೆಯಲು ಯತ್ನಿಸುತ್ತಿದ್ದ ಕಾಂಗ್ರೆಸ್ಸಿಗರು ಇದೀಗ ಪ್ರಾದೇಶಿಕವಾಗಿ ಒಡಕು ಮೂಡಿಸಲು ಯತ್ನಿಸುತ್ತಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆಯೂ ಅತ್ಯಂತ ಮಹತ್ವದ್ದಾಗಿದೆ. ಮಹಿಳಾ ಮೀಸಲಾತಿಗೆ ನಿರಂತರ ಪ್ರಯತ್ನ ನಡೆದಿತ್ತು. ಅಲ್ಲದೇ ಕಾಂಗ್ರೆಸ್ ಈ ವಿಚಾರದಲ್ಲಿ ಮಹಿಳೆಯರಿಗೆ ಮೋಸ ಮಾಡುತ್ತಲೇ ಬಂದಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ರಾಜ್ಯ ವಕ್ತಾರೆ ಕು. ಸುರಭಿ ಹೊದಿಗೆರೆ, ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಆನಂದ್ ಉಪಸ್ಥಿತರಿದ್ದರು.

ಇರಾನ್‌ಗೆ ಟ್ರಂಪ್ ಮತ್ತೆ ಬೆದರಿಕೆ



ಪುಟ ೧➡ ಲೆಬನಾನ್‌ನಲ್ಲಿ ಕದನ ವಿರಾಮದ ನಂತರ ಇರಾನ್ ಈ ಹಿಂದೆ ಜಲಸಂಧಿಯನ್ನು ಮುಕ್ತಗೊಳಿಸುವುದಾಗಿ ಘೋಷಿಸಿತ್ತಾದರೂ, ಟ್ರಂಪ್ ಬಂದರು ದಿಗ್ಬಂಧನವನ್ನು ಮುಂದು ವರಿಸಿದ ನಂತರ ಆ ನಿರ್ಧಾರವನ್ನು ಹಿಂತೆಗೆದುಕೊಂಡಿತ್ತು. ಯುಎಸ್ ತನ್ನ ದಿಗ್ಬಂಧನವನ್ನು ತೆರವುಗೊಳಿಸುವವರೆಗೆ ಜಲಸಂಧಿಯ ಸಂಚಾರ ಸೀಮಿತವಾಗಿರುತ್ತದೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ತಿಳಿಸಿದ್ದಾರೆ.

ಸಂಧಾನದ ಸ್ಥಿತಿ: ಮಾತುಕತೆಯಲ್ಲಿ ಪ್ರಗತಿಯಾಗಿದ್ದರೂ ಮೂಲಭೂತ ಅಂತರಗಳು ಹಾಗೇ ಉಳಿದಿವೆ ಮತ್ತು ಅಂತಿಮ ಒಪ್ಪಂದವು ಸದ್ಯಕ್ಕೆ ಅಸಾಧ್ಯ ಎಂದು ಘಾಲಿಬಾಫ್ ದೃಢಪಡಿಸಿದರು. ಎರಡು ವಾರಗಳ ಕದನ ವಿರಾಮ ಈ ಬುಧವಾರದಂದು ಮುಕ್ತಾಯಗೊಳ್ಳಲಿದೆ. ಈ ಜಲಮಾರ್ಗ ಮುಚ್ಚಿರುವುದರಿಂದ ಇರಾನ್‌ಗೆ ಪ್ರತಿದಿನ 500 ಮಿಲಿಯನ್ ಡಾಲರ್ ನಷ್ಟವಾಗುತ್ತಿದೆ ಎಂದು ಟ್ರಂಪ್ ಅಂದಾಜಿಸಿದ್ದಾರೆ.

ಕೆ.ಆರ್.ನಗರದಲ್ಲಿ ಆರು ಮಂದಿ ಕಾವೇರಿ ಪಾಲು

ಪುಟ ೧➡ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ತಲಾ 5 ಲಕ್ಷ ರೂ. ಪರಿಹಾರ: 6 ಮಂದಿ ಮೃತಪಟ್ಟಿರುವ ವಿವರ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತರ ಕುಟುಂಬಸ್ಥರಿಗೆ ತಲಾ 5ಲಕ್ಷ ರೂ. ನೀಡುವುದಾಗಿ ಘೋಷಿಸಿದ್ದಾರೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಸಹಾಯಧನದ ಜತೆಗೆ ನಾನು ವೈಯಕ್ತಿಕವಾಗಿ ಮೃತರ ಕುಟುಂಬಸ್ಥರಿಗೆ ತಲಾ 50 ಸಾವಿರ ರೂಪಾಯಿ ನೀಡುವುದಾಗಿ ಹೇಳಿದರು.

ದೇಶ ನಿಷ್ಠೆ ಇರಲಿ: ಹೊಸಬಾಳೆ



ಪುಟ ೧➡ ಈ ನಿಲುವನ್ನು ಅವರು ವಸುಧೈವ ಕುಟುಂಬಕಂ ತತ್ವದೊಂದಿಗೆ ಜೋಡಿಸಿ, ಜಗತ್ತಿನ ಎಲ್ಲರೂ ಒಂದೇ ಕುಟುಂಬವೆಂಬ ಭಾರತೀಯ ಮೌಲ್ಯವನ್ನು ಕೇವಲ ಘೋಷಣೆಯಾಗಿ ಅಲ್ಲ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯವಾಗಿ ನೋಡಬೇಕು ಎಂದರು.

ಇದೇ ವೇಳೆ, ಸ್ಥಳೀಯ ಸಮಾಜದೊಂದಿಗೆ ಹೊಂದಾಣಿಕೆ ಸಾಧಿಸುವುದು ಹಾಗೂ ಭಾರತೀಯ ನಾಗರಿಕತೆಯೊಂದಿಗೆ ನಂಟು ಉಳಿಸಿಕೊಳ್ಳುವುದು ಎಂಬ ದ್ವಿಮುಖ ದೃಷ್ಟಿಕೋನವನ್ನು ಸಂಘ ಅನುಸರಿಸುತ್ತಿದೆ ಎಂದರು. ವಿದೇಶಗಳಲ್ಲಿ ಕಾರ್ಯನಿರ್ವಹಿಸುವ ಸ್ವಯಂಸೇವಕರು ಸ್ಥಳೀಯ ಹಿಂದು ಸಮುದಾಯವನ್ನು ಸಂಘಟಿಸುವುದರ ಜತೆಗೆ ಸಮಾಜದ ಸಮಗ್ರ ಅಭಿವೃದ್ಧಿಗೂ ಕೈಜೋಡಿಸುತ್ತಿದ್ದಾರೆ ಎಂದು ಅವರು ವಿವರಿಸಿದರು.

ಜಾಗತಿಕ ಮಟ್ಟದಲ್ಲಿ ಆರ್‌ಎಸ್‌ಎಸ್ ಪಾತ್ರ ವಿವರಿಸಿದ ಅವರು, 'ಮಾನವೀಯ ಮೌಲ್ಯಗಳು ಮತ್ತು ಸಂಘಟನಾ ಶಿಸ್ತಿನ ಮೂಲಕ ಮಾನವ ಸಂಪತ್ತು ನಿರ್ಮಿಸುವುದು ನಮ್ಮ ಉದ್ದೇಶ' ಎಂದು ಹೇಳಿದರು. ಈ ಮಾದರಿ ವಿಶ್ವದ ಎಲ್ಲ ಭಾಗಗಳಲ್ಲಿ ಅನುಸರಿಸಬಹುದಾದದ್ದು ಎಂದು ಅವರು ಅಭಿಪ್ರಾಯಪಟ್ಟರು.

ಪಟಾಕಿ ಘಟಕದಲ್ಲಿ ಭಾರೀ ಸ್ಫೋಟ: 18 ಮಂದಿ ಬಲಿ

ಪುಟ ೧➡ ವಿರುಧುನಗರ್ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪಟಾಕಿ ಕಾರ್ಖಾನೆಯಲ್ಲಿ ಕಾರ್ಮಿಕರು ರಾಸಾಯನಿಕಗಳ ನಿರ್ವಹಣೆ ಮಾಡುತ್ತಿದ್ದ ಸಂದರ್ಭದಲ್ಲಿ ಕಾರ್ಖಾನೆ ಮುಂಭಾಗ ಸ್ಫೋಟ ಸಂಭವಿಸಿದೆ. ಈ ಕಾರ್ಖಾನೆ ನಾಗ್ಪುರದ ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತೆ ಸಂಸ್ಥೆ (ಪಿಇಎಸ್‌ಒ)ಯಿಂದ ಪರವಾನಗಿ ಪಡೆದಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ದುರಂತ ವೇಳೆ ಕಾರ್ಖಾನೆಯೊಳಗೆ 100ಕ್ಕೂ ಹೆಚ್ಚು ಕಾರ್ಮಿಕರಿದ್ದರು. ಸ್ಫೋಟದ ತೀವ್ರತೆಗೆ ಮೂರು ಕೊಠಡಿಗಳು ಸುಟ್ಟು ಕರಕಲಾಗಿವೆ. ಸಮೀಪದ ಕಟ್ಟಡವೂ ನೆಲಸಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂಡಿ ಒಕ್ಕೂಟಕ್ಕೆ ಜಯ

ಬೆಂಗಳೂರು: ತರಾತುರಿಯಲ್ಲಿ ಸಂವಿಧಾನ ತಿದ್ದುಪಡಿ ಮಾಡಲು ಹೋದ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಮುಖಭಂಗವಾಗಿದೆ. ಇದು ಇಂಡಿಯಾ ಒಕ್ಕೂಟದ ಜಯವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಭಾನುವಾರ ತಮ್ಮ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಹಾಗೂ ಕ್ಷೇತ್ರ ವಿಂಗಡಣೆ ವಿರುದ್ಧ ಪ್ರತಿಭಟಿಸಿದ ದಕ್ಷಿಣ ಭಾರತದ ಎಲ್ಲಾ ಮುಖ್ಯಮಂತ್ರಿಗಳ ಹೋರಾಟಕ್ಕೆ, ಪ್ರಜಾಪ್ರಭುತ್ವಕ್ಕೆ ಸಿಕ್ಕಂತಹ ದೊಡ್ಡ ಜಯ. ಮಹಿಳೆಯರ ಪರವಾಗಿ ಕಾಂಗ್ರೆಸ್ ಪಕ್ಷ ಹಾಗೂ ಇಂಡಿಯಾ ಒಕ್ಕೂಟ ನಿಂತಿದೆ. ಇಲ್ಲಿ ಯಾರಿಗೂ ಅವಮಾನವಾಗಿಲ್ಲ ಎಂದರು. ಬಿಲ್ ಸೋಲುತ್ತದೆ ಎಂದು ಗೊತ್ತಿದ್ದರೂ ತಂದವರು, ಬಿಜೆಪಿಗರೆ ಮಹಿಳಾ ವಿರೋಧಿಗಳು. ಸಂವಿಧಾನ ತಿದ್ದುಪಡಿ ಮಾಡುವಾಗ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು ಎಂದರು.

ಕರೆದು ಚರ್ಚೆ ಮಾಡಬೇಕಿತ್ತು

ಈ ಹಿಂದೆ ರಾಜೀವ್ ಗಾಂಧಿಯವರು ಶೇ.50 ರಷ್ಟು ಮೀಸಲಾತಿ ತಂದಿದ್ದರು. ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗಿತ್ತು. ಈ ಬಿಲ್ ಅಡಿಯಲ್ಲಿ ದಕ್ಷಿಣ ಭಾರತದ ಕ್ಷೇತ್ರಗಳನ್ನು ಕತ್ತರಿಸಿ ಉತ್ತರ ಭಾರತದ ಕ್ಷೇತ್ರಗಳನ್ನು ಹೆಚ್ಚು ಮಾಡಲು ಹೊರಟಿರುವುದು ಸರಿಯಲ್ಲ. ಇದನ್ನು ಸಹಿಸಲು ಸಾಧ್ಯವಿಲ್ಲ. ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಬೇಕಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳ ಜೊತೆ ಚರ್ಚೆ ನಡೆಸಬೇಕಿತ್ತು. ಚುನಾವಣೆ ನಡೆಯುತ್ತಿರುವ ಹೊತ್ತಿನಲ್ಲೇ ತರುವ ಪ್ರಮೇಯವೇನಿತ್ತು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ಷೇಪಿಸಿದರು.

ರಾಜ್ಯದ ಹಲವೆಡೆ ಇಂದು ಮಳೆ

ಬೆಂಗಳೂರು: ದಕ್ಷಿಣ ಕನ್ನಡ, ಬೆಳಗಾವಿ, ಶಿವಮೊಗ್ಗ ಸೇರಿದಂತೆ ರಾಜ್ಯದ 14 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಏ.20 ರಂದು ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳ ಒಂದೆರಡು ಕಡೆ ಗುಡುಗು ಸಹಿತ ಮಳೆ ಹಾಗೂ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ವಿಜಯಪುರ ಮತ್ತು ಕಲಬುರಗಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದ್ದು, ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ 14 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದೆ. ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕಲಬುರಗಿಯಲ್ಲಿ ಭಾನುವಾರ ಅತ್ಯಧಿಕ 42 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ರಾಯಚೂರಿನಲ್ಲಿ 41.4 ಡಿಗ್ರಿ ಸೆಲ್ಸಿಯಸ್, ಬೀದರ್‌ನಲ್ಲಿ 41.2 ಡಿಗ್ರಿ, ಕೊಪ್ಪಳದಲ್ಲಿ 39.9 ಡಿಗ್ರಿ, ವಿಜಯಪುರದಲ್ಲಿ 39.6 ಡಿಗ್ರಿ, ಬಾಗಲಕೋಟೆ ಹಾಗೂ ಗದಗದಲ್ಲಿ 39.2 ಡಿಗ್ರಿ, ಬೆಂಗಳೂರು ನಗರದಲ್ಲಿ 37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಜತೆಗೆ ಬಿಸಿಲಿನ ನಡುವೆಯೂ ಅಲ್ಲಲ್ಲಿ ತಂಪಾದ ಗಾಳಿಯ ಅನುಭವವಾಗಬಹುದು. ಹಗಲಿನಲ್ಲಿ ಶೇ.10ರಷ್ಟು ಮತ್ತು ರಾತ್ರಿಯ ವೇಳೆಗೆ ಶೇ.15ರಷ್ಟು ಮಳೆಯಾಗುವ ಅತ್ಯಲ್ಪ ಸಂಭವವಿದ್ದು, ರಾತ್ರಿಯ ಸಮಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿರಲಿದೆ. ಗಾಳಿಯು ದಕ್ಷಿಣ ದಿಕ್ಕಿನಿಂದ ಗಂಟೆಗೆ 7 ಮೈಲಿ ವೇಗದಲ್ಲಿ ಬೀಸಲಿದೆ ಎಂದು ತಿಳಿಸಿದೆ.

3 ದಿನ ಮಳೆ ಮುನ್ಸೂಚನೆ

ಕರ್ನಾಟಕದ ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದ್ದು, ಕರಾವಳಿಯಲ್ಲಿ ಏ.20 ರಿಂದ 3 ದಿನ ಮಳೆಯಾಗುವ ಮುನ್ಸೂಚನೆ ಇದೆ. ಟ್ರಫ್ ಹಿನ್ನೆಲೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಾಗಬಹುದು ಎಂದು ವರದಿ ತಿಳಿಸಿದೆ.



ಬಿಸಿಲಿನಿಂದ ಬಸವಳಿದಿದ್ದ ಧಾರವಾಡ ನಗರದ ಜನತೆಗೆ ಭಾನುವಾರ ಸುರಿದ ಮಳೆ ತಂಪೆರೆದಿದ್ದು, ರಸ್ತೆಯೊಂದರಲ್ಲಿ ವಾಹನ ಸವಾರರು ನೀರಿನ ಮಧ್ಯೆ ಸಂಚರಿಸಿದ ಪರಿ ಗಮನ ಸೆಳೆಯಿತು.

ಸದ್ಯದಲ್ಲೇ ಮದ್ಯದ ದರ ಹೆಚ್ಚಳ?

ಬೆಂಗಳೂರು: ಮದ್ಯಪ್ರಿಯರಿಗೆ ರಾಜ್ಯ ಸರ್ಕಾರ ಶಾಕ್ ನೀಡಿದ್ದು, ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣವನ್ನು ಆಧರಿಸಿ ತೆರಿಗೆ ವಿಧಿಸುವ ಹೊಸ ವ್ಯವಸ್ಥೆ ಜಾರಿಗಾಗಿ ಸರ್ಕಾರವು ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ.

ವಿಸ್ಕಿ, ರಮ್, ಜಿನ್ ಹಾಗೂ ಬ್ರಾಂದಿಗಳ ಎಂಆರ್‌ಪಿ ಬೆಲೆಯು ಕನಿಷ್ಠ ಶೇ.20ರಷ್ಟು ಹೆಚ್ಚಾಗಲಿದೆ. ಪ್ರಸ್ತುತ ಮದ್ಯದ ಬಾಟಲಿಯ ಬೆಲೆ ಅಥವಾ ಸ್ಲ್ಯಾಬ್‌ಗಳ ಆಧಾರದ ಮೇಲೆ ತೆರಿಗೆ ವಿಧಿಸಲಾಗುತ್ತಿದೆ. ಆದರೆ, ಹೊಸ ಅಬಕಾರಿ ನೀತಿಗೆ ತಂದಿರುವ ತಿದ್ದುಪಡಿ ಯಲ್ಲಿ ಆಲ್ಕೋಹಾಲ್-ಇನ್-ಬ್ರೇವರೇಜ್ (ಎಐಬಿ) ಆಧಾರಿತ ತೆರಿಗೆ ವಿಧಿಸಲು ನಿರ್ಧರಿಸ ಲಾಗಿದೆ.

ಹೊಸ ನೀತಿಯಲ್ಲಿ ಸ್ಲ್ಯಾಬ್‌ಗಳ ಸಂಖ್ಯೆಯನ್ನು 16 ರಿಂದ 8ಕ್ಕೆ ಇಳಿಸಲಾಗಿದೆ. ಬಡ ಹಾಗೂ ಮಧ್ಯಮ ವರ್ಗದವರು ಆಲ್ಕೋಹಾಲ್ ಪ್ರಮಾಣ ಶೇ. 42.8ರಷ್ಟು ಇರುವ ಮೊದಲ 4 ಸ್ಲ್ಯಾಬ್‌ಗಳ ಮದ್ಯವನ್ನೇ ಹೆಚ್ಚಾಗಿ ಖರೀದಿಸುತ್ತಾರೆ. ಈ ಸ್ಲ್ಯಾಬ್‌ಗಳಲ್ಲಿ ಲಭ್ಯವಿರುವ 180 ಮಿಲಿ ಮದ್ಯದ ಬೆಲೆಯು 105 ರಿಂದ 110 ರೂ. ವರೆಗೆ ಹೆಚ್ಚಾಗುವ ಸಾಧ್ಯತೆಯಿದೆ. ಕಳೆದ ವರ್ಷವಷ್ಟೇ ಮೊದಲ ನಾಲ್ಕು ಸ್ಲ್ಯಾಬ್‌ಗಳ (180 ಮಿಲಿ) ಬೆಲೆಯನ್ನು 80 ರಿಂದ 95 ರೂ. ಗಳಿಗೆ ಏರಿಕೆ ಮಾಡಲಾಗಿತ್ತು. ಈಗ ಮತ್ತೆ ಬೆಲೆ ಏರಿಕೆಯಾದರೆ ಬಡ ಮತ್ತು ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಬೀಳಲಿದೆ.

ಪ್ರೀಮಿಯಂ ಮದ್ಯ ಮಾರಾಟ ಹೆಚ್ಚಳಕ್ಕೆ ಒತ್ತು

ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯ ಮದ್ಯದ ಮಾರಾಟ ಪ್ರಮಾಣ ಶೇ.90ರಷ್ಟಿದ್ದರೆ, ದುಬಾರಿ ಬೆಲೆಯ ಪ್ರೀಮಿಯಂ ಬ್ರಾಂಡ್ ಲಿಕ್ಕರ್ ಪ್ರಮಾಣ ಕೇವಲ ಶೇ.10ರಷ್ಟಿದೆ. ಮದ್ಯ ಮಾರಾಟ ತೆರಿಗೆ ಹಾಗೂ ಹೆಚ್ಚುವರಿ ತೆರಿಗೆಗಳನ್ನು ಈಗಾಗಲೇ ಗರಿಷ್ಠ ಮಟ್ಟದಲ್ಲಿ ವಿಧಿಸಲಾಗಿದೆ. ಇನ್ನು ಮುಂದೆ ತೆರಿಗೆ ಏರಿಸುವುದು ಕಷ್ಟಕರ ಎಂದು ತಿಳಿದ ಸರ್ಕಾರ, ಎಐಬಿ ಮೂಲಕ ಗ್ರಾಹಕರನ್ನು ಪ್ರೀಮಿಯಂ ಬ್ರಾಂಡ್ ಮದ್ಯ ಸೇವನೆಯತ್ತ ಪ್ರೋತ್ಸಾಹಿಸಲು ತೀರ್ಮಾನಿಸಿದೆ. ಶೇ.10ರಷ್ಟಿರುವ ಪ್ರೀಮಿಯಂ ಲಿಕ್ಕರ್ ಮಾರಾಟವನ್ನು ಶೇ.90ಕ್ಕೆ ಹೆಚ್ಚಿಸಿ, ಆ ಮೂಲಕ ಹೆಚ್ಚಿನ ಆದಾಯ ಗಳಿಸುವುದು ಸರ್ಕಾರದ ಗುರಿಯಾಗಿದೆ.

ಕಿರುಸುದ್ದಿ

105ನೇ ವರ್ಷದ ಸಂಭ್ರಮಕ್ಕೆ ಪಾರಂಪರಿಕ ಪ್ರದರ್ಶನ

ಮಂಗಳೂರು: ದಕ್ಷಿಣ ಭಾರತದ ಜವಳಿ ಪರಂಪರೆಯಲ್ಲಿ ಅಚ್ಚಳಿಯದ ಹೆಸರು ಹಾಗೂ ಅತ್ಯುತ್ತಮ ರೇಷ್ಮೆ ನೇಯ್ಗೆಗೆ ಹೆಸರುವಾಸಿಯಾದ ವಿಜಯಲಕ್ಷ್ಮಿ ಸಿಲ್ಕ್ಸ್, ಈಗ 105 ವರ್ಷಗಳ ಅದ್ಭುತ ಮೈಲಿಗಲ್ಲನ್ನು ತಲುಪಿದೆ. ಈ ಸಂಭ್ರಮದ ಅಂಗವಾಗಿ 'ಲೂಮ್, ಲೆಗಸಿ ಮತ್ತು ಲ್ಯಾಂಡ್‌ಮಾರ್ಕ್' ಎಂಬ ಐತಿಹಾಸಿಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ದಕ್ಷಿಣ ಭಾರತದ ಜನರು ತಲೆಮಾರುಗಳಿಂದ ರೇಷ್ಮೆಯನ್ನು ಹೇಗೆ ಖರೀದಿಸಿದರು, ಧರಿಸಿದರು ಮತ್ತು ಸಂರಕ್ಷಿಸಿದರು ಎಂಬುದನ್ನು ಬಿಂಬಿಸುವ ಒಂದು ಅಪರೂಪದ ಹಿನ್ನೋಟವಾದ ಈ ಪ್ರದರ್ಶನ ಬೆಂಗಳೂರಿನ 'ಸಭಾ'ದಲ್ಲಿ ಏಪ್ರಿಲ್ 23 ಮತ್ತು 24 ರಂದು ನಡೆಯುತ್ತದೆ. ಇದು ಕೇವಲ ಕೇವಲ ಸೀರೆಗಳ ಪ್ರದರ್ಶನವಲ್ಲ; ಬದಲಾಗಿ ಇದು ಸಾಂಸ್ಕೃತಿಕ, ಸಾಮಾಜಿಕ ಮತ್ತು ವಾಣಿಜ್ಯ ಇತಿಹಾಸದ ಜೀವಂತ ದಾಖಲೆಯಾಗಿದೆ ಎಂದು ಪ್ರಕಟಣೆ ಹೇಳಿದೆ. ಮಹಾರಾಜಕುಮಾರಿ ಕಾಮಾಕ್ಷಿ ದೇವಿ ಒಡೆಯರ್ ಮತ್ತು ರಾಜಕುಮಾರಿ ದರ್ಶಿಕಾ ಕುಮಾರಿ ಅವರ ವಿಶೇಷ ಸಂಗ್ರಹಗಳು ಈ ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿರಲಿವೆ. ರೇಷ್ಮೆಯ ವೈವಿಧ್ಯತೆ: ಕರ್ನಾಟಕದ ರೇಷ್ಮೆ ಕೃಷಿ ಸಂಪ್ರದಾಯಗಳು, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ರಾಜಮನೆತನದ ನೇಯ್ಗೆ ಪರಂಪರೆ ಮತ್ತು ಕಾಂಚೀಪುರದ ದೇವಾಲಯಗಳ ಕಲೆ – ಇವೆಲ್ಲವೂ ಸೇರಿ ಹೇಗೆ 'ಹೆರಿಟೇಜ್ ಸಿಲ್ಕ್' (ಪರಂಪರೆಯ ರೇಷ್ಮೆ) ಎಂಬ ಹೆಸರನ್ನು ಪಡೆದವು ಎಂಬುದನ್ನು ಇಲ್ಲಿ ವಿವರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಚ್‌ಡಿಡಿ ಪ್ರಯಾಣಕ್ಕೆ ಕಾರು ಖರೀದಿಗೆ ಒಪ್ಪಿಗೆ

ಬೆಂಗಳೂರು: ಮಾಜಿ ಪ್ರಧಾನಿ, ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರಿಗೆ ಪ್ರಯಾಣಕ್ಕಾಗಿ ವೋಲ್ವೋ ಕಂಪನಿಯ ಐಷಾರಾಮಿ ಕಾರು ಖರೀದಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. 1.25.ಕೋಟಿ ರೂ. ವೆಚ್ಚದಲ್ಲಿ ವೋಲ್ವೋ ಕಂಪನಿಗೆ ಸೇರಿದ ವೋಲ್ವೋ–ಎಕ್ಸ್‌ಸಿ 90 ಹೆಸರಿನ ಕಾರನ್ನು ಮೇ. ಮಾರ್ಷಲ್ ಮೋಟರ್ಸ್ ಪ್ರೈ.ಲಿ. ಅವರಿಂದ ಖರೀದಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ 4(ಜಿ) ಅಡಿ ವಿನಾಯಿತಿ ನೀಡಿ ಸರ್ಕಾರ ಆದೇಶ ಮಾಡಿದೆ.

ಮುಸ್ಲಿಂ ಯುವಕನಿಗೆ ಥಳಿತ

ಹುಬ್ಬಳ್ಳಿ: ಮಹಿಳೆಯೊಬ್ಬರಿಗೆ ಅನ್ಯ ಸಮುದಾಯ ಯುವಕ ಹಿಂಬಾಲಿಸಿ ಅವಳೊಂದಿಗೆ ಅಸಭ್ಯವಾಗಿ ವರ್ತಿಸಿದ ಹಿನ್ನೆಲೆ ಆತನಿಗೆ ಯುವತಿ ಸೇರಿದಂತೆ ಸ್ಥಳೀಯರು ಥಳಿಸಿದ ಘಟನೆ ವಿದ್ಯಾನಗರ ಶಿಂಗ್ಲಾವ ಪಾರ್ಕ್ ಹತ್ತಿರ ನಡೆದಿದೆ. ಉತ್ತರ ಪ್ರದೇಶದ ಫಾರೂಕ್ ಎಂಬಾತನ ವಿರುದ್ಧ ಮಹಿಳೆ ರೂಪಾಲಿ ಮಿಸ್ಕಿನ್ ದೂರು ನೀಡಿದ್ದಾಳೆ. ಆರೋಪಿ ಫಾರೂಕ್ ವೇರಿ ಬಿಗ್ ಬಾಸ್ ಸಲೂನ್ ಅಂಗಡಿ ನಡೆಸುತ್ತಿದ್ದು, ಅಲ್ಲೇ ಹತ್ತಿರ ಮನೆಯಲ್ಲಿದ್ದ ಮಹಿಳೆಯನ್ನು ಹಿಂಬಾಲಿಸುವುದು, ಗುರಾಯಿಸುವುದು, ಅವರ ಮನೆಯ ಮುಂದೆ ಬೈಕ್ ಪಾರ್ಕಿಂಗ್ ಮಾಡಿ ಮನೆಯ ಇಣುಕಿ ನೋಡುವುದು ಮಾಡಿದ್ದಾನೆ. ಅದೇ ರೀತಿ ಶನಿವಾರ ಸಂಜೆ 7.30ರ ಸುಮಾರಿಗೆ ಮಹಿಳೆ ಕರಾಟೆ ಕ್ಲಾಸ್ ಹೋಗುವಾಗ ಅವಳನ್ನು ಹಿಂಬಾಲಿಸಿ ಅವಾಚ್ಯವಾಗಿ ನಿಂದಿಸಿದ್ದಾನೆ. ಈ ಹಿನ್ನೆಲೆ ಮಹಿಳೆ ಚಪ್ಪಲಿಯಿಂದ ಹೊಡೆದಿದ್ದಾಳೆ. ಸ್ಥಳೀಯರು ಆತನನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಜಾರ್ಜ್ ಹೇಳಿಕೆ

ಇಂಧನ ಪರಿವರ್ತನೆಗೆ ಕ್ರಮ

ಬೆಂಗಳೂರು: ಇಂಧನ ಪರಿವರ್ತನೆಗೆ ನೀತಿ, ನಿಯಂತ್ರಣದ ಜತೆಗೆ ಸಂಘಟಿತ ಪ್ರಯತ್ನಗಳು ಅನಿವಾರ್ಯ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047–ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ನ್ಯಾಯಾಂಗ, ನೀತಿ ನಿರೂಪಕರು, ನಿಯಂತ್ರಕರು ಮತ್ತು ಉದ್ಯಮದ ನಡುವಿನ ಅರ್ಥಪೂರ್ಣ ಚರ್ಚೆಗಳಿಗೆ ಈ ಸಮ್ಮೇಳನ ವೇದಿಕೆಯಾಯಿತು. ಸುಸ್ಥಿರ ಇಂಧನ ಭವಿಷ್ಯವನ್ನು ರೂಪಿಸುವಲ್ಲಿ ಸಮ್ಮೇಳನದ ನಿರ್ಣಯಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ನವೀಕರಿಸಬಹುದಾದ ಇಂಧನ ವಿಸ್ತರಣೆ, ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಮತ್ತು ಮೂಲಸೌಕರ್ಯ ಬಲವರ್ಧನೆಯ ಮೂಲಕ ಕರ್ನಾಟಕ ತನ್ನ ಮುಂದಾಳತ್ವವನ್ನು ಮುಂದುವರಿಸಲಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ನಾವೀನ್ಯತೆಯನ್ನು ಬೆಂಬಲಿಸಲು ಮತ್ತು ಸುಸ್ಥಿರ ಭವಿಷ್ಯವನ್ನು ಸಾಧಿಸಲು ಸಹಯೋಗದೊಂದಿಗೆ ಕೆಲಸ ಮಾಡುತ್ತೇವೆ. ಮುಖ್ಯವಾಗಿ ಕೈಗೆಟುಕುವ ದರದಲ್ಲಿ ಎಲ್ಲರಿಗೂ ಗುಣಮಟ್ಟದ ವಿದ್ಯುತ್ ಪೂರೈಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಸಮ್ಮೇಳನದ ನಿರ್ಣಯಗಳು ನವೀಕರಿಸಬಹುದಾದ ಇಂಧನ ವಲಯದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಲಿವೆ. ಇಂಧನ ನೀತಿಯನ್ನು ರೂಪಿಸುವಲ್ಲಿ ನ್ಯಾಯಾಂಗದ ಪಾತ್ರ ನಿರ್ಣಾಯಕವಾಗಿದ್ದು, ಈ ಸಮ್ಮೇಳನವು ಅದಕ್ಕೆ ವೇದಿಕೆಯನ್ನು ಒದಗಿಸಿದೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿಕ್ರಮ್ ನಾಥ್, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್.ಶಿವಶಂಕರ್ ಮತ್ತು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಇದ್ದರು.



ನವೀಕರಿಸಬಹುದಾದ ಇಂಧನದ ಬಳಕೆಗೆ ಒತ್ತು

2047ರ ವೇಳೆಗೆ ಭಾರತದ ಇಂಧನ ಬೇಡಿಕೆ ಸುಮಾರು 4 ಪಟ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ನವೀಕರಿಸಬಹುದಾದ ಇಂಧನದ ಬಳಕೆಗೆ ಒತ್ತು ನೀಡುವುದೇ ಇದಕ್ಕೆ ಇರುವ ಪ್ರಮುಖ ಪರಿಹಾರ. ಇಂಧನ ಭದ್ರತೆಗಾಗಿ ಇಂಧನ ಸಂಗ್ರಹಣಾ ವ್ಯವಸ್ಥೆಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ. ನ್ಯಾಯಾಂಗ, ಸರ್ಕಾರ ಮತ್ತು ಉದ್ಯಮಗಳ ನಡುವಿನ ಸಹಕಾರ ಈ ನಿಟ್ಟಿನಲ್ಲಿ ನಿರ್ಣಾಯಕವಾಗುತ್ತದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

> **ಈ ಸಮ್ಮೇಳನವು ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ಅರ್ಥಪೂರ್ಣ ಸಂವಾದಕ್ಕೆ ವೇದಿಕೆ ಕಲ್ಪಿಸಿತು.ಭಾರತದ ಇಂಧನ ಪರಿವ ರ್ತನೆಗೆ ಸಾಂಸ್ಥಿಕ ಸಹಯೋಗವು ನಿರ್ಣಾಯಕವಾಗಿರುತ್ತದೆ.**
> ■ ಡಾ. ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ

ಸಮಯ ಬರಲಿ, ಉತ್ತರ ಸಿಗಲಿದೆ: ಡಿಸಿಎಂ ಡಿಕೆಶಿ

> **ಡಿ.ಕೆ.ಶಿವಕುಮಾರ್ ಅವರು ಮುಕ್ತಿಮಂದಿರ ಕ್ಷೇತ್ರದ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿದ್ದು, ರಾಜ್ಯದ ಉನ್ನತ ಹುದ್ದೆಯ ಇಚ್ಛೆ ಈಡೇರಿಸುವಂತೆ ಲಿಂ.ಶ್ರೀಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಅವರ ಇಚ್ಛೆ ಶೀಘ್ರ ಈಡೇರುವ ಕಾಲ ಸನ್ನಿಹಿತವಾಗಿದೆ.**
> ■ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿ


ಮುಕ್ತಿಮಂದಿರಕ್ಕೆ ಭೇಟಿ, ಗದ್ದುಗೆ ದರ್ಶನ

ಲಕ್ಷ್ಮೇಶ್ವರ: ತಾಲೂಕಿನ ಭೂಕೈಲಾಸ ಎಂದೇ ಪ್ರಸಿದ್ಧಿ ಪಡೆದಿರುವ ಮುಕ್ತಿಮಂದಿರದ ತ್ರಿಕೋಟಿ ಲಿಂಗಗಳ ಸ್ಥಾಪನೆ ಆಗುವ ಸ್ಥಳಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭಾನುವಾರ ಭೇಟಿ ನೀಡಿದರು.

ಲಿಂ.ಜಗದ್ಗುರು ವೀರಗಂಗಾಧರ ಶ್ರೀಗಳ ಕರ್ತೃ ಗದ್ದುಗೆಯ ದರ್ಶನಾಶೀರ್ವಾದ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಡೆದಾಡುವ ದೇವರಾಗಿದ್ದ ಲಿಂ.ಜಗದ್ಗುರು ವೀರಗಂಗಾಧರ ಅಜ್ಜನವರ ಪವಿತ್ರ ಕ್ಷೇತ್ರವಾಗಿರುವ ಮುಕ್ತಿಮಂದಿರದಲ್ಲಿ ಒಂದು ವಿಶೇಷ ಶಕ್ತಿ ನೆಲೆ ನಿಂತಿದೆ. ಇಲ್ಲಿ ರಾಜಕೀಯ ಮಾತನಾಡುವುದಿಲ್ಲ. ಸಮಯ ಬರಲಿ, ಕಾಲ ಎಲ್ಲದಕ್ಕೂ ಉತ್ತರ ಕೊಡಲಿದೆ .ಅಜ್ಜನ ಮಹಿಮೆ ಅಪಾರವಾಗಿದ್ದು, ಅಜ್ಜನ ಗದ್ದುಗೆಗೆ ಮೊರೆ ಹೋಗಿದ್ದೇನೆ. ಒಳ್ಳೆಯದಾಗುತ್ತದೆ ಎಂದು ನಂಬಿಕೆಯಿದೆ ಎಂದು ಮಾರ್ಮಿಕವಾಗಿ ಪ್ರತಿಕ್ರಿಯೆ ನೀಡಿದರು. ಇಲ್ಲಿ ತ್ರಿಕೋಟಿ ಲಿಂಗ ಸ್ಥಾಪನೆ ಆಗಬೇಕು ಎಂಬುದು ಗಂಗಾಧರ ಅಜ್ಜನ ಕನಸಾಗಿತ್ತು. ಇದು ನನಸಾಗುವ ಕಾಲ ಕೂಡಿ ಬಂದಿದೆ. ನಾನು ಅದರ ಜವಾಬ್ದಾರಿ ತೆಗೆದುಕೊಂಡಿದ್ದೇನೆ. ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿದ್ದೇನೆ ಎಂದರು.

ಮುಕ್ತಿಮಂದಿರ ಪಟ್ಟಾಧ್ಯಕ್ಷರಾದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಶ್ರೀಗಳು, ಡಿ.ಕೆ.ಶಿವಕುಮಾರ ಸುಪುತ್ರಆಕಾಶ ಕೆಂಪೇಗೌಡ, ಶಾಸಕ ಶ್ರೀನಿವಾಸ ಮಾನೆ, ಮಾಜಿ ಎಂಎಲ್‌ಸಿ ಕೆ.ಪಿ.ನಂಜುಡಿ, ಮಾಜಿ ಶಾಸಕ ಆನಂದ ಗಡ್ಡದೇವರಮಠ, ರಜತ ಉಳ್ಳಾಗಡ್ಡಿಮಠ, ಷಣ್ಮುಖಪ್ಪ ಶಿವಳ್ಳಿ, ಸುಜಾತಾ ದೊಡ್ಡಮನಿ ಇದ್ದರು.

ಅಪಘಾತ: 4 ಸಾವು, 19 ಜನರಿಗೆ ಗಾಯ

ವಿಜಯನಗರ: ಲಾರಿ ಚಾಲಕನ ನಿರ್ಲಕ್ಷ್ಯದಿಂದ ಹೊಸಪೇಟೆ ತಾಲೂಕಿನ ಡಣಾಪುರ ಬಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸರಣಿ ಅಪಘಾತ ಸಂಭವಿಸಿದೆ. ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಮೃತಪಟ್ಟಿದ್ದು, 19 ಜನರು ಗಾಯಗೊಂಡಿರುವ ಘಟನೆ ಭಾನುವಾರ ನಡೆದಿದೆ.

ಮೃತರನ್ನು ಹಗರಿಬೊಮ್ಮನಹಳ್ಳಿ ತಾಲೂಕಿನ ಕಿತ್ತನೂರು ಗ್ರಾಮದ ಅತಿಥಿ ಶಿಕ್ಷಕಿ ಸುಜಾತಾ(35), ಅವರ ತಂದೆ ನಾಗಪ್ಪ(80), ಸಹೋದರ ಕೊಟ್ರೇಶ್ (22) ಹಾಗೂ ಹೊಸಪೇಟೆ ತಾಲೂಕಿನ ತಿಮ್ಮಲಾಪುರದ ದುರುಗಪ್ಪ(55) ಎಂದು ಗುರುತಿಸಲಾಗಿದೆ. ಮೃತರೆಲ್ಲರೂ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದರು. ಸುಜಾತಾ ಮತ್ತು ದುರುಗಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಿಸಲಾಗಿದ್ದ ನಾಗಪ್ಪ ಅವರು ಕೊಪ್ಪಳ ಜಿಲ್ಲಾ ಆಸ್ಪತ್ರೆ ಹಾಗೂ ಕೊಟ್ರೇಶ್ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಇನ್ನುಳಿದಂತೆ 19 ಜನರು ಕಾರು ಮತ್ತು ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಅವರನ್ನು ಹೊಸಪೇಟೆ, ಕೊಪ್ಪಳ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಸರಣಿ ಅಪಘಾತದ ವಿವರ: ಬೆಳ್ಳುಳ್ಳಿ ತುಂಬಿದ್ದ ಬೃಹತ್ ಲಾರಿ ದೆಹಲಿಯಿಂದ ಹೊಸಪೇಟೆ ಮಾರ್ಗವಾಗಿ ಬೆಂಗಳೂರಿಗೆ ಸಾಗುತ್ತಿತ್ತು. ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಹೊಸಪೇಟೆಯ ಸುರಂಗ ಮಾರ್ಗ ದಾಟುತ್ತಿದ್ದಂತೆ ಲಾರಿ ಚಾಲಕನ ನಿಯಂತ್ರಣ ತಪ್ಪಿದ್ದು, ಅಡ್ಡಾದಿಡ್ಡಿ ಹಾಗೂ ಅತಿವೇಗವಾಗಿ ಚಲಿಸಲು ಆರಂಭಿಸಿದೆ.

ಡಣಾಪುರ ಸಮೀಪಿಸುತ್ತಿದ್ದಂತೆ ಬಿಎಂಎಂ ಫ್ಯಾಕ್ಟರಿ ಮುಂಭಾಗದಲ್ಲಿ ಮೂರು ಬೈಕ್, ಒಂದು ಕಾರು ಹಾಗೂ ಚಿತ್ರದುರ್ಗದಿಂದ ಹೊಸಪೇಟೆಗೆ ಆಗಮಿಸುತ್ತಿದ್ದ ಬಿಎಂಟಿಸಿ ಬಸ್‌ಗೆ ಒಂದಾದ ಬಳಿಕ ಒಂದರಂತೆ ವಾಹನಗಳಿಗೆ ಡಿಕ್ಕಿ ಹೊಡೆದಿದೆ.



3 ಕಿಮೀವರೆಗೆ ಟ್ರಾಫಿಕ್

ಮರಿಯಮ್ಮನಹಳ್ಳಿ ಬಳಿ ಸಂಭವಿಸಿ ಭೀಕರ ಅಪಘಾತದಿಂದಾಗಿ ಬೆಳಗ್ಗೆ 9ರಿಂದ 11ಗಂಟೆವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಯಿತು. ಅಪಘಾತದ ಸ್ಥಳದಿಂದ ಎರಡೂ ಬದಿಗೆ ಸುಮಾರು 3 ಕಿ.ಮೀ. ವರೆಗೆ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಗಾಯಾಳುಗಳನ್ನು ಆಂಬುಲೆನ್ಸ್‌ಗಳಲ್ಲಿ ಆಸ್ಪತ್ರೆಗೆ ಸಾಗಿಸುವುದೂ ಸವಾಲಿನ ಕೆಲಸವಾಗಿತ್ತು.

ಜೆಡಿಎಸ್‌ಗೆ ಜಮೀರ್ ಗಾಳಿಸುದ್ದಿ!

ಹೊಸದಿಲ್ಲಿ: ಸಚಿವ ಜಮೀರ್ ಅಹಮದ್ ಮರಳಿ ಜೆಡಿಎಸ್ ಪಕ್ಷಕ್ಕೆ ಸೇರುತ್ತಾರೆ ಎಂಬ ಸುದ್ದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ನೀಡಿದ್ದು, ಕಾಂಗ್ರೆಸ್ ಪಕ್ಷದ ಯಾರೊಬ್ಬರೂ ನನ್ನ ಸಂಪರ್ಕದಲ್ಲಿ ಇಲ್ಲ. ಹಾಗಿದ್ದ ಮೇಲೆ ಜಮೀರ್ ಅವರು ಪಕ್ಷ ಸೇರುವ ಮಾತೆಲ್ಲಿಂದ ಬರಬೇಕು, ಇದೆಲ್ಲವೂ ಗಾಳಿಸುದ್ದಿಯಷ್ಟೇ ಎಂದು ಹೇಳಿದರು. ದಿಲ್ಲಿಯಲ್ಲಿ ಭಾನುವಾರ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪಕ್ಷಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಬಗ್ಗೆ ನಾನೇ ನಿರ್ಧಾರ ಕೈಗೊಳ್ಳಬೇಕು. ನನ್ನ ಸಂಪರ್ಕಕ್ಕೇ ಯಾರೂ ಬಂದಿಲ್ಲ ಎಂದ ಮೇಲೆ ಪಕ್ಷಕ್ಕೆ ಸೇರಿಸಿಕೊಳ್ಳುವ ಮಾತೇಕೆ ಬರುತ್ತದೆ ಎಂದು ಹೇಳಿದರು. ನನಗೂ ಸಚಿವ ಜಮೀರ್‌ಗೂ ಸಂಪರ್ಕ ಇಲ್ಲ. ಜೆಡಿಎಸ್ ಜತೆಗೆ ಯಾರೂ ಸಂಪರ್ಕ ಸಾಧಿಸಿಲ್ಲ ಎಂದರು.



ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯ

ದಕ್ಷಿಣದ ರಾಜ್ಯಗಳಿಗೆ ಈ ತಿದ್ದುಪಡಿ ಮಸೂದೆಗಳಿಂದ ಅನ್ಯಾಯವಾಗುತ್ತಿದೆ ಎಂದು ಡಿಎಂಕೆ ಹೇಳುತ್ತಿರುವುದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಹಾಗೆ ನೋಡಿದರೆ ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯವಾಗುತ್ತಿದೆ. ಒಂದು ವೇಳೆ ಅನ್ಯಾಯ ಆಗುವುದೇ ಆಗಿದ್ದರೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಆಕ್ಷೇಪ ಎತ್ತಲಿಲ್ಲವೇಕೆ, ನಾಯ್ಡು ಅವರಂತೂ ಮಸೂದೆಗಳಿಗೆ ಮುಕ್ತ ಬೆಂಬಲ ನೀಡಿದರು ಎಂದು ಉಲ್ಲೇಖಿಸಿದರು.

ದಕ್ಷಿಣ ರಾಜ್ಯಗಳಿಗೆ ಅನ್ಯಾಯ ಆಗುತ್ತಿರಲಿಲ್ಲ

ಸ್ವತಃ ನಾನು ದಕ್ಷಿಣ ರಾಜ್ಯಗಳಿಂದ ಬಂದ ಜನಪ್ರತಿನಿಧಿಯಾಗಿ ಹೇಳುತ್ತಿದ್ದೇನೆ. ದಕ್ಷಿಣದ 5 ರಾಜ್ಯಗಳಿಗೆ ಸಿಗಲಿದ್ದ ಸುವರ್ಣಾವಕಾಶವನ್ನು ಡಿಎಂಕೆ ಹಾಳು ಮಾಡಿದೆ. ನಮಗೆ ಸಿಗಲಿದ್ದ ಉತ್ತಮ ಪಾಲು ಸಿಗದಂತೆ ಆ ಪಕ್ಷ ಅನ್ಯಾಯವೆಸಗಿದೆ. ಕರ್ನಾಟಕದ ಲೋಕಸಭೆ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹೆಚ್ಚುತ್ತಿತ್ತು. ಈ ಅವಕಾಶ ತಪ್ಪಿಹೋಗಿದೆ. ಇದನ್ನು ಡಿಎಂಕೆ ಅಥವಾ ಕಾಂಗ್ರೆಸ್ ಪಕ್ಷಗಳಿಂದ ಸರಿಪಡಿಸಲು ಸಾಧ್ಯವೇ, ಈ ಬ್ಗಗೆ ರಾಹುಲ್ ಗಾಂಧಿ ಉತ್ತರಿಸಬೇಕಿದೆ ಎಂದು ಎಚ್ .ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಸಿಲಿಂಡರ್ ಸ್ಫೋಟ: ನಗದು, ಚಿನ್ನಾಭರಣ ಬೆಂಕಿಗಾಹುತಿ

ಬೆಂಕಿ ನಂದಿಸಿದ ಅಗ್ನಿಶಾಮಕ ದಳ

ಚಿತ್ರದುರ್ಗ: ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ, ಮನೆಯಲ್ಲಿಟ್ಟಿದ್ದ 3 ಲಕ್ಷ ರೂ. ನಗದು ಹಣ, ಚಿನ್ನಾಭರಣ ಹಾಗೂ ದವಸ ಧಾನ್ಯ ಬೆಂಕಿಗೆ ಆಹುತಿಯಾಗಿರುವ ಘಟನೆ ಚಳ್ಳಕೆರೆ ತಾಲೂಕಿನ ರೇಣುಕಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಪ್ಪಗೊಂಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚಿತ್ರಲಿಂಗಪ್ಪ ಎಂಬುವರು ಮನೆಯಲ್ಲಿ ಶುಕ್ರವಾರ ರಾತ್ರಿ ಸುಮಾರು 8 ಗಂಟೆ ವೇಳೆಗೆ ಗ್ಯಾಸ್ ಸ್ಫೋಟ ಸಂಭವಿಸಿದೆ. ಗುಡಿಸಲು ಮನೆಯಲ್ಲಿದ್ದ ಮನೆ ಕಟ್ಟಲು ಇಟ್ಟುಕೊಂಡಿದ್ದ ಮೂರು ಲಕ್ಷ ಹಣ, ಚಿನ್ನಾಭರಣ, ಮತ್ತು ದವಸ ಧಾನ್ಯಗಳು ಬೆಂಕಿಗೆ ಆಹುತಿಯಾದ ಘಟನೆ ನಡೆದಿದೆ. ಘಟನೆ ನಡೆದ ವೇಳೆ ಮನೆಯವರು ಹೊರಗಡೆ ಇದ್ದ ಕಾರಣ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸುದ್ದಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿಯನ್ನು ಘಟನಾ ಸ್ಥಳಕ್ಕೆ ತಹಸೀಲ್ದಾರ್ ರೇಹಾನ್ ಪಾಷಾ ಹಾಗೂ ಇತರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕೆ

ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಪಕ್ಷ ಬೆಳೆಸಿಲ್ಲ

ಚಿಕ್ಕಮಗಳೂರು: ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಯಾವತ್ತೂ ಓಟ್ ಬ್ಯಾಂಕ್ ಆಗಿಯೇ ಆಲೋಚನೆ ಮಾಡಿದೆ. ಅವರನ್ನು ಬೆಳೆಸುವ ಕೆಲಸ ಮಾಡಿಲ್ಲ. ಈ ಕಾರಣಕ್ಕೆ ಅಲ್ಲಿಂದ ಹೊರಬಂದು ಯಾರು ಅವರನ್ನು ಗೌರವಿಸುತ್ತಾರೆ ಅವರ ಜೊತೆಯಲ್ಲಿ ಹೋಗಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕರೆ ನೀಡಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಲ್ಪಸಂಖ್ಯಾತರು ಹೆಚ್ಚಿರುವ ದಾವಣಗೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗರು ಅವರನ್ನು ಹೇಗೆ ಮುಗಿಸುತ್ತಿದ್ದಾರೆ ಎನ್ನುವುದು ಸ್ಪಷ್ಟ. ಒಂದೆಡೆ ಒಬಿಸಿ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕು ಎನ್ನುತ್ತಾರೆ. ಮತ್ತೊಂದು ಕಡೆ ಅಲ್ಪಸಂಖ್ಯಾತರನ್ನು ರಾಜಕೀಯವಾಗಿ ಮುಗಿಸುತ್ತಿದ್ದಾರೆ. ಒಟ್ಟಾರೆ ಬೆಳವಣಿಗೆ ನೋಡಿದರೆ ಮುಂದೆ ನಮ್ಮ ಅಹಿಂದ ನಾಯಕರ ಭವಿಷ್ಯ ಎಲ್ಲಿಗೆ ಹೋಗಿ ನಿಲ್ಲುತ್ತದೆಯೋ ಎನ್ನುವ ಯಕ್ಷ ಪ್ರಶ್ನೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕಾಡುತ್ತಿದೆ ಎಂದು ಸಿದ್ದರಾಮಯ್ಯ ಅವರನ್ನು ಪರೋಕ್ಷವಾಗಿ ಕೆಣಕಿದ ಅವರು, ಇನ್ನು ಮುಂದಾದರೂ ಅಲ್ಪಸಂಖ್ಯಾತರು ಎಚ್ಚೆತ್ತುಕೊಳ್ಳಬೇಕಿದೆ. ಕಾಂಗ್ರೆಸ್ ಹೇಗೆ ತಮ್ಮನ್ನು ಉಪಯೋಗಿಸಿಕೊಳ್ಳುತ್ತಿದೆ ಎನ್ನುವುದನ್ನು ಗಮನಿಸಬೇಕಿದೆ ಎಂದರು.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ಬೇಸತ್ತಿರುವ ಸಚಿವ ಜಮೀರ್ ಅಹಮದ್ ಅವರು ಮತ್ತೆ ಜೆಡಿಎಸ್‌ನತ್ತ ಮುಖ ಮಾಡಿದ್ದಾರೆ ಎನ್ನುವ ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಇದು ಕೇವಲ ಊಹಾಪೋಹದ ಚರ್ಚೆಗಳು. ಇದು ವಾಸ್ತವಿಕಕ್ಕೆ ಹತ್ತಿರವಿದ್ದರೆ ವರಿಷ್ಠರು ತೀರ್ಮಾನಿಸುತ್ತಾರೆ ಎಂದು ಹೇಳಿದರು. ಜಾತ್ಯತೀತ ಜನತಾದಳ ಅನ್ನುವುದು ಅದರ ಘೋಷ ವಾಕ್ಯದಲ್ಲೇ ಇದೆ. ನಮ್ಮ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಇಲ್ಲ. ನಾವು ಯಾವತಿದ್ದರೂ ಜಾತ್ಯತೀತಾನೇ ಜಾತ್ಯಾತೀತವಾಗಿ ಉಳಿಯುತ್ತೇವೆ ಎಂದರು.



ಪ್ರಜಾಪ್ರಭುತ್ವ ವ್ಯವಸ್ಥೆಗೆ ಆದ ಸೋಲು

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಆದ ಸೋಲು ಬಿಜೆಪಿ ಅಥವಾ ಕೇಂದ್ರ ಸರ್ಕಾರಕ್ಕಾದ ಸೋಲಲ್ಲ. ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆದ ಸೋಲು. ಕಾಂಗ್ರೆಸ್ ಪಕ್ಷಕ್ಕೆ ಆದ ಸೋಲಾಗಿದೆ ಎಂದು ನಿಖಿಲ್ ಕುಮಾರ ಸ್ವಾಮಿ ಹೇಳಿದರು. ಈ ಮಸೂದೆಗೆ ಅನುಮೋದನೆ ನೀಡಿದರೆ ಉತ್ತರದ ರಾಜ್ಯಗಳಿಗೆ ಅನುಕೂಲವಾಗುತ್ತದೆ ಎಂದು ಕಾಂಗ್ರೆಸ್ಸಿಗರು ಹುಯಿಲೆಬ್ಬಿಸುತ್ತಿದ್ದಾರೆ. ಆದರೆ ಅದರಲ್ಲಿ ಹುರುಳಿಲ್ಲ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಆರೋಪ

ಜಲವಿವಾದ ಬಗೆಹರಿಸಲು ಸ್ಪಂದಿಸದ ಕೇಂದ್ರ

ಹುಬ್ಬಳ್ಳಿ: ಮಹದಾಯಿ ಸೇರಿದಂತೆ ರಾಜ್ಯ ಜಲವಿವಾದ ಬಗೆಹರಿಸಲು ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಈ ಹಿನ್ನೆಲೆ ಏಪ್ರಿಲ್ ಮುಗಿದ ನಂತರ ಒಂದು ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದಿಂದ ಮಹದಾಯಿ ಯೋಜನೆ ಸಂಬಂಧಿಸಿದಂತೆ ಪದೇ ಪದೆ ಅನ್ಯಾಯವಾಗುತ್ತಿದೆ. ಸರ್ಕಾರ ಅನುಮತಿ ಕೊಡಿಸುತ್ತಿಲ್ಲ. ರಾಜ್ಯದಲ್ಲಿ ಇಷ್ಟೊಂದು ಜನ ಸಂಸದರಿದ್ದರೂ ಯೋಜನೆಗಳ ಪರವಾಗಿ ಧ್ವನಿ ಎತ್ತುತ್ತಿಲ್ಲ. ಬಿಜೆಪಿ ಅವರು ಕೇವಲ ರಾಜಕೀಯ ಲಾಭಕ್ಕೆ ನೀರಾವರಿ ಯೋಜನೆ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಬೇಕಿದ್ದರೆ ಅವರೇ ಇದರ ಪ್ರಯೋಜನ ತೆಗೆದುಕೊಳ್ಳಲಿ. ರಾಜ್ಯದ ನೀರಾವರಿ ಯೋಜನೆ ಜಾರಿ ಮಾಡಲು ಕ್ರಮ ವಹಿಸಲಿ. ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ಬಿಜೆಪಿಯವರು ಈ ವಿಚಾರದಲ್ಲಿ ಫೇಲ್ ಆಗಿದ್ದಾರೆ. ಪ್ರಧಾನಿ ಭೇಟಿ ಮಾಡಿ ಮಾತನಾಡುವಷ್ಟು ಶಕ್ತಿ ಅವರಿಗಿಲ್ಲ ಎಂದು ಕುಟುಕಿದರು.

ಸಚಿವ ಎಚ್.ಕೆ.ಪಾಟೀಲ ಅವರು ಪರಿಷತ್‌ನಲ್ಲಿ ನಿರ್ಣಯವೊಂದನ್ನು ಮಂಡಿಸಿದ್ದಾರೆ. ಮುಂದಿನ ತಿಂಗಳಿನಿಂದ ಮತ್ತೊಂದು ಹಾದಿಯಲ್ಲಿ ನೀರಾವರಿ ಯೋಜನೆಗಳ ಜಾರಿಗೆ ಪ್ರಯತ್ನ ಮಾಡಲಾಗುವುದು. ರಾಜ್ಯದಲ್ಲಿನ ನೀರಾವರಿ ಯೋಜನೆಗಳ ಅನುಷ್ಠಾನದ ನಿಟ್ಟಿನಲ್ಲಿ ಶೀಘ್ರವೇ ಕೇಂದ್ರಕ್ಕೆ ನಿಯೋಗ ಕೊಂಡೊಯ್ಯಲಾಗುವುದು ಎಂದರು.

ಮಹದಾಯಿ ಯೋಜನೆ ಜಾರಿಯಲ್ಲಿ ವಿಳಂಬ ವಿಚಾರವಾಗಿ ಸಾಕಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ. ಗೋವಾ ಸರ್ಕಾರಕ್ಕೆ ಕೇಂದ್ರ ಸರ್ಕಾರ ಹೆದರಿಕೊಂಡಿದೆ. ನಾನು ಮಹದಾಯಿ ವಿಚಾರವಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಜೊತೆಗೆ ನಾಲ್ಕೈದು ಸಲ ಮಾತನಾಡಿದ್ದೇನೆ. ಆದರೆ, ಸರಿಯಾಗಿ ಸ್ಪಂದನೆ ಸಿಕ್ಕಿಲ್ಲ ಎಂದು ಹೇಳಿದರು.



ಸೀಟ್ ಕಡಿಮೆ ಮಾಡುವ ಹುನ್ನಾರ

ಮಹಿಳಾ ಮೀಸಲಾತಿ ಮುಂದಿಟ್ಟುಕೊಂಡು ದಕ್ಷಿಣ ಭಾರತದ ಸೀಟ್ ಕಡಿಮೆ ಮಾಡುವ ಹುನ್ನಾರ ನಡೆಸಿದ್ದರು. ಆ ಪ್ರಯತ್ನಕ್ಕೆ ಸೋಲಾಗಿದೆ. ಇದು ಆರಂಭ ಮಾತ್ರ. ಈ ಹಿಂದೆಯೇ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗಿದೆ. ಆದರ ಪ್ರಕಾರ ಸೀಟು ಹಂಚಿಕೆಗೆ ಯಾರದೂ ತಕರಾರಿಲ್ಲ. ಆದರೆ, ಅದನ್ನು ಅಡ್ಡ ಇಟ್ಟುಕೊಂಡು ಕೇಂದ್ರ ಸರ್ಕಾರವು ದಕ್ಷಿಣ ಭಾರತಕ್ಕೆ ಅನ್ಯಾಯ ಮಾಡಲು, ಸೀಟ್ ಕಡಿಮೆ ಮಾಡುವ ಷಡ್ಯಂತ್ರಕ್ಕೆ ಮುಂದಾಗಿದೆ. ಈ ಬಗ್ಗೆ ಒಬ್ಬನೇ ಒಬ್ಬ ಬಿಜೆಪಿಯವರು ಮಾತನಾಡುತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಕಿಡಿಕಾರಿದರು.

ಸಂಪಾದಕೀಯ

ದೇಶದ ಆಗ್ರಹವಾಗಲಿದೆ ಮಹಿಳಾ ಮೀಸಲು

ಸುಧಾರಣೆಯ ಮಾತುಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ಆಡುತ್ತವೆ. ಸಾಮಾನ್ಯ ನಾಗರಿಕ ರಾಜಕಾರಣದ ಬಗೆಗೆ ಆಡುವ ಮೊದಲ ಮಾತೇ ಅದು. ಭಾರತ ಪ್ರಜಾಪ್ರಭುತ್ವ ಭದ್ರವಾಗಿದೆ. ಇಲ್ಲಿರುವಷ್ಟು ರಾಜಕೀಯ ಪಕ್ಷಗಳು ಬೇರಾವ ದೇಶದಲ್ಲೂ ಇಲ್ಲ ಎನ್ನುವುದೇ ಇಲ್ಲಿನ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಸಾಕ್ಷಿ. ಹೀಗಿರುವಲ್ಲಿ ಏನು ಬದಲಾಗಬೇಕು? ಯಾವ ವ್ಯವಸ್ಥೆ ಬಲಿಷ್ಠವಾಗಬೇಕು? ಭಾರತದ ಎಲ್ಲಾ ಹಿರಿಮೆಗೆ ಇಲ್ಲಿನ ಸಾಂಸ್ಕೃತಿಕ ಮೌಲ್ಯಗಳಷ್ಟೇ ಸಂವಿಧಾನದ ಮೌಲ್ಯಗಳೂ ಕಾರಣ. ಇಲ್ಲಿನ ಸಾಂವಿಧಾನದ ಸ್ವರೂಪ ಕೂಡ ಹಾಗಿದೆ. ಅದು ಎಷ್ಟು ದಿಟ್ಟತನದಿಂದ ಹಕ್ಕುಗಳನ್ನು ನೀಡಿದೆಯೋ ಮತ್ತು ಬದಲಾವಣೆಯನ್ನು ಕೂಡ ಸಂವಿಧಾನ ಪ್ರತಿಪಾದಿಸುತ್ತದೆ.



ಸಂವಿಧಾನ ನಿರ್ಮಾಣ ಕಾಲದಲ್ಲಿದ್ದಂತೆ ಇಂದು ಯಾವ ಸಂಗತಿಗಳೂ ಇಲ್ಲ. ಶಾಸನ ಸಭೆಗಳ ಸಂಖ್ಯೆಯನ್ನು ಅವಲೋಕಿಸಿದರೆ ಅದು ಯಾವ ಲೆಕ್ಕಾಚಾರದಲ್ಲೂ ಇಂದಿನ ಪರಿಸ್ಥಿತಿಗೆ ಅನುಗುಣವಾಗಿಲ್ಲ. ಜೊತೆಗೆ ಸಂವಿಧಾನ ನಿರ್ಮಾಣದ ಕಾಲದಲ್ಲಿದ್ದಂತೆ ಇಂದು ಮಹಿಳಾ ಸ್ಥಿತಿಗತಿಗಳಿಲ್ಲ. ಹಲವು ದಶಕಗಳ ಹಿಂದಿನಿಂದಲೇ ಇವೆರಡು ಸಂಗತಿಗಳ ಬದಲಾವಣೆಗೆ ತಜ್ಞರು ಅಭಿಪ್ರಾಯವನ್ನು ಮಂಡಿಸಿದರೂ ಪಟ್ಟಭದ್ರರು ಅದಕ್ಕೆ ಮನಸ್ಸು ಮಾಡಿರಲಿಲ್ಲ. ನರೇಂದ್ರ ಮೋದಿಯವರ ಸರ್ಕಾರ ಅದಕ್ಕೆ ಮುಂದಡಿಯಿಟ್ಟಾಗ ಇಡೀ ದೇಶ ಅದರತ್ತ ಭರವಸೆಯಿಂದ ಕಾಯುತ್ತಿತ್ತು. ಶಾಸನ ಸಭೆಗಳಲ್ಲಿ ಮಹಿಳೆಯರ ಭಾಗಿದಾರಿಕೆಯನ್ನು ಉತ್ತೇಜಿಸುವ ಶೇ.33ರ ಮೀಸಲಾತಿಯನ್ನು ಕಲ್ಪಿಸುವ ಚರ್ಚೆಯನ್ನು ದೇಶದ ನಾಗರಿಕ ಉತ್ಸಾಹದಿಂದ ಕಾಯುತ್ತಿದ್ದರೆ ವಿರೋಧಪಕ್ಷಗಳಿಗೆ ಅದರತ್ತ ಯಾವ ಆಸಕ್ತಿಯೂ ಇರಲಿಲ್ಲ. ಅಂತಿಮವಾಗಿ ಸಂವಿಧಾನ ತಿದ್ದುಪಡಿಗೆ ಬೇಕಾದ ಬಹುಮತದ ಕೊರತೆಯಿಂದ ವಿಫಲವಾಯಿತು. ಇದನ್ನು ಬ್ರೂಣಹತ್ಯೆಗೆ ಹೋಲಿಸಿದ ನರೇಂದ್ರ ಮೋದಿಯವರ ಪದಗಳಲ್ಲೇ ಎಲ್ಲವೂ ಅಡಗಿತ್ತು. ಈ ತಿದ್ದುಪಡಿ ಯಶಸ್ವಿಯಾಗಿದ್ದರೆ ದೇಶದ ಚಿತ್ರಣ ಆಮೂಲಾಗ್ರವಾಗಿ ಬದಲಾಗುವ ಎಲ್ಲಾ ಸಾಧ್ಯತೆಗಳಿದ್ದವು. ಮುಖ್ಯವಾಗಿ ಮಹಿಳೆಯರ ಶಕ್ತಿ ದೇಶಕ್ಕೆ ಬಳಕೆಯಾಗುತ್ತಿತ್ತು. ವಿಶ್ವದ ಎಲ್ಲೂ ಕಾಣದಷ್ಟು ನಾರಿಶಕ್ತಿ ದೇಶದಲ್ಲಿ ವಿಜೃಂಭಿಸುತ್ತಿತ್ತು. ಆದರೆ ದಿನನಿತ್ಯ ಮಹಿಳಾ ಸಶಕ್ತೀಕರಣದ ಬಗ್ಗೆ ಮಾತಾಡುವ ಪ್ರಮುಖ ವಿರೋಧ ಪಕ್ಷಗಳಿಗೆ ಇದರಿಂದ ಏನೂ ಅನಿಸಲಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದುದ್ದಕ್ಕೂ ಮಹಿಳಾ ಶಕ್ತಿಯ ಸಮರ್ಥ ಸದ್ಬಳಕೆಯಾದ ಉದಾಹರಣೆಗಳನ್ನು ನೋಡುತ್ತೇವೆ. ಆದರೆ ರಾಜಕೀಯ ಪಕ್ಷಗಳು ಮಹಿಳಾ ಸಶಕ್ತೀಕರಣವನ್ನು ಪಾಶ್ಚಾತ್ಯ ಸಿದ್ಧಾಂತಗಳ ಆಧಾರದಲ್ಲಿ ಮಾತ್ರ ನೋಡುತ್ತವೆ. ಆದರೆ ಭಾರತದಲ್ಲಿ ನಿಜವಾಗಿ ಮಹಿಳಾ ಶಕ್ತಿ ಸಮಾಜಕ್ಕಾಗಿ ಮಾತ್ರ ಬೆಳಗಿದೆ. ಹಾಗಾದರೆ ಮಹಿಳೆಯರ ಸಬಲೀಕರಣದ ಬಗೆಗೆ ಮಾತಾಡುವ ಪಕ್ಷಗಳ ಅಸಲಿ ಉದ್ದೇಶ ಯಾವುದು ಎಂಬ ಸಂದೇಹ ಬರುತ್ತದೆ. ಕಲ್ಯಾಣದ ಕ್ರಾಂತಿಯ ಕಾಲದಲ್ಲೇ ಮಹಿಳೆ ಬಹಿರಂಗವಾಗಿ ಚರ್ಚೆಗೆ ನಿಲ್ಲುತ್ತಿದ್ದಳು ಎಂಬುದನ್ನು ಚುನಾವಣಾ ಪ್ರಚಾರಸಭೆಗಳಲ್ಲಿ ಹೇಳುವವರಿಗೆ ಈ ತಿದ್ದುಪಡಿ ಕೂಡ ಕ್ರಾಂತಿಯಾಗಲಿದೆ ಎಂದು ಏಕೆ ಅನಿಸಲಿಲ್ಲ? ಇಲ್ಲಿ ಎಲ್ಲಾ ಪ್ರಶ್ನೆಗಳಿಗೆ ಒಂದೇ ಉತ್ತರ, ರಾಜಕಾರಣ ಕೆಲವು ಕುಟುಂಬಗಳ ಪಾಳೆಗಾರಿಕೆಯಿಂದ ಮುಕ್ತವಾಗಬಾರದು ಎಂದು ಮಾತ್ರ. ಮುಂದಿನ ದಿನಗಳಲ್ಲಿ ಮಹಿಳಾ ಮೀಸಲಾತಿ ದೇಶದ ಆಗ್ರಹವಾಗಲಿದೆ.

ಬಯಲಿಗೆ ಬಂತು ‘ಕಾರ್ಪೊರೇಟ್ ಜಿಹಾದ್’

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಲವ್ ಜಿಹಾದ್, ಲ್ಯಾಂಡ್ ಜಿಹಾದ್ ಶಬ್ದಗಳ ಸಾಲಿಗೆ ಈಗ ಹೊಸತೊಂದು ಸೇರ್ಪಡೆ- ಕಾರ್ಪೊರೇಟ್ ಜಿಹಾದ್. ಇದೆಲ್ಲಾ ಸುಳ್ಳು, ಬರಿದೇ ಕೆಲವರ ಆರೋಪ ಎನ್ನುವವರು ಈಚೆಗೆ ನಾಸಿಕದ ಟಿಸಿಎಸ್ ಬಿಪಿಓ ಕಚೇರಿಯಲ್ಲಿ ನಡೆದ ವಿದ್ಯಮಾನವನ್ನು ಕೂಲಂಕಷವಾಗಿ ವಿಶ್ಲೇಷಿಸುವ ಆಗತ್ಯವಿದೆ. ಏಕೆಂದರೆ ಅಲ್ಲಿ ನಡೆದ ಕಾನೂನುಬಾಹಿರ, ಸಂವಿಧಾನ ಬಾಹಿರ ವಿದ್ಯಮಾನಗಳ ವಿರುದ್ಧ ಮಹಾರಾಷ್ಟ್ರ ಪೊಲೀಸರೇ ಎಫ್ಐಆರ್ ಹಾಕಿ ಏಳಕ್ಕೂ ಹೆಚ್ಚು ಟಿಸಿಎಸ್ ಸಿಬ್ಬಂದಿಗಳನ್ನು ಬಂಧಿಸಿದ್ದಾರೆ. ವಿದ್ಯಮಾನಕ್ಕೆ ಸಂಬಂಧಿಸಿದ ಮಹತ್ವದ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ವೈಟ್ ಕಾಲರ್ ಉದ್ಯೋಗ, ಪ್ರತಿಷ್ಠಿತ ಕಂಪನಿ, ಕೈತುಂಬಾ ವೇತನ –ಇದು ಇಂದು ಐಟಿ–ಬಿಟಿ ಪದವೀಧರ – ಪದವೀಧರೆಯರ ಕನಸು. ಒಮ್ಮೆ ಇಂತಹದೊಂದು ಉದ್ಯೋಗ ದೊರೆಯಿತೆಂದರೆ ಜೀವನ ಸುಖಮಯ, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಅಂತ ಅಂದುಕೊಳ್ಳುವವರೇ ಹೆಚ್ಚು. ಆದರೆ ಟಾಟಾ ಸಮೂಹದ ಅಂಗ ಸಂಸ್ಥೆಯಾದ ಟಿಸಿಎಸ್ (ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್) ನಾಸಿಕ್ ಕಚೇರಿಯಿಂದ ಹೊರ ಬಿದ್ದಿರುವ ಕರಾಳ ಸುದ್ದಿಗಳು ಐಟಿ ಉದ್ಯೋಗಿಗಳ ಹಾಗೂ ಅವರ ಪೋಷಕರ ಜಂಘಾಬಲವನ್ನೇ ಉಡುಗಿಸಿವೆ. ಕಚೇರಿಯೊಳಗೇ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ, ಗೋಮಾಂಸ ತಿನ್ನುವಂತೆ ಒತ್ತಡ, ಜೊತೆಗೆ ಬಲವಂತದ ಮತಾಂತರಕ್ಕೆ ಆಗ್ರಹ ಮುಂತಾದ ಅಪಸವ್ಯಗಳು ಈಗಷ್ಟೇ ಆರಂಭವಾದದ್ದಲ್ಲ. 2022ರಿಂದಲೇ ಈ ಅಪಸವ್ಯಗಳನ್ನು ಸಹಿಸಿಕೊಂಡು ಮಹಿಳಾ ಉದ್ಯೋಗಿಗಳು ಕಾರ್ಯನಿರ್ವಹಿಸಬೇಕಾಗಿತ್ತು. ತಮ್ಮ ಸಹೋದ್ಯೋಗಿಗಳು ಮತ್ತು ಟೀಮ್ ಲೀಡರ್‌ಗಳಿಂದ ಇಂತಹ ಕಿರುಕುಳಕ್ಕೊಳಗಾದವರು ಕಚೇರಿಯ ಎಚ್ ಆರ್ (ಮಾನವ ಸಂಪನ್ಮೂಲ) ವಿಭಾಗಕ್ಕೆ ದೂರು ನೀಡಿದರೆ, ಅದಕ್ಕೆ ಕ್ಯಾರೇ ಅನ್ನುವವರೇ ಇರಲಿಲ್ಲ. ನಿಮಗೆ ಉದ್ಯೋಗ ಖಾತ್ರಿ, ವೇತನ ಹೆಚ್ಚಳ ಬೇಕಿದ್ದರೆ ಇವೆಲ್ಲವನ್ನೂ ಸಹಿಸಿಕೊಂಡು ಹೋಗಬೇಕು ಎಂಬ ಬೇಜವಾಬ್ದಾರಿ ಉತ್ತರ. ಈ ಅಪಸವ್ಯಗಳಿಗೆ ಎಚ್‌ಆರ್ ವಿಭಾಗದ ಕುಮ್ಮಕ್ಕು ಇತ್ತು ಎನ್ನುವುದಕ್ಕೆ ಇದೇ ಸಾಕ್ಷಿ.

ಟಿಸಿಎಸ್ ಕಂಪನಿಯಲ್ಲಿ ಸಿಬ್ಬಂದಿ, ಎಚ್‌ಆರ್ ಜತೆಗೂಡಿ ಕಂಪನಿಗೆ ಹೊಸದಾಗಿ ಸೇರುವ ಮಹಿಳಾ ಉದ್ಯೋಗಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದರು. ಆ ಪೈಕಿ ಆರ್ಥಿಕವಾಗಿ ದುರ್ಬಲರಾಗಿರುವ, ಹಣದ ಅವಶ್ಯಕತೆ ತೀವ್ರವಾಗಿರುವವರ, ಜತೆಗೆ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರನ್ನು ಆಯ್ಕೆ ಮಾಡಿಕೊಂಡು ನಿಧಾನವಾಗಿ ಅವರನ್ನು ಬಿಡಿಸಿಕೊಳ್ಳಲಾರದ ಮಾನಸಿಕ ಬಲೆಯಲ್ಲಿ ಕೆಡವಲಾಗುತ್ತಿತ್ತು. ನಮಾಜ್ ಮಾಡುವಂತೆ, ಗೋಮಾಂಸ ತಿನ್ನುವಂತೆ ಬಲವಂತ; ಹಿಂದು ಯುವತಿಯರ ಬಳಿ ಈಶ್ವರ ಲಿಂಗವನ್ನು ಜನನಾಂಗಕ್ಕೆ ಹೋಲಿಸಿ, ಕೃಷ್ಣನನ್ನು ಸ್ತ್ರೀ ಲೋಲ, ದ್ರೌಪದಿ ವೇಶ್ಯೆ ಎಂದೆಲ್ಲ ಮುಸ್ಲಿಂ ಮ್ಯಾನೇಜರ್‌ಗಳಿಂದ ನಿಂದನೆ. ಅದರಿಂದ ಒಬ್ಬ ಹಿಂದು ಯುವತಿ ಎಷ್ಟರ ಮಟ್ಟಿಗೆ ಪ್ರಭಾವಿತಳಾಗಿದ್ದಳೆಂದರೆ ಮನೆಯವರ ಜೊತೆ ಜಗಳವಾಡಿ, ಮನೆಯಲ್ಲಿದ್ದ ಹಿಂದು ದೇವತೆ ಫೋಟೋ ಹೊರ ಹಾಕಿದ್ದಳು. ರಂಜಾನ್ ಮಾಸದಲ್ಲಿ ಈ ಯುವತಿ ಉಪವಾಸ ಮಾಡುತ್ತಿದ್ದುದನ್ನು ಮನೆಯವರೆ ಗಮನಿಸಿದ್ದರು.

ಬಿಪಿಓದಲ್ಲಿ ನಡೆಯುತ್ತಿದ್ದ ಘಟನೆಗಳ ಬಗ್ಗೆ ಅಲ್ಲಿನವರ್ಯಾರೂ ನೇರವಾಗಿ ದೂರು ನೀಡಿರದ ಕಾರಣ, ನಾಲ್ವರು ಪೊಲೀಸ್ ಪೇದೆಗಳು ಮಾರುವೇಷದಲ್ಲಿ ಆ ಕಚೇರಿಗೆ ಕೆಲಸದವರಾಗಿ ಸೇರಿಕೊಂಡು ಎರಡು ವಾರಗಳ ಕಾಲ ಅಲ್ಲಿ ನಡೆಯುತ್ತಿದ್ದ ಚಟುವಟಿಕೆ ಗಮನಿಸಿ ಮಾಹಿತಿ ಸಂಗ್ರಹಿಸಿದ್ದರು. ಈ ಮಾಹಿತಿಗಳ ಆಧಾರದಲ್ಲಿ ಎಸ್‌ಐಟಿ ರಚನೆಯಾಗಿ ಇದುವರೆಗೆ ಒಟ್ಟು ಏಳು ಮಂದಿ ಆರೋಪಿಗಳ ಬಂಧನವಾಗಿದೆ. ಎಚ್.ಆರ್ ವಿಭಾಗದ ಮಾಸ್ಟರ್ ಮೈಂಡ್ ನಿಧಾ ಖಾನ್ ಪರಾರಿಯಾಗಿದ್ದು, ಆಕೆಗಾಗಿ ಬಲೆ ಬೀಸಲಾಗಿದೆ. ಆಸಿಫ್ ಅನ್ಸಾರಿ, ಶಫಿ ಶೇಖ್, ಶಾರುಖ್ ಖುರೇಶಿ, ರಜಾ ಮೆಮನ್, ತೌಸಿಫ್ ಅಖ್ತರ್, ದಾನಿಶ್ ಶೇಖ್ ಮತ್ತು ಒಬ್ಬ ಮಹಿಳಾ ಎಚ್ ಆರ್ ಮ್ಯಾನೇಜರ್ ಬಂಧನಕ್ಕೊಳಗಾದವರು.

ಈ ಪ್ರಕರಣ ಬೆಳಕಿಗೆ ಬಂದ ನಂತರ ಟಿಸಿಎಸ್ ಬಾಸ್‌ಗಳು ಆರೋಪಿಗಳನ್ನು ಕೆಲಸದಿಂದ ವಜಾ ಮಾಡಿ, ತನಿಖೆಗೆ ಕಮಿಟಿ ರಚಿಸಲಾಗಿದೆ ಎನ್ನುತ್ತಿದ್ದಾರೆ. ಆರೋಪಿಗಳ ವಿರುದ್ಧ ನಮ್ಮದು ಶೂನ್ಯ ಸಹಿಷ್ಣುತೆ ಎಂದೂ ಬಡಾಯಿ ಬಿಟ್ಟಿದ್ದಾರೆ. ಇದೆಲ್ಲ ಕಂಪನಿಯ ಇಮೇಜ್ ಉಳಿಸಿಕೊಳ್ಳುವ ತಂತ್ರಗಾರಿಕೆ ಎಂಬುದು ಯಾರಿಗಾದರೂ ಅರ್ಥವಾಗುವ ಸಂಗತಿ. ನೂರಾರು ಉದ್ಯೋಗಿಗಳಿರುವ ಪ್ರತಿಷ್ಠಿತ ಕಂಪನಿಯ ಕಚೇರಿಯಲ್ಲಿ ಇಂತಹ ಬಲು ದೊಡ್ಡ ಹೇಯ ಅಪರಾಧಗಳು ನಡೆಯುತ್ತಿದ್ದರೂ ಆಡಳಿತ ಮಂಡಳಿಗೆ ಈ ವಿಷಯ ತಿಳಿಯಲೇ ಇಲ್ಲವೆ? ಆಡಳಿತ ಮಂಡಳಿಗೆ ಗೊತ್ತಿದ್ದೂ ಮೌನವಾಗಿದ್ದರೆ ಅದು ಕಂಪನಿಯ ವೈಫಲ್ಯ. ಒಂದು ವೇಳೆ ಗೊತ್ತೇ ಇರಲಿಲ್ಲವೆಂದರೆ ಆಡಳಿತ ವ್ಯವಸ್ಥೆ ಅದೆಷ್ಟು ಹದಗೆಟ್ಟು ಹೋಗಿದೆ ಎಂಬುದಕ್ಕೆ ನಿದರ್ಶನ. ದುಡಿಯುವ ಮಹಿಳೆಯರಿಗೆ ನೆಮ್ಮದಿಯ ವಾತಾವರಣ ಕಲ್ಪಿಸಲಾಗದ ಕಾರ್ಪೊರೇಟ್ ಕಂಪನಿಯಿಂದ ದೇಶಕ್ಕೆ ಏನು ಪ್ರಯೋಜನ? ಮತಾಂಧರ , ಕಾಮ ಪಿಪಾಸುಗಳ ಆಡೊಂಬಲವಾಗಿ ಕಾರ್ಪೊರೇಟ್ ಕಂಪನಿಗಳು ಬದಲಾಗುತ್ತಿವೆಯೆ? ಇದು ಇಡೀ ದೇಶದ ಮಾನವ ಸಂಪನ್ಮೂಲ ಮತ್ತು ನೈತಿಕತೆಗೆ ಬಿದ್ದ ಬಲವಾದ ಹೊಡೆತ.

ನಾಸಿಕ್‌ನ ಟಿಸಿಎಸ್ ಕರ್ಮಕಾಂಡ ಬೆಳಕಿಗೆ ಬರುತ್ತಿದ್ದಂತೆ ಇತರೆ ಎಂಎನ್‌ಸಿ ಕಂಪನಿಗಳಲ್ಲೂ ಇಂತಹುದೇ ಅಪಸವ್ಯಗಳು ನಡೆದಿರುವುದು ಒಂದೊಂದಾಗಿ ಬಯಲಿಗೆ ಬರುತ್ತಿವೆ. ಜಿಹಾದಿ ಜಾಲವೊಂದು ವ್ಯವಸ್ಥಿತವಾಗಿ, ಯೋಜನಾ ಬದ್ಧವಾಗಿ ದೇಶದಲ್ಲೆಡೆ ಇದನ್ನು ಕಾನೂನಿನ ಕಣ್ಣಿಗೆ ಮಣ್ಣೆರಚಿ ನಡೆಸುತ್ತಿದೆ ಎಂಬುದು ಸ್ಪಷ್ಟ. ನಾಸಿಕ್‌ನ ಟಿಸಿಎಸ್ ಕಂಪನಿಯ 300 ಮಂದಿ ಉದ್ಯೋಗಿಗಳಲ್ಲಿ 40 ಮಂದಿ ಮುಸ್ಲಿಮರೇ ಆಗಿದ್ದರಿಂದ ಹಿಂದೂ ಉದ್ಯೋಗಿಗಳ ಮೇಲೆ ಲೈಂಗಿಕ ಕಿರುಕುಳ, ಬಲವಂತದ ಮತಾಂತರ, ಗೋಮಾಂಸ ಸೇವನೆಗೆ ಒತ್ತಡ ಹೇರಲು ಸಾಧ್ಯವಾಗಿದೆ. ಮಹಿಳಾ ಉದ್ಯೋಗಿಗಳಿಗಷ್ಟೇ ಅಲ್ಲದೆ ಪುರುಷ ಉದ್ಯೋಗಿಗಳಿಗೂ ಜಿಹಾದಿಗಳು ಕಿರುಕುಳ ನೀಡಿದ್ದಾರೆ. ಮದುವೆಯಾಗಿ ಹಲವು ವರ್ಷಗಳಾದರೂ ಮಕ್ಕಳಿಲ್ಲದ ಹಿಂದು ಉದ್ಯೋಗಿಯೊಬ್ಬರಿಗೆ “ನಿನಗೆ ಮಗು ಬೇಕಿದ್ದರೆ ನಿನ್ನ ಹೆಂಡತಿಯನ್ನು ನಮ್ಮ ಬಳಿ ಕಳಿಸು” ಎಂದು ಅತ್ಯಂತ ಅಸಭ್ಯವಾಗಿ ಮಾತಾಡಿದ್ದಾರೆ. ಜತೆಗೆ ಬಲವಂತವಾಗಿ ನಮಾಜ್ ಮಾಡಿಸಿ, ಕಲ್ಮ ಓದಿಸಿ, ತಲೆಗೆ ತುರುಕರ ಟೋಪಿ ಧರಿಸುವಂತೆ ಮಾಡಿದ್ದಾರೆ. ಈ ಸಂಗತಿಯನ್ನು ಇಂಡಿಯಾ ಟುಡೇಗೆ ನೀಡಿದ ಸಂದರ್ಶನದಲ್ಲಿ ಆ ಉದ್ಯೋಗಿ ಬಹಿರಂಗಗೊಳಿಸಿದ್ದಾರೆ. ಈ ಉದ್ಯೋಗಿಗೆ ಹೀಗೆ ಕಿರುಕುಳ ನೀಡಿದವರು ಟೀಮ್ ಲೀಡರ್ ಅಖ್ತರ್ ಮತ್ತು ಸಹೋದ್ಯೋಗಿ ಡ್ಯಾನಿಶ್ ಶೇಖ್.

ನಾಸಿಕ್ ಪ್ರಕರಣದ ಬೆನ್ನಲ್ಲೇ ಮಹಾರಾಷ್ಟ್ರದ ಅಮರಾವತಿಯಲ್ಲಿ 180ಕ್ಕೂ ಹೆಚ್ಚು ಅಪ್ರಾಪ್ತ ಹೆಣ್ಣು ಮಕ್ಕಳ ಅಶ್ಲೀಲ ಚಿತ್ರ ಬಳಸಿಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದ 19ರ ಹರೆಯದ ಅಯಾನ್ ಅಹ್ಮದ್ ತನ್ವೀರ್ ಎಂಬ ಮರಿ ಜಿಹಾದಿಯನ್ನು ಪೊಲೀಸರು ಬಂಧಿಸಿದ್ದಾರೆ. ಆತನ ಮೊಬೈಲ್ ಹಾಗೂ ಲ್ಯಾಪ್ ಟಾಪ್‌ಗಳಲ್ಲಿ 180 ಅಪ್ರಾಪ್ತೆಯರ 350ಕ್ಕೂ ಹೆಚ್ಚು ಅಶ್ಲೀಲ ಚಿತ್ರ ಪತ್ತೆಯಾಗಿವೆ. 2025ರ ಮಾರ್ಚ್‌ನಲ್ಲಿ ಕೇರಳದ ಕೊಟ್ಟಾಯಂ ಜಿಲ್ಲೆಯ ಮೀನಾಚಿಲ್ ತಾಲೂಕಿನಲ್ಲಿ ಕ್ರೈಸ್ತ ಸಮುದಾಯದ 400ಕ್ಕೂ ಹೆಚ್ಚು ಯುವತಿಯರು ಲವ್ ಜಿಹಾದ್ ಬಲೆಗೆ ಬಿದ್ದಿದ್ದು 41 ಯುವತಿಯರು ಮಾತ್ರ ಸುರಕ್ಷಿತವಾಗಿ ಮರಳಿ ಮನೆಗೆ ಸೇರಿದ್ದರು. ಇದನ್ನು ಕ್ರೈಸ್ತ ಮುಖಂಡ ಪಿ.ಸಿ. ಜಾರ್ಜ್ ಅವರೇ ಸಭೆಯೊಂದರಲ್ಲಿ ತಿಳಿಸಿದ್ದರು. ಬಿಜೆಪಿ ಆಡಳಿತದ ಮಧ್ಯಪ್ರದೇಶದಲ್ಲೆ 2020ರಿಂದ ಇದುವರೆಗೆ ಇಂತಹ 283 ಲವ್ ಜಿಹಾದ್ ಪ್ರಕರಣಗಳು ನಡೆದಿವೆ. ಬೆಳಕಿಗೆ ಬಾರದ ಪ್ರಕರಣಗಳು ಅದೆಷ್ಟೋ ಇವೆ.

ಲವ್ ಜಿಹಾದ್ ಎನ್ನುವುದು ಒಂದು ವ್ಯವಸ್ಥಿತ ಜಾಲ. ಯಾವ ಹೆಣ್ಣು ಮಕ್ಕಳನ್ನು ಯಾವ ತಂತ್ರದ ಮೂಲಕ ಬಲೆಗೆ ಬೀಳಿಸಬೇಕು ಎಂಬ ಬಗ್ಗೆ ಜಿಹಾದ್ ಹುಡುಗರಿಗೆ ಸಾಕಷ್ಟು ತರಬೇತಿ ಹಾಗೂ ಪೂರ್ವ ಸಿದ್ಧತೆ ಒದಗಿಸಲಾಗಿರುತ್ತದೆ. ಬಹಳಷ್ಟು ಮಂದಿ ನಮ್ಮ ಮುಗ್ಧ ಹೆಣ್ಣು ಮಕ್ಕಳು ಇದ್ಯಾವುದರ ಅರಿವೇ ಇಲ್ಲದೆ ಜಿಹಾದಿಗಳ ಬಲೆಗೆ ಬಿದ್ದು ಒದ್ದಾಡುತ್ತಾರೆ. ಕೆಲವರು ವಯೋಸಹಜ ದೈಹಿಕ ಆಕರ್ಷಣೆಗೆ ಮರುಳಾದರೆ, ಇನ್ನು ಕೆಲವರು ಐಷಾರಾಮಿ ಜೀವನದ ಆಮಿಷಕ್ಕೆ ಮರುಳಾಗಿ ಜಿಹಾದಿಗಳ ಕಪಿಮುಷ್ಟಿಗೆ ಸಿಲುಕಿ ಹೊರಬರಲಾರದೆ ಪರಿತಪಿಸುತ್ತಾರೆ. ಸಂತ್ರಸ್ತರಲ್ಲಿ ಧೈರ್ಯವಾಗಿ ಮುಂದೆ ಬಂದು ದೂರು ನೀಡುವವರ ಸಂಖ್ಯೆ ತುಂಬಾ ಕಡಿಮೆ. ಜಿಹಾದಿಗಳಿಗೆ ಪ್ಲಸ್ ಪಾಯಿಂಟ್ ಆಗಿರುವುದು ಇದೇ ಅಂಶ. ಹಿಂದು ಹೆಣ್ಣು ಮಕ್ಕಳನ್ನು ಲೈಂಗಿಕ ಶೋಷಣೆಗೊಳಪಡಿಸಿ ಮತಾಂತರಿಸುವಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ‘ಶಾಹೀನ್ ಗ್ಯಾಂಗ್’ನ ಕರಾಮತ್ತು ಸಾಕಷ್ಟಿದೆ. ಈಗ ತಲೆಮರೆಸಿಕೊಂಡಿರುವ ನಿಧಾ ಖಾನ್ ಈ ‘ಶಾಹೀನ್ ಗ್ಯಾಂಗ್’ನ ಒಬ್ಬ ತಲೆ ತಿರುಕ ನಾಯಕಿ.

ಹಿಂದು ಯುವತಿಯರಿಗೆ ಆಸೆ ಆಮಿಷ ತೋರಿಸಿ, ಮತಾಂತರಿಸಿ, ಅವರನ್ನು ಹೆರಿಗೆ ಯಂತ್ರವನ್ನಾಗಿ ಮಾರ್ಪಡಿಸಿ, ಮುಸ್ಲಿಂ ಜನಸಂಖ್ಯೆಯನ್ನು ಬೆಳೆಸುವುದೇ ಇವೆಲ್ಲದರ ಹಿಂದಿನ ಹುನ್ನಾರ. ‘ಘಜ್ವ–ಎ–ಹಿಂದ್’ (conquest of India) ಗುರಿ ಸಾಧನೆಗೆ ಲವ್ ಜಿಹಾದ್‌ರ, ಕಾರ್ಪೊರೇಟ್ ಜಿಹಾದ್ ಇವೆಲ್ಲ ಪ್ರಮುಖ ಅಸ್ತ್ರಗಳು. ನಾಸಿಕದ ಟಿಸಿಎಸ್ ಪ್ರಕರಣ ಒಂದು ಆರಂಭ ಅಷ್ಟೇ. ಇಂತಹ ಲವ್ ಜಿಹಾದ್ ಪ್ರಕರಣಗಳು ಇನ್ನು ಮುಂದೆ ಕೋಚಿಂಗ್ ಸೆಂಟರ್‌ಗಳು, ಡ್ಯಾನ್ಸ್ ಕೇಂದ್ರಗಳು, ಜಿಮ್, ಯೋಗ, ಫಿಟ್ನೆಸ್ ತರಬೇತಿ ಕೇಂದ್ರ, ಕಾಲೇಜುಗಳು, ಶಾಲೆಗಳು, ವಿಶ್ವವಿದ್ಯಾಲಯಗಳು, ಬಿಪಿಓ/ಕೆಪಿಓ ಮುಂತಾದ ಕಡೆ ನಡೆಯುವುದರಲ್ಲಿ ಅನುಮಾನವೇ ಇಲ್ಲ.

ನಾವೇನೋ ನಮ್ಮ ಮನೆಯ ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ಒಳ್ಳೆಯ ಉದ್ಯೋಗ ಹಿಡಿಯಲಿ. ಅವರ ಕಾಲ ಮೇಲೆ ಅವರೇ ನಿಲ್ಲುವಂತಾಗಲೆಂದು ಇಂತಹ ಕಡೆಗಳಿಗೆಲ್ಲ ಅವರನ್ನು ಕಳಿಸುತ್ತೇವೆ. ಆದರೆ ಅವರನ್ನು ಹೇಗೆ ಬಳಸಿಕೊಳ್ಳಬೇಕು, ಅವರ ಬದುಕನ್ನು ಹೇಗೆ ಹಿಂಡಿ ಹೊಸಕಿ ಹಾಕಬೇಕು ಎಂದು ಹೊಂಚು ಹಾಕಿ ಕಾದಿರುವ ವಿಕೃತ ಮನಸ್ಸುಗಳು ಎಲ್ಲೆಡೆಯಲ್ಲೂ ಇರುತ್ತವೆ. ಆದ್ದರಿಂದ ಜಾಗೃತರಾಗಿ. ಆಗಬಹುದಾದ ಅನಾಹುತವನ್ನು ಆಗದಂತೆ ತಡೆಗಟ್ಟಿರಿ. ಈಗಲೂ ನಾವು ಜಾಗೃತ ರಾಗದಿದ್ದರೆ ನಮ್ಮನ್ನು ಯಾವ ದೇವರು ಕೂಡ ಕಾಪಾಡಲಾರ.

ಸಾಮಾನ್ಯ ಮಾನಸಿಕ ಕಾಯಿಲೆಗಳು-2

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಹರೆಯದವರ ಪ್ರತಿಭಟನಾ ನಡವಳಿಕೆ
(Opposition difiant disorder (ODD)

ಹದಿನಾಲ್ಕು ವರ್ಷ ವಯಸ್ಸಿನ ರಾಹುಲ್ ಒಂಭತ್ತನೇ ತರಗತಿಯ ವಿದ್ಯಾರ್ಥಿ. ತಾಯಿ ಸುಮಾ ಮಗನನ್ನು ಸಲಹೆಗಾಗಿ ಕರೆತಂದಿದ್ದರು. ರಾಹುಲ್ ತೊಂದರೆ ಏನೆಂದು ಕೇಳಿದೆ. ತಾಯಿ ಸುಮ, ನೋಡಿ ಸಾರ್ ಇವನನ್ನು ಹೇಗೆ ಸಂಭಾಳಿಸಬೇಕೆಂತಲೇ ಗೊತ್ತಾಗುತ್ತಿಲ್ಲ. ಒಬ್ಬನೇ ಮಗ ಎಂದು ಮುದ್ದಿನಿಂದ ಸಾಕಿದೆವು. ಅವನು ಕೇಳಿಕೇಳಿದ್ದನ್ನೆಲ್ಲ ಕೊಡಿಸುತ್ತಿದ್ದೆವು. ಚಿಕ್ಕವನಿದ್ದಾಗ ಬಹಳ ಚುರುಕಾಗಿದ್ದರಿಂದ ಎಲ್ಲರೂ ಹೊಗಳುತ್ತಿದ್ದರು. ಆಗಲೇ ಇವನ ಹಟ, ಸಿಟ್ಟು, ಆಬ್ಬರಾಟ ಜೋರಾಗಿತ್ತು. ಎಲ್ಲವೂ ತನಗೇ ಬೇಕು ಎಂದು ಹಟ ಮಾಡುತ್ತಿದ್ದ. ಒಂದೊಂದು ದಿನ ಶಾಲೆಗೆ ಹೋಗುವುದಿಲ್ಲ ಎಂದು ಹಟ ಹಿಡಿದು ಕೂರುತ್ತಿದ್ದ. ಒತ್ತಾಯಿಸಿದರೆ ಕೋಪಗೊಂಡು ನೆಲದ ಮೇಲೆ ಹೊರಳಾಡುತ್ತಿದ್ದ. ಇನ್ನೂ ಚಿಕ್ಕವನು ಇದೆಲ್ಲ ಮಕ್ಕಳಲ್ಲಿ ಸಹಜ, ದೊಡ್ಡವನಾದ ಮೇಲೆ ಸರಿ ಹೋಗ್ತಾನೆ ಎಂದು ಭಾವಿಸಿ ಇವನ ನಡವಳಿಕೆಗಳನ್ನು ಸಹಿಸಿಕೊಂಡೆವು. ಈಗ ಒಂದು ವರ್ಷ ಆಯ್ತು. ಕಂಡ ಕಂಡದ್ದಕ್ಕೆ ಸಿಡಿಮಿಡಿಗೊಳ್ತಾನೆ. ಇವನು ಹೇಳಿದ ಹಾಗೆ ನಾವು ಕೇಳ್ಬೇಕು. ಇಲ್ಲದಿದ್ದರೆ ಕೈಲಿರುವುದನ್ನು ಬಿಸಾಕಿ ರೂಮು ಬಾಗಿಲು ಹಾಕಿಕೊಳ್ತಾನೆ. ನೀವು ನನ್ನನ್ನು ಬೈತೀರಿ. ಆದಕ್ಕಾಗಿ ಈ ದಿನ ನಾನು ಸ್ಕೂಲಿಗೆ ಹೋಗಲ್ಲ ಎಂದು ಹಟ ಹಿಡಿಯುತ್ತಾನೆ. ಇವನ ಸ್ನೇಹಿತರನ್ನು ಹೊಗಳಿದರೆ ಸಹಿಸಿಕೊಳ್ಳುವುದಿಲ್ಲ. ನೋಡು ನಿನ್ನ ಸ್ನೇಹಿತ ಎಷ್ಟು ಸಮಾಧಾನದಿಂದ ಇರ್ತಾನೆ. ಹಾಗೆ ನೀನು ಸಮಾಧಾನದಿಂದ ಇರುವುದನ್ನು ಕಲಿಯಬೇಕು ಎಂದು ಬುದ್ಧಿವಾದ ಹೇಳುತ್ತೇನೆ. ಅದಕ್ಕೆ ನೀನೇನೂ ನನಗೆ ಹೇಳುವುದು ಬೇಡ. ನಿಮಗೆ ಅವನನ್ನು ಕಂಡರೆ ಪ್ರೀತಿ. ನನ್ನ ಕಂಡ್ರೆ ಆಗೋಲ್ಲ ಎಂದು ಕೋಪ ಮಾಡುತ್ತಾನೆ. ಯಾವಾಗ ಯಾರೊಂದಿಗೆ ಕೋಪಗೊಳ್ಳುತ್ತಾನೆ ಎಂದು ಹೇಳುವುದು ಕಷ್ಟ. ಹಾಗಾಗಿ ಈತನ ಸ್ನೇಹಿತರು ದೂರವಾಗಿದಾರೆ. ಇನ್ನೂ ಹೇಳುವುದು ಬೇಕಷ್ಟಿದೆ. ಇವನು ಸರಿಯಾಗೋದಕ್ಕೆ ಏನು ಮಾಡಬೇಕು ಅಂತ ಹೇಳಿ ಎಂದು ತಮ್ಮ ಮಾತು ಮುಗಿಸಿದರು.

ನನಗೆ ಆವಶ್ಯವಾದ ಮಾಹಿತಿಗಳನ್ನು ತಿಳಿದುಕೊಂಡೆ. ರಾಹುಲ್‌ನ ಮನಪರೀಕ್ಷೆ ಮಾಡಿದೆ. ಮನಪರೀಕ್ಷೆಯಲ್ಲಿ ದೊರೆತ ಮಾಹಿತಿಯನ್ನು ಸಂಕ್ಷಿಪ್ತವಾಗಿ ತಿಳಿಸಬೇಕೆಂದರೆ ರಾಹುಲ್ ಸರಾಸರಿ ಬುದ್ಧಿವಂತ ಹುಡುಗನಾಗಿದ್ದ. ಆದರೆ ಎಲ್ಲದರಲ್ಲೂ ತಾನೇ ಮೇಲು ಎಂಬ ಭಾವನೆ. ಯಾರಾದರೂ ಇಲ್ಲವೆಂದರೆ ಅವರ ಮೇಲೆ ರೇಗುತ್ತಿದ್ದ. ತನ್ನದೇ ಸರಿ, ಬೇರೆಯವರೆಲ್ಲರೂ ತಪ್ಪು ಎಂಬ ಭಾವನೆ ಅವನ ಮನದಾಳದಲ್ಲಿ ಬೇರೂರಿತ್ತು. ಭಾವನೆಗಳ ಮೇಲೆ ಹಿಡಿತವಿರಲಿಲ್ಲ. ಬೇರೆಯವರ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರೆ ಸಹಿಸುತ್ತಿರಲಿಲ್ಲ.



ರಾಹುಲ್ ಹರೆಯದ ಪ್ರತಿಭಟನಾ ಕಾಯಿಲೆಯಿಂದ ನರಳುತ್ತಿದ್ದನೆಂಬುದು ಖಚಿತವಾಯಿತು. ರಾಹುಲ್ ತಾಯಿಯವರನ್ನು ಒಳಗೆ ಕರೆದು ರಾಹುಲ್ ಕಾಯಿಲೆ ಕುರಿತು ವಿವರಿಸಿದೆ. ಚಿಕಿತ್ಸೆ ಆವಶ್ಯಕವೆಂದು ಹೇಳಿದೆ.

ಹರೆಯದ ಪ್ರತಿಭಟನಾ ಕಾಯಿಲೆಯಲ್ಲಿ (Opposition difiant disorder (ODD) ಕೋಪ, ಕಿರಿಕಿರಿ ಸಾಮಾನ್ಯ. ಹಿರಿಯರು ಏನು ಹೇಳಿದರೂ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಪ್ರತಿಯೊಂದು ವಿಷಯಕ್ಕೂ ಚರ್ಚೆ ಮಾಡುತ್ತಾರೆ. ಇವರು ಚರ್ಚಿಸುವುದನ್ನು ನೋಡಿದರೆ, ಬಹಳಬುದ್ಧಿವಂತರು ಎಂದು ಇತರರು ಭಾವಿಸುತ್ತಾರೆ. ತಮ್ಮದು ತಪ್ಪಿದ್ದರೂ ತಾವೇ ಸರಿ ಎಂದು ಸಮರ್ಥಿಸಿಕೊಳ್ಳುತ್ತಾರೆ.ಚಿಕ್ಕಪುಟ್ಟದ್ದಕ್ಕೂ ಸಿಡಿಮಿಡಿಗೊಳ್ಳುತ್ತಾರೆ ಎಲ್ಲ ಸಂದರ್ಭಗಳಲ್ಲೂ ತಾವೇ ಬುದ್ಧಿವಂತರೆಂದು ಭಾವಿಸುತ್ತಾರೆ. ಇತರರ ಕುರಿತು ಟೀಕೆ ಟಿಪ್ಪಣಿ ಮಾಡುವುದು ಇವರ ಅಭ್ಯಾಸ. ಆದರೆ ಯಾರಾದರೂ ತಮ್ಮ ಕುರಿತು ಟೀಕೆ ಮಾಡಿದರೆ ಅದನ್ನು ಸಹಿಸುವುದಿಲ್ಲ. ಇವರದ್ದು ಸೇಡಿನ ಮನೋಭಾವ. ಬೇರೆಯವರು ಏನಾದರೂ ಟೀಕೆ ಟಿಪ್ಪಣಿ ಮಾಡಿದರೆ ಅದನ್ನು ವರ್ಷಗಟ್ಟಲೇ ನೆನಪಿಟ್ಟು ಹಗೆ ತೀರಿಸಿಕೊಳ್ಳುತ್ತಾರೆ.

ಮೇಲಿನ ಲಕ್ಷಣಗಳು ಮೂರು ವರ್ಷದಿಂದ ಹತ್ತು ಹನ್ನೆರಡು ವರ್ಷ ವಯಸ್ಸಿನ ಅವಧಿಯಲ್ಲಿ ಆಗಿಂದಾಗ್ಗೆ ಕಾಣಿಸಿಕೊಳ್ಳುವುದು ಸಾಮಾನ್ಯ. ಇಂತಹವರ್ತನೆಗಳು ನಿರಂತರವಾಗಿ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ ಕಾಣಿಸಿಕೊಂಡರೆ ಅದು ಕಾಯಿಲೆ ಎನಿಸಿಕೊಳ್ಳುತ್ತದೆ.

ಹರೆಯದವರ ಪ್ರತಿಭಟನಾ ಕಾಯಿಲೆಯನ್ನು ಗುರುತಿಸಿ, ಆದಕ್ಕೆ ಸರಿಯಾದ ಚಿಕಿತ್ಸೆ ದೊರೆಯದಿದ್ದರೆ ಅದು ದೊಡ್ಡವರಾದ ಮೇಲೂ ಹಾಗೇ ಉಳಿಯುತ್ತದೆ. ಇದರಿಂದ ಶಾಲಾ ಕಾಲೇಜುಗಳಲ್ಲಿ ಇವರು ತೊಂದರೆ ಅನುಭವಿಸಬೇಕಾಗುತ್ತದೆ. ಸಾಮಾಜಿಕವಾಗಿ ಸ್ನೇಹಿತರನ್ನು ಗಳಿಸಿಕೊಳ್ಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ದಾಂಪತ್ಯ ಸಮಸ್ಯೆ ಉಂಟಾಗಿ ವಿವಾಹ ವಿಚ್ಛೇದನ ಆದ ಉದಾಹರಣೆಗಳು ಸಾಕಷ್ಟಿವೆ.

ಹರೆಯದವರ ಪ್ರತಿಭಟನಾ ಕಾಯಿಲೆಗೆ ಕಾರಣಗಳು ಹಲವಾರು. ಮುಖ್ಯವಾಗಿ ವಂಶಾವಳಿ, ಕೌಟುಂಬಿಕ ವಾತಾವರಣ, ಮತ್ತು ಮಿದುಳಿನ ನರಕೋಶಗಳ ಸಮೂಹಗಳಲ್ಲಿ ಆಗುವ ವ್ಯತ್ಯಾಸಗಳು. ಪ್ರತಿಭಟನಾ ಕಾಯಿಲೆಗೆ ತುತ್ತಾದವರ ಕುಟುಂಬದಲ್ಲಿ, ಕೆಲವು ಮಾನಸಿಕ ಕಾಯಿಲೆಗಳಿಂದ ನರಳುವವರ ಸಂಖ್ಯೆ ಹೆಚ್ಚು ಎಂದು ಅಧ್ಯಯನಗಳು ತಿಳಿಸುತ್ತವೆ. ಪ್ರತಿಭಟನಾ ಕಾಯಿಲೆಯಿಂದ ನರಳುವ ಕೆಲವರು ಅತಿ ಚೇಷ್ಟೆ, ವ್ಯಕ್ತಿತ್ವ ದೋಷ, ಖಿನ್ನತೆ ಇವುಗಳಿಂದಲೂ ನರಳುತ್ತಾರೆ. ಇಂಥವರಲ್ಲಿ ಆತಂಕದ ಲಕ್ಷಣಗಳೂ ಕಂಡುಬರಬಹುದು. ಈ ಕಾಯಿಲೆಯಿಂದ ಬಳಲುವವರಲ್ಲಿ ಮಿದುಳಿನ ನರಕೋಶಗಳ ಕ್ರಿಯೆಗಳಲ್ಲಿ ವ್ಯತ್ಯಾಸಗಳಿರುತ್ತವೆ ಮತ್ತು ನರವಾಹಕಗಳ ವ್ಯತ್ಯಾಸವೂ ಕಾರಣ ಎಂದು ತಜ್ಞರ ಅಭಿಪ್ರಾಯ.

ಕೌಟುಂಬಿಕ ಪರಿಸರವೂ ಒಂದು ಪ್ರಮುಖವಾದ ಕಾರಣ. ಬಾಲ್ಯದಲ್ಲಿ ಅತಿ ಮುದ್ದು, ಮಕ್ಕಳ ಚೇಷ್ಟೆಗಳನ್ನು ವೈಭವೀಕರಿಸಿ ಪ್ರೋತ್ಸಾಹಿಸುವುದು ಒಂದೆಡೆಯಾದರೆ, ಅತಿಯಾದ ಶಿಕ್ಷೆ, ತಿರಸ್ಕಾರ ಮನೋಭಾವ ಇವೂ ಪ್ರತಿಭಟನಾ ವರ್ತನೆಗೆ ಕಾರಣಗಳು. ಕೆಲವು ವೇಳೆ ಪೋಷಕರ ವರ್ತನೆಯೂ ಹರೆಯದವರ ಪ್ರತಿಭಟನಾ ವರ್ತನೆಗೆ ಕಾರಣವಾಗಹುದು. ಹರೆಯದವರ ಪ್ರತಿಭಟನಾ ವರ್ತನೆಗೆ ಇನ್ನೊಂದು ಮುಖ್ಯವಾದ ಕಾರಣ ನಕಾರಾತ್ಮಕ ಮತ್ತು ವ್ಯಸನ ನಿರತ ಗೆಳೆಯರ ಸಹವಾಸ. ನಕಾರಾತ್ಮಕ ವರ್ತನೆಗಳನ್ನು ಪ್ರೋತ್ಸಾಹಿಸುವ ಗೆಳೆಯರು ಇವು ಪ್ರತಿಭಟನಾ ವರ್ತನೆಯನ್ನು ಪೋಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

ಚಿಕಿತ್ಸೆ: ಈ ಕಾಯಿಲೆಯ ಚಿಕಿತ್ಸೆಗೆ ಮುಖ್ಯವಾದುದು ಆಪ್ತ ಸಲಹೆಯಲ್ಲಿ ರೋಗಿಯೊಂದಿಗೆ, ಕುಟುಂಬಕ್ಕೂ ಆಪ್ತ ಸಲಹೆ ನೀಡಬೇಕು. ಪೋಷಕರು ಮಕ್ಕಳೊಂದಿಗೆ ಪ್ರೀತಿಯಿಂದ, ಮಧುರವಾದ ಮಾತುಗಳಿಂದ ಅವರೊಂದಿಗೆ ಆತ್ಮೀಯತೆಯಿಂದ ವರ್ತಿಸಬೇಕು. ಅವರ ಅಹವಾಲುಗಳನ್ನು ಸಹನೆಯಿಂದ ಆಲಿಸಬೇಕು. ಒಳ್ಳೆಯ ಮಾತುಗಳಿಂದ ಯಾವುದು ಸರಿ, ಯಾವುದು ತಪ್ಪು, ಯಾವುದರಿಂದ ಭವಿಷ್ಯಕ್ಕೆ ಒಳ್ಳೆಯದಾಗುತ್ತದೆ, ಯಾವುದರಿಂದ ಒಳ್ಳೆಯದಾಗುವುದಿಲ್ಲ ಎಂಬುದನ್ನು ಮೃದು ಮಾತುಗಳಿಂದ ತಿಳಿಸಿ ಹೇಳಬೇಕು. ಇದಕ್ಕೆ ಪೋಷಕರ ಚಿಕಿತ್ಸೆ ಎಂದು ಕರೆಯುತ್ತಾರೆ. ಪೋಷಕರು ಮಕ್ಕಳನ್ನು ಬಾಲ್ಯದಿಂದಲೂ ಸರಿಯಾದ ಪ್ರೀತಿ ಪ್ರೇಮಗಳೊಂದಿಗೆ ಆತ್ಮೀಯತೆಯಿಂದ ನಡೆಸಿಕೊಳ್ಳಬೇಕು. ಮಕ್ಕಳಿಗೆ ಜೀವನ ಕೌಶಲಗಳನ್ನು ರೂಢಿಗೊಳಿಸಿದಾಗ,ಆದರಿಂದ ಹರೆಯದ ಪ್ರತಿಭಟನಾ ವರ್ತನೆಯನ್ನು ಸಂಪೂರ್ಣವಲ್ಲದಿದ್ದರೂ ಬಹುಪಾಲು ಒಳ್ಳೆಯ ವರ್ತನೆಯಾಗಿ ಪರಿವರ್ತಿಸಬಹುದು.

ಹರೆಯದ ಪ್ರತಿಭಟನಾ ವರ್ತನೆ ಚಿಕಿತ್ಸೆಯಲ್ಲಿ ಶಾಲೆಯ ಪಾತ್ರವುಮಹತ್ವದ ಪಾತ್ರ ವಹಿಸುತ್ತದೆ. ಇಂತಹ ವಿದ್ಯಾರ್ಥಿಗಳು ತರಗತಿಗೆ ಸರಿಯಾಗಿ ಹೋಗುವುದಿಲ್ಲ. ಪಾಠ ಓದಲು, ಏಕಾಗ್ರತೆಯ ಕೊರತೆ ಕಾಣಬಹುದು. ಕೆಲವು ಸಂದರ್ಭಗಳಲ್ಲಿಸಹಪಾಠಿಗಳೊಂದಿಗೆ ಜಗಳ, ಉಪಾಧ್ಯಾಯರೊಂದಿಗೆ ಅನುಚಿತ ವರ್ತನೆಯನ್ನು ಇಂಥವರಲ್ಲಿ ಕಾಣಬಹುದು. ಆದರಿಂದ ಇವರು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಇದನ್ನು ಗುರುತಿಸಿ ಅಂಥವರಿಗೆ ಸಕಾರಾತ್ಮಕ ಮಾರ್ಗದರ್ಶನ ಮಾಡಬೇಕು. ಇಂಥಹ ವಿದ್ಯಾರ್ಥಿಗಳೊಂದಿಗೆ ಆಪ್ತ ಸಮಾಲೋಚನೆ ಮಾಡಬೇಕು.ಇವುಗಳನ್ನು ಶಿಕ್ಷಕರು ಅನುಸರಿಸಿದಾಗ ಪ್ರತಿಭಟನೆಯ ತೀವ್ರತೆ ಕಡಿಮೆಯಾಗಿ ಅಂಥವರು ಕಲಿಕೆಯಲ್ಲಿ ಉತ್ತಮ ಸಾಧನೆ ಮಾಡುತ್ತಾರೆ. ಹರೆಯದವರ ಪ್ರತಿಭಟನಾ ಕಾಯಿಲೆಯ ಚಿಕಿತ್ಸೆಯಲ್ಲಿ ಗೆಳೆಯರ ಪಾತ್ರವು ಮುಖ್ಯ. ಹರೆಯದವರು ಪೋಷಕರಿಗಿಂತ ಗೆಳೆಯರ ಸಲಹೆಗಳನ್ನು ಪಾಲಿಸುತ್ತಾರೆ. ಆತ್ಮೀಯ ಗೆಳೆಯರು ರೋಗಿಯಪೋಷಕರೊಂದಿಗೆ ಕೂಡಿಕೊಂಡು ಸಕಾರಾತ್ಮಕ ಸಲಹೆಗಳನ್ನು ನೀಡಿದರೆಆದರಿಂದಲೂ ಕಾಯಿಲೆಯಿಂದ ಹೊರಬರಲು ಸಾಧ್ಯ.

ಕೆಲವರಿಗೆ ಈ ಕಾಯಿಲೆಯೊಂದಿಗೆ, ಖಿನ್ನತೆ, ಅತಿಯಾದ ಆತಂಕದ ಕಾಯಿಲೆ ಮತ್ತು ಬುದ್ಧಿಭ್ರಮಣೆ ಇದ್ದಾಗ ಅಂಥವರಿಗೆ ಅವಶ್ಯವಾದ ಔಷಧೋಪಚಾರಗಳು ಅವಶ್ಯ.

‘ಬೆಕ್ಕ’ಸ ಬೆರಗಾಗಿಸಿದ ಬೆಕ್ಕಿನ ಪ್ರಕರಣ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



‘ಪೆಟ್ ಆ್ಯನಿಮಲ್’ಗಳ ಪೈಕಿ ಜನಪ್ರಿಯ ಪ್ರಾಣಿ ಯಾವುದು ಎಂದು ಯಾರಾದರೂ ಕೇಳಿದರೆ, ‘ಬೆಕ್ಕು’ ಎಂದು ಹಿಂದೆ ಮುಂದೆ ನೋಡದೇ ಹೇಳಬಹುದು. ಆದರೆ ನೀವಿದನ್ನು ಎಲ್ಲೇ, ಯಾರದೇ ಮನೆಯಲ್ಲಿ ನಿಂತು ಹೇಳಿದರೂ ಕೂಡಾ, ಇದನ್ನು ಹೇಳಿ ಮುಗಿಸುವುದರೊಳಗೆ ಒಂದಿಲ್ಲೊಂದು ಬೆಕ್ಕು ನಿಮ್ಮ ಹಿಂದೆ ಹಿಂದೆಯೇ ಬಂದು, ನಿಮ್ಮ ಕಾಲಿಗೆ ದೇಹವನ್ನು ಉಜ್ಜುತ್ತಾ, ಕಾಲು ಕಾಲಿಗೆ ಅಡ್ಡ ಬರುತ್ತಾ, ಹೇಗೋ ನಿಮ್ಮ ಗಮನವನ್ನು ಸೆಳೆಯಲು, ನಿಮಗೆ ಹತ್ತಿರವಾಗಲು ಇನ್ನಿಲ್ಲದಂತೆ ಪ್ರಯತ್ನಿಸುತ್ತದೆ. ಕೆಲವು ಮನೆಗಳಲ್ಲಂತೂ ಲಿವಿಂಗ್ ರೂಮ್‌ನಲ್ಲಿ ಒಂದು, ಬೆಡ್ ರೂಮ್‌ನಲ್ಲಿ ಇನ್ನೊಂದು, ಕಿಚನ್‌ನಲ್ಲಿ ಮತ್ತೆರಡು, ಮನೆಯ ಹೊರ ಆವರಣದಲ್ಲಿ ಮೂರ್ನಾಲ್ಕು ಎಲ್ಲವೂ ಒಟ್ಟಾಗಿ ಇದೇನು ಮನೆಯೋ ಅಥವಾ ಬೆಕ್ಕುಗಳ ‘ಬಿಗ್‌ಬಾಸ್’ ಮನೆಯೋ ಎಂಬ ಪ್ರಶ್ನೆ ಮೂಡದೇ ಇರಲಾರದು. ಏನೇ ಆದರೂ ಅದೆಷ್ಟೋ ಜನರಿಗೆ ಬೆಕ್ಕು ಎಂದರೆ ಮುದ್ದು ಹಾಗೂ ಅದನ್ನು ತಮ್ಮ ಮನೆಯ ಪಟ್ಟದ ಅರಸಿಯೋ ಎಂಬಂತೆ ಅತೀವ ಜತನ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಈ ಕಾರಣದಿಂದಲೇ ಮಿಕ್ಕೆಲ್ಲಾ ಪ್ರಾಣಿಗಳಿಗಿಂತಲೂ ಬೆಕ್ಕಿಗೇ ಹೆಚ್ಚಿನ ಪ್ರಾಶಸ್ತ್ಯ.

ಇಂತಿಪ್ಪ ಸರ್ವರ ನೆಚ್ಚಿನ ಪೆಟ್ ಆ್ಯನಿಮಲ್ ಎನಿಸಿಕೊಂಡ ಬೆಕ್ಕು ಎರಡು ಮನೆಯವರ ನಡುವೆ ಇನ್ನೇನು ಭಾರೀ ಪೆಟ್ಟು ಏರ್ಪಟ್ಟಿತೇನೋ ಎಂಬಂಥ ಸನ್ನಿವೇಶವೊಂದು ನಿರ್ಮಾಣವಾಗಲು ಕಾರಣವಾಯಿತು. ಈ ಪ್ರಕರಣದ ಹಿನ್ನೆಲೆಯಲ್ಲಿ ಆ ಎರಡೂ ಮನೆಯವರು ಹಿಡಿದ ಪಟ್ಟು, ಫಟಾಫಟ್ ಎಂದು ಅದು ಸುಖಾಂತ್ಯ ಕಾಣದೇ ಕೊನೆಗೆ ಅದು ಠಾಣೆಯ ಮೆಟ್ಟಿಲು ಏರಿದ್ದು, ನಂತರ ಅದು ಮಾಧ್ಯಮಗಳಲ್ಲಿ ವರದಿ ಆಗಿದ್ದು ಎಲ್ಲವನ್ನೂ ಗಮನಿಸುತ್ತಿದ್ದರೆ ‘ಅಯ್ಯೋ ಬೆಕ್ಕೇ ಇದೇನು ನಿನ್ನ ಸೊಕ್ಕೇ?’ ಎಂದು ಕೇಳದೇ ಇರಲಾಗದು. ಪೆಟ್ ಆ್ಯನಿಮಲ್ ಆಗಿದ್ದಾಗ ಇಷ್ಟೆಲ್ಲಾ ಜನಪ್ರಿಯತೆ, ಸುದ್ದಿ, ಮೀಡಿಯಾ ಕವರೇಜ್ ಗಳಿಸಲು ಎಂದೂ ಶಕ್ತವಾಗದ ಬೆಕ್ಕು, ಈ ‘ಪೆಟ್ಟು–ಪಟ್ಟು’ ಪ್ರಕರಣದಿಂದಾಗಿ ದಿನಬೆಳಗಾಗುವುದರೊಳಗೆ ಎಲ್ಲಾ ಮಾಧ್ಯಮಗಳಲ್ಲೂ ಮೆಲ್ಲಗೆ ತನ್ನ ಮೀಸೆಯನ್ನು ತುರುಕಿ, ಒಂದು ಅಭಿಮಾನದ(ಅಥವಾ ಅಭಿಮಾನ ಭಂಗದ?) ನಗುವನ್ನು ಬೀರುತ್ತಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೀಗೆ ಬೆಕ್ಕುಗಳ ಸಮಾಚಾರವನ್ನು ಮಾಧ್ಯಮಗಳಲ್ಲಿ ಓದಿದ ಅದೆಷ್ಟೋ ಜನರು ಈ ಪ್ರಕರಣ, ಅದರ ಸ್ವರೂಪ, ಪರಿಣಾಮಗಳನ್ನು ಗಮನಿಸಿ ಒಮ್ಮೆ ಬೆಕ್ಕಸಬೆರಗಾಗಿದ್ದಂತೂ ಸುಳ್ಳಲ್ಲ. ಮೇಲಾಗಿ ಇದು ಬೆಕ್ಕಿಗೆ ಸಂಬಂಧಿಸಿದ ವಿರಳಾತಿವಿರಳ ಪ್ರಕರಣವೂ ಆಗಿರುವುದರಿಂದ ಯಾರೇ ಆದರೂ ‘ಬೆಕ್ಕ’ಸಬೆರಗಾಗಲೇಬೇಕಲ್ಲವೇ?



ಅಷ್ಟಕ್ಕೂ ಆ ಪ್ರಕರಣ ಏನದು ಎಂದು ಕೇಳುತ್ತಿರುವಿರಾ? ಬೆಕ್ಕು ಒಂದು ಮನೆಯಲ್ಲಿ ಮರಿ ಹಾಕಿದೆ. ಆದರೆ ಆ ಮನೆಯವರು ಮರಿಗಳನ್ನು ಆದರಿಸಿ, ಲಾಲನೆ–ಪಾಲನೆ ಮಾಡಿ ಇವುಗಳೆಲ್ಲ ನಮ್ಮವು, ನಮ್ಮವು ಎಂದು ವಿಶಾಲ ಮನೋಭಾವ ತೋರುವ ಬದಲಿಗೆ, ಆ ಮರಿಗಳ ತಂದೆಯ ತಲಾಶ್‌ಗೆ ಇಳಿದಿದ್ದಾರೆ. ಅಂವ(ಬೆಕ್ಕಿನ ತಂದೆ) ಯಾರವ ಯಾರವ ಎಂದು ಹುಡುಕಿ, ಎಲ್ಲಾ ನೆಲೆಯಲ್ಲೂ ಅವಲೋಕಿಸಿ ಕೊನೆಗೆ ಪಕ್ಕದ ಮನೆಯ ಬೆಕ್ಕೇ ಈ ಮರಿಗಳ ಜನ್ಮದಾತ ಎಂಬ ನಿಲುವಿಗೆ ಬಂದಿದ್ದಾರೆ. ಅಷ್ಟೇ ಅಲ್ಲದೇ ಈ ಮರಿಗಳ ಹುಟ್ಟಿಗೆ ಕಾರಣವಾದ ಬೆಕ್ಕು ನಿಮ್ಮ ಮನೆಯಲ್ಲೇ ಇರುವ ಕಾರಣದಿಂದ ಈ ಮರಿಗಳು ನಿಮ್ಮ ಮನೆಗೇ ಸೇರಿದ್ದು, ನೀವೇ ನೋಡಿಕೊಳ್ಳಬೇಕು, ಇಲ್ಲವಾದರೆ ನಿಮ್ಮ ಹುಟ್ಟಡಗಿಸಿಬಿಡುವೆ ಎಂದು ಬೆದರಿಕೆ ಹಾಕಿ, ಮರಿಗಳನ್ನು ಗೃಹಾಂತರ ಮಾಡಿಸಿದ್ದಾರೆ. ಅಷ್ಟಕ್ಕೇ ಸುಮ್ಮನಾಗದ ಆ ಮನೆಯವರು, ‘ಮರಿಗಳ ಜನ್ಮದಾತ ನಮ್ಮ ಮನೆಯ ಬೆಕ್ಕೇ ಎನ್ನುವುದಕ್ಕೆ ನಿಮ್ಮಲ್ಲೇನಿದೆ ಸಾಕ್ಷಿ?’ ಎಂದು ಅವರು ತಿರುಗಿಬಿದ್ದಿದ್ದಾರೆ. ಬೆಕ್ಕುಗಳು ಅಲ್ಲೆಲ್ಲೋ ಆಡಿಕೊಂಡು ಆರಾಮಾಗಿ ಇದ್ದರೆ ಈ ಎರಡೂ ಮನೆಯವರು ಮಾತಿಗೆ ಮಾತು ಬೆಳೆಸಿ, ಜಗಳದ ಜಳದಲ್ಲಿ ಬೆಂದು, ಹೊಡೆದಾಡಿಕೊಳ್ಳುವ ಮಟ್ಟಕ್ಕೆ ತಲುಪಿ ಕೊನೆಗೆ ಠಾಣೆಯ ಮೆಟ್ಟಿಲೇರಿದ್ದಾರೆ. ಪೊಲೀಸ್ ಮಧ್ಯಸ್ಥಿಕೆಯಲ್ಲಿ ನಾಲ್ಕು ಮರಿಗಳ ಪೈಕಿ ಎರಡನ್ನು ತಾಯಿ ಬೆಕ್ಕಿನ ಮನೆಯ ಕಡೆಯವರಿಗೂ, ಇನ್ನೆರಡನ್ನು ತಂದೆ ಬೆಕ್ಕಿನ ಮನೆಯ ಕಡೆಯವರಿಗೂ ಹಂಚುವ ಮೂಲಕ ಬೆಕ್ಕು ಮರಿ ಹಾಕಿದ ಪ್ರಕರಣ ಸುಖಾಂತ್ಯ ಕಂಡಿತಷ್ಟೇ!

ಇನ್ನು ಪ್ರಾಣಿ–ಪಕ್ಷಿಗಳ ಕುರಿತಂತೆ ತೋರ್ಪಡಿಕೆಯ ಕಾಳಜಿ ತೋರುವ, ಅದಕ್ಕೆಂದೇ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಡುವವರ ಗಮನಕ್ಕೇನಾದರೂ ಈ ಪ್ರಕರಣ ಬಂದು, ಇವರೂ ಇದರಲ್ಲಿ ಒಂದು ಸ್ಟ್ಯಾಂಡ್ ತೆಗೆದುಕೊಳ್ಳುವುದು ಎಂದೇನಾದರೂ ನಿರ್ಧಾರ ಮಾಡಿ ಮುಂದೆ ಬಂದರೆ, ಆಗ ‘ಇಲ್ಲ ಮರಿ ಯಾರಿಗೆ ಸೇರಬೇಕು ಎನ್ನುವುದನ್ನು, ಖುದ್ದು ಆ ಮರಿಗಳನ್ನೇ ಕೇಳಿ ನಿರ್ಧಾರಕ್ಕೆ ಬರಬೇಕಿತ್ತು’ ಎಂದು ಹೊಸತೊಂದು ಹಕ್ಕೊತ್ತಾಯ ಮಾಡುತ್ತಿದ್ದರೋ ಏನೋ. ಆದರೆ ಇದಾವುದರ ಪರಿವೆಯೇ ಇಲ್ಲದ ಸಹೋದರ/ಸಹೋದರಿಯರಂತಿರುವ ಆ ಪುಟ್ಟ ಪುಟ್ಟ ಮರಿಗಳು ಎರಡೂ ಮನೆಗಳ ನಡುವೆ ಹಂಚಿ ಹೋದರೂ, ಒಂದೇ ಮನೆಯವರಂತೆ ಎರಡೂ ಕಡೆಗಳಲ್ಲೂ ಆಡಿಕೊಂಡು ನೆಮ್ಮದಿಯಾಗಿ ಇರಬಹುದು.

ಈ ಪ್ರಕರಣ ಬಟಾಬಯಲಾಗಿ, “ಅಲ್ಲಾ ಯಾರಾದರೂ ಇಂಥ ಸಣ್ಣ ಪುಟ್ಟ ವಿಷಯಕ್ಕೆಲ್ಲಾ ಹೀಗೆ ಕೈ ಕೈ ಮಿಲಾಯಿಸುವ ಮಟ್ಟಕ್ಕೆ ಇಳಿಯುತ್ತಾರೆಯೇ?” ಎಂದು ಎಲ್ಲರೂ ಹೇಳುವಾಗ, ಅದನ್ನು ಕೇಳಿಸಿಕೊಂಡು ಆ ಮನೆಯವರು ಕೈ ಕೈ ಹಿಸುಕಿಕೊಳ್ಳಬೇಕಷ್ಟೇ. ಏನೋ ಕಹಿ ಗಳಿಗೆಯಲ್ಲಿ ಹೀಗೆಲ್ಲ ಆಯಿತು ಎಂದು ಅದೆಷ್ಟೇ ಹೇಳಿ ತಣ್ಣಗಾಗಿಸುವ ಪ್ರಯತ್ನ ಮಾಡಿದರೂ ಕೂಡಾ ಆ ಮನೆಯವರ ನೆಮ್ಮದಿಯಂತೂ ಒಂದು ಮಟ್ಟಿಗೆ ಹಾಳು ಎನ್ನುವುದರಲ್ಲಿ ಎರಡು ಮಾತಿಲ್ಲ.

ಈ ಸಾಕು ಪ್ರಾಣಿ ಮರಿಹಾಕಿದ ಪ್ರಕರಣದ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿದ ಪೊಲೀಸರ ಪರಿಸ್ಥಿತಿ, ‘ಅಯ್ಯಯ್ಯೋ.. ಸಾಕಪ್ಪಾ ಸಾಕು ಈ ಸಹವಾಸ...’ ಎನ್ನದೇ ಬೇರೆ ವಿಧಿಯಿಲ್ಲ. ಒಂದಂತೂ ನಿಜ ಇದೂ ಕೂಡಾ ಮರೆಯಲಾರದ ಅಲ್ಲಲ್ಲ ‘ಮರಿ’ಯಲಾರದ ಪ್ರಸಂಗವೇ ಸರಿ. ಕೊನೆಗೂ ಆ ಎರಡೂ ಮನೆಯವರು ರಾಜಿ ಪಂಚಾಯಿತಿಕೆಗೆ ಒಪ್ಪಿದ್ದಕ್ಕೆ ಬಚಾವ್ ಇಲ್ಲದೇ ಹೋದರೆ, ಬೆಕ್ಕಿನ ಮರಿಗಳು ಹಾಗೂ ಬೆಕ್ಕುಗಳ ಡಿಎನ್‌ಎ ಪರೀಕ್ಷೆ ನಡೆಸಿಯೇ ನಿರ್ಧಾರ ಮಾಡಬೇಕಾಗಿತ್ತೇನೋ. ತನ್ಮೂಲಕ ಇದೊಂದು ಇನ್ನೂ ಅತೀ ವಿಶೇಷ ಪ್ರಸಂಗ ಎನಿಸಿ, ಇತಿಹಾಸದ ಪುಟಗಳಲ್ಲಿ ದಾಖಲಾಗುವ ಸಾಧ್ಯತೆ ಖಂಡಿತ ಇತ್ತು. ಸದ್ಯ, ಹಾಗಾಗಲಿಲ್ಲ! ಇದು ಮಾದರಿ ಪ್ರಕರಣವಾಗಿ ಬೇರೆಡೆಗಳಲ್ಲೂ ಮರುಕಳಿಸಿದರೆ, ಹಾದಿ–ಬೀದಿಗಳಲ್ಲಿ ಪುಟ್ಟ ಪುಟ್ಟ ಬೆಕ್ಕಿನ ಮರಿಗಳನ್ನು ಬೇಕಾಬಿಟ್ಟಿ ಬಿಟ್ಟು ಹೋಗುವವರು, ‘ಬೆಕ್ಕಿನ ಮರಿ ಯಾರಿಗೆ ಸೇರಿದ್ದು?’ ಎಂಬ ಸಮಸ್ಯೆಯ ಇತ್ಯರ್ಥಕ್ಕೆ ನಿಲ್ಲಬೇಕಾದ ಪರಿಸ್ಥಿತಿ ಉದ್ಭವಿಸುವುದು ಜೋಕೆ!

ಇನ್ನು ಪ್ರತಿನಿತ್ಯ ರಾತ್ರಿಯಾಗುತ್ತಿದ್ದಂತೆ ಎಲ್ಲಾ ಅಕ್ಕಪಕ್ಕದ ಬೆಕ್ಕುಗಳೂ ಒಂದೆಡೆ ಸೇರಿ ತಮ್ಮ ನಿತ್ಯದ ಮೀಟಿಂಗ್ ನಡೆಯುತ್ತಿದೆಯೋ ಎಂಬಂತೆ ತರಹೇವಾರಿ ಶಬ್ದಗಳನ್ನು ಹೊರಡಿಸಲು ಶುರುವಿಟ್ಟುಕೊಳ್ಳುತ್ತವೆ. ಇನ್ನು ತಮ್ಮ ತಮ್ಮ ಬೆಕ್ಕಿನ ಮಾಲಕರುಗಳು ಈ ವಿಷಯದಲ್ಲಿ ಕೊಂಚ ಜಾಗ್ರತೆ ವಹಿಸದೇ ಹೋದರೆ ಈ ಪ್ರಕರಣದಂಥದ್ದೇ ಅಪವಾದ ಬೆಕ್ಕಿನ ಕಾರಣಕ್ಕೆ ಆ ಮನೆಯವರ ಮೇಲೆಯೂ ಬರಬಹುದೆನಿಸುತ್ತದೆ. ಇದೆಲ್ಲ ತಲೆಬಿಸಿಯೇ ಬೇಡವೆಂದು, ಖುದ್ದು ಸರ್ಕಾರವೇ ಈಗಾಗಲೇ ಅಲ್ಲಲ್ಲಿ ಹೇಳುತ್ತಿರುವಂತೆ ಪ್ರಾಣಿಗಳ ಸಂತಾನಹರಣ ಚಿಕಿತ್ಸೆ ಬೆಕ್ಕುಗಳ ಮೇಲೂ ಪ್ರಯೋಗಿಸಲು ಮುಂದಾಗುವುದೇ ಲೇಸು ಎಂದು ಕೆಲವರು ಅಂದುಕೊಳ್ಳಬಹುದು. ಅಯ್ಯೋ ನಮ್ಮಷ್ಟಕ್ಕೆ ನಾವು ಪರಮ ನಿಶ್ಚಿಂತೆಯಿಂದ ನಮ್ಮ ಸಂತಾನವನ್ನು ಬೆಳೆಸುತ್ತಿದ್ದರೆ, ಈ ಮಾನವರು ಅದಕ್ಕೂ ಕಲ್ಲು ಹಾಕುತ್ತಿದ್ದಾರಲ್ಲ ಎಂದು ಆ ಬೆಕ್ಕುಗಳೇ ಹಿಡಿಶಾಪ ಹಾಕಿ ಗುರ್ರೆಂದು ಗುಟುರು ಹಾಕಲಿಕ್ಕೂ ಸಾಕು.

ಬೆಕ್ಕುಗಳ ಕುರಿತಾದ ಈ ಪ್ರಕರಣವು, ಮನುಷ್ಯರು ಪರಸ್ಪರ ಮಾರಾಮಾರಿಗೆ ಇಳಿಯುವಷ್ಟೂ ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ ಎಂದರೆ ಬೆಕ್ಕುಗಳನ್ನು ‘ಮಾರ್–ಜಾಲ’ ಎಂದು ಕರೆಯುವುದು ಈ ಕಾರಣಕ್ಕೂ ಅತ್ಯಂತ ಸೂಕ್ತವಾಗಿದೆ ಎಂದು ಹೇಳಬಹುದು. ಇನ್ನು ಇಲ್ಲಿ ನಡೆದ ನ್ಯಾಯ ಪಂಚಾಯಿತಿಕೆ, ಅದರ ಪ್ರಕ್ರಿಯೆ ಇತ್ಯಾದಿಗಳನ್ನು ಒಟ್ಟಾರೆಯಾಗಿ ‘ಮಾರ್ಜಾಲ ನ್ಯಾಯ’ ಎಂದೂ ಹೇಳಬಹುದು. ‘ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ’ ಎಂದಿರುವುದು ಈ ಪ್ರಕರಣವನ್ನು ನೋಡಿದ ಮೇಲೆ ‘ಬೆಕ್ಕಿಗೆ ಚೆಲ್ಲಾಟ, ಮನುಷ್ಯರಿಗೆ ಪ್ರಾಣ ಸಂಕಟ’ ಎಂದು ಬದಲಾಯಿಸಬಹುದು. ಬೆಕ್ಕು ಸನ್ಯಾಸಿಯಾದ ಕತೆ ಬಹಳ ಹಿಂದಿನಿಂದಲೂ ತುಂಬಾ ಜನಪ್ರಿಯವಾಗಿತ್ತು, ಆದರೆ ಈ ಪ್ರಕರಣದಿಂದ ಬೆಕ್ಕು ಸಂಸಾರಿಯಾದ ಕತೆಯೂ ಹಾಗೆಯೇ ಜನಪ್ರಿಯವಾದಂತಾಯಿತು. ಏನಂತೀರಿ?!

ಓವರ್‌ಡೋಸ್: ‘ಬೆಕ್ಕಿಗೆ ಗಂಟೆ ಕಟ್ಟುವವರಾರು?’ ಎಂದು ಕೇಳಿದ್ದಕ್ಕೆ ಅದ್ಯಾರೋ ‘ಪೊಲೀಸರು!’ ಅಂದರಂತೆ.

ಏ.22ಕ್ಕೆ ಕದನ ವಿರಾಮ ಅಂತ್ಯ
ಶಾಂತಿ ಮಾತುಕತೆಗೆ ಪಾಕ್ ಸಕಲ ಸಿದ್ಧತೆ

• **ಇಸ್ಲಾಮಾಬಾದ್:** ಅಮೆರಿಕ-ಇರಾನ್ ನಡುವಿನ ಎರಡನೇ ಹಂತದ ಕದನ ವಿರಾಮ ಮಾತುಕತೆ ಪಾಕಿಸ್ತಾನದಲ್ಲಿ ಸೋಮವಾರ ನಡೆಯಲಿದ್ದು, ವಿದೇಶಿ ಪ್ರತಿನಿಧಿಗಳ ಆಗಮನದ ಹಿನ್ನೆಲೆಯಲ್ಲಿ ಪಾಕಿಸ್ತಾನ ಕಠಿಣ ಭದ್ರತಾ ಕ್ರಮಗಳನ್ನು ಜಾರಿಗೊಳಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಿಯೋಗಗಳು 45 ವರ್ಷಗಳ ಬಳಿಕ ಮೊದಲ ಬಾರಿಗೆ ನೇರ ಮಾತುಕತೆಗಳನ್ನು ನಡೆಸಿದ್ದು, ತಮ್ಮ ನಡುವಿನ ಸಂಘರ್ಷ ಅಂತ್ಯಗೊಳಿಸುವ ಉದ್ದೇಶ ಹೊಂದಿದ್ದವು. ಆದರೆ ಏ.11 ಮತ್ತು 12ರಂದು ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡವು. ಯುದ್ಧ ಅಂತ್ಯಗೊಳಿಸುವ ಒಪ್ಪಂದಕ್ಕಾಗಿ ದ್ವಿತೀಯ ಹಂತದ ಮಾತುಕತೆಗಳನ್ನು ಇಲ್ಲಿ ನಡೆಸಲು ಪಾಕ್ ತನ್ನ ರಾಜತಾಂತ್ರಿಕ ಪ್ರಯತ್ನಗಳನ್ನು ಪುನರಾರಂಭಿಸಿದೆ. ದ್ವಿತೀಯ ಹಂತದ ಚರ್ಚೆ ನಡೆಸಲು ಎರಡೂ ರಾಷ್ಟ್ರಗಳ ನಿಯೋಗಗಳ ಮನವೊಲಿಸುವಲ್ಲಿ ಪಾಕ್ ಯಶಸ್ವಿಯಾಗಿದೆ.

ರಾವಲ್ಪಿಂಡಿ ಸಂಪೂರ್ಣ ಬಂದೋಬಸ್ತ್!: ಪೊಲೀಸ್ ವಕ್ತಾರರ ಪ್ರಕಾರ, ವಿದೇಶಿ ಪ್ರತಿನಿಧಿಗಳ ಸಂಚಾರದ ಹಿನ್ನೆಲೆ ಅಸಾಮಾನ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾವಲ್ಪಿಂಡಿಯಲ್ಲಿ 10,000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, 600ಕ್ಕೂ ಹೆಚ್ಚು ತಪಾಸಣಾ ಕಂದಕಗಳನ್ನು ಸ್ಥಾಪಿಸಲಾಗಿದೆ. ಇಸ್ಲಾಮಾಬಾದ್‌ನಲ್ಲೂ ಇದೇ ರೀತಿಯ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಜೊತೆಗೆ ಒಪ್ಪಂದಕ್ಕೆ ಸಹಿ ಮಾಡಲು ಪಾಕಿಸ್ತಾನಕ್ಕೆ ಭೇಟಿ ನೀಡುವ ಸಾಧ್ಯತೆ ಹಿನ್ನೆಲೆ, ಅಧಿಕಾರಿಗಳು ಭದ್ರತಾ ಕ್ರಮಗಳನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಏ.22ರಂದು ಮುಕ್ತಾಯಗೊಳ್ಳಲಿದೆ.

ಅಮೆರಿಕದ ಅಧಿಕಾರ ಪ್ರಶ್ನಿಸಿದ ಇರಾನ್

• **ಟೆಹ್ರಾನ್:** ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ನಿಯಂತ್ರಿಸುವ ಅಮೆರಿಕದ ಅಧಿಕಾರವನ್ನು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಭಾನುವಾರ ಸಾರ್ವಜನಿಕ ಭಾಷಣವೊಂದರಲ್ಲಿ ಪ್ರಶ್ನಿಸಿದ್ದಾರೆ. ಯಾವುದೇ ಅಪರಾಧದ ದಾಖಲೆಯಿಲ್ಲದೆ ಇರಾನ್ ತನ್ನ ಪರಮಾಣು ಹಕ್ಕುಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಟೀಕಿಸಿದ ಅವರು, ಇರಾನ್ ತನ್ನ ಸ್ವಂತ ತಂತ್ರಜ್ಞಾನ ಪಡೆಯುವುದನ್ನು ನಿರಾಕರಿಸಲು ಯುಎಸ್‌ಗೆ ಯಾವುದೇ ಅಧಿಕಾರವಿಲ್ಲ ಎಂದರು.ಪರಮಾಣು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳ ಹೊರತಾಗಿಯೂ ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಮಾತುಕತೆಗಳು ಮುಂದುವರಿಯುತ್ತಿರುವಾಗ ಈ ಹೇಳಿಕೆಗಳು ಬಂದಿವೆ. ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಶನಿವಾರ ತಡರಾತ್ರಿ ಮಾತುಕತೆಯಲ್ಲಿ ಕೆಲವು ಪ್ರಗತಿಯಾಗಿದೆ ಎಂದಿದ್ದಾರೆ. ಆದರೆ ಪ್ರಮುಖ ಭಿನ್ನಾಭಿಪ್ರಾಯಗಳು ಮತ್ತು ಮೂಲಭೂತ ಅಂತರಗಳು ಉಳಿದಿವೆ ಎಂದಿದ್ದಾರೆ. ಯುಎಸ್ ಮತ್ತು ಇಸ್ರೇಲಿ ದಾಳಿಗಳು ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಪರಮಾಣು ಪ್ರಸರಣ ರಹಿತ ಒಪ್ಪಂದವನ್ನು ಉಲ್ಲಂಘಿಸುತ್ತವೆ ಎಂದು ಇರಾನ್ ಪ್ರತಿಪಾದಿಸುತ್ತಿದೆ.

ಹತ್ಯೆಗೀಡಾಗಿ ತಿಂಗಳಾದರೂ ನಡೆದಿಲ್ಲ ಖಮೇನಿ ದಫನ್!

• **ಟೆಹ್ರಾನ್:** ಅಮೆರಿಕ-ಇಸ್ರೇಲ್ ನಡೆಸಿದ್ದ ಜಂಟಿ ವೈಮಾನಿಕ ದಾಳಿಗೆ ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾಗಿ ತಿಂಗಳಾದರೂ ಅಂತ್ಯಕ್ರಿಯೆ ನಡೆದಿಲ್ಲ. ಬೃಹತ್ ಸಾರ್ವಜನಿಕ ಅಂತ್ಯಸಂಸ್ಕಾರ ನಡೆಸಲು ಭದ್ರತಾ ಅಪಾಯ ಎದುರಾಗುವ ಸಾಧ್ಯತೆ ಇರುವ ಕಾರಣ ಖಮೇನಿ ಅಂತ್ಯಕ್ರಿಯೆಗಾಗಿ ಅಧಿಕಾರಿಗಳು ಇನ್ನೂ ಪರಿಶೀಲನೆ ನಡೆಸುತ್ತಿದ್ದಾರೆ. ಫೆ.28ರಂದು ಟೆಹ್ರಾನ್‌ನಲ್ಲಿರುವ ಖಮೇನಿ ನಿವಾಸವನ್ನೇ ಗುರಿಯಾಗಿಸಿ ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಗೆ ಬಲಿಯಾಗಿದ್ದರು. ಖಮೇನಿ ಸಾವು ಇನ್ನಷ್ಟು ದೊಡ್ಡ ಮಟ್ಟದ ಸಂಘರ್ಷಕ್ಕೆ ಕಾರಣವಾಯಿತು. ಆದರೆ ರೂಢಿಯಂತೆ ಅಂತ್ಯಕ್ರಿಯೆ ನಡೆದಿಲ್ಲ; ಅವರ ದೇಹವನ್ನು ಇನ್ನೂ ಸಮಾಧಿ ಮಾಡಲಾಗಿಲ್ಲ.ಮಾ.4ರಿಂದ ಮೂರು ದಿನಗಳ ರಾಜ್ಯ ಅಂತ್ಯಕ್ರಿಯೆ ನಡೆಸಲು ಇರಾನ್ ಯೋಜನೆ ಹಾಕಿಕೊಂಡಿತ್ತು. ಆದರೆ ಅಮೆರಿಕಾ-ಇಸ್ರೇಲ್‌ನ ಭಾರೀ ಬಾಂಬ್ ದಾಳಿಗಳ ನಡುವೆ ಆ ಯೋಜನೆ ಕೈಬಿಡಲಾಯಿತು. ಬಳಿಕ ಅಧಿಕಾರಿಗಳು ಅಭೂತಪೂರ್ವ ಜನಸಾಗರ ನಿರೀಕ್ಷೆಯೇ ವಿಳಂಬಕ್ಕೆ ಕಾರಣವೆಂದು ಹೇಳಿದರು. ಖಮೇನಿ ಹುಟ್ಟೂರು, 50 ಲಕ್ಷ ಜನಸಂಖ್ಯೆ ಮತ್ತು ಶಿಯಾ ಇಸ್ಲಾಂನ ಅತ್ಯಂತ ಪವಿತ್ರ ಇಮಾಮ್ ರೆಜಾ ಮಸೀದಿ ಇರುವ ಮಶದ್ ನಗರವನ್ನು ಖಮೇನಿ ಅಂತ್ಯಕ್ರಿಯೆಗೆ ಪರಿಗಣಿಸುವ ಸಾಧ್ಯತೆಯಿದೆ.

2026ರಲ್ಲಿ ಮಂಡಿಸಲಾದ ಮಹಿಳಾ ಮೀಸಲಾತಿ ಸಂಬಂಧಿತ ಮಸೂದೆಗಳು ಲೋಕಸಭೆಯಲ್ಲಿ ಶೇ.33 ಮಹಿಳಾ ಪ್ರಾತಿನಿಧ್ಯವನ್ನು ಖಚಿತಪಡಿಸುವ ಮಹದುದ್ದೇಶ ಹೊಂದಿದ್ದವು. ಕ್ಷೇತ್ರ ಮರುವಿಂಗಡಣೆ ಅವಶ್ಯಕತೆಯನ್ನು ಸರಳಗೊಳಿಸಿ, 2029ರ ಸಾರ್ವತ್ರಿಕ ಚುನಾವಣೆಯಿಂದಲೇ ಪ್ರಯೋಜನ ಪಡೆಯುವಂತೆ ರೂಪಿಸಲಾಗಿದೆ. ಸ್ಥಾನಗಳ ಹೆಚ್ಚಳ ಮತ್ತು ಸಮಾನ ಪ್ರಾತಿನಿಧ್ಯಕ್ಕೆ ಒತ್ತು ನೀಡಲಾಗಿತ್ತು.

ಮಹಿಳಾ ಮೀಸಲಾತಿ ಮಸೂದೆ ಅವಶ್ಯಕತೆ

ಕ್ರ.ಸಂ.	ರಾಜ್ಯ	ಒಟ್ಟು ಸ್ಥಾನಗಳು 543	ಪ್ರಸ್ತುತ ಸ್ಥಿತಿ (543ರ ಶೇಕಡಾವಾರು) 50% ಹೆಚ್ಚಳ (ಅಂದಾಜು)	ಪರಿಷ್ಕೃತ ಸ್ಥಿತಿ (816ರ %)
ಕರ್ನಾಟಕ	28	5.15%	42	5.14%
ಆಂಧ್ರಪ್ರದೇಶ	25	4.60%	38	4.65%
ತೆಲಂಗಾಣ	17	3.13%	26	3.18%
ತಮಿಳುನಾಡು	39	7.18%	59	7.23%
ಕೇರಳ	20	3.68%	30	3.67%
ಒಟ್ಟು	129	23.76%	195	23.87%

• (543 ಸ್ಥಾನಗಳಿಂದ 816 ಸ್ಥಾನಗಳಿಗೆ - ಶೇ.50 ಹೆಚ್ಚಳದ ಮಾದರಿ)





ಸುದ್ದಿ ಸಮಗ್ರ

1 2026ರ ಏ.16ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಯಾವ ಮಸೂದೆಗಳನ್ನು ಮಂಡಿಸಿತು?
2026ರ ಏ.16ರಂದು, ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮೂರು ಪ್ರಮುಖ ಮಸೂದೆಗಳನ್ನು ಮಂಡಿಸಿತು:
- **ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026**
- **ಕ್ಷೇತ್ರ ಮರುವಿಂಗಡಣೆ (Delimitation) ಮಸೂದೆ, 2026**
- **ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆಗಳ (ತಿದ್ದುಪಡಿ) ಮಸೂದೆ, 2026**

2 ಈ ಮೂರು ಮಸೂದೆಗಳನ್ನು ಇದೇ ಸಮಯದಲ್ಲಿ ಪರಿಚಯಿಸಲು ಕಾರಣ?
ನಾರಿ ಶಕ್ತಿ ವಂದನಾ ಅಧಿನಿಯಮದ ಪ್ರಕಾರ, ಮಹಿಳಾ ಮೀಸಲಾತಿಯನ್ನು 2026ರ ನಂತರ ನಡೆಯುವ ಜನಗಣತಿಯ ನಂತರದ ಕ್ಷೇತ್ರ ಮರುವಿಂಗಡಣೆಯ ಆಧಾರದ ಮೇಲೆ ಜಾರಿಗೆ ತರಬೇಕಾಗುತ್ತದೆ. ಒಂದು ವೇಳೆ ಸರ್ಕಾರವು ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆಗಾಗಿ ಕಾಯುತ್ತಿದ್ದರೆ, ಈ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ 2029ರ ಸಾರ್ವತ್ರಿಕ ಚುನಾವಣೆಯಲ್ಲಿಯೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ, ಅರ್ಧದಷ್ಟು ಜನಸಂಖ್ಯೆಗೆ ಸಕಾಲದಲ್ಲಿ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು, ಕಾಯ್ದೆಯ ಅನುಷ್ಠಾನವನ್ನು ಈ ಷರತ್ತಿನಿಂದ ಮುಕ್ತಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

3 ಈ ಮಸೂದೆಗಳು ಅಂಗೀಕಾರವಾಗಿದ್ದರೆ ಆಗುತ್ತಿದ್ದ ಪ್ರಯೋಜನಗಳೇನು?
ಈ ಮಸೂದೆಗಳು ಅನುಮೋದನೆ ಪಡೆದಿದ್ದರೆ, ಮಹಿಳೆಯರು 2029ರ ಸಾರ್ವತ್ರಿಕ ಚುನಾವಣೆಯಲ್ಲೇ ಲೋಕಸಭೆಯಲ್ಲಿ ಶೇ.33ರಷ್ಟು ಮೀಸಲಾತಿಯನ್ನು ಪಡೆಯಲು ಸಾಧ್ಯವಾಗುತ್ತಿತ್ತು.

4 ಕ್ಷೇತ್ರ ಮರುವಿಂಗಡಣೆಯನ್ನು ನಾರಿ ಶಕ್ತಿ ವಂದನಾ ಅಧಿನಿಯಮದೊಂದಿಗೆ ಯಾಕೆ ಜೋಡಿಸಲಾಯಿತು ಮತ್ತು ಸ್ಥಾನಗಳನ್ನು ಹೆಚ್ಚಿಸುವ ಪ್ರಸ್ತಾವನೆ ಯಾಕಿತ್ತು?
ಕ್ಷೇತ್ರ ಮರುವಿಂಗಡಣೆ ಎಂದರೆ ಒಂದು ಕ್ಷೇತ್ರದ ಗಡಿಯನ್ನು ಅಂತಿಮಗೊಳಿಸುವುದು. ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಇದು ಅತ್ಯಗತ್ಯ. ಲೋಕಸಭೆಯ ಸ್ಥಾನಗಳ ಮಿತಿಯನ್ನು 1976ರಲ್ಲಿ 550ಕ್ಕೆ ನಿಗದಿಪಡಿಸಲಾಗಿತ್ತು. 1971ರಲ್ಲಿ ಭಾರತದ ಜನಸಂಖ್ಯೆ 54 ಕೋಟಿ ಇತ್ತು. ಇಂದು ಅದು 140 ಕೋಟಿ ಆಗಿದೆ. ಆದ್ದರಿಂದ, ಲೋಕಸಭೆಯಲ್ಲಿ ಸ್ಥಾನಗಳನ್ನು 850ಕ್ಕೆ ಹೆಚ್ಚಿಸುವ ಅಗತ್ಯವಿದೆ. ಇದು ಸಂಸತ್ತಿನಲ್ಲಿ ಜನರ ನ್ಯಾಯಯುತ ಪ್ರಾತಿನಿಧ್ಯವನ್ನು ಸಕ್ರಿಯಗೊಳಿಸುತ್ತದೆ.

5 ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಮರುವಿಂಗಡಣಾ ಆಯೋಗದ ಕಾಯ್ದೆಯನ್ನು ಮಾರ್ಪಡಿಸುವ ಪ್ರಯತ್ನ ನಡೆದಿದೆಯೇ? ಇದರಿಂದ ನಡೆಯುತ್ತಿರುವ ರಾಜ್ಯ ಚುನಾವಣೆಗಳ ಮೇಲೆ ಪರಿಣಾಮ ಬೀರಲಿದೆಯೇ?
ಕ್ಷೇತ್ರ ಮರುವಿಂಗಡಣಾ ಆಯೋಗದ ಕಾಯ್ದೆಗೆ ಯಾವುದೇ ಬದಲಾವಣೆ ಪ್ರಸ್ತಾಪಿಸಿಲ್ಲ. ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಹಾಗೆಯೇ ಇರುತ್ತದೆ ಮತ್ತು ಆಯೋಗದ ಯಾವುದೇ ಶಿಫಾರಸುಗಳಿಗೆ ಸಂಸತ್ತಿನ ಅನುಮೋದನೆ ಮತ್ತು ರಾಷ್ಟ್ರಪತಿಗಳ ಒಪ್ಪಿಗೆ ಅಗತ್ಯವಿರುತ್ತದೆ. ತಮಿಳುನಾಡು ಅಥವಾ ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಏಕೆಂದರೆ 2029ರವರೆಗಿನ ಚುನಾವಣೆಗಳು ಪ್ರಸ್ತುತ ವ್ಯವಸ್ಥೆಯಡಿಯಲ್ಲೇ ನಡೆಯಲಿವೆ.

6 ಲೋಕಸಭೆಯ ಸ್ಥಾನಗಳನ್ನು 850ಕ್ಕೆ ಹೆಚ್ಚಿಸುವುದರ ಹಿಂದಿರುವ ತರ್ಕವೇನು?
ಈ ಪ್ರಸ್ತಾವನೆಯು ಅನುಪಾತದ ವಿಸ್ತರಣೆಯ ವಿಧಾನವನ್ನು ಆಧರಿಸಿದೆ. ಸ್ಥಾನಗಳಲ್ಲಿ ಏಕರೂಪದ ಶೇ.50ರಷ್ಟು ಹೆಚ್ಚಳವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅನುಪಾತವನ್ನು ಸ್ಥಿರವಾಗಿರಿಸುತ್ತದೆ. ಪ್ರಸ್ತುತ ಇರುವ 543 ಸ್ಥಾನಗಳಿಗೆ ಈ ತತ್ವವನ್ನು ಅನ್ವಯಿಸಿದರೆ ಸುಮಾರು 815 ಸ್ಥಾನಗಳಾಗುತ್ತವೆ. ಆದ್ದರಿಂದ, ಲೋಕಸಭೆಯ ಸ್ಥಾನಗಳ ಗರಿಷ್ಠ ಮಿತಿಯನ್ನು ಪ್ರಸ್ತುತ ಇರುವ 550ರಿಂದ 850ಕ್ಕೆ ಹೆಚ್ಚಿಸಲಾಯಿತು.

7 ಹೊಸ ಕ್ಷೇತ್ರ ಮರುವಿಂಗಡಣಾ ಪ್ರಸ್ತಾವನೆ ದಕ್ಷಿಣದ ಅಥವಾ ಸಣ್ಣ ರಾಜ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆಯೇ?
ಇಲ್ಲ. ಎಲ್ಲಾ ರಾಜ್ಯಗಳು ಸ್ಥಾನಗಳಲ್ಲಿ ಏಕರೂಪದ ಶೇ.50ರಷ್ಟು ಹೆಚ್ಚಳವನ್ನು ಕಾಣುತ್ತವೆ. ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯದಲ್ಲಿ ಯಾವುದೇ ಕಡಿತವಾಗುವುದಿಲ್ಲ; ಬದಲಾಗಿ, ಅವುಗಳ ಒಟ್ಟಾರೆ ಪಾಲು ಸ್ಥಿರವಾಗಿರುತ್ತದೆ. ಉದಾಹರಣೆಗೆ, ತಮಿಳುನಾಡಿನ ಸ್ಥಾನಗಳು ಅನುಪಾತಕ್ಕೆ ಅನುಗುಣವಾಗಿ ಹೆಚ್ಚಾಗುತ್ತವೆ, ಇದರಿಂದ ಯಾವುದೇ ಅನಾನುಕೂಲವಾಗುವುದಿಲ್ಲ. ಕೆಳಗಿನ ಕೋಷ್ಟಕವು ತೋರಿಸುವಂತೆ, ದಕ್ಷಿಣದ ರಾಜ್ಯಗಳು ಪ್ರಸ್ತುತ ಲೋಕಸಭೆಯಲ್ಲಿ ಶೇ.23.76ರಷ್ಟು ಸ್ಥಾನಗಳನ್ನು ಹೊಂದಿವೆ. ಈ ಮಸೂದೆಗಳ ಅಂಗೀಕಾರದ ಬಳಿಕ ಇದು ಶೇ.23.87ಕ್ಕೆ ಏರುತ್ತಿತ್ತು.

8 ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಿದ ರಾಜ್ಯಗಳು ಯಾವುದೇ ಅನಾನುಕೂಲತೆಯನ್ನು ಎದುರಿಸಲಿವೆಯೇ?
ಇಲ್ಲ, ಸ್ಥಾನಗಳ ಹೆಚ್ಚಳವನ್ನು ಎಲ್ಲಾ ರಾಜ್ಯಗಳಲ್ಲಿ ಏಕರೂಪವಾಗಿ ಪ್ರಸ್ತಾಪಿಸಿರುವುದರಿಂದ, ಅವುಗಳ ಪ್ರಮಾಣಾನುಗುಣ ಪ್ರಾತಿನಿಧ್ಯವು ಬದಲಾಗದೆ ಉಳಿಯುತ್ತದೆ ಅಥವಾ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ.

9 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮೇಲೆ ಪರಿಣಾಮ ಬೀರಲಿದೆಯೇ?
ಇಲ್ಲ, ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಪಾತದ ಮೀಸಲಾತಿಯನ್ನು ಖಚಿತಪಡಿಸುತ್ತದೆ. ಸದನದ ಸದಸ್ಯ ಬಲ ಹೆಚ್ಚಾದಂತೆ, ಮೀಸಲು ಸ್ಥಾನಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತದೆ, ಆ ಮೂಲಕ ಅವರ ಪ್ರಾತಿನಿಧ್ಯವು ಬಲಗೊಳ್ಳುತ್ತದೆ.

10 ಈ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಜಾತಿ ಗಣತಿಯನ್ನು ವಿಳಂಬಗೊಳಿಸಲು ತರಲಾಗಿದೆಯೇ?
ಇಲ್ಲ, ಸರ್ಕಾರವು ಈಗಾಗಲೇ ಜಾತಿ ಗಣತಿಗಾಗಿ ಕಾಲಮಿತಿಯ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಪ್ರಕ್ರಿಯೆಯು ವಿವರವಾದ ಎಣಿಕೆಯನ್ನು ಒಳಗೊಂಡಿರುತ್ತದೆ ಮತ್ತು ಜನಸಂಖ್ಯಾ ಎಣಿಕೆಯ ಹಂತದಲ್ಲಿ ಜಾತಿ-ಸಂಬಂಧಿತ ದತ್ತಾಂಶವನ್ನು ದಾಖಲಿಸಲಾಗುತ್ತದೆ.

11 ಮೀಸಲಾತಿ ಚೌಕಟ್ಟಿನೊಳಗೆ ಮುಸ್ಲಿಂ ಮಹಿಳೆಯರಿಗೆ ಪ್ರತ್ಯೇಕ ಕೋಟಾ ಏಕೆ ಇಲ್ಲ?
ಭಾರತದ ಸಂವಿಧಾನವು ಧರ್ಮದ ಆಧಾರದ ಮೇಲೆ ಮೀಸಲಾತಿಗೆ ಅವಕಾಶ ನೀಡುವುದಿಲ್ಲ. ಮೀಸಲಾತಿ ನೀತಿಗಳು ಸಂವಿಧಾನದಲ್ಲಿ ವಿವರಿಸಿರುವಂತೆ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಆಧಾರಿಸಿವೆ.

12 2024ರ ಸಾರ್ವತ್ರಿಕ ಚುನಾವಣೆಯಲ್ಲೇ ಮಹಿಳಾ ಮೀಸಲಾತಿಯನ್ನು ಏಕೆ ಜಾರಿಗೆ ತರಲಿಲ್ಲ?
ಮೀಸಲಾತಿಯನ್ನು ಜಾರಿಗೆ ತರಲು ಕ್ಷೇತ್ರಗಳ ಮರುವಿಂಗಡಣೆ ಅಗತ್ಯ. ಕ್ಷೇತ್ರ ಮರುವಿಂಗಡಣೆಯು ಸುದೀರ್ಘವಾದ ಸಮಾಲೋಚನಾ ಪ್ರಕ್ರಿಯೆಯಾಗಿದೆ. ಇದನ್ನು ಪೂರ್ಣಗೊಳಿಸಲು ಸುಮಾರು ಎರಡು ವರ್ಷಗಳು ಬೇಕಾಗುತ್ತವೆ. ಆದ್ದರಿಂದ, ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಈ ಮಸೂದೆಗಳನ್ನು (ಕ್ಷೇತ್ರ ಮರುವಿಂಗಡಣಾ ಮಸೂದೆ ಸೇರಿದಂತೆ) ಸಂಸತ್ತಿನಲ್ಲಿ ತರಲಾಯಿತು.

13 ತಕ್ಷಣವೇ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೆ 2023ರಲ್ಲೇ ಮಹಿಳಾ ಮೀಸಲಾತಿ ಮಸೂದೆಯನ್ನು ಏಕೆ ಮಂಡಿಸಲಾಯಿತು?
ಮಹಿಳಾ ಮೀಸಲಾತಿಗಾಗಿ ಕಾನೂನು ಮತ್ತು ಸಾಂವಿಧಾನಿಕ ಚೌಕಟ್ಟನ್ನು ಸ್ಥಾಪಿಸಲು 2023ರಲ್ಲಿ ಮಸೂದೆಯನ್ನು ಮಂಡಿಸಿ ಅಂಗೀಕರಿಸಲಾಯಿತು. ಅದರ ಸರ್ವಾನುಮತದ ಅಂಗೀಕಾರವು ಆ ಸಮಯದಲ್ಲಿ ಇದ್ದ ವ್ಯಾಪಕ ರಾಜಕೀಯ ಬೆಂಬಲವನ್ನು ಪ್ರತಿಬಿಂಬಿಸಿತು, ಇದು ನಾರಿ ಶಕ್ತಿ ವಂದನಾ ಅಧಿನಿಯಮದ ಜಾರಿಗೆ ದಾರಿ ಮಾಡಿಕೊಟ್ಟಿತು.

14 ಕೇಂದ್ರಾಡಳಿತ ಪ್ರದೇಶಗಳಿಗಾಗಿ ಪ್ರತ್ಯೇಕ ಮಸೂದೆಯ ಅಗತ್ಯವೇನಿತ್ತು?
ಜಮ್ಮು ಮತ್ತು ಕಾಶ್ಮೀರ, ದಿಲ್ಲಿ ಮತ್ತು ಪುದುಚೇರಿಯಂತಹ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳು ಪ್ರತ್ಯೇಕ ಕಾನೂನು ನಿಬಂಧನೆಗಳಿಂದ ನಿಯಂತ್ರಿಸಲ್ಪಡುತ್ತವೆ. ಆದ್ದರಿಂದ, ಈ ಪ್ರದೇಶಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ನಿರ್ದಿಷ್ಟ ತಿದ್ದುಪಡಿಗಳ ಅಗತ್ಯವಿತ್ತು, ಈ ಕಾರಣಕ್ಕಾಗಿ ಪ್ರತ್ಯೇಕ ಮಸೂದೆಯನ್ನು ತರಬೇಕಾಯಿತು.

ಕಿರುಸುದ್ದಿ

ಪವನ್ ಕಲ್ಯಾಣ್ ಅಸ್ವಸ್ಥ, ಶಸ್ತ್ರಚಿಕಿತ್ಸೆ ಬಳಿಕ ಚೇತರಿಕೆ

• **ಅಮರಾವತಿ:** ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಮತ್ತು ನಟ ಪವನ್ ಕಲ್ಯಾಣ್ ಆರೋಗ್ಯ ಸಮಸ್ಯೆಯಿಂದಾಗಿ ತೀವ್ರ ಅಸ್ವಸ್ಥರಾದ ಹಿನ್ನೆಲೆ ಶನಿವಾರ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು, ಹತ್ತು ದಿನ ವಿಶ್ರಾಂತಿ ತೆಗೆದುಕೊಳ್ಳಲು ವೈದ್ಯರು ಸೂಚಿಸಿದ್ದಾರೆ. ಪವನ್ ಆರೋಗ್ಯ ಸ್ಥಿತಿಯ ಮಾಹಿತಿ ನೀಡಿದ ಪತ್ನಿ ಅನ್ನಾ ಲೆಝ್ನೇವಾ ಕೊನಿಡೆಲಾ, ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಯಾವುದೇ ಸಮಸ್ಯೆಯಿಲ್ಲ. ಕೃತಜ್ಞತೆಗಳು ಎಂದು ಲಕ್ಷಾಂತರ ಪವರ್ ಸ್ಟಾರ್ ಅಭಿಮಾನಿಗಳಿಗೆ ಭರವಸೆ ನೀಡಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಪವನ್ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಶುಕ್ರವಾರ ಬೆಳಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿದ್ದ ವೇಳೆ ಪವನ್ ತೀವ್ರ ಅಸ್ವಸ್ಥತೆಗೆ ಒಳಗಾಗಿದ್ದು, ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಡಿಸಿಎಂ ಪವನ್ ಕಲ್ಯಾಣ್ ಆರೋಗ್ಯ ವಿಚಾರಿಸಿದ್ದೇನೆ. ಅವರು ಅತ್ಯಂತ ಧೈರ್ಯಶಾಲಿ. ಶೀಘ್ರ ಚೇತರಿಸಿಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ. ಮೋದಿಗೆ ಪವನ್ ಕೃತಜ್ಞತೆ ಸಲ್ಲಿಸಿದ್ದಾರೆ. ಇನ್ನು ತೆಲುಗು ಚಿತ್ರರಂಗ ಮತ್ತು ಸಿನಿಮಾ ಉದ್ಯಮದ ಗಣ್ಯರು ಪವನ್ ಶೀಘ್ರ ಗುಣಮುಖರಾಗಲೆಂದು ಹಾರೈಸಿದ್ದಾರೆ.

ಅಮೆರಿಕದಲ್ಲಿ ಗುಂಡಿನ ದಾಳಿ: 8 ಮಕ್ಕಳ ಸಾವು

• **ಶ್ರೇವ್‌ಪೋರ್ಟ್(ಅಮೆರಿಕ):** ಲೂಯಿಸಿಯಾನಾ ರಾಜ್ಯದ ಶ್ರೇವ್‌ಪೋರ್ಟ್ ನಗರದಲ್ಲಿ ಭಾನುವಾರ ನಡೆದ ಭೀಕರ ಗುಂಡಿನ ದಾಳಿಯಲ್ಲಿ 1ರಿಂದ 14 ವರ್ಷದೊಳಗಿನ ಎಂಟು ಮಕ್ಕಳು ಮೃತಪಟ್ಟಿದ್ದಾರೆ. ಕುಟುಂಬದೊಳಗಿನ ಗಲಾಟೆಯ ಹಿನ್ನೆಲೆಯಲ್ಲಿಯೇ ಈ ದಾಳಿ ನಡೆದಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಒಟ್ಟು 10 ಮಂದಿಗೆ ಗುಂಡೇಟು ತಗುಲಿದ್ದು, ಗಾಯಗೊಂಡ ಇಬ್ಬರು ವಯಸ್ಕರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಬಳಿಕ ಆರೋಪಿಯು ಪರಾರಿಯಾಗಲು ಯತ್ನಿಸಿದರೂ, ಪೊಲೀಸರೊಂದಿಗೆ ನಡೆದ ಚಕಮಕಿಯಲ್ಲಿ ಆತ ಸಾವನ್ನಪ್ಪಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಟಲಿಯಲ್ಲಿ ಭಾರತದ ಇಬ್ಬರಿಗೆ ಗುಂಡಿಕ್ಕಿ ಹತ್ಯೆ

• **ಕೋವೊ (ಇಟಲಿ):** ಇಬ್ಬರು ಭಾರತೀಯರನ್ನು ಗುಂಡಿಟ್ಟು ಹತ್ಯೆಗೈದಿರುವ ಘಟನೆ ಇಟಲಿಯ ಕೊವೊ ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಮಾತಾ ಸಾಹಿಬ್ ಕೌರ್ ಜೀ ಗುರುದ್ವಾರದ ಬಳಿ ನಡೆದಿದೆ. ಮೃತರನ್ನು ರಾಗಿಂದರ್ ಸಿಂಗ್(48) ಹಾಗೂ ಗುರ್ಮೀತ್ ಸಿಂಗ್(48) ಎಂದು ಗುರುತಿಸಲಾಗಿದೆ. ಕೃತ್ಯದ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ವರದಿಯಾಗಿದೆ. ಶುಕ್ರವಾರ ವೈಶಾಖಿ ಹಬ್ಬದ ಅಂಗವಾಗಿ ಗುರುದ್ವಾರದಲ್ಲಿ ಪ್ರಾರ್ಥನೆ ಸಲ್ಲಿಸಿ ಹೊರ ಬರುವಾಗ ಅವರ ಮೇಲೆ ದಾಳಿ ನಡೆದಿದೆ ಎಂದು ಹೇಳಲಾಗಿದೆ.

ಶ್ರೀನಗರದಲ್ಲಿ ಅಮೆರಿಕದ ಇಬ್ಬರು ಪ್ರಜೆಗಳ ಬಂಧನ

• **ಶ್ರೀನಗರ:** ಜಮ್ಮು-ಕಾಶ್ಮೀರದ ಶ್ರೀನಗರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಮೆರಿಕದ ಇಬ್ಬರು ನಾಗರಿಕರನ್ನು ಭದ್ರತಾ ಸಿಬ್ಬಂದಿ ಬಂಧಿಸಿದ ಘಟನೆ ಭಾನುವಾರ ಬೆಳಕಿಗೆ ಬಂದಿದೆ. ಸಾಮಾನ್ಯ ಭದ್ರತಾ ತಪಾಸಣೆ ವೇಳೆ ಅವರ ಸಾಮಗ್ರಿಗಳಲ್ಲಿ ಸ್ಯಾಟಲೈಟ್ ಫೋನ್ ಪತ್ತೆಯಾದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಮೊದಲು ಅವರನ್ನು ವಿಚಾರಣೆ ನಡೆಸಿ, ಬಳಿಕ ಹೆಚ್ಚಿನ ತನಿಖೆಗಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಪತ್ತೆಯಾದ ಸಾಧನವು ನಿಯಮಾವಳಿ ಪ್ರಕಾರ ನಿಷೇಧಿತ ವಸ್ತುವಾಗಿರುವುದರಿಂದ ಪ್ರಕರಣಕ್ಕೆ ಗಂಭೀರತೆ ಹೆಚ್ಚಿದೆ. ಬಂಧಿತರಲ್ಲಿ ಒಬ್ಬರನ್ನು ಅಮೆರಿಕದ ಮಾಂಟಾನಾ ರಾಜ್ಯದ ಜೆಫ್ರಿ ಸ್ಕಾಟ್ ಎಂದು ಗುರುತಿಸಲಾಗಿದ್ದು, ಅವರ ಬ್ಯಾಗೇಜ್‌ನಲ್ಲಿ ಗಾರ್ಮಿನ್ ಕಂಪನಿಯ ಸ್ಯಾಟಲೈಟ್ ಫೋನ್ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಭಾರತದಲ್ಲಿ ಸ್ಯಾಟಲೈಟ್ ಫೋನ್ ಬಳಕೆ ಕಟ್ಟುನಿಟ್ಟಿನ ನಿಯಂತ್ರಣಕ್ಕೆ ಒಳಪಟ್ಟಿದ್ದು, ದೂರಸಂಪರ್ಕ ಇಲಾಖೆಯಿಂದ ಪೂರ್ವಾನುಮತಿ ಪಡೆಯದೇ ಇಂತಹ ಸಾಧನಗಳನ್ನು ಹೊಂದಿರುವುದು ಕಾನೂನುಬಾಹಿರವಾಗಿದೆ.ವಿಶೇಷವಾಗಿ ಜಮ್ಮು-ಕಾಶ್ಮೀರ ಪ್ರದೇಶದ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇಂತಹ ಸಾಧನಗಳ ಮೇಲೆ ಕಠಿಣ ನಿಗಾವಹಿಸಲಾಗಿದೆ. ಇದರಿಂದಾಗಿ ದೇಶಕ್ಕೆ ಆಗಮಿಸುವ ಪ್ರಯಾಣಿಕರು ತಮ್ಮ ಬಳಿ ಇರುವ ಸ್ಯಾಟಲೈಟ್ ಸಂವಹನ ಸಾಧನಗಳನ್ನು ಮುಂಚಿತವಾಗಿ ಘೋಷಣೆ ಮಾಡುವುದು ಕಡ್ಡಾಯವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸಂಬಂಧ ಪೊಲೀಸರು ಹೆಚ್ಚಿನ ತನಿಖೆ ಮುಂದುವರಿಸಿದ್ದು, ಬಂಧಿತರ ಉದ್ದೇಶ ಹಾಗೂ ಸಾಧನದ ಬಳಕೆಯ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಭಾರತ ನಂಟಿಗಿದೆ 5,000 ವರ್ಷದ ಬಂಧ: ಇರಾನ್

• **ಟೆಹರಾನ್:** ಭಾರತ ಮತ್ತು ಇರಾನ್ ನಡುವಿನ ಸಂಬಂಧವು ಕೇವಲ ರಾಜತಾಂತ್ರಿಕವಲ್ಲ, ಬದಲಾಗಿ 5,000 ವರ್ಷಗಳ ಹಳೆಯದಾದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ನಾಗರಿಕ ಸಂಬಂಧವಾಗಿದೆ. ಈ ಸಂಬಂಧವು ಎಷ್ಟು ಗಾಢವಾಗಿದೆ ಎಂದರೆ ಯಾವುದೇ ಅಲ್ಪಕಾಲಿಕ ಘಟನೆಗಳು ಇದನ್ನು ಹಾನಿಗೊಳಿಸಲು ಸಾಧ್ಯವಿಲ್ಲ. ಬದಲಾಗಿ ಈ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತಲೇ ಹೋಗುತ್ತದೆ ಎಂಬುದಾಗಿ ಇರಾನ್ ಸ್ಪಷ್ಟಪಡಿಸಿದೆ.

ಹಾರ್ಮುಜ್ ಜಲಸಂಧಿಯಲ್ಲಿ ಎರಡು ಭಾರತೀಯ ಧ್ವಜದ ಹಡಗು ಮೇಲೆ ನಡೆದ ಗುಂಡಿನ ದಾಳಿಯ ಘಟನೆ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ ಭಾರತದ ಜತೆಗಿನ ಸಂಬಂಧಗಳು ಅತ್ಯಂತ ಬಲಿಷ್ಠವಾಗಿವೆ . ಈ ಪ್ರದೇಶದಲ್ಲಿ ಶಾಂತಿ ಕಾಪಾಡಬೇಕು ಎಂದು ಇರಾನ್ ರಾಷ್ಟ್ರದ ಪರಮೋಚ್ಚ ನಾಯಕನ ಭಾರತದ ಪ್ರತಿನಿಧಿ ಡಾ.ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಹೇಳಿದ್ದಾರೆ.

ಪ್ರಧಾನಿ ಮೋದಿಯವರು ಮತ್ತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ನಡುವೆ ಯಶಸ್ವಿ ಮಾತುಕತೆಗಳು ನಡೆದಿದ್ದು, ವಿದೇಶಾಂಗ ಸಚಿವರ ಮಟ್ಟದಲ್ಲಿಯೂ ನಿರಂತರ ಮಾತುಕತೆಗಳು ನಡೆದಿವೆ ಎಂದರು.

ಭಾರತೀಯ ಹಡಗುಗಳ ಮೇಲೆ ನಡೆದ ಗುಂಡಿನ ದಾಳಿ ಕುರಿತು ಮಾತನಾಡಿರುವ ಅವರು, ಗುಂಡಿನ ದಾಳಿ ಕುರಿತು ನನಗೆ ವಿವರಗಳು ಸ್ಪಷ್ಟವಾಗಿ ತಿಳಿದಿಲ್ಲ. ಈ ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೆ, ಇದು ಶೀಘ್ರದಲ್ಲೇ ಪರಿಹಾರವಾಗಲಿ ಎಂಬ ವಿಶ್ವಾಸವಿದೆ ಎಂದಿದ್ದಾರೆ.

ಬಾಂಗ್ಲಾ ಹೈಕಮಿಷನರ್ ಆಗಿ ದಿನೇಶ್ ತ್ರಿವೇದಿ?

• **ಹೊಸದಿಲ್ಲಿ:** ಭಾರತವು ಬಾಂಗ್ಲಾದೇಶದೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಪುನರ್‌ವ್ಯವಸ್ಥೆಗೊಳಿಸುವ ಮಹತ್ವದ ಹೆಜ್ಜೆಯಾಗಿ, ಕೇಂದ್ರ ಮಾಜಿ ಸಚಿವ ದಿನೇಶ್ ತ್ರಿವೇದಿಯನ್ನು ಬಾಂಗ್ಲಾದೇಶದ ಹೈಕಮಿಷನರ್ ಆಗಿ ನೇಮಕ ಮಾಡಲಿದೆ ಎಂದು ಮೂಲಗಳು ತಿಳಿಸಿವೆ. ಪಶ್ಚಿಮ ಬಂಗಾಳದ ಅನುಭವಸ್ಥ ರಾಜಕಾರಣಿಯಾಗಿರುವ ತ್ರಿವೇದಿ, ಕೇಂದ್ರದಲ್ಲಿ ರೈಲ್ವೆ ಸಚಿವರಾಗಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಅವರ ನೇಮಕವು ಸಾಮಾನ್ಯವಾಗಿ ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿಗಳಿಗೆ ನೀಡಲಾಗುವ ಹುದ್ದೆಗೆ ರಾಜಕೀಯ ನಾಯಕನನ್ನು ಆಯ್ಕೆ ಮಾಡಿದ ಅಪರೂಪದ ಉದಾಹರಣೆಯಾಗುವ ಸಾಧ್ಯತೆ ಇದೆ. ಇದಕ್ಕೂ ಮೊದಲು ಢಾಕಾದಲ್ಲಿ ಭಾರತದ ಹೈಕಮಿಷನರ್ ಆಗಿದ್ದ ಪ್ರಣಯ್ ವರ್ಮಾ ಅವರನ್ನು ಐರೋಪ್ಯ ಒಕ್ಕೂಟ ಮತ್ತು ಬೆಲ್ಜಿಯಂಗೆ ಭಾರತದ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಇತ್ತೀಚಿನ ರಾಜಕೀಯ ಬದಲಾವಣೆಗಳು ಮತ್ತು ಹೊಸ ಸರ್ಕಾರದ ಸ್ಥಾಪನೆಯ ನಂತರ ಭಾರತ-ಬಾಂಗ್ಲಾದೇಶ ಸಂಬಂಧಗಳಲ್ಲಿ ಉಂಟಾದ ಸವಾಲುಗಳನ್ನು ಮನಗಂಡು, ದ್ವಿಪಕ್ಷೀಯ ಸಂಬಂಧಗಳನ್ನು ಮರುಸ್ಥಾಪಿಸುವ ಉದ್ದೇಶದಿಂದ ಈ ನೇಮಕ ನಡೆದಿದೆ ಎಂದು ಮೂಲಗಳು ಸೂಚಿಸುತ್ತಿವೆ. ತ್ರಿವೇದಿ ಅವರ ಪಶ್ಚಿಮ ಬಂಗಾಳ ಮೂಲ ಹಾಗೂ ಗಡಿ ರಾಜ್ಯದ ರಾಜಕೀಯ ಅರಿವು, ಭದ್ರತೆ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳ ಬಲಪಡಿಸುವಲ್ಲಿ ನೆರವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಸೋನಿಯಾ, ರಾಗಾ ವಿರುದ್ಧ ಇಡಿ ಅರ್ಜಿ ವಿಚಾರಣೆ ಇಂದು

• **ಹೊಸದಿಲ್ಲಿ:** ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ(ಇಡಿ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದಿಲ್ಲಿ ಹೈಕೋರ್ಟ್ ಸೋಮವಾರ ನಡೆಸಲಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧದ ಇಡಿ ದೋಷಾರೋಪ ಪಟ್ಟಿಯನ್ನು ಪರಿಗಣಿಸಲು ನಿರಾಕರಿಸಿದ ಡಿ.16, 2025ರ ಆದೇಶವನ್ನು ಈ ಅರ್ಜಿ ಪ್ರಶ್ನಿಸಿದೆ. ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರ ಮುಂದೆ ಈ ವಿಷಯ ವಿಚಾರಣೆಗೆ ಬರಲಿದೆ. ಡಿ.22ರಂದು ಗಾಂಧಿ ಕುಟುಂಬ, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ ಮೊದಲಾದವರಿಗೆ ನೋಟಿಸ್ ನೀಡಲಾಗಿತ್ತು. ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್‌ನ ಸುಮಾರು 2,000 ಕೋಟಿ ರೂ. ಮೌಲ್ಯದ ಆಸ್ತಿಗಳಿಗೆ ಸಂಬಂಧಿಸಿದ ಪಿತೂರಿ ಮತ್ತು ಅಕ್ರಮ ಹಣ ವರ್ಗಾವಣೆಯಾಗಿದೆ ಎಂದು ಇಡಿ ಆರೋಪಿಸಿದೆ. ಗಾಂಧಿ ಕುಟುಂಬ ಶೇ.76 ಷೇರುಗಳನ್ನು ಹೊಂದಿರುವ ಯಂಗ್ ಇಂಡಿಯನ್ ಸಂಸ್ಥೆ, 90 ಕೋಟಿ ರೂ. ಸಾಲದ ಬದಲಾಗಿ ಈ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದೆ ಎಂದು ಅದು ಹೇಳಿದೆ.

ರಸ್ತೆ ಸುರಕ್ಷತೆಗೆ ಸುಪ್ರೀಂ ಮಾರ್ಗಸೂಚಿ | ಅಕ್ರಮ ಪಾರ್ಕಿಂಗ್‌ಗೆ ನಿಷೇಧ | 60 ದಿನಗಳಲ್ಲಿ ಅನುಷ್ಠಾನ | ಜೀವ ರಕ್ಷಣೆ ರಾಜ್ಯದ ಹೊಣೆ

ಎಕ್ಸ್‌ಪ್ರೆಸ್‌ವೇಗಳು ಅಪಾಯದ ಮಾರ್ಗಗಳಾಗಬಾರದು

• **ಹೊಸದಿಲ್ಲಿ:** ಎಕ್ಸ್‌ಪ್ರೆಸ್‌ವೇಗಳು ಆಡಳಿತಾತ್ಮಕ ನಿರ್ಲಕ್ಷ್ಯ ಅಥವಾ ಮೂಲಸೌಕರ್ಯ ದೌರ್ಬಲ್ಯದಿಂದ ಅಪಾಯದ ಮಾರ್ಗಗಳಾಗಿ ಮಾರ್ಪಡಬಾರದು ಎಂದು ಎಚ್ಚರಿಸಿದ ಸುಪ್ರೀಂ ಕೋರ್ಟ್, ದೇಶಾದ್ಯಂತ ರಸ್ತೆ ಸುರಕ್ಷತೆ ಹೆಚ್ಚಿಸಲು ಕಠಿಣ ಮಾರ್ಗಸೂಚಿಗಳನ್ನು ಹೊರಡಿಸಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರೀ ವಾಹನಗಳ ಪಾರ್ಕಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಎ.ಎಸ್. ಚಂದುರ್ಕರ್ ಅವರ ಪೀಠ, ದೇಶದ ಒಟ್ಟು ರಸ್ತೆ ಉದ್ದದಲ್ಲಿ ಕೇವಲ ಶೇ.2 ಇರುವ ರಾಷ್ಟ್ರೀಯ ಹೆದ್ದಾರಿಗಳು, ರಸ್ತೆ ಅಪಘಾತಗಳಿಂದ ಉಂಟಾಗುವ ಸಾವುಗಳಲ್ಲಿ ಸುಮಾರು ಶೇ.30 ಪಾಲು ಹೊಂದಿವೆ ಎಂದು ಗಮನಸೆಳೆದಿದೆ.

ಒಬ್ಬ ವ್ಯಕ್ತಿಯ ಜೀವವೂ ತಪ್ಪಿಸಬಹುದಾದ ಕಾರಣಗಳಿಂದ ಕಳೆದುಹೋಗುವುದು ರಾಜ್ಯದ ರಕ್ಷಣಾತ್ಮಕ ಹೊಣೆಗಾರಿಕೆಯ ವಿಫಲತೆಯೇ ಆಗಿದೆ ಎಂದು ನ್ಯಾಯಾಲಯ ಕಠಿಣವಾಗಿ ಅಭಿಪ್ರಾಯಪಟ್ಟಿದೆ. ಸಂವಿಧಾನದ ವಿಧಿ 21ರಡಿ ಜೀವನ ಹಕ್ಕು ಕೇವಲ ಜೀವ ಹರಣದ ವಿರುದ್ಧದ ಭದ್ರತೆ ಮಾತ್ರವಲ್ಲ, ಸುರಕ್ಷಿತ ಪರಿಸರ ಒದಗಿಸುವ ರಾಜ್ಯದ ಸಕಾರಾತ್ಮಕ ಕರ್ತವ್ಯವೂ ಆಗಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.



ರಾಜಸ್ಥಾನದ ಫಲೋಡಿ ಮತ್ತು ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಗಳಲ್ಲಿ 2025ರ ನವೆಂಬರ್‌ನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತಗಳಲ್ಲಿ 34 ಮಂದಿ ಸಾವಿಗೀಡಾದ ಹಿನ್ನೆಲೆಯಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಿದ ಪ್ರಕರಣದ ವಿಚಾರಣೆಯಲ್ಲಿ ಈ ಆದೇಶ ಹೊರಬಂದಿದೆ.

ಕಠಿಣ ನಿರ್ದೇಶನಗಳು: ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯಾವುದೇ ಭಾರೀ ಅಥವಾ ವಾಣಿಜ್ಯ ವಾಹನಗಳು ನಿರ್ದಿಷ್ಟ ಪಾರ್ಕಿಂಗ್ ಸ್ಥಳಗಳನ್ನು ಹೊರತುಪಡಿಸಿ ರಸ್ತೆ ಅಥವಾ ಶೋಲ್ಡರ್ ಮೇಲೆ ನಿಲ್ಲಬಾರದು ಎಂದು ಕೋರ್ಟ್ ಸ್ಪಷ್ಟ ಸೂಚನೆ ನೀಡಿದೆ. ಈ ನಿಯಮದ ಅನುಷ್ಠಾನಕ್ಕಾಗಿ ಎಟಿಎಂಎಸ್, ಜಿಪಿಎಸ್ ಆಧಾರಿತ ಫೋಟೋ ಸಾಕ್ಷ್ಯ ಮತ್ತು ಇ-ಚಲನ್ ವ್ಯವಸ್ಥೆ ಬಳಸುವಂತೆ ಸೂಚಿಸಲಾಗಿದೆ.

ಈ ಎಲ್ಲಾ ನಿರ್ದೇಶನಗಳನ್ನು 60 ದಿನಗಳೊಳಗೆ ಜಾರಿಗೆ ತರಬೇಕು ಎಂದು ಕೋರ್ಟ್ ಕಟ್ಟುನಿಟ್ಟಾಗಿ ಹೇಳಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಪೊಲೀಸ್, ಸಾರಿಗೆ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು ಸಂಯುಕ್ತವಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಅಕ್ರಮ ಕಟ್ಟಡಗಳಿಗೆ ಕಡಿವಾಣ: ರಾಷ್ಟ್ರೀಯ ಹೆದ್ದಾರಿಗಳ ವ್ಯಾಪ್ತಿಯಲ್ಲಿ ಯಾವುದೇ ಹೊಸ ಡಾಬಾ, ಹೋಟೆಲ್ ಅಥವಾ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ತಕ್ಷಣದಿಂದಲೇ ನಿಷೇಧ ವಿಧಿಸಲಾಗಿದೆ. ಈಗಾಗಲೇ ನಿರ್ಮಾಣವಾಗಿರುವ ಅಕ್ರಮ ಕಟ್ಟಡಗಳನ್ನು 60 ದಿನಗಳಲ್ಲಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಹೆದ್ದಾರಿ ಸುರಕ್ಷತಾ ವಲಯಗಳಲ್ಲಿ ಯಾವುದೇ ಅನುಮತಿ, ಲೈಸೆನ್ಸ್ ಅಥವಾ ಎನ್‌ಒಸಿ ನೀಡುವ ಮೊದಲು ಎನ್‌ಎಚ್‌ಎಐ ಅಥವಾ ಪಿಡಬ್ಲ್ಯುಡಿ ಅನುಮತಿ ಕಡ್ಡಾಯವಾಗಿದ್ದು, ಈಗಿರುವ ಅನುಮತಿಗಳನ್ನು 30 ದಿನಗಳಲ್ಲಿ ಮರುಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ.

ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್: ಪ್ರತಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಪ್ರದೇಶಗಳಲ್ಲಿ 15 ದಿನಗಳೊಳಗೆ ಜಿಲ್ಲಾ ಹೆದ್ದಾರಿ ಸುರಕ್ಷತಾ ಟಾಸ್ಕ್‌ಫೋರ್ಸ್ ರಚಿಸಲು ಸೂಚಿಸಲಾಗಿದೆ. ಇದರಲ್ಲಿ ಆಡಳಿತ, ಪೊಲೀಸ್, ಎನ್‌ಎಚ್‌ಎಐ, ಪಿಡಬ್ಲ್ಯುಡಿ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸೇರಿರಬೇಕು.

ಇದರ ಜೊತೆಗೆ, ನಿರಂತರ ಪಹರೆ, ಅಕ್ರಮ ಪಾರ್ಕಿಂಗ್ ನಿಯಂತ್ರಣ, ಬ್ಲ್ಯಾಕ್‌ಸ್ಪಾಟ್‌ಗಳ ಗುರುತು, ರಸ್ತೆ ಬೆಳಕು ವ್ಯವಸ್ಥೆ ಮತ್ತು ತುರ್ತು ಸೇವೆಗಳ ಬಲಪಡಿಸುವತ್ತ ವಿಶೇಷ ಗಮನ ಹರಿಸಲು ಕೋರ್ಟ್ ಸೂಚಿಸಿದೆ.

ವರದಿ ಸಲ್ಲಿಕೆ ಕಡ್ಡಾಯ: ಈ ನಿರ್ದೇಶನಗಳ ಅನುಷ್ಠಾನದ ಕುರಿತು 75 ದಿನಗಳೊಳಗೆ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು ವರದಿ ಸಲ್ಲಿಸಬೇಕು ಎಂದು ಕೋರ್ಟ್ ಆದೇಶಿಸಿದೆ. ಯಾವುದೇ ಅನುಷ್ಠಾನ ಸಮಸ್ಯೆಗಳಿದ್ದರೆ ಸಂಬಂಧಪಟ್ಟವರು ನ್ಯಾಯಾಲಯವನ್ನು ಸಂಪರ್ಕಿಸಬಹುದು ಎಂದು ತಿಳಿಸಿದೆ.

ಮಾನವ ಜೀವಕ್ಕಿಂತ ಮೇಲಾದ ಯಾವುದೇ ಆಡಳಿತಾತ್ಮಕ ಅಥವಾ ಆರ್ಥಿಕ ಅಡಚಣೆಗಳಿಲ್ಲ ಎಂದು ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ರಸ್ತೆ ಸುರಕ್ಷತೆಯಲ್ಲಿ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಲು ಸರ್ಕಾರಗಳಿಗೆ ಕಟ್ಟುನಿಟ್ಟಿನ ಸಂದೇಶ ನೀಡಿದೆ.

ಶಿರೂರು ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಂಭ್ರಮ

ಶಿಲಾಮಯ ರಾಜಗೋಪುರದ ಶಿಖರ ಪ್ರತಿಷ್ಠೆ

ಬೈಂದೂರು: ಶಿರೂರು ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಭಾನುವಾರ ವೇದಮೂರ್ತಿ ವಿಶ್ವೇಶ್ವರ ಭಟ್ ಕತ್ಕಾಲ ಅವರ ನೇತೃತ್ವದಲ್ಲಿ ದೇವಸ್ಥಾನದ ಅರ್ಚಕ ರವೀಂದ್ರ ಆಯ್ಯಂಗಾರ ಅವರ ಸಹಯೋಗದೊಂದಿಗೆ ಬೆಳಿಗ್ಗೆ 7.28ರ ಮೇಷಲಗ್ನ ಸಮೂರ್ಹದಲ್ಲಿ ನೂತನ ನಿರ್ಮಾಣದ ಶಿಲಾಮಯ ರಾಜಗೋಪುರದ ಶಿಖರ ಪ್ರತಿಷ್ಠೆ ನೆರವೇರಿತು.

ನಂತರ ಗುರುಗಣೇಶ ಪೂಜಾ, ಪುಣ್ಯಾಹ, ಸ್ಥಾನಶುದ್ಧಿ ಹೋಮ, ಬಿಂಬಶುದ್ಧಿ ಹೋಮ, ಶಿಖರ ಅಧಿವಾಸ ಹೋಮ, ಮೂಲಮಂತ್ರ ಹೋಮ, ಮೂಹೂರ್ತವಾಚನ, ಶಕ್ತಿ–ತತ್ವ ಕಲಾವೃದ್ಧಿ ಹೋಮ. ಶ್ರೀ ಮಹಾವಿಷ್ಣುಯಾಗ, ಶಾಂತಿ ಪ್ರಾಯಾಶ್ಚಿತ್ತ ಹೋಮಗಳು, ಮಹಾ ಪೂರ್ಣಾಹುತಿ, ಕುಂಭಾಭಿಷೇಕ, ಮಹಾಪೂಜೆ ನಡೆಯಿತು. ಮಧ್ಯಾಹ್ನ ಊರ ಪರವೂರ ಸಹಸ್ರಾರು ಸಂಖ್ಯೆಯ ಭಕ್ತರು ದೇವರ ದರ್ಶನ ಪಡೆದು ಮಹಾಅನ್ನಪ್ರಸಾದ ಸ್ವೀಕರಿಸಿದರು.

ದೇವಳದ ಗೌರವಾಧ್ಯಕ್ಷರಾದ ಆರ್. ವಿ. ಶೆಟ್ಟಿ, ಡಾ. ಯು. ಮಾಧವ ಶೆಟ್ಟಿ, ಆಡಳಿತ ಮೊಕ್ತಸರ



ಎಸ್. ನಾಗಯ್ಯ ಶೆಟ್ಟಿ ಹೊಸ್ಮನೆ. ಹಾಗೂ ನೂತನ ಶಿಲಾಮಯ ರಾಜಗೋಪುರದ ಲೋಕಾರ್ಪಣೆಯ ವಿವಿಧ ಸಮಿತಿಯ ಅಧ್ಯಕ್ಷರು, ಸರ್ವಸದಸ್ಯರು ಶ್ರೀ ಶಾರದೋತ್ಸವ ಸಮಿತಿಯ ಸರ್ವ ಸದಸ್ಯರು, ಶ್ರೀ ವೆಂಕಟರಮಣ ಭಜನಾ ಮಂಡಳಿಯ ಸದಸ್ಯರು, ವಿವಿಧ ಸ್ವ–ಸಹಾಯ ಸಂಘ ಸಂಸ್ಥೆಗಳ ಅಧ್ಯಕ್ಷರು–ಸರ್ವಸದಸ್ಯರು ಇದ್ದರು.

> **ಶ್ಲಾಘನೀಯ ಕಾರ್ಯ**
>
> ಆಧುನಿಕ ಧಾವಂತದಲ್ಲಿಯೂ ಗ್ರಾಮೀಣ ಭಾಗದಲ್ಲಿ ನಮ್ಮ ಸನಾತನ ಸಂಸ್ಕೃತಿಯನ್ನು ಕಡೆಗಣಿಸದೇ ನಾನಾ ಧಾರ್ಮಿಕ ಆಚರಣೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯವಾಗಿದೆ. ಒಬ್ಬರಿಂದಾಗದ ಕೆಲಸ ಸಂಘಟನೆ ಮೂಲಕ ಮಾಡಬಹುದು. ಹೀಗಾಗಿ ಎಲ್ಲರ ಸಹಭಾಗಿತ್ವ ಹಾಗೂ ಎಲ್ಲರೂ ಒಂದಾಗಿ ಬೆರೆತು ನಮ್ಮೊಳಗಿನ ಬಾಂಧವ್ಯ ಗಟ್ಟಿಗೊಳಿಸುವ ಹಾಗೂ ಸೌಹಾರ್ದತೆಯ ಸಂದೇಶ ನೀಡುವ ಸದುದ್ದೇಶದಿಂದ ದೇವಳದಲ್ಲಿ ಧಾರ್ಮಿಕ ಉತ್ಸವಗಳು ಆಚರಿಸುವಂತಾಗಬೇಕು
>
> ■ ವೇದಮೂರ್ತಿ ವಿಶ್ವೇಶ್ವರ ಭಟ್
> ಕತ್ಕಾಲ ಅರ್ಚಕರು

ಮಹಿಳೆಯರಿಗೆ ಅಧಿಕಾರ ನೀಡುವುದನ್ನು ಸಹಿಸದ ಕಾಂಗ್ರೆಸ್ : ಬಿಜೆಪಿ ಅಸಮಾಧಾನ

ಮಡಿಕೇರಿ: ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಅಧಿಕಾರ ನೀಡುವುದನ್ನು ಸಹಿಸದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವ ಮೂಲಕ ಮಹಿಳಾ ವಿರೋಽ ಧೋರಣೆಯನ್ನು ಅನುಸರಿಸಿವೆ ಎಂದು ಸೋಮವಾರಪೇಟೆ ಬಿಜೆಪಿ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ಆರೋಪಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಆರಂಭದಿಂದಲೂ ಮಹಿಳಾ ಸಮಾನತೆಯನ್ನು ಪ್ರತಿಪಾದಿಸುತ್ತಾ ಬಂದಿದೆ. ಇದರ ಭಾಗವಾಗಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಮಸೂದೆಯನ್ನು ಮಂಡಿಸಿದೆ. ಆದರೆ ಸದಾ ಮಹಿಳಾ ವಿರೋಧಿ ನಡೆಯನ್ನೇ ಅನುಸರಿಸಿಕೊಂಡು ಬಂದಿರುವ ಕಾಂಗ್ರೆಸ್ ಮಸೂದೆಯನ್ನು ವಿರೋಧಿಸುವ ಮೂಲಕ ದೇಶದ ಮಹಿಳಾ ಸಮೂಹವನ್ನು ಅಪಮಾನಿಸಿದೆ ಎಂದು ಟೀಕಿಸಿದ್ದಾರೆ.

ಮಹಿಳೆಯರು ರಾಜಕೀಯ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಸಮಾನ ಅವಕಾಶಗಳನ್ನು ಪಡೆದುಕೊಂಡು ಸಬಲರಾಗಬೇಕು. ಆ ಮೂಲಕ ಸ್ವಾಭಿಮಾನದಿಂದ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಬೇಕು ಎನ್ನುವ ಮನೋಭಾವವನ್ನು ಪ್ರಧಾನಿ ನರೇಂದ್ರ ಮೋದಿಯವರು ಹೊಂದಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಮಹಿಳೆಯರ ಸ್ವಾಭಿಮಾನಿ ಬದುಕಿಗೆ ವಿರುದ್ಧವಾಗಿ ಉಚಿತ ಭಾಗ್ಯಗಳನ್ನು ನೀಡಿ ಅಧಿಕಾರದಿಂದ ದೂರ ಇಡುವ ಪ್ರಯತ್ನವನ್ನು ಮಾಡುತ್ತಿದೆ. ಇದನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದು ಕಂಠಿ ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಿಳಾ ಸಬಲೀಕರಣದ ಬಗ್ಗೆ ಕಾಳಜಿ ಇಲ್ಲದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಧಿವೇಶನದಲ್ಲಿ ತಮ್ಮ ಸ್ಥಾನದ ಗಾಂಭೀರ್ಯತೆಯನ್ನು ಮರೆತು ಹಾಸ್ಯಾಸ್ಪದವಾಗಿ ನಡೆದುಕೊಂಡಿದ್ದಾರೆ. ಕ್ಷೇತ್ರಗಳ ಮರುವಿಂಗಡಣೆಯಿಂದ ದೇಶದ ಅಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿಯಾಗುತ್ತಿತ್ತು, ಪ್ರತಿಯೊಂದು ಪ್ರದೇಶಕ್ಕೂ ಇದರಿಂದ ಅನುಕೂಲವಾಗುತ್ತಿತ್ತು. ಆದರೆ ಇದರ ಬಗ್ಗೆ ಅರಿವಿಲ್ಲದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಕ್ಷೇತ್ರಗಳ ಮರುವಿಂಗಡಣೆಯನ್ನೇ ನೆಪ ಮಾಡಿಕೊಂಡು ಮಹಿಳೆಯರಿಗೆ ಅನ್ಯಾಯ ಮಾಡಿವೆ ಎಂದು ಆರೋಪಿಸಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದವರಿಗೆ ದೇಶದ ಸ್ವಾಭಿಮಾನಿ ಮಹಿಳೆಯರು ಮುಂದಿನ ಎಲ್ಲಾ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕಂಠಿ ಕಾರ್ಯಪ್ಪ ತಿಳಿಸಿದ್ದಾರೆ.

ಗುಂಡ್ಮಿ ಬಬ್ಬು ಸ್ವಾಮಿ ನೆಲೆ ಅಭಿವೃದ್ಧಿಗೆ ಕೈಜೋಡಿಸಿ

ಕೋಟ: ಕರಾವಳಿ ದೈವಗಳ ನೆಲೆತಾಣವಾಗಿ ಸದಾ ಪವಾಡಗೈಯುವ ಕ್ಷೇತ್ರವಾಗಿ ರೂಪುಗೊಂಡಿದೆ ಅದರಲ್ಲಿ ಬಬ್ಬು ಸ್ವಾಮಿ ಮಹಿಳೆ ಜಗತ್ ಪ್ರಸಿದ್ಧವಾಗಿದೆ ಎಂದು ಕದ್ರಿ ಮಂಜುನಾಥೇಶ್ವರ ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ ಅಭಿಪ್ರಾಯಪಟ್ಟರು.

ಶುಕ್ರವಾರ ಇಲ್ಲಿನ ಗುಂಡ್ಮಿ–ಸಾಸ್ತಾನದ ಶ್ರೀ ಕಂಬಿಗಾರ ಶ್ರೀ ಬಬ್ಬುಸ್ವಾಮಿ ಮತ್ತು ಪರಿವಾರ ದೈವಸ್ಥಾನ ಸಿರಿಸಿಂಗಾರನೇಮೋತ್ಸವದ ಧಾರ್ಮಿಕ ಸಭೆಯಲ್ಲಿ ಮಾತನಾಡಿ ಗುಂಡ್ಮಿಯ ಬಬ್ಬು ಸ್ವಾಮಿ ಕ್ಷೇತ್ರ ತನ್ನದೆ ಆದ ಇತಿಹಾಸವನ್ನು ಹೊಂದಿದೆ ಆದರೆ ಅಭಿವೃದ್ಧಿ ಹೊರಗಿರುವುದು ಬೇಸರ ತಂದಿದೆ, ಇದರ ಅಭಿವೃದ್ಧಿಗೆ ಪ್ರತಿಯೊಬ್ಬರು ಕೈಜೋಡಿಸಿ ಎಂದು ಮನವಿ ಮಾಡಿದರು.

ಈ ಸಂದರ್ಭ ಸಮಾಜಸೇವಕರಾದ ಹಂಗಾರಕಟ್ಟೆ ಇಬ್ರಾಹಿಂ ಸಾಹೇಬ್, ಜೋಸೆಫ್ ಮೆನೆಜಸ್, ಸಾಂಸ್ಕೃತಿಕ ಚಿಂತಕ ಚಂದ್ರ ಆಚಾರ್ ಕೋಟ, ಸಬಿತಾ ಗುಂಡ್ಮಿ, ಕೊರಗ ಪೂಜಾರಿ



ಕೋಡಿ, ನಾಟಿವೈದ್ಯ ಮಂಜುನಾಥ್ ಭಂಡಾರಿ, ಚಂದ್ರಶೇಖರ, ನವೀನ್ ಪಡ್ರೆ, ಗ್ರಂಥಪಾಲಕಿ ಯಶೋದ ಗುಂಡ್ಮಿ, ಶಿಕ್ಷಕ ಅಶೋಕ್ ಗುಂಡ್ಮಿ, ಗುಂಡ್ಮಿ ಶಂಕರ್ ಕುಲಾಲ್, ಅಥ್ಲೆಟಿಕ್ ಪಟು ವಿಠ್ಠಲ್ ಶೆಟ್ಟಿಗಾರ್, ಧಾರ್ಮಿಕ ಮುಂದಾಳು ಪಾಂಡುರಂಗ ನಾಯ್ಕಾಡಿ, ಜೀ ವಾಹಿನಿ ಕಲಾವಿದೆ ದೀಕ್ಷಾ ಬ್ರಹ್ಮಾವರ, ನಿವೃತ್ತ ಪ್ರಾಂಶುಪಾಲೆ ವಸುಧಾ ಪಡಿಯಾರ್, ಕದ್ರಿ ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ ಅವರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆಯನ್ನು ನೇಮೋತ್ಸವ ಸಮಿತಿ ಅಧ್ಯಕ್ಷ ಕೇಶವ ಕುಂದರ್ ವಹಿಸಿದ್ದರು. ಪಾಂಡೇಶ್ವರ ಯೋಗ ಗುರುಕುಲದ ಮುಖ್ಯಸ್ಥ ಡಾ. ವಿದ್ವಾನ್ ವಿಜಯ ಮಂಜರ್ ಧಾರ್ಮಿಕ ಪ್ರವಚನಗೈದರು. ಕೋಟ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಕರ್ ಎ. ಕುಂದರ್, ಮಾಜಿ ತಾ.ಪಂ. ಅಧ್ಯಕ್ಷೆ ಜ್ಯೋತಿ ಉದಯ್ ಪೂಜಾರಿ, ಸಾಲಿಗ್ರಾಮ ಪ.ಪಂ. ಮಾಜಿ ಅಧ್ಯಕ್ಷೆ ಸುಲತಾ ಹೆಗ್ಡೆ, ಸ್ಪೀಕರ್ ಯು.ಟಿ. ಖಾದರ್ ಅವರ ಆಪ್ತಸಹಾಯಕ ಪ್ರವೀಣ್ ಕುಮಾರ್, ಬಬ್ಬು ಸ್ವಾಮಿ ದೈವಸ್ಥಾನದ ಮುಕ್ತೇಸರ ಉದಯ್ ಶೆಟ್ಟಿ, ದೈವಸ್ಥಾನದ ಗುರಿಕಾರ ಚಂದ್ರ ಗುರಿಕಾರ, ಕೋಟ ಅಮೃತೇಶ್ವರೀ ದೇಗುಲದ ಟ್ರಸ್ಟಿ ಸುಭಾಷ್ ಶೆಟ್ಟಿ, ದೈವಸ್ಥಾನದ ಅಧ್ಯಕ್ಷ ಚಂದ್ರ ಕಟ್ಟಿನಮನೆ, ಕಾಂಗ್ರೆಸ್ ಮುಖಂಡ ದಿನೇಶ್ ಹೆಗ್ಡೆ ಮೊಳಹಳ್ಳಿ, ಎನ್ ಎಂಪಿಟಿಯ ಗಿರಿಜಾ, ಮಾಜಿ ಜಿ.ಪಂ. ಅಧ್ಯಕ್ಷ ಭುಜಂಗ ಶೆಟ್ಟಿ, ನೇಮೋತ್ಸವ ಸಮಿತಿ ಉಪಾಧ್ಯಕ್ಷ ಪ್ರತಾಪ್ ಶೆಟ್ಟಿ ಉಪಸ್ಥಿತರಿದ್ದರು.

ಸಮಿತಿಯ ಜತೆಕಾರ್ಯದರ್ಶಿ ಕೃಷ್ಣ ಆಚಾರ್ ಸ್ವಾಗತಿಸಿ, ಶಿಕ್ಷಕ ಸತೀಶ್ಚಂದ್ರ ಶೆಟ್ಟಿ ನಿರೂಪಿಸಿದರು. ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

ಬಸ್ರೂರಿನ ಶ್ರೀ ಶಾರದಾ ಕಾಲೇಜಿನಲ್ಲಿ ನೂತನ ಯೋಜನೆ

ಬಡ ಮಕ್ಕಳಿಗಾಗಿ 'ಶ್ರೀ ಶಾರದಾ ಆಸರೆ'

ಕುಂದಾಪುರ : ಬಸ್ರೂರಿನ ಶ್ರೀ ಶಾರದಾ ಕಾಲೇಜಿನಲ್ಲಿ ಈ ಶೈಕ್ಷಣಿಕ ವರ್ಷದಿಂದ ಕಾಲೇಜಿನ ಹಳೆ ವಿದ್ಯಾರ್ಥಿಗಳ ಹಾಗೂ ಶಿಕ್ಷಣಾಭಿಮಾನಿಗಳ ಸಹಕಾರದಿಂದ ಕಾಲೇಜಿನ ಪದವಿ ತರಗತಿಗೆ ಸೇರ್ಪಡೆಯಾಗುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಬೇಕು ಎನ್ನುವ ಎನ್ನುವ ಉದ್ದೇಶದಿಂದ 'ಶ್ರೀ ಶಾರದಾ ಆಸರೆ' ಯೋಜನೆಯನ್ನು ಆರಂಭಿಸಲು ತೀರ್ಮಾನಿಸಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಸಂಚಾಲಕಿ ಅನುಪಮಾ ಎಸ್. ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾನುವಾರ ಕಾಲೇಜಿನಲ್ಲಿ ನಡೆದ ಕಾಲೇಜು ಹಳೆ ವಿದ್ಯಾರ್ಥಿ ಸಂಘದ ಸಭೆಯಲ್ಲಿ ಉದ್ದೇಶಿತ ಶ್ರೀ ಶಾರದಾ ಆಸರೆ ಯೋಜನೆ ಬಗ್ಗೆ ವಿವರವಾಗಿ ಚರ್ಚಿಸಿ ಈ ಶೈಕ್ಷಣಿಕ ವರ್ಷದಿಂದಲೇ ಯೋಜನೆಯನ್ನು ಅನುಷ್ಠಾನಕ್ಕೆ ತರಲು ತೀರ್ಮಾನಿಸಲಾಗಿದೆ. ಈ ಶೈಕ್ಷಣಿಕ ವರ್ಷದಿಂದ ಪ್ರಥಮ ವರ್ಷದ ಪದವಿ ತರಗತಿಗೆ ಸೇರ್ಪಡೆಯಾಗುವ ವಿದ್ಯಾರ್ಥಿಗಳ ಕುಟುಂಬದ ಆರ್ಥಿಕ ಹಿನ್ನೆಲೆ ಹಾಗೂ ನೆರವಿನ ಆವಶ್ಯಕತೆಗಳನ್ನು ಪರಿಗಣಿಸಿ ಯೋಜನೆಯ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳ ಶಿಕ್ಷಣಾಭ್ಯಾಸದ ಖರ್ಚುಗಳನ್ನು ಭರಿಸಲು ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿಗಳು ಹಾಗೂ ದಾನಿಗಳಿಂದ ಶ್ರೀ ಶಾರದಾ ಆಸರೆ ಯೋಜನೆಯಡಿ ದತ್ತು ಸ್ವೀಕಾರ ಮಾಡಿಕೊಳ್ಳಲು ನೆರವು ಪಡೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ಪಿಯುಸಿ ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, ಭವಿಷ್ಯದ ಶಿಕ್ಷಣಕ್ಕೆ ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳು ಕಾಲೇಜು ಕಚೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆದು, ಅಗತ್ಯ ದಾಖಲೆಗಳೊಂದಿಗೆ ಪ್ರವೇಶ ಅರ್ಜಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಕಾಲೇಜು ಆಡಳಿತ ಮಂಡಳಿ ಸದಸ್ಯ ಸುಭಾಷ್ಚಂದ್ರ ಶೆಟ್ಟಿ ಬಾಂಡ್ಯ, ಪ್ರಾಂಶುಪಾಲ ದಯಾನಂದ ಎನ್. ಬಾಯರ್, ಹಳೆ ವಿದ್ಯಾರ್ಥಿ ಸಂಘದ ಸಟ್ವಾಡಿ ವಿಜಯ್ ಶೆಟ್ಟಿ, ಸುಧಾಕರ ಶೆಟ್ಟಿ ಬಾಂಡ್ಯ, ಡಾ. ನಿತ್ಯಾನಂದ ಶೆಟ್ಟಿ ಅಂಪಾರು, ಸದಾನಂದ ಬಳ್ಕೂರ್, ರಾಮಕಿಶನ್ ಹೆಗ್ಡೆ, ಕೆ.ವಿಕಾಸ್ ಹೆಗ್ಡೆ, ಸೌಮ್ಯಾ ಬಸ್ರೂರು, ರಮೇಶ್ ಆಚಾರ್, ಶ್ರೀನಾಥ್ ಪೂಜಾರಿ, ನರೇಶ್ ಬಿ., ನಿವೃತ್ತ ಪ್ರಾಂಶುಪಾಲರಾದ ಡಾ.ದಿನೇಶ್ ಹೆಗ್ಡೆ, ಪ್ರೊ. ರಾಧಾಕೃಷ್ಣ ಶೆಟ್ಟಿ, ಡಾ.ಚಂದ್ರಾವತಿ ಶೆಟ್ಟಿ ಉಪಸ್ಥಿತರಿದ್ದರು.

ಮೀನುಗಾರರಿಗೆ ಸವಲತ್ತು ವಿತರಣೆ



ಕುಂದಾಪುರ: ಮೀನುಗಾರಿಕೆ ಇಲಾಖೆಯಿಂದ ಕುಂದಾಪುರ ಕ್ಷೇತ್ರ ವ್ಯಾಪ್ತಿಯ ವಿವಿಧ ಫಲಾನುಭವಿಗಳಿಗೆ ವಿವಿಧ ಸಲಕರಣೆ ಹಾಗೂ ವಾಹನ ವಿತರಣೆ ಕಾರ್ಯಕ್ರಮ ಶಾಸಕರ ಕಾರ್ಯಾಲಯದಲ್ಲಿ ಗುರುವಾರ ನಡೆಯಿತು.

ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಜಿಲ್ಲಾ ವಲಯ ಯೋಜನೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 6 ಜನ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ ಕಿಟ್ ಹಾಗೂ ರಾಜ್ಯ ವಲಯ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಓರ್ವ ಫಲಾನುಭವಿಗೆ ನಾಲ್ಕು ಚಕ್ರ ವಾಹನ ಮತ್ತು 16 ಮಂದಿ ಸಾಂಪ್ರದಾಯಿಕ ಮೀನುಗಾರ ಫಲಾನುಭವಿಗಳಿಗೆ ಲೈಫ್ ಜಾಕೆಟ್‌ನ್ನು ವಿತರಿಸಿದರು. ಒಟ್ಟು 21 ಫಲಾನುಭವಿಗಳಿಗೆ ವಿವಿಧ ಸಲಕರಣೆ ಹಸ್ತಾಂತರಿಸಲಾಯಿತು. ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಆಶಾ, ಸಿಬ್ಬಂದಿಗಳು, ಮೀನುಗಾರರು ಮೊದಲಾದವರು ಉಪಸ್ಥಿತರಿದ್ದರು.

ಹೆದ್ದಾರಿ ಬದಿ ಕಸದ ಕೊಂಪೆಗೆ ಖೇದ




ಕೋಟ: ಹೆದ್ದಾರಿ ಬದಿಯಲ್ಲಿ ಕಸದ ಕೊಂಪೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಇದರ ಬಗ್ಗೆ ಮಣೂರು ಹಾಲು ಉತ್ಪಾದಕರ ಸಹಕಾರಿ ಸಂಘದ ಸಿಇಒ ಹರ್ಷ ಪೂಜಾರಿ ಖೇದ ವ್ಯಕ್ತಪಡಿಸಿದ್ದಾರೆ.

ಭಾನುವಾರ ಕೋಟದ ಪಂಚವರ್ಣ ಯುವಕ ಮಂಡಲ ಕೋಟ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಮಣೂರು ಫ್ರೆಂಡ್ಸ್ ಸಹಯೋಗದೊಂದಿಗೆ ಕೋಟ ಗ್ರಾ.ಪಂ ಎಸ್. ಎಲ್. ಆರ್. ಎಂ. ಘಟಕದ ಸಂಯೋಜನೆಯೊಂದಿಗೆ 299ನೇ ಭಾನುವಾರದ ಸ್ವಚ್ಛತಾ ಅಭಿಯಾನದಲ್ಲಿ ಅವರು ಮಾತನಾಡಿ, ಪಂಚವರ್ಣದ ಈ ಸ್ವಚ್ಛತಾ ಅಭಿಯಾನ ರಾಷ್ಟ್ರೀಯ ಹೆದ್ದಾರಿಯಲ್ಲುಂಟಾಗುವ ದೊಡ್ಡ ಪ್ರಮಾಣದ ತ್ಯಾಜ್ಯದ ಕೊಂಪೆಯನ್ನು ಇನ್ನಿಲ್ಲದಂತಾಗಿಸಿದ್ದಾರೆ. ಆದರೆ ಕಸ ಎಸೆಯುವ ಮನಸ್ಥಿತಿ ಅತ್ಯಂತ ಹೀನ ಎಂದರು.

ಈ ಸಂದರ್ಭದಲ್ಲಿ ಪಂಚವರ್ಣ ಯುವಕ ಮಂಡಲದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್, ಗಿರೀಶ್ ಆಚಾರ್, ಉಪಾಧ್ಯಕ್ಷ ದಿನೇಶ್ ಆಚಾರ್, ಪಂಚವರ್ಣ ಮಹಿಳಾ ಮಂಡಲದ ಸಂಚಾಲಕಿ ಸುಜಾತ ಬಾಯರಿ, ಟ್ರಾವೆಲಿಂಕ್ಸ್ ಫ್ರೆಂಡ್ಸ್‌ನ ನಾಗರಾಜ್ ಅಮೀನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಾ. ಹೆ. ಕಾಮಗಾರಿ ಯೋಜನೆ

ಅಡ್ಕತ್ತಬೈಲಿನಲ್ಲಿ ರಸ್ತೆ ಬಂದ್: ಪ್ರಯಾಣಿಕರಿಗೆ ತೀವ್ರ ಸಮಸ್ಯೆ



ಕಾಸರಗೋಡು: ರಾಷ್ಟ್ರೀಯ ಹೆದ್ದಾರಿಯ ತೆಕ್ಕಿಲ್ – ಬೇವಿಂಜೆ ಭಾಗಗಳಲ್ಲಿ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದರಿಂದ ಅಡ್ಕತ್ತಬೈಲಿನಲ್ಲಿ ಹೈವೇಯನ್ನು ಬಂದ್ ಮಾಡಲಾಗಿದೆ. ಇದರಿಂದಾಗಿ ಪ್ರಯಾಣಿಕರು ಅಪಾರ ಸಮಸ್ಯೆ ಎದುರಿಸುತ್ತಿದ್ದಾರೆ.

ಚೆರ್ಕಳ ಭಾಗಕ್ಕೆ ತೆರಳುವ ಪ್ರಯಾಣಿಕರ ವಾಹನಗಳು ರಾಷ್ಟ್ರೀಯ ಹೆದ್ದಾರಿ ಮೂಲಕ ಹಾದುಹೋಗಬೇಕಾಗುತ್ತವೆ. ಆದರೆ ಈಗ ಅಡ್ಕತ್ತಬೈಲಿನಲ್ಲಿ ಪ್ರವೇಶ ತಡೆದಿರುವುದರಿಂದ ಸರ್ವೀಸ್ ರಸ್ತೆಯಲ್ಲೇ ಸಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕಾಸರಗೋಡು ನಗರದಲ್ಲಿ ಭಾರೀ ವಾಹನ ದಟ್ಟಣೆ ಸಂಭವಿಸುತ್ತಿದೆ.

ಸಂಚಾರ ದಟ್ಟಣೆಗೆ ಕಾರಣ

ಮಂಗಳೂರು ಭಾಗದಿಂದ ಬರುವ ವಾಹನಗಳು ಒಂದೊಂದಾಗಿ ಅಡ್ಕತ್ತಬೈಲಿನಿಂದ ಸರ್ವೀಸ್ ರಸ್ತೆಗೆ ಪ್ರವೇಶಿಸುವಾಗ ದೀರ್ಘಕಾಲ ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ. ಇದರಿಂದಾಗಿ ಅಪಘಾತಗಳು ಕೂಡಾ ನಡೆಯುತ್ತಿರುತ್ತವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕಣ್ಣೂರು ಭಾಗದಿಂದ ಕಾಸರಗೋಡು ಕಡೆಗೆ ಆಗಮಿಸುವ ವಾಹನಗಳು ಕಾಞಂಗಾಡು ಸೌತ್‌ನಿಂದ ರಸ್ತೆ ಮೂಲಕ ಚಟ್ಟಂಚಾಲ್ ಮೇಲ್ಸೇತುವೆಯನ್ನು ಪ್ರವೇಶಿಸದೆ ಸರ್ವೀಸ್ ರಸ್ತೆಯಲ್ಲಿ ಸಂಚರಿಸಿ ದೇಳಿ ರಸ್ತೆ ಮೂಲಕ ಕೆಎಸ್‌ಟಿಪಿ ರಸ್ತೆಯಲ್ಲಿ ಪ್ರಯಾಣ ಮುಂದುವರಿಸಬೇಕಾಗಿದೆ.

ಬಹಳಷ್ಟು ಗೊಂದಲ

ಮಂಗಳೂರು ಭಾಗದಿಂದ ಕಣ್ಣೂರು ಭಾಗಕ್ಕೆ ತೆರಳುವ ವಾಹನಗಳು ಅಡ್ಕತ್ತಬೈಲಿನಿಂದ ಸರ್ವೀಸ್ ರಸ್ತೆ ಮೂಲಕ ಸಂಚರಿಸಬೇಕು ಅಲ್ಲದೆ ಕಾಸರಗೋಡು ನಗರದ ಹಳೆಯ ಪ್ರೆಸ್ ಕ್ಲಬ್ ಜಂಕ್ಷನ್‌ನಿಂದ ಕೆಎಸ್‌ಟಿಪಿ ರಸ್ತೆ ಮೂಲಕ ಕಣ್ಣೂರು ಭಾಗಕ್ಕೆ ತೆರಳಬೇಕು ಎಂಬ ಅಧಿಕಾರಿಗಳ ನಿರ್ದೇಶನವು ಪ್ರಯಾಣಿಕರಿಗೆ ಬಹಳಷ್ಟು ಗೊಂದಲ, ಸಂಕಷ್ಟಗಳಿಗೆ ಕಾರಣವಾಗುತ್ತಿದೆ. ತೆಕ್ಕಿಲ್ – ಬೇವಿಂಜೆ ರಾಷ್ಟ್ರೀಯ ಹೆದ್ದಾರಿಯನ್ನು ಆದಷ್ಟು ಶೀಘ್ರದಲ್ಲಿ ಅಭಿವೃದ್ಧಿಗೊಳಿಸಿ ವಾಹನಗಳ ಸಂಚಾರಕ್ಕೆ ತೆರೆದು ಕೊಡಬೇಕೆಂಬ ಆಗ್ರಹ ವ್ಯಾಪಕಗೊಂಡಿದೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-51) ಡ್ರಾ ಏಪ್ರಿಲ್ 19ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MD 586155 (PATHANAMTHITTA)
Consolation Prize Rs.5,000/-
MA 586155 .MB 586155 MC 586155 ME 586155
MF 586155 MG 586155 MH 586155 MJ 586155
MK 586155 ML 586155 MM 586155
2nd Prize Rs.25,00,000/- [25 Lakhs]
MF 878649 (ATTINGAL)
3rd Prize Rs.5,00,000/- [5 Lakhs]
ML 174415 (KOLLAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0384 0855 1520 1791 1907 2043 3810 4735 5696 5861
7385 7441 8012 8421 8491 8978 9102 9243 9609
5th Prize Rs.2,000/-
0436 0690 5414 6786 7981 9287
6th Prize Rs.1,000/-
0123 0390 0858 1154 1795 2519 2817 2920 3034 3059
3386 3539 3734 3922 4475 4878 5365 5911 6001 7702
8016 8024 8763 9086 9535
7th Prize Rs.500/-
0023 0035 0059 0161 0249 0398 0514 0823 0910 1138
1147 1164 1194 1502 1656 1711 1869 1883 1950 2019
2097 2276 2300 2364 3303 3361 3465 3575 3640 3643
3929 4011 4097 4238 4257 4290 4396 4401 4451 4543
4648 4685 4923 4949 5152 5162 5469 6091 6120 6446
6458 6479 6610 6637 6707 6759 7145 7152 7227 7268
7487 7821 8014 8034 8211 8439 8482 8666 9015 9047
9153 9175 9191 9219 9643 9789
8th Prize Rs.200/-
0078 0211 0287 0326 0557 0590 0638 0851 0897 0960
1306 1321 1625 1820 1866 1925 1933 1976 2450 2500
2638 2924 3014 3017 3141 3217 3223 3278 3494 3531
3577 3642 3703 3718 3752 4036 4085 4187 4364 4467
4492 4657 4747 4886 4932 5035 5139 5142 5147 5336
5339 5551 5589 5798 5842 5870 5909 6298 6329 6406
6490 6605 6780 6938 6968 7119 7222 7291 7428 7548
7670 7671 7680 7699 7709 7739 7759 7833 7929 8105
8139 8188 8303 8636 8668 9332 9363 9539 9585 9597
9657 9781
9th Prize Rs.100/-
0005 0164 0192 0230 0245 0280 0377 0381 0419 0657
0734 1123 1169 1212 1294 1296 1367 1381 1433 1444
1477 1494 1583 1641 1743 1765 1787 1806 1898 2024
2076 2099 2301 2362 2522 2575 2620 2660 2723 2762
2764 2974 3067 3104 3119 3129 3144 3183 3272 3300
3316 3347 3372 3395 3424 3514 3525 3951 3960 3962
3987 4193 4325 4452 4544 4555 4718 4724 4726 4754
4946 4957 5040 5052 5157 5258 5275 5387 5633 5719
5788 5948 5964 6173 6242 6404 6514 6607 6713 6724
6739 6815 6880 6930 6970 7174 7201 7304 7305 7379
7458 7472 7605 7613 7891 7894 7911 7963 8004 8005
8020 8099 8197 8230 8265 8278 8286 8340 8418 8450
8538 8550 8624 8657 8665 8700 8762 8775 8805 8945
9161 9193 9301 9312 9321 9329 9354 9368 9437 9528
9530 9587 9625 9651 9660 9672 9720 9852 9895 9990

ಅನಾರೋಗ್ಯ: ಸೆಕ್ಯೂರಿಟಿ ಗಾರ್ಡ್ ಸಾವು

ಉಡುಪಿ: ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದ ಸೆಕ್ಯೂರಿಟಿ ಗಾರ್ಡ್ ಒಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಬಾರಕೂರು ನಿವಾಸಿ ಹರೀಶ (47) ಮೃತಪಟ್ಟವರು. ಇವರು ಬೈಕಾಡಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಕಳೆದ ಕೆಲವು ಸಮಯದಿಂದ ಲಿವರ್ ಗಡ್ಡೆ ಸಮಸ್ಯೆಯಿಂದ ಚಿಕಿತ್ಸೆ ಪಡೆಯುತ್ತಿದ್ದ ಇವರು, ಏ. 17ರಂದು ಹನೇಹಳ್ಳಿ ಗ್ರಾಮದ ದೇವಸ್ಥಾನದ ಸಮೀಪದ ಕಂಪೌಂಡ್ ಬಳಿ ಬಿದ್ದುಕೊಂಡಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಸಂಜೆ ವೇಳೆಗೆ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಬ್ರಹ್ಮಾವರ ಪೊಲೀಸರು ಈ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಮೂರ್ಜೆಯಲ್ಲಿ ಸರಣಿ ಅಪಘಾತ

ಬಂಟ್ವಾಳ: ಪುಂಜಾಲಕಟ್ಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂರ್ಜೆ ಜಂಕ್ಷನ್‌ನಲ್ಲಿ ನಾಲ್ಕು ವಾಹನಗಳ ಮಧ್ಯೆ ಶುಕ್ರವಾರ ಸರಣಿ ಅಪಘಾತ ಸಂಭವಿಸಿದೆ. ಈ ಘಟನೆಯಿಂದ ಸಣ್ಣಪುಟ್ಟ ಗಾಯಗಳೊಂದಿಗೆ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ. ಕೆಎಸ್.ಆರ್.ಟಿ.ಸಿ. ಬಸ್ , ಬೈಕ್ ಮತ್ತು ಗೂಡ್ಸ್ ರಿಕ್ಷಾಗಳ ನಡುವೆ ಅಪಘಾತ ಸಂಭವಿಸಿದೆ. ಮೂರ್ಜೆ ಕಡೆಯಿಂದ ಬರುತ್ತಿದ್ದ ಗೂಡ್ಸ್ ರಿಕ್ಷಾ ಹೆದ್ದಾರಿಗೆ ಎಂಟ್ರಿ ಕೊಡುತ್ತಿದ್ದ ವೇಳೆ ಬಂಟ್ವಾಳ ಕಡೆಯಿಂದ ತೆರಳುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ ಗೂಡ್ಸ್ ರಿಕ್ಷಾಕ್ಕೆ ಡಿಕ್ಕಿಯಾಗಿದೆ. ಇದೇ ವೇಳೆ ಪುಂಜಾಲಕಟ್ಟೆ ಕಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ರಿಕ್ಷಾ ಡಿಕ್ಕಿಯಾಗಿದೆ ಎಂದು ಹೇಳಲಾಗಿದೆ.

ಬೆಳ್ತಂಗಡಿ ತಾಲೂಕು ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘ

ಮೇ 25ರಂದು ರಜತ ಸಂಭ್ರಮ ಪ್ರಬುದ್ಧ ಕಟ್ಟಡದ ಉದ್ಘಾಟನೆ

ಬೆಳ್ತಂಗಡಿ : ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘ, ಬೆಳ್ತಂಗಡಿ ತಾಲೂಕು ರಾಜ್ಯ ಸರಕಾರಿ ನಿವೃತ್ತ ನೌಕರರ ಮತ್ತು ಹಿರಿಯ ನಾಗರೀಕ ಸೇವಾ ಸೇವಾ ಸಂಸ್ಥೆ ಕೆಲ್ಲಗುತ್ತು ಇದರ ರಜತ ಸಂಭ್ರಮ ಪ್ರಬುದ್ಧ ಕಟ್ಟಡದ ಉದ್ಘಾಟನೆ ಏ. 25 ರಂದು ಕೆಲ್ಲಗುತ್ತು ಅಚ್ಚಿನಡ್ಕದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ. ವಿಠಲ ಶೆಟ್ಟಿ ಹೇಳಿದರು.

ಅವರು ಬೆಳ್ತಂಗಡಿ ಪತ್ರಿಕಾ ಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಬೆಳ್ತಂಗಡಿ ತಾಲೂಕು ಸರಕಾರಿ ನಿವೃತ್ತ ನೌಕರರ ಸಂಘ 2000ನೇ ಇಸವಿಯಲ್ಲಿ ಅಂದಿನ ನಿವೃತ್ತ ಜಂಟಿ ನಿರ್ದೇಶಕರಾಗಿದ್ದ ಪಿ. ವೆಂಕಟರಮಣರ ನೇತೃತ್ವದಲ್ಲಿ ಕೆಲವೇ ಮಂದಿಯ ಸದಸ್ಯತ್ವದೊಂದಿಗೆ ಆರಂಭಗೊಂಡಿತು. ಪಿ. ಕೊಕ್ಕೇಶ್ವರರು ಪ್ರಥಮ ಕಾರ್ಯದರ್ಶಿಯಾಗಿದ್ದರು. ಎರಡು ವರ್ಷಗಳ ಬಳಿಕ ಈಗಿನ ಬಿ. ವಿಠಲ ಶೆಟ್ಟಿಯವರನ್ನು ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಬಳಿಕ ಸಂಘವು ಸದಸ್ಯತನ ನೊಂದಣಿ ಸಹಿತ ಹತ್ತು ಹಲವು ಜನೋಪಯೋಗಿ ಕಾರ್ಯಕ್ರಮಗಳು ಮತ್ತು ವಿವಿಧ ಚಟುವಟಿಕೆಗಳೊಂದಿಗೆ ನಾಗಾಲೋಟದಿಂದ ಮುನ್ನಡೆಯಿತು ಎಂದು ವಿವರ ನೀಡಿದರು.

ಮಾಜಿ ಶಾಸಕ, ಮುಖ್ಯ ಸಚೇತಕರಾಗಿದ್ದ ದಿ. ವಸಂತ ಬಂಗೇರರ ಕಾಲದಲ್ಲಿ ಸಂಘಕ್ಕೆ ಸ್ವಂತ ಸೂರು ಹೊಂದುವರೆ ಪ್ರಯತ್ನಿಸಿ ಜಿಲ್ಲಾಧಿಕಾರಿಗಳು ಮತ್ತು ಬಂಗೇರ ಶಿಫಾರಸಿನೊಂದಿಗೆ ಸರಕಾರದ ತನ್ನ ಪ್ರಯತ್ನಪಟ್ಟು ಕಾಶಿಬೆಟ್ಟುವಿನಲ್ಲಿ ಸ್ಥಳ ಗುರುತಿಸಿದರೂ ಕಾನೂನು ತೊಡಕಿನಿಂದ ಸಾಧ್ಯವಾಗಲಿಲ್ಲ. 10 ವರ್ಷಗಳಿಂದ ನಮ್ಮೊಂದಿಗಿದ್ದು, ನಮ್ಮ ಸಂಘದ ಸದಸ್ಯೆ ಅಚ್ಚಿನಡ್ಕ ವೀರಮ್ಮನವರು ತನ್ನ ತಾಯಿಯ ಹೆಸರಿನಲ್ಲಿ ಕಟ್ಟಡ ರಚನೆ ಮಾಡುವ ಶರತ್ತಿನೊಂದಿಗೆ ಸಂಘಕ್ಕೆ 0.10 ಎಕ್ರೆ ಸ್ಥಳವನ್ನು ದಾನ ಮಾಡುವುದಾಗಿ ತಿಳಿಸಿದಾಗ ಸದಸ್ಯರೆಲ್ಲರೂ ಒಮ್ಮತದಿಂದ ಶರತ್ತಿಗೆ ಒಪ್ಪಿಕೊಂಡು ಕಾನೂನಿನ ತೊಡಕಾಗದಂತೆ ಈ ಬಗ್ಗೆ ಬೆಳ್ತಂಗಡಿ ತಾಲೂಕು ಸರಕಾರಿ ನಿವೃತ್ತ ನೌಕರರು ಮತ್ತು ಹಿರಿಯ ನಾಗರಿಕರ ಸೇವಾ ಸಂಸ್ಥೆಯನ್ನು ಹುಟ್ಟು ಹಾಕಿ ಕಾರ್ಯಾರಂಭ ಮಾಡಿದಾಗ ಆರಂಭದಲ್ಲಿ ನಮಗೆ ಸವಾಲಾಗಿ ಪರಿಣಮಿಸಿದರೂ, ಮುಂದೆ ಪ್ರಬುದ್ಧ ಹಿರಿಯರ ಸ್ವಾಭಿಮಾನ ಮತ್ತು ದೃಢಸಂಕಲ್ಪದಿಂದ ಸುಮಾರು 40 ಲಕ್ಷ ರೂಪಾಯಿ ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಎಂದರು.



ಕಟ್ಟಡದ ಉದ್ಘಾಟನೆಯನ್ನು ಶಾಸಕ ಹರೀಶ್ ಪೂಂಜ ನೆರವೇರಿಸಲಿದ್ದಾರೆ. ಉಜಿರೆ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶಚಂದ್ರ ಜ್ಯೋತಿ ಬೆಳಗಿಸಿ, ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ ಆಳ್ವ ನಾಮಫಲಕ ಅನಾವರಣ ಮಾಡುವರು. ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಮೆಸ್ಕಾಂ ಅಧ್ಯಕ್ಷ ಕೆ. ಕೆ ಹರೀಶ್ ಕುಮಾರ್, ಎಕ್ಸೆಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸುಮಂತ್ ಕುಮಾರ್ ಜೈನ್, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ ಮತ್ತಿತರ ಗಣ್ಯರು, ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ವಿಶ್ವಾಸ್ ರಾವ್, ಉಪಾಧ್ಯಕ್ಷರುಗಳಾದ ಸನ್ಮತ್ ಕುಮಾರ್, ಕುಸುಮಾವತಿ, ಕೋಶಾಧಿಕಾರಿ ಜಗನ್ನಿವಾಸ ರಾವ್, ಸ್ವಾಗತ ಸಮಿತಿಯ ಕಾರ್ಯದರ್ಶಿ ಆರ್. ಎನ್. ಪುವಾಣಿ, ಸ್ಥಳ ದಾನಿ ವೀರಮ್ಮ ಉಪಸ್ಥಿತರಿದ್ದರು.

ಕಿರುಸುದ್ದಿ

ಹಲ್ಲಿನ ಆಸ್ಪತ್ರೆಗೆ ತೆರಳಿದ ಮಹಿಳೆ ಹೃದಯಘಾತದಿಂದ ನಿಧನ

ಉಪ್ಪಳ: ಹಲ್ಲಿನ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದ ಮಹಿಳೆಗೆ ಹೃದಯಘಾತ ಉಂಟಾಗಿ ನಿಧನ ಹೊಂದಿದ ಘಟನೆ ನಡೆದಿದೆ. ಉಪ್ಪಳ ಸಮೀಪದ ಕೋಡಿಬೈಲು ನಿಡುಮದಿ ನಿವಾಸಿ ದಿ.ಬೋಜರವರ ಪತ್ನಿ ಸಾವಿತ್ರಿ (55) ಎಂಬವರು ನಿಧನ ಹೊಂದಿದ್ದಾರೆ. ಗುರುವಾರ ಸಂಜೆ ಅವರು ಉಪ್ಪಳದ ಖಾಸಗಿ ಆಸ್ಪತ್ರೆಗೆ ಹಲ್ಲಿನ ಚಿಕಿತ್ಸೆಗೆಂದು ತೆರಳಿದ್ದರು. ಈ ವೇಳೆ ಅವರಿಗೆ ಹೃದಯಘಾತ ಉಂಟಾಗಿದ್ದು, ಕೂಡಲೇ ಸ್ಥಳೀಯ ಆಸ್ಪತ್ರೆಗೆ ಸಾಗಿಸಿದರೂ ಅಷ್ಟರಲ್ಲಿ ನಿಧನ ಹೊಂದಿದ್ದಾರೆ. ಮೃತರು ಮಕ್ಕಳಾದ ರೂಪೇಶ್, ರೂಪಿಕ ಅವರನ್ನು ಆಗಲಿದ್ದಾರೆ.

ಸಮುದ್ರದಲ್ಲಿ ನಾಪತ್ತೆಯಾದ ಯುವಕನ ಮೃತದೇಹ ಪತ್ತೆ

ಮಂಜೇಶ್ವರ: ಕುಂಡುಕೊಳಗೆ ಸಮುದ್ರದಲ್ಲಿ ನಾಪತ್ತೆಯಾದ ಯುವಕನ ಮೃತದೇಹ ಗುರುವಾರ ಸಂಜೆ ಪತ್ತೆಯಾಗಿದೆ.ಮಂಜೇಶ್ವರ ಚೌಕಿ ನಿವಸಿ ಉಮರುಲ್ ಫಾರೂಕ್ ಎಂಬವರ ಪುತ್ರ ಮೊಹಮ್ಮದ್ ಸೈನುಲ್ ಆಬಿದ್ (18) ನ ಮೃತದೇಹವನ್ನು ಮೀನು ಕಾರ್ಮಿಕರು ಪತ್ತೆ ಹಚ್ಚು ದಡಕ್ಕ ತಲುಪಿಸಿದ್ದಾರೆ. ಬುಧವಾರ ಸಂಜೆ ಕುಂಡುಕೊಳಗೆ ಬೀಚ್‌ಗೆ ಸಂಬಂಧಿಕರೊಂದಿಗೆ ತೆರಳಿದ್ದ ಸೂನುಲ್ ಆಬಿದ್ ಸಮುದ್ರ ಕಿನಾರೆಯಲ್ಲಿ ನಿಂತಿದ್ದ ವೇಳೆ ಬಲವಾದ ಆಲೆಯಲ್ಲಿ ಸಿಲುಕಿ ನಾಪತ್ತೆಯಾಗಿದ್ದನು. ಮಂಜೇಶ್ವರ ಪೊಲೀಸರು, ಅಗ್ನಿಶಾಮಕ ದಳ, ಕರಾವಳಿ ಪೊಲೀಸರು ತಕ್ಷಣ ಶೋಧ ನಡೆಸಿದರೂ ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಇದರಿಂದ ಗುರುವಾರ ಪುನಃ ಹುಡುಕಾಟ ಆರಂಭಿಸಲಾಗಿತ್ತು. ಈ ಮಧ್ಯೆ ಮಂಜೇಶ್ವರ ಕಡಪ್ಪುರ ನಿವಾಸಿಗಳು, ಮೀನು ಕಾರ್ಮಿಕರು ಹುಡುಕಾಟ ನಡೆಸುತ್ತಿದ್ದ ವೇಳೆ ಕುಂಡುಕೊಳಕೆಯಿಂದ ಸುಮಾರು 2 ಕಿಲೋಮೀಟರ್ ದೂರದಲ್ಲಿ ಮೃತದೇಹ ಪತ್ತೆಯಾಗಿದೆ. ಬಳಿಕ ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ಉದ್ಯಾವರ ಮಸೀದಿ ಪರಿಸರದಲ್ಲಿ ಅಂತ್ಯ ಸಂಸ್ಕಾರ ನಡೆಸಲಾಯಿತು. ಮೃತರು ತಂದೆ, ತಾಯಿ ರಸೀನಾ, ಓರ್ವ ಸಹೋದರ, ಮೂವರು ಸಹೋದರಿಯರನ್ನು ಅಗಲಿದ್ದಾರೆ.

ಇಲಿ ವಿಷ ಸೇವಿಸಿದ್ದ ವ್ಯಕ್ತಿ ಮೃತ್ಯು

ಬದಿಯಡ್ಕ: ವಿಷ ಸೇವಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದ ವ್ಯಕ್ತಿ ಮೃತಪಟ್ಟರು. ಕುಂಬ್ಡಾಜೆ ಉಬ್ರಂಗಳ ಪಡುಮೂಲೆ ನಿವಾಸಿ ಬಾಲಕೃಷ್ಣ ಪೂಜಾರಿಯವರ ಪುತ್ರ ಅಕ್ಷಿತ್ (21) ಮೃತಪಟ್ಟವರು. ಅವರು ಎ.ಸಿ.ಮೆಕ್ಯಾನಿಕ್ ಆಗಿದ್ದರು. ಏಪ್ರಿಲ್ 6ರಂದು ಮನೆಯಲ್ಲಿ ಇಲಿವಿಷ ಸೇವಿಸಿ ಅಸ್ವಸ್ಥಗೊಂಡ ಸ್ಥಿತಿಯಲ್ಲಿ ಅಕ್ಷಿತ್ ಪತ್ತೆಯಾಗಿದ್ದರು. ಕೂಡಲೇ ಅವರನ್ನು ಮಂಗಳೂರಿನ ಆಸ್ಪತ್ರೆಗೆ ತಲುಪಿಸಲಾಗಿತ್ತು. ಆದರೆ ಸ್ಥಿತಿ ಗಂಭೀರವಾಗಿದ್ದ ಹಿನ್ನೆಲೆಯಲ್ಲಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಗುರುವಾರ ಮಧ್ಯಾಹ್ನ ಅವರು ಮೃತಪಟ್ಟರು. ಮೃತರು ತಂದೆ, ತಾಯಿ ಶಶಿಕಲಾ, ಸಹೋದರ ಅವಿನಾಶ್, ಸಹೋದರಿ ಗೀತಾಂಜಲಿ ಅವರನ್ನು ಆಗಲಿದ್ದಾರೆ.

ಮುಳ್ಳೇರಿಯ ಪೇಟೆಯಲ್ಲಿ ಘರ್ಷಣೆ: ಕಾರಡ್ಕ ಗ್ರಾಮ ಪಂಚಾಯತ್ ಸದಸ್ಯ ಬಂಧನ

ಕಾಸರಗೋಡು: ಮುಳ್ಳೇರಿಯ ಪೇಟೆಯಲ್ಲಿ ನಡೆದ ಘರ್ಷಣೆ ಪ್ರಕರಣದಲ್ಲಿ ಕಾರಡ್ಕ ಗ್ರಾಮ ಪಂಚಾಯತ್ ಸದಸ್ಯ, ಮುಳ್ಳೇರಿಯ ನಿವಾಸಿ, ಮುಳ್ಳೇರಿಯ ಪೇಟೆಯಲ್ಲಿ ಟೈಲ್ಸ್ ವ್ಯಾಪಾರಿಯಾಗಿರುವ ಎಂ.ಶರೀಫ್ (42) ಎಂಬಾತನನ್ನು ಆದೂರು ಪೊಲೀಸರು ಬಂಽಸಿದ್ದಾರೆ. ಕಾರಡ್ಕ ಪಂಚಾಯತ್‌ನ 12ನೇ ಬಳಕ್ಕ ವಾರ್ಡ್ ಮುಸ್ಲಿಂಲೀಗ್ ಸದಸ್ಯನಾಗಿರುವ ಆರೋಪಿಗೆ ಕಾಸರಗೋಡು ನ್ಯಾಯಾಲಯವು ಎರಡು ವಾರಗಳ ನ್ಯಾಯಾಂಗ ಬಂಧನ ವಿಽಸಿದೆ. ಕಳೆದ ಮಾರ್ಚ್ 5ರಂದು ಸಂಜೆ ಘರ್ಷಣೆ ಪ್ರಕರಣ ನಡೆದಿತ್ತು. ಮುಳ್ಳೇರಿಯ ಜುಮಾ ಮಸೀದಿ ಮುಂಭಾಗದಲ್ಲಿ ತಂಡವೊಂದು ಯುವಕನನ್ನು ತಡೆದು ನಿಲ್ಲಿಸಿ ಆಕ್ರಮಿಸಿದ ಪ್ರಕರಣದಲ್ಲಿ ಎಂ.ಶರೀಫ್ ಆರೋಪಿಯಾಗಿದ್ದಾನೆ. ಆದೂರು ಪೂತಪ್ಪಲ ನಿವಾಸಿ ಮುಹಮ್ಮದ್ ರೈಸ್ (18) ಎಂಬವರ ದೂರಿನಂತೆ ಒಟ್ಟು 15 ಮಂದಿ ವಿರುದ್ಧ ಪೊಲೀಸರು ಕೇಸು ದಾಖಲಿಸಿಕೊಂಡಿದ್ದರು.

ವ್ಯಕ್ತಿ ಆತ್ಮಹತ್ಯೆ

ಕಾಸರಗೋಡು: ಬೇಡಗಂ ಪೊಲೀಸ್ ಠಾಣೆ ವ್ಯಾಪ್ತಿಯ ಪೆರ್ಲಡ್ಕದಲ್ಲಿ ಕುಂಞಿರಾಮನ್ ಎಂಬವರ ಪುತ್ರ ಟಿ.ಅಶೋಕನ್ (43) ಮರವೊಂದಕ್ಕೆ ನೇಣು ಬಿಗಿದು ಆತ್ಮಹತ್ಯೆಗೈದಿದ್ದಾರೆ. ಈ ಹಿಂದೆ ಗಲ್ಫ್‌ನಲ್ಲಿದ್ದ ಆವರು ನಂತರ ಊರಿಗೆ ಬಂದು ಆಟೋ ಚಾಲಕರಾಗಿ ದುಡಿಯುತ್ತಿದ್ದರು. ಬೇಡಗಂ ಪೊಲೀಸರು ಕೇಸು ದಾಖಲಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಹೇಮಾವತಿ, ನೀರಪಲ್ಕೆ, ಗಾಡಿಗದ್ದೆ, ಪಾವೂರು.
2. ವಿಜಿತ್ ಆರ್. ಅತ್ತಾರ್, ವಿತಮೊಗರು ಗುತ್ತು ವಯಾ ಗುರುಪುರ.
3. ಭಾಸ್ಕರ ಶೆಟ್ಟಿ, 'ಅಕ್ಷಯ ನಿಲಯ', ಶಕ್ತಿನಗರ ವಯಾ ಕುಲಶೇಖರ.
4. ದಿನೇಶ್ ಕುಲಾಲ್, ಜಗದೀಶ್ ಕುಲಾಲ್, ಹೋಮಲಿ, ಚೌಕಮನೆ, ಪಣೋಲಿಬೈಲು, ಸಜಿಪ ನಡು.
5. ಜ್ಞಾನೇಶ್ ಆಳ್ವ ಮೊಗರು ಮನೆ ಸಾಯಿಧಾಮ ಗಾಂಧಿನಗರ ಕಾವೂರು.
6. ಸುಂದರ ಮೂಲ್ಯ, ತಾಂಬಡಿ ಹೌಸ್, ಅಶ್ವತ್ಥಪುರ, ತೆಂಕಮಿಜಾರು.
7. ಶಶಿಧರ್ ಬಳ್ಳಾಲ್ ಸಿ.ಯಸ್., 'ಕೃಷ್ಣಾನುಗ್ರಹ', ಶಾಸನ ಅಪಾರ್ಟ್ಮೆಂಟ್, ಕುತ್ತಾರು, ತೊಕ್ಕೊಟ್ಟು

ಶ್ರೀ ಧರ್ಮಸ್ಥಳ ಮೇಳ
ಗಣೇಶ್‌ಪುರ ಕಾಟಿಪಳ್ಳದಲ್ಲಿ
ಮಿತ್ರವೃಂದ, ಕಾಟಿಪಳ್ಳ

ಶ್ರೀ ಸಾಲಿಗ್ರಾಮ ಮೇಳ
ಹಳಗ ಕುಳ್ಳುಂಡೆಯಲ್ಲಿ ಬಯಲಾಟ

ಶ್ರೀ ಪೆರ್ಡೂರು ಮೇಳ
ಕೋಡ್ತಣಿಯಲ್ಲಿ –
ಸಂಪೂರ್ಣ ಶ್ರೀ ದೇವಿ ಮಹಾತ್ಮೆ

ಶ್ರೀ ಹನುಮಗಿರಿ ಮೇಳ
ಬನ್ನಂಜೆಯಲ್ಲಿ

ಶ್ರೀ ಪಾವಂಜೆ ಮೇಳ
ಕರಾವಳಿ ಕಾಲೇಜು ಬಂಗ್ರ ಕೂಳೂರಿನಲ್ಲಿ
ಛಾಯಾನಂದನ



ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಸಮಾಲೋಚನೆ, ವಿದ್ಯಾರ್ಥಿ ಕ್ಷೇಮಪಾಲನೆ, ತರಬೇತಿ ಮತ್ತು ಉದ್ಯೋಗ ವಿಭಾಗವಾದ ಅಭ್ಯುದಯದ ಅಡಿಯಲ್ಲಿ ಅನ್ನದಾನ ಕ್ಲಬ್‌ನ ವಿದ್ಯಾರ್ಥಿಗಳು ಕಾಲೇಜಿನಲ್ಲಿ ದಾನಕ್ಕಾಗಿ ಅಕ್ಕಿ ಸಂಗ್ರಹ ಅಭಿಯಾನವನ್ನು ನಡೆಸಿದರು. ಇದರ ಮೂಲಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ 110 ಕೆಜಿ ಅಕ್ಕಿಯನ್ನು ಕಾರ್ಕಳದ ಸುರಕ್ಷಾ ಆಶ್ರಮಕ್ಕೆ ದಾನ ಮಾಡಿದರು.

ಕಾರ್ಮಿಕರ ಕೊರತೆ, ಕಚ್ಚಾವಸ್ತು ಅಭಾವ: ಸಿವಿಲ್ ಗುತ್ತಿಗೆದಾರರ ಸಂಘ ತೀವ್ರ ಕಳವಳ

ಮಂಗಳೂರು: ದೇಶದ ವಿವಿಧ ರಾಜ್ಯಗಳಲ್ಲಿ ಚುನಾವಣೆ, ಎಸ್‌ಐಆರ್ ಪ್ರಕ್ರಿಯೆಗಳು ನಡೆಯುತ್ತಿರುವ ಕಾರಣ ಹೊರ ರಾಜ್ಯಗಳ ಕುಶಲಕರ್ಮಿ ಕಾರ್ಮಿಕರು ತಮ್ಮ ಊರಿಗೆ ತೆರಳಿರುವ ಕಾರಣ ದ.ಕ. ಜಿಲ್ಲೆಯಲ್ಲಿ ಕಟ್ಟಡ ಕಾಮಗಾರಿ ಕ್ಷೇತ್ರ ತಲ್ಲಣಗೊಂಡಿದೆ. ಕಾರ್ಮಿಕರು ಹಾಗೂ ಕಚ್ಚಾ ವಸ್ತುಗಳ ಅಭಾವದಿಂದ ನಿರ್ಮಾಣ ಕ್ಷೇತ್ರ ಸ್ತಬ್ಧಗೊಳ್ಳುವ ಆತಂಕ ಎದುರಾಗಿದೆ ಎಂದು ದ.ಕ. ಜಿಲ್ಲಾ ಸಿವಿಲ್ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಧ ಅಧ್ಯಕ್ಷ ಮಹಾಬಲ ಕೊಟ್ಟಾರಿ, ಕಳೆದ ಕೆಲವು ವರ್ಷಗಳಿಂದ ನಿರ್ಮಾಣ ಕ್ಷೇತ್ರ ಅಗತ್ಯ ಮೂಲವಸ್ತುಗಳಾ ಕೆಂಪುಕಲ್ಲು, ಮರಳು, ಮತ್ತು ಎಂಸ್ಯಾಂಡ್ ಅಭಾದಿಂದ ತತ್ತರಿಸುತ್ತಿದೆ. ಇದೀಗ ಉತ್ತರ ಭಾರತ ಕೆಲವು ರಾಜ್ಯಗಳಲ್ಲಿ ನಡೆಯಲಿರುವ ಮತಪಟ್ಟಿ ಪರಿಷ್ಕರಣೆ, ಚುನಾವಣೆ ಹಾಗೂ ಹಬ್ಬದ ಕಾರಣ ಊರಿಗೆ ತೆರಳಿರುವ ಕಾರ್ಮಿಕರು ಹಿಂತಿರುಗದಿರುವುದು ಕ್ಷೇತ್ರಕ್ಕೆ ಮತ್ತಷ್ಟು ಹೊಡೆತ ನೀಡಿದೆ ಎಂದರು.

ಸರಕಾರದ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಂಪು ಕಲ್ಲು ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುತ್ತಿಲ್ಲ. ನಾನ್ ಸಿಆರ್‌ಝೆಡ್ ಪ್ರದೇಶದ ಮರಳು ಅರ್ಧಕರ್ಧ ಉಪಯೋಗಕ್ಕೆ ಬರುವುದಿಲ್ಲ. ಎಂಸ್ಯಾಂಡ್ ಕೂಡಾ ಕೊರತೆ ಇರುವ ಕಾರಣ ನಿರ್ಮಾಣ ಕ್ಷೇತ್ರಕ್ಕೆ ತೊಂದರೆಯಾಗಿದೆ. ಇದರಿಂದ ಗುತ್ತಿಗೆದಾರರು ವಹಿಸಿಕೊಂಡ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಪೂರ್ತಿಗೊಳಿಸಲಾಗದೆ ಕಟ್ಟಡ ಮಾಲಕರ ಜತೆ ಕಾನೂನು ಸಂಘರ್ಷ ಎದುರಿಸುವ ಪರಿಸ್ಥಿತಿ ಎದುರಾಗಿದೆ. ದ.ಕ. ಜಿಲ್ಲಾಡಳಿತ ಹಾಗೂ ರಾಜ್ಯ ಸರಕಾರ ಕಚ್ಚಾ ವಸ್ತುಗಳನ್ನು ಬೇಡಿಕೆಗೆ ಅನುಗುಣವಾಗಿ ಪೂರೈಸಲು ಕ್ರಮ ವಹಿಸಬೇಕು. ಕಾರ್ಮಿಕರ ಕೊರತೆ ನೀಗಿಸಲು ಸ್ಥಳೀಯ ಕಾರ್ಮಿಕರಿಗೆ ಉತ್ತೇಜ ಕಾರ್ಯಕ್ರಮ ವಹಿಸಬೇಕು ಇಂಜಿನಿಯರ್ಸ್ ಅಸೋಸಿಯೇಶನ್‌ನ ಉಜ್ವಲ್ ಡಿಸೋಜಾ ಆಗ್ರಹಿಸಿದರು.

ಗೋಷ್ಠಿಯಲ್ಲಿ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ದಿನಕರ್, ಕಾರ್ಯದರ್ಶಿ ಅಶೋಕ್ ಕುಳಾಯಿ, ಸತೀಶ್ ಜೋಗಿ, ಅರುಣ್ ರಾಜ್, ಕೆನರಾ ಬಿಲ್ಡರ್ಸ್ ಅಸೋಸಿಯೇಶನ್‌ನ ವಿನಾಯಕ ಪೈ ಮೊದಲಾದವರು ಉಪಸ್ಥಿತರಿದ್ದರು.

ಮಡಿಕೇರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆ | ವಾಹನ ಬಾಡಿಗೆ ಪರಿಷ್ಕರಣೆಗೆ ಶೀಘ್ರ ಉಪ ಸಮಿತಿ ರಚನೆ

ಆಟೋ ಚಾಲಕರಲ್ಲಿ ಹೊಸ ಆಶಾಕಿರಣ

ಮಡಿಕೇರಿ: ಜಿಲ್ಲೆಯಲ್ಲಿ ಆಟೋ ದರ ಹಾಗೂ ಮಾಂದಲ್ ಪಟ್ಟಿಗೆ ತೆರಳುವ ಬಾಡಿಗೆ ವಾಹನ ದರ ಪರಿಷ್ಕರಣೆ ಸಂಬಂಧ 'ಉಪ ಸಮಿತಿ' ರಚಿಸಲು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಕಳೆದ ಹನ್ನೆರಡು ವರ್ಷಗಳ ಹಿಂದೆ ಆಟೋ ದರ ಪರಿಷ್ಕರಣೆ ಮಾಡಲಾಗಿದ್ದು, ಈಗಿರುವ ದರವನ್ನು ಸ್ವಲ್ಪವಾದರೂ ಹೆಚ್ಚಿಸಬೇಕು ಎಂದು ಆಟೋ ಚಾಲಕರು/ಮಾಲಕರ ಸಂಘದ ಅಧ್ಯಕ್ಷ ಡಿ.ಎಚ್. ಮೇದಪ್ಪ ಅವರು ಸಭೆಯಲ್ಲಿ ಕೋರಿದರು.

ಆಟೋ ವಾಹನ ಬಿಡಿಭಾಗಗಳ ಬೆಲೆ ಹಾಗೂ ಇಂಧನ ದರ ಹೆಚ್ಚಳವಾಗಿರುವ ಹಿನ್ನೆಲೆ ಆಟೋ ಚಾಲಕರ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಆದ್ದರಿಂದ ದರ ಹೆಚ್ಚಳ ಮಾಡಬೇಕು ಎಂದು ಬೇಡಿಕೆ ಮುಂದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆಟೋ ದರ ಪರಿಷ್ಕರಣೆ ಸಂಬಂಧ ಉಪ ಸಮಿತಿ ವರದಿ ಆಧರಿಸಿ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಮಾಂದಲ್ ಪಟ್ಟಿಗೆ ಸಂಚರಿಸುವ ಜೀಪು ಮಾಲಕರು, ಪ್ರವಾಸಿಗರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಈ ಹಿನ್ನೆಲೆಯಲ್ಲಿ ದರ ನಿಗದಿ ಮಾಡುವಂತಾಗಬೇಕು ಎಂದು ಸಾರ್ವಜನಿಕರಿಂದ ಮನವಿ ಕೇಳಿ ಬರುತ್ತಿದೆ. ಈ ಸಂಬಂಧ ದರ ನಿಗದಿ ಮಾಡುವ ಬಗ್ಗೆ ಉಪ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.



ಸಾರ್ವಜನಿಕರು ಸಂಚರಿಸುವ ರಸ್ತೆಯಲ್ಲಿ ಖಾಸಗಿ ಬಸ್‌ಗಳು, ಮಿನಿ ಬಸ್ಸುಗಳು, ಟ್ಯಾಕ್ಸಿ ಹಾಗೂ ಆಟೋಗಳು ಎಲ್ಲೆಂದರಲ್ಲಿ ನಿಲುಗಡೆ ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಆದ್ದರಿಂದ ಕಾನೂನು ಬದ್ಧವಾಗಿ ರಸ್ತೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ನಿರ್ದೇಶನ ನೀಡಿದರು.

ಆಟೋಗಳು ಜಿಲ್ಲೆಯಾದ್ಯಂತ ಸಂಚರಿಸಲು ಅವಕಾಶ ಮಾಡಬೇಕು ಎಂದು ಆಟೋ ಚಾಲಕರು ಮತ್ತು ಮಾಲಕರ ಸಂಘದವರು ಸಭೆಯಲ್ಲಿ ಕೋರಿದರು. ಇದಕ್ಕೆ ಟ್ಯಾಕ್ಸಿ ಮಾಲಕರ ಸಂಘದವರು ಆಕ್ಷೇಪ ವ್ಯಕ್ತಪಡಿಸಿ, ಈಗಿರುವ ವ್ಯವಸ್ಥೆಯನ್ನು ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು. ಆಟೋಗಳಿಗೆ ಜಿಲ್ಲೆಯಾದ್ಯಂತ ಸಂಚರಿಸಲು ಅವಕಾಶ ಮಾಡಬಾರದು ಎಂದು ಮನವಿ ಮಾಡಿದರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಉಪ ಸಮಿತಿಯಲ್ಲಿ ಈ ಸಂಬಂಧ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

- ಕೆಎಸ್‌ಆರ್‌ಟಿಸಿ ಪುತ್ತೂರು ಸಂಚಾರಿ ವಿಭಾಗೀಯ ನಿಯಂತ್ರಣಾಧಿಕಾರಿ ಜಯಶಾಂತ ಕುಮಾರ್ ಅವರು ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರಕ್ಕೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ಬರುತ್ತಿರುವುದರಿಂದ ಕೆಎಸ್‌ಆರ್‌ಟಿಸಿ ಬಸ್‌ಗಳ ಹೆಚ್ಚಿನ ಸಂಚಾರಕ್ಕೆ ಅವಕಾಶ ಮಾಡಬೇಕು ಎಂದು ಕೋರಿದರು.
- ಆಟೋ ವಾಹನ ಬಿಡಿಭಾಗಗಳ ಬೆಲೆ ಹಾಗೂ ಇಂಧನ ದರ ಹೆಚ್ಚಳವಾಗಿರುವ ಹಿನ್ನೆಲೆ ಆಟೋ ಚಾಲಕರ ಜೀವನ ನಿರ್ವಹಣೆ ಕಷ್ಟಸಾಧ್ಯ

ಜಿಲ್ಲೆಯಲ್ಲಿ ಸಾರಿಗೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ಕಾರಣಕ್ಕೂ ನಿಯಮಗಳನ್ನು ಉಲ್ಲಂಘಿಸಬಾರದು. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಹ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಖಾಸಗಿ ಬಸ್ ಮಾಲಕರ ಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ ಅವರು ಮಾತನಾಡಿ, ಜಿಲ್ಲೆಯ 34 ಮಾರ್ಗದಲ್ಲಿ ಪರಿಷ್ಕೃತ ವೇಳಾ ಪಟ್ಟಿಯೊಂದಿಗೆ ಬಸ್ ಕಾರ್ಯಾಚರಣೆ ನಡೆಸಲು ಮಂಜೂರಾತಿ ನೀಡಿದ್ದು, ಈ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ. ಶೀಘ್ರ ತೀರ್ಪು ಬರುವ ಸಾಧ್ಯತೆ ಇದೆ ಎಂದರು.

ಖಾಸಗಿ ಬಸ್ ಮಾಲಕರ ಸಂಘದ ನಿರ್ದೇಶಕ ಪುಟ್ಟಸ್ವಾಮಿ ಅವರು ಮಾತನಾಡಿ, ಜಿಲ್ಲೆಯಲ್ಲಿ 209 ಖಾಸಗಿ ಬಸ್‌ಗಳಲ್ಲಿ 151 ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಕೋವಿಡ್ ನಂತರ ಖಾಸಗಿ ಬಸ್ ಮಾಲಕರ ಆರ್ಥಿಕ ಸ್ಥಿತಿ ಹೇಳತೀರದಂತಾಗಿದೆ ಎಂದು ಅವಲತ್ತುಕೊಂಡರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಅವರು ಮಾತನಾಡಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಬಗ್ಗೆ ಹಲವು ವಿಷಯಗಳ ಕುರಿತು ಮಾಹಿತಿ ಪಡೆದು ಮಾತನಾಡಿ, ರಸ್ತೆ ಸುರಕ್ಷತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದರು. ಪ್ರಾದೇಶಿಕ ಸಾರಿಗೆ ಅಧಿಕಾರಿ ಸತೀಶ್ ಅವರು ಪ್ರಾದೇಶಿಕ ಸಾರಿಗೆ ಕಚೇರಿಗೆ ಸಲ್ಲಿಕೆಯಾಗಿರುವ ಮನವಿ ಮತ್ತಿತರ ವಿಷಯಗಳ ಕುರಿತು ಸಭೆಯ ಗಮನಕ್ಕೆ ತಂದರು.

ಪುತ್ತೂರು ವಿಭಾಗದ ಸಂಚಾರ ನಿಯಂತ್ರಣಾಧಿಕಾರಿ ಶ್ರೀಹರಿಬಾಬು, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕ ವ್ಯವಸ್ಥಾಪಕ ರಾಮಚಂದ್ ದರ್ಶನ್, ಖಾಸಗಿ ಬಸ್ ಮಾಲಕರ ಸಂಘದವರು, ಆಟೋ ಚಾಲಕರ ಸಂಘದವರು, ಜೀಪು–ಟ್ಯಾಕ್ಸಿ ಸಂಘದ ಪ್ರತಿನಿಧಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು, ವಕೀಲರು ಇತರರು ಇದ್ದರು.

ಮೇ 7 : ಶೃಂಗೇರಿ ಜಗದ್ಗುರುಗಳಿಗೆ ಗುರುವಂದನಾ ಕಾರ್ಯಕ್ರಮ ತೆಂಕಿಲದ ಸ್ವಾಮಿ ಕಲಾಮಂದಿರದಲ್ಲಿ ಆಹ್ವಾನ ಪತ್ರಿಕೆ ಲೋಕಾರ್ಪಣೆ

ಪುತ್ತೂರು: ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ಮೇ 7ರಂದು ನಡೆಯಲಿರುವ ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಸಾರ್ವಜನಿಕ ಗುರುವಂದನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ತೆಂಕಿಲದ ಸ್ವಾಮಿ ಕಲಾ ಮಂದಿರದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಗುರುವಂದನಾ ಸಮಿತಿ ಹಾಗೂ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜನೆಗೊಳ್ಳಲಿದೆ.

ಈ ಸಂದರ್ಭ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಗುರುವಂದನಾ ಸಮಿತಿಯ ಸಮನ್ವಯಕಾರ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಸಕಲ ಹಿಂದೂ ಸಮಾಜಕ್ಕೆ ಮಾರ್ಗದರ್ಶಿ ಪೀಠವೆನಿಸಿರುವ ಶೃಂಗೇರಿ ಜಗದ್ಗುರುಗಳನ್ನು ಸಕಲ ಗೌರವಾದರಗಳೊಂದಿಗೆ ಬರಮಾಡಿಕೊಳ್ಳುವುದು ಎಲ್ಲರ ಜವಾಬ್ದಾರಿ. ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಧರ್ಮ ಹಾಗೂ ದೇಶದ ಬಗೆಗೆ ನಿರಂತರವಾಗಿ ಜಾಗೃತಿ ಮೂಡಿಸುತ್ತಿರುವವರು. ಇಂತಹ ಗುರುಗಳನ್ನು ಹೊಂದಿರುವುದು ಹಿಂದೂ ಸಮಾಜದ ಪುಣ್ಯ ಎಂದು ಹೇಳಿದರು.

ಧರ್ಮವನ್ನು ಉಳಿಸುವ ಮತ್ತು ಬೆಳೆಸುವ ವಿಚಾರಗಳೆಡೆಗೂ ಉತ್ಸಾಹದಿಂದ ನಮ್ಮ ಸಮಾಜ ಸ್ಪಂದಿಸಬೇಕು. ಜಾತಿಯ ಹಂಗುಗಳನ್ನು ಮೀರಿ ಸಮಾಜದ ಎಲ್ಲರೂ ಕಲೆತು, ಜಗದ್ಗುರುಗಳಿಗೆ ಅಭಿವಂದಿ ಸುವುದು ಅಗತ್ಯ. ಪ್ರತಿಯೊಬ್ಬರೂ ತಮ್ಮ ಸುತ್ತಮುತ್ತಲಿನ ವ್ಯಕ್ತಿಗಳಲ್ಲಿ ಜಾಗೃತಿ ಮೂಡಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾಗಬೇಕು ಎಂದು ಅವರು ತಿಳಿಸಿದರು.



ಭಾರತ ಮಾತೆಯ ಪುತ್ಥಳಿ

ಧರ್ಮದ ಬಗೆಗೆ ಮಾತ್ರವಲ್ಲದೆ ದೇಶದ ಬಗೆಗೂ ನಿರಂತರವಾಗಿ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿರುವ ಶೃಂಗೇರಿ ಜಗದ್ಗುರುಗಳಿಗೆ ಇನ್ನಿತರ ಕಾಣಿಕೆಗಳೊಂದಿಗೆ ಭಾರತಮಾತೆಯ ಪುತ್ಥಳಿಯನ್ನೂ ಸಮರ್ಪಿಸುವ ಬಗೆಗೆ ಸಭೆಯಲ್ಲಿ ನಿರ್ಣಯಿಸಲಾಯಿತು. ಏ.21ರಂದು ಬಪ್ಪಳಿಗೆಯ ಅಂಬಿಕಾ ಕ್ಯಾಂಪಸ್‌ನಲ್ಲಿ ಮತ್ತೊಮ್ಮೆ ಸಭೆ ಸೇರಿ ಕಾರ್ಯಕ್ರಮದ ಬಗೆಗಿನ ಜವಾಬ್ದಾರಿ ಹಂಚಿಕೆ ನಡೆಸುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಗುರುವಂದನಾ ಸಮಿತಿಯ ಅಧ್ಯಕ್ಷ ಚಿದಾನಂದ ಬೈಲಾಡಿ ಮಾತನಾಡಿ, ಎಲ್ಲರೂ ಒಂದಾಗಿ ಕಾರ್ಯ ತತ್ಪರರಾದಾಗ ಯಾವುದೇ ಕೆಲಸ ಕಷ್ಟಸಾಧ್ಯವೆನಿಸುವುದಿಲ್ಲ. ಸ್ಪಂದನೆ, ಸಮಯ ಪಾಲನೆ, ಶಿಸ್ತು ಮೊದಲಾದ ವಿಚಾರ ಗಳನ್ನು ಮೈಗೂಡಿಸಿಕೊಂಡು ಹಿರಿಯರ ಮಾರ್ಗದರ್ಶನದಲ್ಲಿ ಮುಂದುವರೆಯಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಗುರುವಂದನಾ ಸಮಿತಿಯ ಗೌರವಾಧ್ಯಕ್ಷ ಮುಗೆರೋಡಿ ಬಾಲಕೃಷ್ಣ ರೈ, ಕಾರ್ಯಾಧ್ಯಕ್ಷ ಶಿವರಾಮ ಆಳ್ವ, ಕೋಶಾಧಿಕಾರಿ ಕಾವು ಹೇಮನಾಥ ಶೆಟ್ಟಿ, ಸಂಚಾಲಕ ಡಾ. ಸುರೇಶ್ ಪುತ್ತೂರಾಯ, ಧರ್ಮಾಭ್ಯುದಯ ಧರ್ಮ ಶಿಕ್ಷಣ ತಾಲೂಕು ಸಮಿತಿಯ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಬೋರ್ಕರ್ ಉಪಸ್ಥಿತರಿದ್ದರು.

ಗುರುವಂದನಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಸಿ.ನಾರಾಯಣ ರೆಂಜ ಕಾರ್ಯಕ್ರಮ ನಿರ್ವಹಿಸಿದರು.

ವಿಶೇಷ ಅಧಿವೇಶನ ಕರೆದು ಬಿಜೆಪಿಗೆ ಮುಖಭಂಗ: ದಿನೇಶ್ ಗುಂಡೂರಾವ್

ಮಂಗಳೂರು: ಮಹಿಳೆಯರಿಗೆ ಮೀಸಲಾತಿ ನೀಡುವ ಹೆಸರಿನಲ್ಲಿ ಅಧಿವೇಶನ ಕರೆದು ವಂಚಿಸುವ ಬಿಜೆಪಿಯ ಪ್ರಯತ್ನ ವಿಫಲವಾಗಿದೆ. ವಿಶೇಷ ಅಧಿವೇಶನ ಕರೆದು ಬಿಜೆಪಿ ಮುಖಭಂಗ ಅನುಭವಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.



ಕೇಂದ್ರ ಸರಕಾರ ಮಹಿಳೆಯರ ಹೆಸರಿನಲ್ಲಿ ಮೀಸಲಾತಿ ಮಸೂದೆ ಮಂಡಿಸಲು ಮುಂದಾಗಿ ವಂಚನೆ ಮಾಡಲು ಹೊರಟಿದೆ. ಮಹಿಳೆಯರಿಗೆ ವಾಸ್ತವದಲ್ಲಿ ವಿರೋಧ ಮಾಡಿರುವುದು ಬಿಜೆಪಿಯವರು. ಹಾಗೆಂದು ಮಹಿಳಾ ಮೀಸಲಾತಿಗೆ ಯಾರೂ ವಿರೋಧ ಇಲ್ಲ ಎಂದರು.

ಈ ಮಸೂದೆ 2023ರಲ್ಲಿ ಬಂದಾಗ ನಾವು ಸರ್ವಾನುಮತದಿಂದ ಒಪ್ಪಿ ಕೊಂಡಿದ್ದೆವು. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಬಗ್ಗೆ ತೀರ್ಮಾನ ಮಾಡಿದರೆ ನಾವು ಸ್ವಾಗತಿಸುತ್ತೇವೆ. ರಾಜ್ಯದ 224 ಕ್ಷೇತ್ರಗಳ ಪೈಕಿ ಶೇ.33ರಷ್ಟು ಮಹಿಳೆಯರಿಗೆ ಮೀಸಲಾತಿ ಕೊಟ್ಟರೆ ನಮಗೆ ಸಮಸ್ಯೆ ಇಲ್ಲ. ನಾವೆಲ್ಲರೂ ಮಸೂದೆಯ ಪರವಾಗಿ ಇದ್ದೇವೆ. ಈಗ ಕೆಲವು ಕಡೆ ಚುನಾವಣೆ ನಡೆಯುತ್ತಿದೆ. ಈ ಮಸೂದೆ ಹಿಂದೆಯೇ ಜಾರಿಗೆ ತಂದಿದ್ದರೆ ಚುನಾವಣೆಯಲ್ಲಿ ಶೇ. 33 ಸೀಟು ಮಹಿಳೆಯರಿಗೆ ಸಿಗುತ್ತಿತ್ತು. ಮಹಿಳೆಯರ ಹೆಸರಿನಲ್ಲಿ ತಮ್ಮ ಅಕಾರ ಉಳಿಸಿಕೊಳ್ಳಲು ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕು ಎಂಬ ಹುನ್ನಾರ ಕೇಂದ್ರದ್ದು ಎಂದು ಹೇಳಿದರು.

- ಮಹಿಳೆಯರ ಹೆಸರಿನಲ್ಲಿ ಮೀಸಲಾತಿ ಮಸೂದೆ ಮಂಡಿಸಲು ಮುಂದಾಗಿ ವಂಚನೆ ಮಾಡಲು ಹೊರಟಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಿನ ಭೀತಿ ಇಲ್ಲ. ಪಕ್ಷದಲ್ಲಿ ಕೈಗೊಳ್ಳಲಾದ ಕೆಲವು ಕ್ರಮಗಳಿಗೂ ಚುನಾವಣಾ ಫಲಿತಾಂಶಕ್ಕೂ ಸಂಬಂಧವಿಲ್ಲ. ಪಕ್ಷ ವಿರೋಧಿ ಚಟುವಟಿಕೆ ಬಗ್ಗೆ ಪಕ್ಷದ ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಜಮೀರ್ ಅಹಮ್ಮದ್‌ರನ್ನು ಸಚಿವ ಸ್ಥಾನದಿಂದ ಇಳಿಸುವುದು ಕೇವಲ ಊಹಾಪೋಹ. ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಂ ಟಾರ್ಗೆಟ್ ಬಗ್ಗೆ ರಾಜಣ್ಣ ಹೇಳಿಕೆ ವಿಚಾರ ನನಗೆ ಗೊತ್ತಿಲ್ಲ. ಅದನ್ನು ರಾಜಣ್ಣ ಅವರ ಬಳಿಯೇ ಕೇಳಬೇಕು ಎಂದರು.

ಸ್ಥಳೀಯಾಡಳಿತ ಚುನಾವಣೆ ನಡೆಸುವ ಬಗ್ಗೆ ಈಗಾಗಲೇ ಪ್ರಕ್ರಿಯೆಗಳು ಆರಂಭವಾಗಿದೆ. ಹೈಕೋರ್ಟ್ ಆದೇಶ ಪ್ರಕಾರ ಜೂನ್ ಮೊದಲು ಚುನಾವಣೆ ನಡೆಸಬೇಕು. ಈಗಾಗಲೇ ಅದರ ಬಗ್ಗೆ ತಯಾರಿಗಳು ಆರಂಭವಾಗಿದೆ. ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಸಲು ಹೈಕೋರ್ಟ್ ಕಾಲಾವಕಾಶ ನೀಡಿದರೆ ಮಾಡುತ್ತೇವೆ. ಜೂನ್ ಒಳಗೆ ಮಾಡಬೇಕು ಎಂದರೆ ಅದಕ್ಕೂ ಸಿದ್ಧರಿದ್ದೇವೆ ಎಂದರು.

ನ್ಯಾಯಾಧೀಶರ ಮುತುವರ್ಜಿ: ಉಡುಪಿಯ ನ್ಯಾಯಾಲಯಗಳ ಮಾದರಿ ಹೆಜ್ಜೆ

ರಕ್ಷಿತ್ ಬೆಳಪು

ಹಿರಿಯಡ್ಕ: ಬಾಗಿದ ಬೆನ್ನು, ಕೈಯಲ್ಲೊಂದು ಚೀಲ. ಹಳೆಯ ಸೀರೆಯುಟ್ಟ ಅಜ್ಜಿ ಹೇಳಿದ್ದಿಷ್ಟೇ. 'ವರ್ಷಗಳೇ ಆದವು ಸ್ವಾಮಿ. ಈ ನ್ಯಾಯಾಲಯದ ಮೆಟ್ಟಿಲು ಹತ್ತಿ, ಇಳಿದು ಚಪ್ಪಲಿ ಸವೆಯಿತು. ಸೀರೆ ತೂತಾಯಿತೇ ವಿನಾ ಪ್ರಕರಣ ಮುಕ್ತಾಯ ಗೊಳ್ಳುತ್ತಿಲ್ಲ. ಹೀಗೆ ನ್ಯಾಯಾಂಗದ ವ್ಯವಸ್ಥೆಯನ್ನು ಅಣಕವಾಡುವಂತಹ ಘಟನೆಗಳು ಪುನರಾವರ್ತನೆ ಆಗದಂತೆ ಉಡುಪಿಯ ನ್ಯಾಯಾಲಯಗಳು ಇದೀಗ ಮಾದರಿ ಹೆಜ್ಜೆ ಇಟ್ಟಿವೆ.

ನ್ಯಾಯಾಲಯದಲ್ಲಿ ಇಂತಹ ಅನೇಕ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನ್ಯಾಯಾಧೀಶರುಗಳು ಪಣತೊಟ್ಟಿದ್ದಾರೆ. ಸಂವಿಧಾನದ 21ನೇ ವಿಧಿಯಲ್ಲಿ ಹೇಳಿರುವ 'ತ್ವರಿತ ವಿಚಾರಣೆ ಮತ್ತು ಸಕಾಲದಲ್ಲಿ ನ್ಯಾಯ ನೀಡಿಕೆ ' ಎಂಬುದು ನ್ಯಾಯಕ್ಕಾಗಿ ಮೊರೆ ಇಟ್ಟ ಸಂತ್ರಸ್ತರ ಹಕ್ಕಾಗಿದ್ದು, ಇಲ್ಲಿನ ನ್ಯಾಯಾಧೀಶರು ಈಗ ಈ ನಿಟ್ಟಿನಲ್ಲಿ ಹೊಸ ಹೆಜ್ಜೆ ಇಟ್ಟಿದ್ದಾರೆ.

ಉಡುಪಿ ಜಿಲ್ಲೆಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸಿಜೆಎಮ್ ಆಗಿರುವ ನ್ಯಾ.ಎಮ್.ಪುರುಷೋತ್ತಮ್ ಅವರ ನೇತೃತ್ವದಲ್ಲಿ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮತ್ತು ಕೋರ್ಟ್ ಪಿಸಿ (ಠಾಣೆಯಿಂದ ಒಬ್ಬರು ನ್ಯಾಯಾಲಯದ ಆಗುಹೋಗುಗಳನ್ನು ನೋಡಿಕೊಳ್ಳುವ ಸಿಬ್ಬಂದಿ) ಸಭೆ ಕರೆದು ಕ್ಲಾಸ್ ತೆಗೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ ದಶಕಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಪೊಲೀಸರು ಪತ್ತೆ ಹಚ್ಚುತ್ತಿದ್ದಾರೆ.

ತ್ವರಿತ ವಿಚಾರಣೆಗೆ ಆದ್ಯತೆ

ಭಾರತದ ಸಂವಿಧಾನ 21 ನೇ ವಿಧಿಯಲ್ಲಿ 'ಕಾನೂನಿನ ಪ್ರಕ್ರಿಯೆ ಅನುಸರಿಸದೆ ಯಾರ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು' ಎಂದು ವ್ಯಾಖ್ಯಾನಿಸಲಾಗಿದೆ. ಇದರಂತೆ ಭಾರತದ ಸರ್ವೋಚ್ಚ ನ್ಯಾಯಾಲಯವು 'ಹುಸೈನರಾ ಖಾತೂನ್ ವರ್ಸಸ್ ಸ್ಟೇಟ್ ಆಫ್ ಬಿಹಾರ್ (1979–80) ಪ್ರಕರಣದಲ್ಲಿ ತ್ವರಿತ ವಿಚಾರ ಣೆಯೂ ಸಂವಿಧಾನದ 21 ನೇ ವಿಧಿಯಲ್ಲಿ ಮೂಲಭೂತ ಹಕ್ಕು ಎಂದು ತೀರ್ಪು ನೀಡಿದೆ. ಎ.ಆರ್ .ಅಂತುಳೆ ವರ್ಸಸ್ ಆರ್.ಎಸ್. ನಾಯಕ್ (1992) ಪ್ರಕರಣದಲ್ಲಿ ಆರ್ಟಿಕಲ್ 21ರ ಅಡಿಯಲ್ಲಿ ತನಿಖೆ, ವಿಚಾರಣೆ, ನ್ಯಾಯಪ್ರಕ್ರಿಯೆ, ಮೇಲ್ಮನವಿ, ಮರುಪರಿಶೀಲನೆ, ಮರು ವಿಚಾರಣೆ ಪ್ರಾಸಿಕ್ಯೂಷನ್‌ನಿಂದ ಅನಗತ್ಯ ವಿಳಂಬವಾದರೆ, ಅದು ಈ ಹಕ್ಕಿನ ಉಲ್ಲಂಘನೆ ಆಗುತ್ತದೆ ಎಂದು ಹೇಳಿದೆ.



ವಾರೆಂಟ್ ಆರೋಪಿಗಳ ಜಾಮೀನು ಅರ್ಜಿಯನ್ನು ತಿರಸ್ಕರಿಸಿ, ನ್ಯಾಯದಾನ ಪ್ರಕ್ರಿಯೆಯಲ್ಲಿ ಕೊಂಚ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಆರಂಭಿಸಿದ ಬಳಿಕ ಚೆಕ್ ಅಮಾನ್ಯ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಮುಕ್ತಾಯ ಮಾಡಿಕೊಳ್ಳುವವರ ಸಂಖ್ಯೆಯೂ ಹೆಚ್ಚಾಗಿದೆ.

2025 ರಲ್ಲಿ ನಡೆದ ನಾಲ್ಕು ಲೋಕ ಅದಾಲತ್‌ನಲ್ಲಿ 1029 ಚೆಕ್ ಅಮಾನ್ಯ ಪ್ರಕರಣ ಒಟ್ಟು 29,09,75,923 ಕೋ.ರೂ.ಮೊತ್ತವನ್ನು ಸಂತ್ರಸ್ತರಿಗೆ ದೊರಕಿಸಿ ಕೊಡಲಾಗಿದೆ.

ತಿಂಗಳೊಳಗೆ 60 ಕೇಸ್ ವಿಲೇವಾರಿ

ಈಗಾಗಲೇ ವಿವಿಧ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿದ್ದ 122 ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಅದರಲ್ಲಿ 60 ಪ್ರಕರಣ ಮುಕ್ತಾಯಗೊಂಡಿದೆ. ದಶಕಗಳಿಂದ ಬಾಕಿಯಿದ್ದ ಪ್ರಕರಣಗಳು ತಿಂಗಳೊಳಗೆ ಮುಕ್ತಾಯಗೊಂಡಿರುವುದು ಅನ್ಯಾಯಕ್ಕೆ ಒಳಗಾದವರ ಮುಖದಲ್ಲಿ ಮಂದಹಾಸ ಮೂಡಿಸಿದೆ.

8-3-2025

ಅದಾಲತ್‌ಗೆ ಆಯ್ಕೆ ಮಾಡಿದ್ದ ಪ್ರಕರಣ 427, ಇತ್ಯರ್ಥ – 249, ಇತ್ಯರ್ಥಗೊಂಡ ಪ್ರಕರಣದ ಒಟ್ಟು ಮೊತ್ತ – 7,81,62,834 ರೂ.

12-7-2025

ಅದಾಲತ್‌ಗೆ ಆಯ್ಕೆ ಮಾಡಿದ್ದ ಪ್ರಕರಣ 443
ಇತ್ಯರ್ಥ – 248
ಇತ್ಯರ್ಥಗೊಂಡ ಪ್ರಕರಣದ ಒಟ್ಟು ಮೊತ್ತ – 10,12,68,723ರೂ.

13-9-2025

ಅದಾಲತ್‌ಗೆ ಆಯ್ಕೆ ಮಾಡಿದ್ದ ಪ್ರಕರಣ 306
ಇತ್ಯರ್ಥ – 189
ಇತ್ಯರ್ಥಗೊಂಡ ಪ್ರಕರಣದ ಒಟ್ಟು ಮೊತ್ತ – 3,35,31,312ರೂ.

13-12-2025

ಅದಾಲತ್‌ಗೆ ಆಯ್ಕೆ ಮಾಡಿದ್ದ ಪ್ರಕರಣ 481
ಇತ್ಯರ್ಥ – 343
ಇತ್ಯರ್ಥಗೊಂಡ ಪ್ರಕರಣದ ಒಟ್ಟು ಮೊತ್ತ – 7,80,13,054 ರೂ.

2026

ಈ ವರ್ಷದ ಮೊದಲ ಲೋಕ ಅದಾಲತ್‌ನಲ್ಲಿಯೂ ಅದಾಲತ್‌ಗೆ ಆಯ್ಕೆ ಮಾಡಿದ್ದ ಪ್ರಕರಣ 522
ಇತ್ಯರ್ಥ – 391
ಇತ್ಯರ್ಥಗೊಂಡ ಪ್ರಕರಣದ ಒಟ್ಟು ಮೊತ್ತ – 5,71,62,488 ರೂ.

ಕಿರು ಸುದ್ದಿ

ಶ್ರೀಕ್ಷೇತ್ರ ಕಟೀಲಿನಲ್ಲಿ ಇಂದು ಹಗಲು ರಥೋತ್ಸವ, ಶಯನ

ಕಟೀಲು : ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಗಲು ರಥೋತ್ಸವ ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ದೇವರು ಹೊರಟು ರಥ ಬಲಿ ಆಗಿ ರಥಾರೋಹಣದ ಬಳಿಕ ರಥ ಹೂವಿನ ಪೂಜೆ ನಡೆದು ಹಗಲು ಬ್ರಹ್ಮ ರಥೋತ್ಸವ ನಡೆಯಲಿದೆ. ಬಳಿಕ ಮೂರು ಕಡೆಯಲ್ಲಿ ಕಟ್ಟೆ ಪೂಜೆ, ಒಳಗೆ ಓಡ ಬಲಿ, ಭೋಜನ ಶಾಲೆಗೆ ಪ್ರಸಾದ ಹಾಕಿದ ಬಳಿಕ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ ಶಯನ ಅಲಂಕಾರ ನಡೆದು ಶಯನ ಹಾಗೂ ಕವಾಟ ಬಂಧನ, ಸರಸ್ವತಿ ಸದನದಲ್ಲಿ ಯಕ್ಷಗಾನ ನಡೆಯಲಿದೆ. ವಿಪರೀತ ಬಿಸಿಲು ಇರುವ ಕಾರಣ ಹಗಲು ರಥೋತ್ಸವ ಬೇಗನೆ ನಡೆಯಲಿದೆ. ಕಟೀಲಿನಲ್ಲಿ ನೂತನ ಬ್ರಹ್ಮ ರಥೋತ್ಸವ ನಿರ್ಮಾಣ ಆಗುತ್ತಿದ್ದು ಮುಂದಿನ ವರುಷ ಹೊಸ ಬ್ರಹ್ಮ ರಥದಲ್ಲಿ ಉತ್ಸವ ನಡೆಯಲಿದೆ. ಹಾಗಾಗಿ ಈ ವರುಷ ಸುಮಾರು ಐದು ದಶಕಗಳ ಹಿಂದಿನ ರಥದಲ್ಲಿ ಕೊನೆಯ ರಥೋತ್ಸವ ನಡೆದಂತಾಗುತ್ತದೆ.

ಹಳೆ ಕಟ್ಟಡ ಕೆಡವಿದವರ ವಿರುದ್ಧ ಪೊಲೀಸರಿಗೆ ದೂರು

ಪುತ್ತೂರು: ಪುತ್ತೂರು ಮುಖ್ಯರಸ್ತೆಯ ಬಳಿಯ ಹಳೆಯ ಕಟ್ಟಡವನ್ನು ಕೆಡವಿರುವ ಕುರಿತು ಮಂಗಳೂರು ಕದ್ರಿಹಿಲ್ಸ್ ನಿವಾಸಿಯಾಗಿರುವ ಡಾ. ಅರವಿಂದ ರಾವ್ ಕೇದಿಗೆ ಅವರು ನೀಡಿದ ದೂರಿನಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿಜೆ ಮತ್ತು ಜೆಎಂಎಫ್‌ಸಿ ಬಂಟ್ವಾಳ ನ್ಯಾಯಾಲಯದ ಆದೇಶದ ಮೇರೆಗೆ, ನನ್ನ ಸುಪರ್ದಿಯಲ್ಲಿದ್ದ ಪುತ್ತೂರು ಮುಖ್ಯ ರಸ್ತೆಯ ಬದಿಯಲ್ಲಿರುವ ಹಳೆಯ ಕಟ್ಟಡ ಮತ್ತು ಜಮೀನಿಗೆ ಏ.14ರಂದು ರಾತ್ರಿ ಅಕ್ರಮವಾಗಿ ಪ್ರವೇಶಿಸಿ, ಸದ್ರಿ ಜಮೀನಿನಲ್ಲಿದ್ದ ಹಳೆಯ ಕಟ್ಟಡವನ್ನು ಕೆಡವಿದ್ದಾರೆ ಎಂದು ಅವರು ಏ. 17ರಂದು ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ಈ ದೂರಿನ ಮೇರೆಗೆ ಪುತ್ತೂರು ನಗರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಏ.28 ರಂದು ಸಿರಿ ಸಿಂಗಾರ ಕೋಲ

ತೀರ್ಥಹಳ್ಳಿ : ಇಲ್ಲಿಯ ಕರುಣಾಪುರ– ಮೇಗರವಳ್ಳಿಯ ವೀರಕಲ್ಲುಕುಟಿಕ ದೈವಸ್ಥಾನದಲ್ಲಿ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರ 28ನೇ ವರ್ಷದ ಸಿರಿ ಸಿಂಗಾರ ಕೋಲ ಏ.28 ರಂದು ಜರುಗಲಿದೆ. ಏ.27 ರಂದು ರಾತ್ರಿ 7 ಗಂಟೆಗೆ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರಿಗೆ ಕಲಹೋಮ ನಡೆಯಲಿದೆ. ಏ.28 ರಂದು ಬೆಳಿಗ್ಗೆ 8.30 ಗಂಟೆಗೆ ನಾಗದೇವರಿಗೆ ಕಲಹೋಮ, ಸಾಮೂಹಿಕ ಆಶ್ಲೇಷ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ ಜರುಗಲಿದೆ ಎಂದು ಪ್ರಧಾನ ಪಾತ್ರಿ ಕೆ.ಎಲ್.ಚಂದ್ರಶೇಖರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕಾರು ಡಿಕ್ಕಿ : ರಿಕ್ಷಾ ಪಲ್ಟಿ

ಮಂಜೇಶ್ವರ: ಕಾರು ಡಿಕ್ಕಿ ಹೊಡೆದು ಆಟೋರಿಕ್ಷಾ ಮಗುಚಿ ಬಿದ್ದು ಮೂರು ಮಂದಿ ಗಾಯಗೊಂಡ ಘಟನೆ ನಡೆದಿದೆ. ಪೊಸೋಟು ಬಿಸ್ಮಿಲ್ಲಾ ಮಂಜಿಲ್‌ನ ಇಬ್ರಾಹಿಂ ಕಲೀಲ್ (40), ಅವರ ಪುತ್ರ ಹಾಗೂ ಆಟೋರಿಕ್ಷಾ ಚಾಲಕ ಗಾಯಗೊಂಡವರು. ಕಾರು ಚಾಲಕನ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿದ್ದಾರೆ.


ನಿಧನ ಸುದ್ದಿ

ಹಿರಿಯ ಪತ್ರಕರ್ತ ಗಣೇಶ್ ಪ್ರಭು



ಉಡುಪಿ: ಹಿರಿಯ ಪತ್ರಕರ್ತ ಗಣೇಶ್ ಪ್ರಭು (61) ಅಲ್ಪಕಾಲದ ಅಸೌಖ್ಯದಿಂದ ಏ.19ರಂದು ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು. ಮಣಿಪಾಲದಿಂದ ಪ್ರಕಟಗೊಳ್ಳುತ್ತಿದ್ದ ಮಾರ್ನಿಂಗ್ ನ್ಯೂಸ್ ಆಂಗ್ಲ ಪತ್ರಿಕೆ, ದಿ ಹಿಂದು ಪತ್ರಿಕೆಯ ಉಡುಪಿ ಜಿಲ್ಲಾ ವರದಿಗಾರರಾಗಿ 21 ವರ್ಷಗಳ ಕಾಲ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಬಳಿಕ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಹಿರಿಯ ಉಪಸಂಪಾದಕರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು. ಇವರ ನಿಧನಕ್ಕೆ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಂತಾಪ ವ್ಯಕ್ತಪಡಿಸಿದೆ.

ರತ್ನಾಕರ



ಕಾರ್ಕಳ : ಸರಳ ಮೋಟಾರ್ಸ್ ಮಾಲಕ, ಕಾರ್ಕಳ ದಾನಶಾಲೆ ನಿವಾಸಿ ಎಂ.ಕೆ. ರತ್ನಾಕರ್ (82) ಏ. 19ರಂದು ನಿಧನ ಹೊಂದಿದರು. ಕಾರ್ಕಳದ ಗ್ರಾಮೀಣ ಪ್ರದೇಶಗಳಿಗೆ ಪ್ರಥಮವಾಗಿ ಬಸ್ ಸೇವೆ ಕಲ್ಪಿಸಿದ ರತ್ನಾಕರ್ ಅವರು ತನ್ನ ಧಾರ್ಮಿಕ, ಸಾಮಾಜಿಕ ಕಾರ್ಯಗಳಿಂದಾಗಿ ಜನಾನುರಾಗಿಯಾಗಿದ್ದರು. ಬಾಹುಬಲಿ ಮಹಾಮಸ್ತಕಾಭಿಷೇಕ ಸಂದರ್ಭವೂ ಸಕ್ರಿಯರಾಗಿ ತೊಡಗಿಸಿಕೊಂಡಿದ್ದರು. ಮೃತರು ಓರ್ವ ಪುತ್ರಿಯನ್ನು ಅಗಲಿದ್ದಾರೆ.



ಮಂಗಳೂರಿನ ಪಿವಿಎಸ್ ಕಲಾಕುಂಜದ ಇಸ್ಕಾನ್‌ನಲ್ಲಿ ಅಕ್ಷಯ ತೃತೀಯ ಆಚರಣೆ ಮತ್ತು ಶ್ರೀಕೃಷ್ಣ-ಬಲರಾಮ ರಥಯಾತ್ರೆ ಭಾನುವಾರ ವೈಭವದಿಂದ ನೆರವೇರಿತು.

ಮಾದಾಪುರ ಗ್ರಾ.ಪಂ, ಸಂಜೀವಿನಿ ಮಹಿಳಾ ಒಕ್ಕೂಟದಿಂದ 'ಸಂತೆಮೇಳ' ಆಯೋಜನೆ

ಸುಂಟಿಕೊಪ್ಪ: ಮಾದಾಪುರ ಗ್ರಾಮ ಪಂಚಾಯತ್ ವತಿಯಿಂದ ಮಹಿಳಾ ಗ್ರಾಮ ಸಭೆ ಹಾಗೂ ಸಂಜೀವಿನಿ ಮಹಿಳಾ ಒಕ್ಕೂಟದ ವತಿಯಿಂದ ಸಂತೆಮೇಳ ಏರ್ಪಡಿಸಲಾಯಿತು. ಮಾದಾಪುರ ಗ್ರಾಮ ಆಡಳಿತ ಅಧಿಕಾರಿ ಹೇಮಂತ್‌ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಜೀವಿನಿ ಮಹಿಳಾ ಒಕ್ಕೂಟದಿಂದ ಸರಕಾರದ ಕಾರ್ಯಸೂಚಿಯಂತೆ ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜಕೀಯವಾಗಿ ಮಹಿಳೆಯರಿಗೆ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್‌ನ ಸ್ಥಳೀಯ ಆಡಳಿತದಲ್ಲಿ ಶೇ.50% ರಷ್ಟು ಮೀಸಲಾತಿ ಒದಗಿಸಲಾಗಿದೆ. ಹಾಗೆಯೇ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಶೇ.33% ಮೀಸಲಾತಿ ತಂದಿರುವುದುರಿಂದ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಿರುವುದು ಗಮನಾರ್ಹವಾಗಿದೆ ಎಂದರು.

ಮಹಿಳೆಯರು ಆರ್ಥಿಕವಾಗಿ ಸಬಲೀಕರಣಗೊಂಡು ಸ್ವಾವಲಂಬಿ ಜೀವನ ಕಟ್ಟಿಕೊಂಡರೆ ದೇಶ ಸದೃಢಗೊಳ್ಳಲಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರ ಮಹಿಳೆಯರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಸಹಾಯಧನವನ್ನು ಸಹ ನೀಡುತ್ತಿದೆ ಎಂದರು.

ಮಾದಾಪುರ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಕೆ. ರವಿ ನಾಯರ್ ಮಾತನಾಡಿ, ಮಾದಾಪುರ ಪಂಚಾಯತ್‌ನ ಅಭಿವೃದ್ಧಿ ಕಾರ್ಯಗಳಿಗೆ ಸಂಜೀವಿನಿ ಒಕ್ಕೂಟದ ಕೊಡುಗೆ ಇದೆ. ಮಾದಾಪುರ ಆರೋಗ್ಯ ಕೇಂದ್ರಕ್ಕೆ ಕ್ಷಯರೋಗ ಮುಕ್ತ ಪಂಚಾಯತ್ ಎಂದು ಕಂಚಿನ ಪದಕ ಲಭಿಸಿದೆ. ಮುಂದೆ ಕ್ಷಯರೋಗ ಮುಕ್ತ ಗ್ರಾಮ ಪಂಚಾಯತ್ ಎಂದು ಆಗಲು ಗ್ರಾಮಸ್ಥರು ಸಹಕಾರ ನೀಡಬೇಕೆಂದು ಸಲಹೆ ನೀಡಿದರು.

ಮಹಿಳಾ ಸಂತೆ ಮೇಳದಲ್ಲಿ ತರಕಾರಿಗಳು, ಹೋಂ ಮೇಡ್ ವೈನ್, ತಿಂಡಿ ತಿನಿಸುಗಳು, ಸೊಪ್ಪುಗಳನ್ನು ಮಾರಾಟ ಮಾಡಲಾಯಿತು. ಅಧ್ಯಕ್ಷತೆಯನ್ನು ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಫಾತಿಮಾ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಸಾವಿತ್ರಿ, ವಲಯ ಮೇಲ್ವಿಚಾರಕಿ ಪದ್ಮಶ್ರೀ, ತಾಲೂಕು ವ್ಯವಸ್ಥಾಪಕ ಜಯಚಂದ್ರ, ಗ್ರಾ.ಪಂ.ಕಾರ್ಯದರ್ಶಿ ಅನಿತಾ, ಸಿಬ್ಬಂದಿ ರವೀಂದ್ರ ಮತ್ತಿತರರಿದ್ದರು.

ಪ್ರೇರಣಾ ಶಾಲೆಯ ಶತಮಾನೋತ್ಸವದಲ್ಲಿ ಆಂಧ್ರಪ್ರದೇಶದ ರಾಜ್ಯಪಾಲ ಅಬ್ದುಲ್ ನಝೀರ್

ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಗುಣ ಬೇಕು

ಮೂಡುಬಿದಿರೆ: ವಿದ್ಯೆ ಮನುಷ್ಯನ ಅತ್ಯುತ್ತಮ ಆಭರಣ ಇದನ್ನು ಯಾರೂ ಕದಿಯಲಾರರು. ತಪ್ಪುಗಳು ನಿಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ ಆದ್ದರಿಂದ ನಿಮ್ಮಲ್ಲಿ ಮೂಡುವ ಸಂಶಯಗಳನ್ನು ಅಡಗಿಸಿಡುವ ಬದಲು ಪ್ರಶ್ನಿಸುವ ಗುಣವನ್ನು ಬೆಳೆಸಿಕೊಳ್ಳಿ ಎಂದು ಶಾಲೆಯ ಹಳೆಯ ವಿದ್ಯಾರ್ಥಿ ಆಂಧ್ರಪ್ರದೇಶದ ರಾಜ್ಯಪಾಲ ಜಸ್ಟಿಸ್ ಅಬ್ದುಲ್ ನಜೀರ್ ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಅವರು ಸೇವಾಂಜಲಿ ಎಜ್ಯುಕೇಶನ್ ಟ್ರಸ್ಟ್ ನಡೆಸುತ್ತಿರುವ ವಿದ್ಯಾಭಾರತಿ ಸಂಯೋಜಿತ ಪ್ರೇರಣಾ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಎಲ್ಲಾ ಶಿಕ್ಷಕರ ಶಿಕ್ಷಕ. ಆದ್ದರಿಂದ ತಪ್ಪು ಮಾಡುವ ಬಗ್ಗೆ ಭಯಪಡಬೇಡಿ ಕಲಿಕೆ, ಅಭ್ಯಾಸ ಮತ್ತು ತಾಳ್ಮೆಯ ಮೂಲಕ ಬೆಳೆಯಿರಿ, ನಾವು ಪ್ರಗತಿಯ ಬಗ್ಗೆ ಗಮನಕೊಡಬೇಕು ಹೊರತು ಪರಿಪೂರ್ಣತೆಯ ಬಗ್ಗೆ ಅಲ್ಲ ಎಂದ ಅವರು, ದಾನಿಗಳ ಸಹಕಾರದಿಂದ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಬಗ್ಗೆ ಹಾಗೂ ಸಂಸ್ಥೆಯ ಅಭಿವೃದ್ಧಿಯ ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸಿದರು.

ಕ್ಷೇತ್ರದ ಶಾಸಕ ಉಮಾನಾಥ ಎ. ಕೋಟ್ಯಾನ್ ಮುಖ್ಯ ಅತಿಥಿಯಾಗಿದ್ದು, ಸಂಸ್ಥೆಯು ನೂರರ ಸಂಭ್ರಮಾಚರಣೆ ನಡೆಯುತ್ತಿದ್ದರೂ ಆರ್ಥಿಕವಾಗಿ ನಿತ್ರಾಣದಲ್ಲಿದೆ. ಮಕ್ಕಳಿಗೆ ಸಂಸ್ಕಾರ ನೀಡಲು ಶಿಕ್ಷಣ ಸಂಸ್ಥೆಯನ್ನು ತೆರೆಯಲಾಗಿದೆ. ಸಮಾಜದ ಜನರಿಗೆ ಸಂಸ್ಕಾರ ನೀಡುವ ಉದ್ದೇಶದಿಂದ ಕಾರ್ಯಾಲಯವನ್ನು ತೆರೆಯಲು ಉದ್ದೇಶಿಸಲಾಗಿದ್ದು ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದೆ ಎಂದರು

ಆರ್‌ಎಸ್‌ಎಸ್‌ನ ಪ್ರಾಂತಸಹಕಾರ್ಯವಾಹ ಪಿ. ಎಸ್. ಪ್ರಕಾಶ್ ಶುಭಾಸಂಸನೆಗೈದು ಜೀವನದ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಮುಖ್ಯ. ದೇಶ ಸೇವೆ, ಸಮಾಜ ಸೇವೆ ಮತ್ತು ತಮ್ಮ ಏಳಿಗೆಗೆ ಸಮಷ್ಠಿತವಾದ ಚಿಂತನೆಯನ್ನು ಮಾಡಲು ಶಿಕ್ಷಣ ನೀಡಬೇಕಾದುದು ಸಮಾಜದ ಕರ್ತವ್ಯ. ಈ ನಿಟ್ಟಿನಲ್ಲಿ ಪ್ರೇರಣಾ ಸಂಸ್ಥೆ ಶಿಕ್ಷಣ ನೀಡುತ್ತಿದೆ ಎಂದರು.

ಶಾಲಾ ಸಂಚಾಲಕ ಶಾಂತಾರಾಮ ಕುಡ್ವ ಅಧ್ಯಕ್ಷತೆ ವಹಿಸಿದ್ದರು.

ಉಪಾಧ್ಯಕ್ಷ ಸೋಮನಾಥ ಕೋಟ್ಯಾನ್, ಕಾರ್ಯದರ್ಶಿ ಕೇಶವ ಹೆಗ್ಡೆ, ಕೋಶಾಧಿಕಾರಿ ಎಸ್. ಎನ್. ಬೋರ್ಕರ್ ಮತ್ತಿತರರು ಈ ಸಂದರ್ಭದಲ್ಲಿದ್ದರು.

ಟ್ರಸ್ಟ್‌ನ ಅಧ್ಯಕ್ಷ ರಾಜೇಶ್ ಎಂ. ಬಂಗೇರಾ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ರೋಹನ್ ಅತಿಕಾರಬೆಟ್ಟು ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ವತ್ಸಲಾ ರಾಜೇಶ್ ವಂದಿಸಿದರು.



ಶಾಲಾ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಸನ್ಮಾನ

ಶಾಲೆಯ ಹಳೆಯ ವಿದ್ಯಾರ್ಥಿ ಆಂಧ್ರಪ್ರದೇಶದ ರಾಜ್ಯಪಾಲ ಜಸ್ಟಿಸ್ ಅಬ್ದುಲ್ ನಜೀರ್ ಅವರನ್ನು, ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಎಂಆರ್‌ಜಿ ಗ್ರೂಪ್‌ನ ಡಾ. ಪ್ರಕಾಶ್ ಶೆಟ್ಟಿ, ಉದ್ಯಮಿ, ಶಂಕರ್ ಇಲೆಕ್ಟ್ರಿಕಲ್ಸ್ ಕಂ ಪ್ರೈವೇಟ್ ಲಿ.ನ ರಾಜೇಶ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಗೌರವ

ಶಾಲಾ ಸಂಸ್ಥಾಪಕರ ಪರವಾಗಿ ಮೇರಿ ಡಿ'ಸೋಜ, ನಿವೃತ್ತ ಮುಖ್ಯ ಶಿಕ್ಷಕರಾದ ಆಂಡ್ರೂ ಸೆರಾವೋ, ಜಯರಾಜ್ ಜೈನ್, ಜಯರಾಮ್ ರಾವ್ ಅವರನ್ನು ಗೌರವಿಸಲಾಯಿತು.

ದಾನಿಗಳಿಗೆ ಸನ್ಮಾನ

ಉದ್ಯಮಿ, ಶೀ ವೆಂಕಟರಮಣ ಹನುಮಂತ ದೇವಳದ ಆಡಳಿತ ಮೊಕ್ತೇಸರ ಉಮೇಶ್ ಪೈ ಮತ್ತು ಗೀತಾ ವಿಜಯ ಕಾಮತ್ ಅವರನ್ನು ಸನ್ಮಾನಿಸಲಾಯಿತು.

ಸಾಧಕರಿಗೆ ಸನ್ಮಾನ

ರಾಷ್ಟ್ರೀಯ ಕ್ರೀಡಾಪಟು ಪ್ರೀತಿ, ಭಗವದ್ಗೀತೆ ಕಂಠಪಾಠದಲ್ಲಿ ರಾಜ್ಯಮಟ್ಟದಲ್ಲಿ ಸ್ಪರ್ಧಿಸಿರುವ ಪ್ರಧಾನ್ ಆರ್. ಭಂಡಾರಿ ಮತ್ತು ಮನಸ್ವಿ ಶರ್ಮ ಅವರನ್ನು ಸನ್ಮಾನಿಸಲಾಯಿತು.

ಕೊಡಗು ಜಿಲ್ಲಾ ಭಾರತೀಯ ಜನತಾ ಪಾರ್ಟಿ ಟೀಕೆ

ಕಾಂಗ್ರೆಸ್‌ನ ಮಹಿಳಾ ವಿರೋಧಿ ಧೋರಣೆ ಈಗ ಜಗಜ್ಜಾಹೀರು



ಮಡಿಕೇರಿ: ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವ ಮೂಲಕ ಕಾಂಗ್ರೆಸ್‌ನ ಮಹಿಳಾ ವಿರೋಧಿ ಧೋರಣೆ ಜಗಜ್ಜಾಹೀರಾಗಿದ್ದು, ಅದರ ಮುಖವಾಡ ಕಳಚಿಬಿದ್ದಿದೆ ಎಂದು ಕೊಡಗು ಜಿಲ್ಲಾ ಬಿಜೆಪಿ ಟೀಕಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಬಿಜೆಪಿ ಪ್ರಮುಖರು, ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಮಹಿಳೆಯರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿಯನ್ನು ಕಲ್ಪಿಸಲು ಮಸೂದೆಯನ್ನು ಮಂಡಿಸಿದ ಸಂದರ್ಭ ಕಾಂಗ್ರೆಸ್ ನೇತೃತ್ವದ ಮಹಿಳಾ ವಿರೋಧಿ ಇಂಡಿಯಾ ಕೂಟ ಅಡ್ಡಿಪಡಿಸಿ ಅದಕ್ಕೆ ಸೋಲಾಗುವಂತೆ ನಡೆದುಕೊಂಡಿದೆ. ಇದು ಕಾಂಗ್ರೆಸ್‌ನ ಮಹಿಳಾ ವಿರೋಧಿ ಧೋರಣೆಗಳನ್ನು ಸ್ಪಷ್ಟಪಡಿಸಿದೆ ಎಂದು ಟೀಕಿಸಿದರು.

ರಾಷ್ಟ್ರದ ಜನತೆ ಅದರಲ್ಲೂ ಪ್ರಮುಖವಾಗಿ ಮಹಿಳೆಯರು ಕಾಂಗ್ರೆಸ್'ನ ಈ ಧೋರಣೆಯನ್ನು ವಿರೋಧಿಸುವ ಮೂಲಕ ಮುಂದಿನ ಚುನಾವಣೆಗಳಲ್ಲಿ ಇವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅವರು ತಿಳಿಸಿದರು. ವಿಕೇಂದ್ರೀಕರಣ ಬುಡಮೇಲು: ರಾಜ್ಯ ಕಾಂಗ್ರೆಸ್ ಸರಕಾರ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದೆ ಅಧಿಕಾರ ವಿಕೇಂದ್ರೀಕರಣ ನೀತಿಯನ್ನು ಬುಡಮೇಲು ಮಾಡಲು ಮುಂದಾಗಿದೆ. ಎಲ್ಲಾ ಸ್ಥಳಿಯ ಸಂಸ್ಥೆಗಳ ಅನುದಾನಗಳ ಹಂಚಿಕೆ ಹಾಗೂ ಅಭಿವೃದ್ಧಿ ಕೆಲಸಗಳನ್ನು ಶಾಸಕರುಗಳು ನಿರ್ವಹಿಸುತ್ತಿರುವುದನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು.

ಸರಕಾರದ ಧೋರಣೆಯನ್ನು ಖಂಡಿಸಿ ಜಿಲ್ಲೆಯ ಮೂರು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಲಾಗುವುದು. ಏ.24 ರಂದು ಮಡಿಕೇರಿ ತಾ.ಪಂ ಹಾಗೂ ಏ.27 ರಂದು ಸೋಮವಾರಪೇಟೆ ಮತ್ತು ಪೊನ್ನಂಪೇಟೆ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್ ಹಾಗೂ ಮಹಿಳಾ ಬಿಜೆಪಿ ನಗರಾಧ್ಯಕ್ಷೆ ಸೌಮ್ಯ ಸುನಿಲ್ ಉಪಸ್ಥಿತರಿದ್ದರು.

ಅರೆಭಾಷೆ ಹಾಸ್ಯ ಲೇಖನ ಸ್ಪರ್ಧೆಗೆ ಆಹ್ವಾನ

ಮಂಗಳೂರು: ಕರ್ನಾಟಕ ಅರೆಭಾಷೆ ಸಂಸ್ಕೃ ತಿ ಮತ್ತು ಸಾಹಿತ್ಯ ಅಕಾಡೆಮಿಯ ವತಿ ಯಿಂದ ಅರೆಭಾಷೆ ಹಾಸ್ಯ ಲೇಖನ ಸ್ಪರ್ಧೆ ನಡೆಯಲಿದೆ. ಅರೆಭಾಷೆ ಹಾಸ್ಯ ಲೇಖನ ಸ್ವಂತ ರಚನೆಯಾಗಿರಬೇಕು. ಬೇರೆ ಎಲ್ಲೂ ಪ್ರಕಟವಾಗಿರಬಾರದು, ಕನಿಷ್ಠ 500 ಪದಗಳಿದ್ದು, ಒಂದು ಸಾವಿರ ಪದ ಮೀರಬಾರದು, ಹೊಸ ಆಲೋಚನೆ, ಹೊಸ ಹೊಳಹು ಗಳ ಬರಹವಾಗಿರಬೇಕು. ಹಾಸ್ಯಲೇಖನಕ್ಕೆ ಪ್ರಥಮ ಬಹುಮಾನ 5 ಸಾವಿರ, ದ್ವಿತೀಯ ಬಹುಮಾನ 3 ಸಾವಿರ, ಹಾಗೂ ತೃತೀಯ ಬಹುಮಾನ 2 ಸಾವಿರ ನೀಡಲಾಗುತ್ತದೆ. ಬರಹ ಕಳುಹಿಸಲು ಮೇ 10 ಕೊನೆಯ ದಿನ. ಬರಹಗಳನ್ನು ಅಂಚೆ ಮೂಲಕ ಅಥವಾ ಅಕಾಡೆಮಿ ವಾಟ್ಸಾಪ್ ಸಂ: 6362522677 ಮೂಲಕ ಅಥವಾ ಇ-ಮೇಲ್ ಮೂಲಕ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ ರಿಜಿಸ್ಟ್ರಾರ್, ಕರ್ನಾಟಕ ಅರೆಭಾ? ಸಂಸ್ಕೃ ತಿ ಮತ್ತು ಸಾಹಿತ್ಯ ಅಕಾಡೆಮಿ, ಕಾಫಿ ಕೃಪಾ, ರಾಜಸೀಟ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ. ಮೊ.ನಂ. 6362522677 ಸಂಪರ್ಕಿಸಬಹುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ್ಪೂರು ನಾಗರ ಜಿಡ್ಡ ನದಿ ಕೊರೆತ ಪ್ರದೇಶಕ್ಕೆ ಅಧಿಕಾರಿಗಳೊಂದಿಗೆ ಶಾಸಕ ಯಶ್‌ಪಾಲ್ ಭೇಟಿ



ಉಡುಪಿ: ಉಪ್ಪೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಗರಜಿಡ್ಡ ಬಳಿ ನದಿ ಕೊರೆತ ಪ್ರದೇಶಕ್ಕೆ ಅಧಿಕಾರಿಗಳ ಜೊತೆ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಭಾಗದಲ್ಲಿ ನದಿ ಕೊರೆತ ತೀವ್ರಗೊಂಡ ಪರಿಣಾಮ ಹಲವಾರು ತೆಂಗಿನ ಮರಗಳು ಕೊಚ್ಚಿ ಹೋಗಿದ್ದು, ಕಾಂಕ್ರೀಟ್ ಸಂಪರ್ಕ ರಸ್ತೆ ಕಡಿದು ಹೋಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ತಕ್ಷಣ ತುರ್ತು ಕಾಮಗಾರಿ ನಡೆಸುವಂತೆ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಸೂಚನೆ ನೀಡಿದರು.

ನದಿಯ ಪಶ್ಚಿಮ ಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಗೆ ಹಾಕಿರುವ ಮಣ್ಣನ್ನು ತಕ್ಷಣ ತೆರವುಗೊಳಿಸಿ ಮಳೆಗಾಲದಲ್ಲಿ ನದಿಯ ನೀರಿನ ಸರಾಗ ಹರಿವಿಗೆ ಕ್ರಮ ವಹಿಸಿದಲ್ಲಿ ಪೂರ್ವ ಬದಿಯಲ್ಲಿ ನದಿ ಕೊರೆತ ನಿಯಂತ್ರಿಸಲು ಅಗತ್ಯ ಕ್ರಮವಹಿಸುವಂತೆ ಹೇಳಿದರು.

ನಾಗರಜಿಡ್ಡ ಭಾಗದ ನದಿ ಕೊರೆತ ಸಮಸ್ಯೆ ಇರುವ ಸ್ಥಳಗಳಲ್ಲಿ ಶಾಶ್ವತ ತಡೆಗೋಡೆ ಕಾಮಗಾರಿ ಈಗಾಗಲೇ ಮಂಜೂರಾಗಿದ್ದು ಶೀಘ್ರ ಕಾಮಗಾರಿ ಆರಂಭಿಸಲು ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪ್ರಮುಖರಾದ ಸತೀಶ್ ಪೂಜಾರಿ, ಅವಿನಾಶ್ ಶೆಟ್ಟಿ, ಮಹೇಶ್ ಕೋಟ್ಯಾನ್, ರಾಜೇಶ್ ರಾವ್, ಉಮೇಶ್, ಗ್ರಾಮ ಲೆಕ್ಕಾಧಿಕಾರಿ ಪ್ರಮೋದ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆದರ್ಶ, ಕರ್ನಾಟಕ ನೀರಾವರಿ ನಿಗಮದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸುನೀಲ್, ಸಹಾಯಕ ಅಭಿಯಂತರ ಪ್ರೀತಮ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಉಳ್ಳಾಲ ಶಾರದನಿಕೇತನ ಸಭಾಂಗಣದ ಚನ್ನ ಮರಕಾಲ ವೇದಿಕೆಯಲ್ಲಿ 'ಅಬ್ಬಕ್ಕ –500' ಪ್ರೇರಣಾದಾಯಿ ಉಪನ್ಯಾಸ ಸರಣಿ ಕಾರ್ಯಕ್ರಮ ಸಮಾರೋಪ

ಇತಿಹಾಸ ಪುಟಗಳಲ್ಲಿ ರಾಣಿ ಅಬ್ಬಕ್ಕಗೆ ಸಿಕ್ಕಿಲ್ಲ ಸೂಕ್ತ ಸ್ಥಾನಮಾನ: ಸುಧೀರ್

ಉಳ್ಳಾಲ: ಪೋರ್ಚುಗೀಸರನ್ನು ಕೆಚ್ಚೆದೆಯಿಂದ ಹಿಮ್ಮೆಟ್ಟಿಸಿದ್ದ ವೀರರಾಣಿ ಅಬ್ಬಕ್ಕಳು ಈಗಲೂ ನಮಗೆ ಅಪರಿಚಿತಲಾಗಿದ್ದು, ಇತಿಹಾಸದ ಪುಟಗಳಲ್ಲಿ ಆಕೆಗೆ ಸಿಗುವ ಸ್ಥಾನ ಮಾನ ಇನ್ನೂ ಸಿಕ್ಕಿಲ್ಲ. ದೇಶಕ್ಕಾಗಿ ನರಕಯಾತನೆ ಅನುಭವಿಸಿ ಜೀವ ಕೊಟ್ಟಿರುವ ಅದೆಷ್ಟೋ ಹೋರಾಟಗಾರರನ್ನ ನಮ್ಮ ಇತಿಹಾಸವು ಕಡೆಗಣಿಸಿದೆಯೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್ ಅವರು ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಮಂಗಳೂರು ವಿಭಾಗ ಹಾಗೂ ನಿರ್ಮಲ ಬಾರತ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಇದರ ಸಹಯೋಗದೊಂದಿಗೆ ಉಳ್ಳಾಲ ಶಾರದನಿಕೇತನ ಸಭಾಂಗಣದ ಚನ್ನ ಮರಕಾಲ ವೇದಿಕೆಯಲ್ಲಿ ಶನಿವಾರದಂದು ನಡೆದ 'ಅಬ್ಬಕ್ಕ –500' ಪ್ರೇರಣಾದಾಯಿ ಉಪನ್ಯಾಸ ಸರಣಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ನೆರವೇರಿಸಿ ಅವರು ಮಾತನಾಡಿದರು.

ಕರಾವಳಿಯ ಜನತೆಗೆ ಗೊತ್ತಿಲ್ಲದ್ದ ಅಬ್ಬಕ್ಕಳ ಚರಿತ್ರೆಯು, ರಾಜ್ಯ ಮತ್ತು ದೇಶಕ್ಕೆ ಗೊತ್ತಾಗೋದಾದರೂ ಹೇಗೆ..? ಮೊಗಲರು ಹಾಗೂ ಬ್ರಿಟೀಷರ ವಿರುದ್ಧ ಹೋರಾಡಿದ ಕೆಲವರ ಹೆಸರನ್ನು ನಾವು ಕೇಳಿದ್ದೇವೆ. ಆದರೆ ಪೋರ್ಚುಗೀಸರ ವಿರುದ್ಧ ಹೋರಾಡಿದವರ ಹೆಸರು ನಮ್ಮ ಇತಿಹಾಸದಲ್ಲೇ ಇಲ್ಲ. ಆ ದೃಷ್ಟಿಯಿಂದ ಪೋರ್ಚುಗೀಸರ ವಿರುದ್ಧ ಹೋರಾಡಿದ ಅಬ್ಬಕ್ಕಳ ಹೆಸರು ಅತ್ಯಂತ ಮಹತ್ವದಾಗಿದ್ದು, ಆಕೆ ನಮ್ಮ ಕರಾವಳಿಯಳು ಎಂಬುದು ನಮಗೆಲ್ಲರಿಗೂ ಅಭಿಮಾನದ ವಿಚಾರವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಧರ್ಮಸ್ಥಳದ ಅಬ್ಬಕ್ಕ ವಂಶಸ್ಥರಾದ ಅನಿತಾ ಸುರೇಂದ್ರ ಕುಮಾರ್ ಮಾತನಾಡಿ, ಕಳೆದ ಒಂದು ವರುಷದಿಂದ 'ಅಬ್ಬಕ್ಕ-500' ಸರಣಿ ಕಾರ್ಯಕ್ರಮದಡಿ ಅಬ್ಬಕ್ಕಳ ನೆನಪುಗಳನ್ನು ಮೆಲುಕು ಹಾಕಿ ಅವಳ ಶೌರ್ಯ ಸಾಧನೆಯ ಬಗ್ಗೆ ಜಗತ್ತಿಗೆ ತಿಳಿಯಪಡಿಸುವ ಕಾರ್ಯವನ್ನು ನಡೆಸಿರುವುದು ಶ್ಲಾಘನೀಯ. ರಾಣಿ ಅಬ್ಬಕ್ಕಳ ನೆನಪು ಜನರಲ್ಲಿ ಸದಾ ಉಳಿಯುವಂತೆ ಮಾಡಲು ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದರು.

ಇದೇ ವೇಳೆ ವೇದಿಕೆಯಲ್ಲಿ ಅಬ್ಬಕ್ಕ –500 ರ ಸಂಭ್ರಮದಲ್ಲಿ ನೆನಪಿನ್ನೆಸಿರಿ ಸಂಚಿಕೆಯನ್ನು ಲೋಕಾರ್ಪಣೆ ಮಾಡಲಾಯಿತು.

ಬಂಟ್ವಾಳ ಸಂಚಯಗಿರಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಸಂಸ್ಥಾಪಕರಾದ ಡಾ.ತುಕಾರಾಮ ಪೂಜಾರಿ ಮತ್ತು ಡಾ.ಆಶಾಲತಾ ಎಸ್. ಸುವರ್ಣ ದಂಪತಿಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು.

ಕೊಲ್ಯ ನಾಟ್ಯನಿಕೇತನದ ರಾಜಶ್ರೀ ಉಳ್ಳಾಲ್ ಅವರ ಶಿಷ್ಯ ವೃಂದದಿಂದ ನೃತ್ಯ ಮೋಹನ ಹಾಗೂ ವೀರರಾಣಿ ಅಬ್ಬಕ್ಕ ಕಿರು ನೃತ್ಯ ರೂಪಕ ಪ್ರದರ್ಶನ ನಡೆಯಿತು.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಉಚ್ಚಿಲದ ಅಧ್ಯಕ್ಷ ಜಯ.ಸಿ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ವೇಣೂರು ಮಹಾಮಸ್ತಕಾಭಿಷೇಕ ಸಮಿತಿಯ ಕಾರ್ಯದರ್ಶಿ ಪ್ರವೀಣ್ ಕುಮಾರ್ ಇಂದ್ರ, ರಾಷ್ಟ್ರೀಯ ಸ್ವಯಂ ಸೇವಾ ಸಂಘ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹಕ ಪಿ.ಎಸ್ .ಪ್ರಕಾಶ್, ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಡಾ.ಗುರುನಾಥ ಬಡಿಗೇರ್, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಸಂದೀಪ್ ಬೂದಿಹಾಳ್, ನಿರ್ಮಲ ಭಾರತ್ ಚಾರಿಟೇಬಲ್ ಟ್ರಸ್ಟ್ ವಿಶ್ವಸ್ಥರಾದ ಕೆ.ರಮೇಶ್ ಮೊದಲಾದವರು ಉಪಸ್ಥಿತರಿದ್ದರು.


ಡಾ.ಮಾಧವ ಎಮ್.ಕೆ. ಪ್ರಸ್ತಾವಣೆಗೈದು ಸ್ವಾಗತಿಸಿದರು. ಡಾ.ಸುಧಾ ವೈದ್ಯ ನಿರೂಪಿಸಿದರು. ಸುಧಾ ಯು. ವಂದಿಸಿದರು.



ಅಬ್ಬಕ್ಕಳ ಪಠ್ಯ ಬರಲಿ

ಅಂಡಮಾನ್ ದ್ವೀಪದ ಜೈಲಲ್ಲಿ ಪ್ರಾಣ ತೆತ್ತ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳು ಅಲ್ಲಿನ ಗೋಡೆಗಳಲ್ಲಿ ಇದ್ದರೂ ಸಹ ನಮ್ಮ ಇತಿಹಾಸದ ಚರಿತ್ರೆಯಲ್ಲಿ ದಾಖಲಾಗಿಲ್ಲ. ಈ ಸರಣಿ ಕಾರ್ಯಕ್ರಮದ ಮೂಲಕ ಅಬ್ಬಕ್ಕಳ ಹೆಸರನ್ನು ಜಗತ್ತಿಗೆ ಪಸರಿಸುವ ದೊಡ್ಡ ಪ್ರಯತ್ನ ನಡೆದಿದೆ. ಶಾಲಾ ಪಠ್ಯ ಪುಸ್ತಕಗಳಲ್ಲಿ ಅಬ್ಬಕ್ಕಳ ಚರಿತ್ರೆಯ ಬಗೆಗಿನ ಪಾಠವನ್ನು ಅಳವಡಿಸುವಂತಾಗಬೇಕು. ಸಿನೆಮಾ, ನಾಟಕ, ನೃತ್ಯ ಇನ್ನಿತರ ಎಲ್ಲಾ ಮಾಧ್ಯಮಗಳ ಮೂಲಕ ಅಬ್ಬಕ್ಕಳ ಚರಿತ್ರೆಯನ್ನು ಜಗತ್ತಿಗೆ ತಿಳಿಸಬೇಕಿದೆ.

■ ಸುಧೀರ್ ಜಿ.ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್, ರಾ.ಸ್ವ.ಸೇ.ಸಂ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	6	4	2	0	8	+0.599
ಹೈದರಾಬಾದ್	6	3	3	0	6	+0.566
ದಿಲ್ಲಿ	5	3	2	0	6	+0.310
ಗುಜರಾತ್	5	3	2	0	6	+0.018
ಚೆನ್ನೈ	6	2	4	0	4	-0.780
ಲಖನೌ	5	2	3	0	4	-0.804
ಕೆಕೆಆರ್	7	1	5	1	3	-0.879
ಮುಂಬೈ	5	1	4	0	2	-1.076

ಕಿರುಸುದ್ದಿ

ಎಟಿಪಿ ಚಾಲೆಂಜರ್: ಬಾಲಾಜಿಗೆ ಪದಕ



ಹೊಸದಿಲ್ಲಿ: ಪೋರ್ಚುಗಲ್‌ನ ಒಯಿರಾಸ್ನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಭಾರತದ ಎನ್ ಶ್ರೀರಾಮ್ ಬಾಲಾಜಿ ಮತ್ತು ಆಸ್ಟ್ರಿಯಾದ ನೀಲ್ ಒಬರ್‌ಲೈಟ್ನರ್ ಜೋಡಿ ಡಬಲ್ಸ್ ಪ್ರಶಸ್ತಿ ಗೆದ್ದಿದೆ. ಮೂರನೇ ಸೀಡ್ ಆಗಿದ್ದ ಈ ಜೋಡಿ ಕೊಲಂಬಿಯಾದ ನಿಕೋಲಾಸ್ ಬರಿಯೆಂಟೋಸ್ ಮತ್ತು ಉರುಗ್ವೆಯ ಅರಿಯೆಲ್ ಬೆಹಾರ್ ವಿರುದ್ಧ ನಡೆದ ಫೈನಲ್‌ನಲ್ಲಿ 6-7(7), 6-4, 11-9 ಅಂತರದಲ್ಲಿ ಗೆಲುವು ಸಾಧಿಸಿತು. ಸೂಪರ್ ಟೈಬ್ರೇಕ್‌ನಲ್ಲಿ ಮ್ಯಾಚ್ ಪಾಯಿಂಟ್ ಉಳಿಸಿಕೊಂಡು ಜಯ ಸಾಧಿಸಿದ್ದು ವಿಶೇಷವಾಗಿದೆ. ಈ ಜಯದಿಂದ ಅವರಿಗೆ 125 ರ್‍ಯಾಂಕಿಂಗ್ ಅಂಕಗಳು ಲಭಿಸಿವೆ. ಇದು ಬಾಲಾಜಿಯವರ ಚಾಲೆಂಜರ್ ಟೂರ್ನಿಯಲ್ಲಿ 18ನೇ ವೃತ್ತಿಜೀವನದ ಪ್ರಶಸ್ತಿಯಾಗಿದ್ದು, 2026ರಲ್ಲಿ ಒಬರ್‌ಲೈಟ್ನರ್ ಜೊತೆಗೆ ನಾಲ್ಕನೇ ಪ್ರಶಸ್ತಿ ಆಗಿದೆ. ಮಹಿಳಾ ವಿಭಾಗದಲ್ಲಿ, ಬುರುಂಡಿಯ ಬುಜುಂಬುರಾನಲ್ಲಿ ನಡೆದ ಐಟಿಎಫ್ 40,000 ಡಾಲರ್ ಟೂರ್ನಿಯಲ್ಲಿ ಭಾರತದ ವೈದೇಹಿ ಚೌಧರಿ ಮತ್ತು ನೆದರ್‌ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೆರೆ ರನ್ನರ್ ಅಪ್ ಸ್ಥಾನ ಪಡೆದರು. ಅವರು ಅಮೆರಿಕದ ಜೂಲಿಯಾ ಆಡಮ್ಸ್ ಮತ್ತು ನೆದರ್‌ಲ್ಯಾಂಡ್ಸ್‌ನ ಮೆರಲ್ ಹೋಯ್ಡ್ ವಿರುದ್ಧ 4-6, 7-5, 10-5 ಅಂತರದಲ್ಲಿ ಸೋತರು. ಜೂನಿಯರ್ ವಿಭಾಗದಲ್ಲಿ, ಭಾರತದ ಯುವ ಪ್ರತಿಭೆ ಮಾಯಾ ರಾಜೇಶ್ವರನ್ ಫ್ರಾನ್ಸ್‌ನ ಬೋಲಿಯು-ಸೂರ್-ಮೇರ್‌ನಲ್ಲಿ ನಡೆದ ಜೆ300 ಟೂರ್ನಿಯಲ್ಲಿ ಸ್ಪೇನ್‌ನ ಪಾವ್ಲಾ ಪಿನೇರಾ ಸೆಲೋರಿಯೋ ವಿರುದ್ಧ 4-6, 7-5, 6-4 ಅಂತರದಲ್ಲಿ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು. ಇನ್ನೊಬ್ಬ ಭಾರತೀಯ ಆಟಗಾರ ಅರ್ಣವ್ ಪಾಪರ್ಕರ್ ಮಲೇಷ್ಯಾದ ಕುಆಲಾಲಂಪುರನಲ್ಲಿ ನಡೆದ ಜೆ200 ಟೂರ್ನಿಯಲ್ಲಿ ಜಪಾನ್‌ನ ಕಾಂತಾ ವಾತಾನಬೆ ವಿರುದ್ಧ 6-1, 6-2 ಅಂತರದಲ್ಲಿ ಗೆದ್ದು ಚಾಂಪಿಯನ್ ಆಗಿದ್ದಾರೆ.

ಸ್ಪರ್ಧೆ ವೇಳೆ ಕಾರ್ ರೇಸರ್ ಸಾವು

ಹೊಸದಿಲ್ಲಿ: ಜರ್ಮನಿಯ ನ್ಯೂರ್ಬುರ್ಗ್ರಿಂಗ್ ಟ್ರ್ಯಾಕ್‌ನಲ್ಲಿ ನಡೆದ ಎಡಿಎಸಿ 24 ಗಂಟೆಗಳ ಕ್ವಾಲಿಫೈಯರ್ ಸ್ಪರ್ಧೆಯಲ್ಲಿ ಭಾರೀ ಅಪಘಾತ ಸಂಭವಿಸಿ ಫಿನ್‌ಲ್ಯಾಂಡ್‌ನ ರೇಸಿಂಗ್ ಚಾಲಕ ಜುಹಾ ಮಿಯೆತ್ತಿನೆನ್ (66) ಸಾವನ್ನಪ್ಪಿದ್ದಾರೆ. ಸ್ಪರ್ಧೆ ಆರಂಭವಾದ ಸುಮಾರು ಅರ್ಧ ಗಂಟೆಯಲ್ಲೇ ಈ ಅಪಘಾತ ಸಂಭವಿಸಿದ್ದು, ಒಟ್ಟು ಏಳು ಚಾಲಕರು ಇದರೊಳಗೆ ಸಿಲುಕಿದ್ದರು. ಈ ಘಟನೆ ನಂತರ ರೇಸ್ ಅನ್ನು ತಕ್ಷಣವೇ ಸ್ಥಗಿತಗೊಳಿಸಲಾಯಿತು. ಇನ್ನೂ ಗಾಯಗೊಂಡ ಆರು ಚಾಲಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಗಾಯಗಳು ಜೀವಕ್ಕೆ ಅಪಾಯಕಾರಿಯಲ್ಲ ಎಂದು ಆಯೋಜಕರು ತಿಳಿಸಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದ ನಾಲ್ಕು ಬಾರಿ ಫಾರ್ಮುಲಾ ಒನ್ ವಿಶ್ವ ಚಾಂಪಿಯನ್ ಮ್ಯಾಕ್ಸ್ ವರ್ಸ್ಟಾಪೆನ್ ಅಪಘಾತ ಸಂಭವಿಸಿದ ವೇಳೆ ಟ್ರ್ಯಾಕ್ ಮೇಲೆ ಇರಲಿಲ್ಲ. ಆಯೋಜಕರು ನೀಡಿದ ಪ್ರಕಟಣೆಯಲ್ಲಿ, ಎಡಿಎಸಿ 24 ಗಂಟೆಗಳ ಕ್ವಾಲಿಫೈಯರ್‌ನ ಮೊದಲ ರೇಸ್‌ನ ಆರಂಭಿಕ ಹಂತದಲ್ಲೇ ಏಳು ಸ್ಪರ್ಧಿಗಳನ್ನು ಒಳಗೊಂಡ ಗಂಭೀರ ಅಪಘಾತ ಸಂಭವಿಸಿದೆ, ಎಂದು ತಿಳಿಸಿದ್ದಾರೆ.

ರಿಂಕು ಸಿಂಗ್ ಆಟಕ್ಕೆ ರಾಜಸ್ಥಾನ ತತ್ತರ | ಕಾರ್ತಿಕ್, ವರುಣ್ ಅಬ್ಬರ | ಮಿಂಚಿದ ಅನುಕುಲ್

ಕೊನೆಗೂ ಗೆದ್ದ ಕೋಲ್ಕತ್ತಾ ರೈಡರ್ಸ್

ಕೋಲ್ಕತ್ತಾ: ಬಲಿಷ್ಠ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಲಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಪಂದ್ಯಾವಳಿಯಲ್ಲಿ ಗೆಲುವಿನ ಖಾತೆ ತೆರದಿದೆ. ರಿಂಕು ಸಿಂಗ್ ಹಾಗೂ ಅನುಕುಲ್ ರಾಯ್ ಅವರ ಬ್ಯಾಟಿಂಗ್ ಮತ್ತು ಕಾರ್ತಿಕ್ ತ್ಯಾಗಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಕೆಕೆಆರ್ 4 ವಿಕೆಟ್‌ಗಳ ಗೆಲುವು ಸಾಧಿಸಿತು. ಆ ಮೂಲಕ ಐದು ಸೋಲುಗಳ ಸರವಳಿ ಮುರಿದಿರುವ ರಹಾನೆ ಪಡೆ ರಾಜಸ್ಥಾನಕ್ಕೆ ಎರಡನೇ ಸೋಲಿನಾಘಾತ ನೀಡಿತು.

ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ರಾಜಸ್ಥಾನ ರಾಯಲ್ಸ್ ಈ ಬಾರಿಯ ಐಪಿಎಲ್‌ನಲ್ಲಿ ತನ್ನ ಅತ್ಯಂತ ಕಳಪೆ ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತು. ವೈಭವ್ ಸೂರ್ಯವಂಶಿ (46, 28ಎ, 6ಬೌ, 2ಸಿ) ಮಿಂಚಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ(4-0-22-3), ವರುಣ್ (4-0-14-3) ಕಡಿವಾಣ ಹಾಕಿದರು. ಗುರಿ ಬೆನ್ನತ್ತಿದ ಕೆಕೆಆರ್ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ರಿಂಕು ಸಿಂಗ್(53★, 34ಎ, 5ಬೌ, 2ಸಿ), ರಾಯ್(29, 16ಎ, 1 ಬೌ, 2ಸಿ) ಗಳಿಸಿದರು. ರಾಜಸ್ಥಾನ ಪರ ಜಡೇಜಾ(3-0-8-2) ಪಡೆದರು.

ಕಳೆದ ಪಂದ್ಯದಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ರಿಂಕು ಸಿಂಗ್ ಈ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಗೆಲ್ಲಿಸಿದರು. ಅನುಕುಲ್ ರಾಯ್ ಕೂಡ ಸಾಥ್ ಕೊಟ್ಟು ವಿನ್ನರ್ ಅನ್ನಿಸಿಕೊಂಡರು. ಇದಕ್ಕೂ ಮುನ್ನ ವರುಣ್ ಚಕ್ರವರ್ತಿ ತಮ್ಮ ಅಸಲು ಆಟದೊಂದಿಗೆ ಪಂದ್ಯಶ್ರೇಷ್ಠ ಗೆದ್ದುಕೊಂಡರು. ಇತ್ತ ಕೆಕೆಆರ್ ಭಾರೀ ನಿರಾಶಾದಾಯಕ ಆರಂಭ ಪಡೆಯಿತು. ಸೈಫರ್ಟ್ ಮೊದಲ ಬಾಲ್‌ನಲ್ಲೇ ಶೂನ್ಯ ಸುತ್ತಿದರು. ಅಜಿಂಕ್ಯಾ ರಹಾನೆ ಕೂಡ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಅಂಗ್ರಿಶ್ ರಘುವಂಶಿ ಇಂಪ್ಯಾಕ್ಟ್ ಮಾಡದೆ 10 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಕ್ಯಾಮರೂನ್ ಗ್ರೀನ್ ಈ ಬಾರಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಮೊದಲನೇ ಎಸೆತದಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿದ ಅವರು, ಮೂವ್‌ಮೆಂಟಮ್ ಬದಲಾಯಿಸಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ಕೆಕೆಆರ್ 3 ವಿಕೆಟ್‌ಗೆ 53 ರನ್ ಗಳಿಸಿತು.

ಮಧ್ಯಮ ಓವರ್ಸ್: ರಾಜಸ್ಥಾನ ಮಧ್ಯಮ ಓವರ್‌ಗಳಲ್ಲಿ ಹಿನ್ನಡೆ ಅನುಭವಿಸಿತು. 46 ರನ್‌ಗಳಿಸಿದ್ದ ವೈಭವ್ ಸೂರ್ಯವಂಶಿ ವರುಣ್ ಚಕ್ರವರ್ತಿಗೆ ಕ್ಯಾಚ್ ಆದರು. ಮೂರನೇ ಕ್ರಮಾಂಕಿತ ಜುರೇಲ್ 5 ರನ್‌ಗೆ, ಪರಾಗ್ 12 ರನ್‌ಗೆ ವಿಕೆಟ್ ಒಪ್ಪಿಸಿದರು. ಹೆಟ್ಮೇರ್ ಮತ್ತೊಮ್ಮೆ ನಿರಾಸೆ ಮೂಡಿಸಿ 15 ರನ್‌ಗೆ ಔಟಾದರು. ಫೆರಾರಿಯಾ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನದ ಮಧ್ಯಮ ಕ್ರಮಾಂಕ ತತ್ತರಿಸಿತು. ಜೈಸ್ವಾಲ್ ಮತ್ತು ವೈಬಿಬ್ ಜೋಡಿಸಿದ್ದ ರನ್ ನೆರವಿನಿಂದ ಈ ಓವರ್‌ಗಳಲ್ಲಿ ಆರ್‌ಆರ್ 61 ರನ್ ಮಾತ್ರ ಗಳಿಸಿತು. 5 ವಿಕೆಟ್ ಉರುಳಿದವು.

ಇತ್ತ ಕೆಕೆಆರ್ ಮಧ್ಯಮ ಓವರ್‌ಗಳಲ್ಲಿ ಅಲ್ಪ ಸ್ಥಿರ ಪ್ರದರ್ಶನ ನೀಡಿತು. ಗ್ರೀನ್ 27 ರನ್‌ಗೆ ವಿಕೆಟ್ ಒಪ್ಪಿಸಿದರೂ, ಪೋವೆಲ್ ಮತ್ತು ರಿಂಕು ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಪೋವೆಲ್ 23 ರನ್‌ಗೆ ವಿಕೆಟ್ ಒಪ್ಪಿಸಿದರು. ರಿಂಕು ಸೆಟ್ ಆಗುವತ್ತ ಸಾಗಿದರು. ಪಂದ್ಯ ರೋಚಕ ಹಂತಕ್ಕೆ ತಲುಪಿತು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು ಕೆಕೆಆರ್ 65/3 ಗಳಿಸಿತು.



ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ: 20 ಓವರ್‌ಗಳಲ್ಲಿ 155/9: ವೈಭವ್ 46, ಜೈಸ್ವಾಲ್ 39; ವರುಣ್ 14/3, ಕಾರ್ತಿಕ್ 22/3
ಕೆಕೆಆರ್: 19.4 ಓವರ್‌ಗಳಲ್ಲಿ 161/6: ರಿಂಕು 53★, ಅಂಕುಲ್ 29★; ಜಡೇಜಾ 8/2

ಡೆತ್ ಓವರ್

ಡೆತ್ ಓವರ್‌ನಲ್ಲಿ ರಾಜಸ್ಥಾನ ತೀರಾ ಹಿನ್ನಡೆ ಅನುಭವಿಸಿತು. ಯಾರೊಬ್ಬರೂ ನಿಲ್ಲಲಿಲ್ಲ. ಇದೇ ಸಮಯದಲ್ಲಿ ಸುನಿಲ್ ನರೈನ್ 1, ಕಾರ್ತಿಕ್ 3 ವಿಕೆಟ್ ಪಡೆದರು. ಡೆತ್ ಓವರ್ ಮುಕ್ತಾಯಕ್ಕೆ ರಾಜಸ್ಥಾನ 31 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಇತ್ತ ಕೆಕೆಆರ್ ಗೆಲುವಿನಾಟವಾಡಿತು. ಕೊನೆಯ ನಾಲ್ಕು ಓವರ್‌ಗಳಲ್ಲಿ 40 ರನ್ ಬೇಕಿದ್ದವು. ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ರಿಂಕು ಸಿಂಗ್ ಪಂದ್ಯ ಗೆಲ್ಲಿಸುತ್ತಾ ಬಂದರು. ಅದೆಲ್ಲಾ 18ನೇ ಓವರ್‌ನಲ್ಲಿ 7 ರನ್ ಬಿಟ್ಟುಕೊಟ್ಟ ಬ್ರಿಜೇಶ್ ಪ್ರಯತ್ನ ಪಟ್ಟರು. ಆದರೆ ರಿಂಕು ಸಿಂಗ್ ಬೌಂಡರಿ ಸಿಕ್ಸರ್‌ಗಳ ಸುರಿಮಳೆಗೈದರು. ಅತ್ತ ಅನುಕುಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಕೊನೆ ಓವರ್‌ನಲ್ಲಿ 9 ರನ್ ಬೇಕಿತ್ತು 2 ಬೌಂಡರಿ, 1 ಸಿಕ್ಸರ್ ಬಾರಿಸಿದ ರಿಂಕು ಪಂದ್ಯ ಗೆಲ್ಲಿಸಿದರು. ಡೆತ್ ಓವರ್‌ನಲ್ಲಿ ಕೆಕೆಆರ್ 65 ರನ್‌ಗಳಿಸಿತು.

ಕುಸಿದ ರಾಜಸ್ಥಾನ

ಬ್ಯಾಟಿಂಗ್ ಆಹ್ವಾನ ಪಡೆದ ರಾಜಸ್ಥಾನ ನಿಧಾನ ಆರಂಭ ಪಡೆದರು. ಜೈಸ್ವಾಲ್ ಸೆಟ್ ಆಗುವತ್ತ ಸಾಗಿದರು. ಮತ್ತೊಂದು ಬದಿಯಲ್ಲಿ ವೈಭವ್ ಸೂರ್ಯವಂಶಿ ಯಥಾಪ್ರಕಾರ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಇಬ್ಬರ ಆಟಕ್ಕೆ ತಡೆಯೊಡ್ಡಲು ಕೆಕೆಆರ್ ಬೌಲರ್‌ಗಳು ಹರಸಾಹಸ ಪಟ್ಟರು. ವೈಭವ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಅರ್ಧಶತಕದತ್ತ ಸಾಗಿದರು. ಜೈಸ್ವಾಲ್ ಕೂಡ ರೋಮಾಂಚನಕಾರಿ ಹೊಡೆತದೊಂದಿಗೆ ಅಬ್ಬರಿಸಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ರಾಜಸ್ಥಾನ 63 ರನ್ ಗಳಿಸಿತ್ತು.

ಭಾರತದ ಶರ್ವಾನಿಕಾ ವಿಶ್ವ ಚಾಂಪಿಯನ್



ಹೊಸದಿಲ್ಲಿ: ಚೆಸ್‌ನಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಸರ್ಬಿಯಾದ ವ್ರ್ನ್ಯಾಚ್ಕಾ ಬಾಂಜಾನಲ್ಲಿ ನಡೆದ ಫಿಡೆ ವಿಶ್ವ ರಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಎ.ಎಸ್. ಶರ್ವಾನಿಕಾ ಅಂಡರ್-12 ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಪಟ್ಟಕ್ಕೇರಿದ್ದಾರೆ.

ಈ ಹಿಂದೆ ಅಂಡರ್-10 ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ಶರ್ವಾನಿಕಾ, ಈ ಬಾರಿ ವಯಸ್ಸಿನ ಮೇಲಿನ ವಿಭಾಗಕ್ಕೆ ಏರಿ ಅದ್ಭುತ ಸಾಧನೆ ಮಾಡಿದ್ದಾರೆ. 11 ಸುತ್ತಿನ ಈ ಟೂರ್ನಿಯಲ್ಲಿ ಅವರು 10 ಗೆಲುವು ಮತ್ತು ಒಂದು ಡ್ರಾ ಸಾಧಿಸಿ ಒಟ್ಟು 10.5 ಅಂಕಗಳನ್ನು ಗಳಿಸಿದರು. ಅವರು ಉಕ್ರೇನ್‌ನ ದರಿಯಾ ಕ್ರಾವ್ಚುಕ್ ವಿರುದ್ಧ ಡ್ರಾ ಮಾಡಿಕೊಂಡಿದ್ದು, ಉಳಿದ ಎಲ್ಲಾ ಪಂದ್ಯಗಳಲ್ಲಿ ಗೆಲುವು ದಾಖಲಿಸಿದರು. ಒಂಬತ್ತನೇ ಸುತ್ತಿನಲ್ಲಿ ಸ್ಲೋವೇನಿಯಾದ ಎಮಾ ಜಾಕ್ಸಾ ಅವರನ್ನು ಸೋಲಿಸಿ ಎರಡು ಸುತ್ತು ಬಾಕಿ ಇರುವಾಗಲೇ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡರು. ಕೊನೆಯಲ್ಲಿ 10.5 ಅಂಕಗಳೊಂದಿಗೆ ಶರ್ವಾನಿಕಾ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಶೋಲ್ಪನ್‌ಬೆಕ್ ಝೂನ್ಸಾಯಾ 7.5 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. 2041 ಕ್ಲಾಸಿಕಲ್ ರೇಟಿಂಗ್ ಹೊಂದಿರುವ ಶರ್ವಾನಿಕಾ, ಟೂರ್ನಿಯಲ್ಲಿ ಪ್ರಮುಖ ಸ್ಪರ್ಧಿಯಾಗಿ ಪ್ರವೇಶಿಸಿದ್ದರು. ಅವರು ಅಲಿಸಾ ಯುಂಕರ್ ವಿರುದ್ಧ ಗೆಲುವಿನಿಂದ ಅಭಿಯಾನ ಆರಂಭಿಸಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡಿದರು.

ಅಂಡರ್-12 ಬಾಲಕಿಯರ ವಿಭಾಗದಲ್ಲಿ ಸಾಧನೆ

ಎರಡನೇ ವಿಶ್ವದರ್ಜೆ ಪ್ರಶಸ್ತಿ

ಈ ಸಾಧನೆಯೊಂದಿಗೆ ಶರ್ವಾನಿಕಾ ಎರಡನೇ ಬಾರಿ ವಿಶ್ವ ರಾಪಿಡ್ ಪ್ರಶಸ್ತಿ ಗೆದ್ದಿದ್ದಾರೆ. ಈ ಹಿಂದೆ 9ನೇ ವಯಸ್ಸಿನಲ್ಲಿ ಅಂಡರ್-10 ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಜೊತೆಗೆ 2024ರಲ್ಲಿ ಅಲ್ಬೇನಿಯಾದಲ್ಲಿ ನಡೆದ ಫಿಡೆ ವಿಶ್ವ ರಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಶಿಪ್‌ನಲ್ಲಿ ಬ್ಲಿಟ್ಜ್ ವಿಭಾಗದಲ್ಲಿ ಬೆಳ್ಳಿ ಪದಕ ಕೂಡ ಪಡೆದಿದ್ದರು.

ಸಿಕ್ಸರ್‌ಗಳ ಸುರಿಮಳೆಗೈದ ಪಂಜಾಬ್ ಕಿಂಗ್ಸ್

ಚಂಡೀಗಢ: ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 21 ಸಿಕ್ಸರ್‌ಗಳು ಮೂಡಿಬಂದವು. ಇದರಲ್ಲಿ 9 ಸಿಕ್ಸರ್‌ಗಳನ್ನು ಪ್ರಿಯಾಂಶ್ ಆರ್ಯ ಬಾರಿಸಿದರೆ, 7 ಸಿಕ್ಸರ್‌ಗಳನ್ನು ಕೂಪರ್ ಕೊನೊಲಿ ಬಾರಿಸಿದರು. ಮೈದಾನದುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದ ಈ ಜೋಡಿ 182 ರನ್ ಜೊತೆಯಾಟ ನಿರ್ಮಿಸಿದ್ದು, ಪಂಜಾಬ್ ತಂಡವು ಲಖನೌ ತಂಡದ ವಿರುದ್ಧ ಬರೋಬ್ಬರಿ 254 ರನ್ ಬಾರಿಸಿದೆ.

ಪಂತ್ ಪಡೆ ಬ್ಯಾಟಿಂಗ್ ಆಹ್ವಾನ ಕೊಟ್ಟು ಇನ್ನಿಂಗ್ಸ್ ಉದ್ದಕ್ಕೂ ದಂಡಿಸಿಕೊಂಡಿತು. ಕೂಪರ್(87, 46ಎ, 8ಬೌ, 7ಸಿ), ಪ್ರಿಯಾಂಶ್(93, 37ಎ, 4 ಬೌ, 9 ಸಿ) ದಾಖಲೆಯ ಜೊತೆಯಾಟವಾಡಿದರು. ಪ್ರಿನ್ಸ್ ಯಾದವ್ 2 ವಿಕೆಟ್ ಪಡೆದರು. ಇದಕ್ಕಿಂತ ಹೆಚ್ಚಾಗಿ 6.25ರ ಎಕನಾಮಿಯಲ್ಲಿ ಬೌಲಿಂಗ್ ಮಾಡಿದರು. ಇದು ಲಖನೌ ಬೌಲರ್‌ನ ಅತ್ಯುತ್ತಮ ಬೌಲಿಂಗ್ ಅಂಕಿ ಅಂಶ.

ಪ್ರಿಯಾಂಶ್-ಕೊನೊಲಿ ಆಡಿದ್ದೇ ಆಟ: ಪವರ್‌ಪ್ಲೇ ಆರಂಭದಲ್ಲಿ ಪಂಜಾಬ್ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂಕದಲ್ಲಿ ಬಂದ ಕೂಪರ್ ಕೊನೊಲಿ ಕೊಂಚ ಹೊತ್ತು ಸೆಟ್ ಆದರು. ಇತ್ತ ಪ್ರಿಯಾಂಶ್ ಆರ್ಯ ಮಾತ್ರ ದಂಡಿಸಲಾರಂಭಿಸಿದರು. ಇಬ್ಬರ ಜೊತೆಯಾಟ 50ಕ್ಕೆ ಮುಟ್ಟಿತು. ಪ್ರಿಯಾಂಶ್ ಆರ್ಯ ಬೌಂಡರಿ-ಸಿಕ್ಸರ್‌ಗಳೊಂದಿಗೆ ಅಬ್ಬರಿಸಿ 19 ಎಸೆತದಲ್ಲಿ ಅರ್ಧಶತಕ ಬಾರಿಸಿದರು. ಪವರ್‌ಪ್ಲೇನಲ್ಲಿ ಪಂಜಾಬ್ 63 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಇವರಿಬ್ಬರ ಆಟ ತೀವ್ರಗೊಂಡಿತು. 35 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಕೂಪರ್ ಮುಂದಿನ 11 ಬಾಲ್‌ಗಳಲ್ಲಿ ಬರೋಬ್ಬರಿ 37 ರನ್ ಚಚ್ಚಿದರು. ಇತ್ತ ಪ್ರಿಯಾಂಶ್ ಆರ್ಯ ಆಟಕ್ಕೆ ಮಾತ್ರ ಯಾವುದೇ ತಡೆ ಇರಲಿಲ್ಲ. ಬಂದ ಬೌಲರ್‌ಗಳನ್ನೆಲ್ಲಾ ಅವರು ದಂಡಿಸುತ್ತಲೇ ಇದ್ದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು, ಅಲ್ಲಿ ಪಂಜಾಬ್ ಬರೋಬ್ಬರಿ 133 ರನ್ ಗಳಿಸಿತು. ಒಂದು ಸಮಯಕ್ಕೆ ಚಿಕ್ಕ ಕಂಬ್ಯಾಕ್ ಕೊಟ್ಟ ಲಖನೌ ಒಂದೇ ಓವರ್ ಅಂತರದಲ್ಲಿ ಇಬ್ಬರ ವಿಕೆಟ್ ಪಡೆಯಿತು. ಪ್ರಿಯಾಂಶ್ 37 ಎಸೆತದಲ್ಲಿ 93 ರನ್ ಬಾರಿಸಿದರು. ಕೊನೊಲಿ 46 ಬಾಕ್‌ಗಳಲ್ಲಿ 87 ರನ್ ಬಾರಿಸಿದರು, ಡೆತ್ ಓವರ್‌ಗಳಲ್ಲಿ ಮಿಲ್ಲರ್ ಅಬ್ಬರಿಸಿದರು. 16 ಎಸೆತದಲ್ಲಿ 29 ರನ್ ಬಾರಿಸಿದ ಅವರು ಸ್ಕೋರ್ ಹಿಗ್ಗಿಸಿದರು. ಶಶಾಂಕ್ 17 ರನ್ ಗಳಿಸಿದರು. ಪಂಜಾಬ್ ಡೆತ್‌ನಲ್ಲಿ 58 ರನ್ ಗಳಿಸಿತು.



▸▸ ಮಾರ್ಕ್ರಂ ಓವರ್‌ನಲ್ಲಿ 32 ರನ್
▸▸ ಪಂಜಾಬ್ 254/7

ಲಯದ ಹುಡುಕಾಟದಲ್ಲಿ ಮುಂಬೈ

ಅಹಮದಾಬಾದ್: ಗೆಲುವಿನ ಲಯಕ್ಕೆ ಮರಳಿರುವ ಗುಜರಾತ್ ಟೈಟಾನ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ತಂಡಗಳು ಸೋಮವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪಂದ್ಯಾವಳಿಯಲ್ಲಿ ಒಂದು ಮಾತ್ರ ಗೆಲುವು ಸಾಧಿಸಿರುವ ಮುಂಬೈ ಇಂಡಿಯನ್ಸ್ ಗೆಲುವಿನ ಹಳಿಗೆ ಮರಳಲೆತ್ನಿಸಲಿದೆ. ಇತ್ತ ಗುಜರಾತ್ ಕಳೆದ ಎರಡು ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದು, ಅದೇ ಪ್ರದರ್ಶನ ಮುಂದುವರಿಸುವ ತವಕದಲ್ಲಿದೆ. ಪಂದ್ಯಾವಳಿ ರೋಚಕ ಹಂತಕ್ಕೆ ತಲುಪಿದೆ. ಮೊದಲು ನಾಲ್ಕು ಸ್ಥಾನಕ್ಕಾಗಿ ವಿವಿಧ ತಂಡಗಳು ಭಾರೀ ಪೈಪೋಟಿ ನಡೆಸುತ್ತಿವೆ. ಅದರಲ್ಲಿ ಗುಜರಾತ್ ಕೂಡ ಒಂದು. ಕಳೆದ ಪಂದ್ಯಗಳಲ್ಲಿ ಜಾಸ್ ಬಟ್ಲರ್ ಮತ್ತು ಗಿಲ್ ಅವರ ಉತ್ತಮ ಪ್ರದರ್ಶನದೊಂದಿಗೆ ಮಿಂಚುತ್ತಿದೆ. ಇತ್ತ ಮುಂಬೈ ರೋಹಿತ್ ಶರ್ಮ ಅವರ ಅನುಪಸ್ಥಿತಿಯಲ್ಲಿ ಪಂಜಾಬ್ ವಿರುದ್ಧ ಭಾರೀ ಸೋಲನುಭವಿಸಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಮುಂಬೈಗೆ ಗೆಲುವಿನ ತವಕ: ಮುಂಬೈ ಇಂಡಿಯನ್ಸ್ ತನ್ನ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಬಳಿಕ ನಡೆದ ಎಲ್ಲಾ ಪಂದ್ಯಗಳಲ್ಲಿ ಸೋತಿದೆ. ಹಿಂದಿನ ಪಂದ್ಯಗಳಲ್ಲಿ ಆರ್‌ಸಿಬಿ ಹಾಗೂ ಪಂಜಾಬ್ ತಂಡವನ್ನು ಎದುರಿಸಿದ್ದಾಗ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಹಿನ್ನಡೆ ಅನುಭವಿಸಿತ್ತು. ರೋಹಿತ್ ಶರ್ಮ ಕೆಲವು ಪಂದ್ಯಗಳಲ್ಲಿ ಆಡುತ್ತಿಲ್ಲ. ರಯಾನ್ ರಿಕೆಲ್ಟನ್ ಲಯದ ಹುಡುಕಾಟದಲ್ಲಿದ್ದಾರೆ. ಸೂರ್ಯ ಕೂಡ ಲಯದಲ್ಲಿಲ್ಲ. ಡಿಕಾಕ್ ಆಡಿದ ಮೊದಲ ಪಂದ್ಯದಲ್ಲೇ ಶತಕ ಬಾರಿಸಿ ಮಿಂಚಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಯಾರೊಬ್ಬರೂ ನಿಲ್ಲುತ್ತಿಲ್ಲ. ಬೌಲಿಂಗ್ ವಿಚಾರಕ್ಕೆ ಬಂದರೆ ಬೂಮ್ರಾ, ದೀಪಕ್, ಬೋಲ್ಟ್ ಹಿಡಿದು ಎಲ್ಲರೂ ದಂಡಿಸಿಕೊಳ್ಳುತ್ತಿದ್ದಾರೆ. ಶಾರ್ದೂಲ್ ಮಾತ್ರ ವಿಕೆಟ್ ಪಡೆದಿದ್ದು, ಅವರೂ ದುಬಾರಿಯಾಗಿದ್ದಾರೆ.



ಗುಜರಾತ್‌ಗೆ ಭರವಸೆ: ಇತ್ತ ಗುಜರಾತ್ ತಂಡದಲ್ಲಿ ನಾಯಕ ಶುಭಮನ್ ಗಿಲ್ ಮಿಂಚಿರುವುದು ಬಲ ತಂದಿದೆ. ಹಿಂದಿನ ಪಂದ್ಯಗಳಲ್ಲಿ ಜಾಸ್ ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್, ಶಾರುಖ್, ವಾಷಿಂಗ್ಟನ್ ಸುಂದರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಮುಖ್ಯವಾಗಿ ಬೌಲಿಂಗ್‌ನಲ್ಲಿ ಗುಜರಾತ್ ಟೈಟಾನ್ಸ್ ಬಲವಾದ ಪ್ರದರ್ಶನದೊಂದಿಗೆ ಗೆಲ್ಲುತ್ತಿದೆ. ರಬಾಡ ಲಯಕ್ಕೆ ಮರಳಿದ್ದಾರೆ. ಸಿರಾಜ್ ಕೂಡ ತಮ್ಮ ಅಸಲು ಆಟ ಪ್ರದರ್ಶಿಸಿದ್ದಾರೆ. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್, ಸುಂದರ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ.

ಪಿಚ್: ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಲಾಭ ನೀಡಲಿದೆ. ಹಿಂದಿನ ಪಂದ್ಯಗಳಲ್ಲಿ ಬೌಲರ್‌ಗಳು ಅಲ್ಪ ಕಷ್ಟ ಪಟ್ಟಿದ್ದಾರೆ. 200+ ಸ್ಕೋರ್ ಆಗಬಹುದು.

ಅಕ್ರಮ ಟಿಕೆಟ್ ನಮಗೆ ಸಂಬಂಧವಿಲ್ಲ: ಕೆಎಸ್ಸಿಎ

ಬೆಂಗಳೂರು: ಬೆಂಗಳೂರಿನಲ್ಲಿ ಮಾರಾಟವಾಗುತ್ತಿರುವ ಬ್ಲಾಕ್ ಟಿಕೆಟ್‌ಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದು ಕರ್ನಾಟಕ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ಇಂಡಿಯನ್ ಪ್ರೀಮಿರ್ ಲೀಗ್ ಟಿಕೆಟ್‌ಗಳನ್ನು ಅಧಿಕೃತ ಮಾರ್ಗಗಳ ಮೂಲಕ ಖರೀದಿಸಿ, ನಂತರ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪದ ಮತ್ತು ವ್ಯಕ್ತಿಗಳ ಬಂಧನವಾಗಿರುವ ಬಗ್ಗೆ ವರದಿಗಳಾಗಿದ್ದವು. ಅಲ್ಲದೆ, ಈ ವಿಚಾರದಲ್ಲಿ ಕೆಲವು ಕಾರ್ಪೊರೇಟ್ ಸಂಸ್ಥೆಗಳು ಶಾಮೀಲಾಗಿವೆ ಎಂದು ಹೇಳಲಾಗುತ್ತಿತ್ತು. ಈ ಸಂಸ್ಥೆಗಳು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಯೊಂದಿಗೆ ಸಂಬಂಧ ಹೊಂದಿವೆಯೇ ಅಥವಾ ಬಂಧಿತ ವ್ಯಕ್ತಿಗಳು ಕೆಎಸ್‌ಸಿಎ ಸದಸ್ಯರೇ ಎಂಬ ಬಗ್ಗೆ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ ಎಂದು ವರದಿಯಾಗಿದೆ.

ನಮಗೆ ಅಧಿಕಾರವೇ ಇಲ್ಲ: ಕೆಎಸ್‌ಸಿಎ: ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸ್ಪಷ್ಟನೆಗಳನ್ನು ನೀಡಿರುವ ಕೆಎಸ್‌ಸಿಎ, ತನಗೂ ಬಂಧಿತ ವ್ಯಕ್ತಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದಿದೆ. ಅಸಲಿಯತ್ತಾಗಿ ಕೆಎಸ್‌ಸಿಎ ಸಂಸ್ಥೆಯು ಫ್ರಾಂಚೈಸಿಯ ಟಿಕೆಟ್ ಏಜೆನ್ಸಿಯಾಗಲಿ ಅಥವಾ ಟಿಕೆಟ್ ಮಾರಾಟ ಮಾಡುವ ಅಧಿಕಾರ ಹೊಂದಿಲ್ಲ. ಸಾರ್ವಜನಿಕರಿಗೆ ಟಿಕೆಟ್ ಮಾರಾಟ ಸಂಪೂರ್ಣವಾಗಿ ಫ್ರಾಂಚೈಸಿಯ ಅಧಿಕೃತ ಚಾನೆಲ್‌ಗಳು ಮತ್ತು ಟಿಕೆಟ್ ಸಹಭಾಗಿಗಳ ಮೂಲಕವೇ ನಿರ್ವಹಿಸಲಾಗುತ್ತದೆ ಎಂದಿದೆ. ಕೆಎಸ್‌ಸಿಎಗೆ ಫ್ರಾಂಚೈಸಿ ಸೀಮಿತ ಪ್ರಮಾಣದ ಟಿಕೆಟ್‌ಗಳನ್ನು ನೀಡಲಾಗುತ್ತಿದ್ದು, ಇವುಗಳನ್ನು ಕಟ್ಟುನಿಟ್ಟಾಗಿ ಸಂಸ್ಥೆಯ ಕ್ರಿಕೆಟ್ ಕ್ಲಬ್‌ಗಳಿಗೆ, ಖಾಯಂ ಸದಸ್ಯರಿಗೆ ಮತ್ತು ಕೆಎಸ್‌ಸಿಎಗೆ ಸೇವೆ ಸಲ್ಲಿಸುವ ಕೆಲವು ಸರ್ಕಾರಿ ಸಂಸ್ಥೆಗಳಿಗೆ ಮಾತ್ರ ಒದಗಿಸಲಾಗುತ್ತದೆ.

ಹೈದರಾಬಾದ್ ವಿರುದ್ಧ ಚೆನ್ನೈಗೆ 10 ರನ್ ಸೋಲು

ಹೈದರಾಬಾದ್: ಆಯುಷ್ ಮಾತ್ರೆ ಅವರ ಉತ್ತಮ ಬ್ಯಾಟಿಂಗ್ ನಂತರ ದಿಢೀರ್ ಕುಸಿತ ಕಂಡ ಚೆನ್ನೈ ಸೂಪರ್ ಕಿಂಗ್ಸ್, ಶನಿವಾರದ ಎರಡನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್‌ನೊಂದಿಗೆ 10 ರನ್‌ನಿಂದ ಸೋತಿತು.


ಹ್ಯಾಟ್ರಿಕ್ ಸೋಲಿನ ನಂತರ ದಿಲ್ಲಿ ಹಾಗೂ ಕೆಕೆಆರ್ ತಂಡಗಳನ್ನು ಸೋಲಿಸಿ ಉತ್ಸಾಹದಲ್ಲಿದ್ದ ಚೆನ್ನೈ ಟೂರ್ನಿಯಲ್ಲಿ ನಾಲ್ಕನೇ ಸೋಲು ಕಂಡಿದ್ದು, ಒತ್ತಡದಲ್ಲಿ ಸಿಲುಕಿಕೊಂಡಿದೆ. ಇತ್ತ ಹೈದರಾಬಾದ್ ಗೆಲುವಿನೊಂದಿಗೆ ಮತ್ತೊಮ್ಮೆ ಉತ್ತಮ ಸ್ಥಾನಕ್ಕೆ ಬಂದಿದೆ. ಪಂದ್ಯದಲ್ಲಿ ಹೈದರಾಬಾದ್ ಮೊದಲು ಬ್ಯಾಟಿಂಗ್ ಮಾಡಿತ್ತು. ಅಭಿಷೇಕ್ ಶರ್ಮ(59, 22ಎ, 6 ಬೌ, 4ಸಿ) ಮತ್ತು ಹೆನ್ರಿಚ್ ಕ್ಲಾಸೆನ್ (59, 39ಎ, 6ಬೌ, 2ಸಿ) ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 194 ರನ್ ಗಳಿಸಿತು. ಸೂಪರ್ ಕಿಂಗ್ಸ್ ಪರ ಕಂಬೋಜ್ (3-0-22-3)ನೊಂದಿಗೆ ಹೋರಾಡಿದರು, ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 184 ರನ್ ಮಾತ್ರ ಗಳಿಸಿತು. ಮಾತ್ರೆ (30, 12ಬಾ, 5ಬೌ, 1ಸಿ) ಗಳಿಸಿದರು. ಹೈದರಾಬಾದ್ ಪರ ಮಾಲಿಂಗಾ (4-0-29-3) ಗೆಲ್ಲಿಸಿದವರಾದರು.

ದಿಢೀರ್ ಕುಸಿತ: ಗುರಿ ಬೆನ್ನತ್ತಿದ ಚೆನ್ನೈ ಮೊದಲಿಗೆ ಉತ್ತಮ ಬ್ಯಾಟಿಂಗ್ ಮಾಡಿತ್ತು. ಸಂಜು ಸ್ಯಾಮ್ಸನ್ 7 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮೈದಾನಕ್ಕಿಳಿದ ಆಯುಷ್ ಮಾತ್ರೆ ಹೈದರಾಬಾದ್ ತಂಡದ ವೇಗಿಗಳನ್ನು ದಂಡಿಸುತ್ತಾ ಬಂದರು. ಪ್ರತಿ ಓವರ್‌ನಲ್ಲಿ ಒಂದಾದರೂ ಬೌಂಡರಿ ಬಾರಿಸಿದ ಅವರು, ಪವರ್‌ಪ್ಲೇನಲ್ಲಿ ಪವರ್ ಫುಲ್ ಆಟ ಪ್ರದರ್ಶಿಸಿದರು. ಚೆನ್ನೈ ರನ್‌ರೇಟ್ 4 ಓವರ್‌ಗಳಲ್ಲಿ 14ರ ಸನಿಹವಿತ್ತು. ತಂಡ 66 ರನ್ ಗಳಿಸಿದ್ದಾಗ ಆಯುಷ್ ಔಟಾದರು. ಇದಕ್ಕೂ ಮುನ್ನ ಅವರಿಗೆ ಬಲವಾದ ಗಾಯವಾಗಿತ್ತು. ಇತ್ತ ಅವರ ವಿಕೆಟ್ ಬಿದ್ದ ನಂತರವೇ ರುತುರಾಜ್ ಗಾಯಕ್ವಾಡ್ ವಿಕೆಟ್ ಕೊಟ್ಟರು. ಪವರ್‌ಪ್ಲೇ ಮುಗಿಯಿತು. ಚೆನ್ನೈ 76 ರನ್‌ಗೆ 3 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಸ್ಪಿನ್ನರ್ ಶಿವಾಂಗ್ ಕರಾರುವಾಕ್ ಪ್ರದರ್ಶನ ನೀಡಿದರು. ತಮ್ಮ ಸ್ಪಿನ್ ಮೋಡಿಯಿಂದ ಅವರು, ಸರ್ಫರಾಜ್, ಶಾರ್ಟ್ ಅವರ ಮೇಲೆ ಒತ್ತಡ ಹೇರಿದರು. ಇಶಾನ್ ಮಾಲಿಂಗಾ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗಟ್ಟಿದರು. ಮಧ್ಯಮ ಓವರ್ ಮುಕ್ತಾಯಗೊಂಡವು ಅಲ್ಲಿ 73 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಚೆನ್ನೈಗೆ 45 ರನ್ ಬೇಕಿತ್ತು. ಆದರೆ ಮಾಲಿಂಗಾ, ರೆಡ್ಡಿ ಹಾಗೂ ಹುಸೈನ್ ಕರಾರುವಾಕ್ ದಾಳಿಯೊಂದಿಗೆ ಕಟ್ಟಿಹಾಕಿದರು. ಚೆನ್ನೈಗೆ ಕೊನೆಯ ಓವರ್‌ನಲ್ಲಿ 18 ರನ್ ಬೇಕಿದ್ದವು. ಆದರೆ 8 ರನ್ ಮಾತ್ರ ಗಳಿಸಿತು. ಒಟ್ಟು ಡೆತ್ ಓವರ್‌ನಲ್ಲಿ ಚೆನ್ನೈ 35 ರನ್‌ಗಳಿಸಿತು. ಮಧ್ಯಮ ಓವರ್‌ನಲ್ಲಿ ಮಾಡಿದ ಡಾಟ್‌ಗಳಿಂದಲೇ ಪಂದ್ಯವನ್ನು ಸೋತಿತು. ಹೈದರಾಬಾದ್ ಪರ ಮಾಲಿಂಗಾ 3, ನಿತಿಶ್ 2 ವಿಕೆಟ್ ಕಿತ್ತರು.



ಪದಬಂಧ 5959

▸▸ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1. ಹಾರ ನಡುವೆ ತಿರುಗಿ ಮೆಲುನಗೆಯಾಯಿತು (4)
3. ಗರದ ನಡುವೆ ಧೋರಣೆಯುಳ್ಳವನಿದ್ದಾನೆ (4)
5. ಚೆನ್ನಾಗಿ ಮಾತನಾಡುವವನು-ವಾಕ್ಪಟು (2)
6. ತಾಮ್ರದ ಸಣ್ಣ ನಾಣ್ಯ (2)
7. ಬರುವಿಕೆ-ಆಗಮಿಸು ಎಂಬರ್ಥದ ಶಬ್ದ (5)
10. ರಣ-ರತಿ ಒಳಗೊಂಡ ಕಡೆಗಣಿಸುವಿಕೆ (5)
14. ದೇಶಿಯ-ಸ್ವದೇಶಿ (2)
15. ಅರಸುಪತ್ನಿಯಲ್ಲಿ ತಿರುಗಿದ್ದಾಳೆ (2)
16. ಬಾಣದಂತೆ ತೀವ್ರವಾದ ರಭಸ (4)
17. ಸುರನಿಗೆ ಕೇಳಿದ ಬಹಳ ಇಂಪಾದದು (4)

ಮೇಲಿನಿಂದ ಕೆಳಕ್ಕೆ
1. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪ್ರಧಾನಿ (4)
2. ಗುಂಪು-ಸಮೂಹ ಎಂಬರ್ಥದ ಶಬ್ದ (4)
3. ಗಡಿಯಲ್ಲಿ ತೋರುತ್ತಿರುವ ಆತುರ (4)
4. ಸೂರ್ಯನ ಮಗಳು-ಯಮುನೆ (4)
7. ದಷ್ಟಪುಷ್ಟ-ಗಟ್ಟಿಮುಟ್ಟಾಗಿರುವುದು (3)
8. ಸದಾಚಾರದ ಸಮಾನಪದ (3)
9. ಅಂಚೆ ಮೂಲಕ ಹಣ ಕಳಿಸುವ ವ್ಯವಸ್ಥೆ (4)
11. ಯುದ್ಧ ನಡೆಯುವ ಬಯಲು (4)
12. ವಾಸು ಹೀಗೆ ಸರಕನ್ನು ಸಾಗಿಸುತ್ತಿದ್ದಾನೆ (4)
13. ಮಳೆ ಹೀಗೆ ಏಕಪ್ರಕಾರವಾಗಿ ಸುರಿಯುತ್ತಿದೆ (4)

5958 ಉತ್ತರ

ಎಡದಿಂದ ಬಲಕ್ಕೆ:
2.ದಯಪಾಲಿಸು 5.ಪವನ
6.ಲಿಖಿತ 7.ನದಿ 9.ಸಂತ
11.ಅಜ 12.ದಲ
15.ವಾನರ 16.ಜರ್ಜರ
17.ದಡಬಡಿಸು

ಮೇಲಿನಿಂದ ಕೆಳಕ್ಕೆ :
1.ತಾಲಪತ್ರ 2.ದಶಾನನ
3.ಸುಲಲಿತ 4.ಪಡಿತರ
8.ದಿವಿಜ 9.ಸಂವಾದ
10.ದವಾಖಾನೆ
11.ಅರವಿಂದ
13.ಸುಖಜಲ
14.ದ್ವಾರಬಂಧ

ಕಿರುಸುದ್ದಿ

17ಕ್ಕೂ ಅಧಿಕ ಪ್ರಕರಣಗಳಲ್ಲಿ ಭಾಗಿ: ಆರೋಪಿ ಸೆರೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ 17ಕ್ಕೂ ಅಧಿಕ ಪ್ರಕರಣಗಳಲ್ಲಿ ಭಾಗಿಯಾಗಿ 4 ವರ್ಷಗಳಿಂದ ತಲೆಮರೆಸಿಕೊಂಡಿರುವ ಆರೋಪಿಯನ್ನು ಮೂಡುಬಿದಿರೆ ಪೊಲೀಸರು ಬಂಧಿಸಿದ್ದಾರೆ. ಕೆ. ಅಬ್ದುಲ್ ಯಾನೆ ಆರ್ಗ ಬಶೀರ್ (50) ಬಂಧಿತ ಆರೋಪಿ. ದ.ಕ ಮತ್ತು ಚಿಕ್ಕಮಂಗಳೂರು ಜಿಲ್ಲೆ ಗಳಲ್ಲಿ ಸುಮಾರು 17 ಪ್ರಕರಣಗಳಲ್ಲಿ ಭಾಗಿ ಆಗಿರುವ ಈತ ಕಳೆದ 4 ವರ್ಷಗಳಿಂದ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆ ಮರೆಸಿಕೊಂಡಿದ್ದ. ಈತನ ವಿರುದ್ಧ ನ್ಯಾಯಾಲಯವು ದಸ್ತಗಿರಿ ವಾರೆಂಟ್, ಉದ್ಘೋಷಣ ವಾರೆಂಟ್ ಹೊರಡಿಸಿತ್ತು. ಈತ ನ್ಯಾಯಾಲಯಕ್ಕೆ ಹಾಜರಾಗದೆ ಮೂಡುಬಿದಿರೆ ತಾಲೂಕು ತೆಂಕ ಮಿಜಾರು ಗ್ರಾಮದ ಆರ್ಗ ಮನೆಯನ್ನು ತನ್ನ ಕುಟುಂಬದೊಂದಿಗೆ ಬಿಟ್ಟು, ಬಿ.ಸಿ. ರೋಡ್‌ನ ಪರ್ಲಿಯಾ ಎಂಬಲ್ಲಿ ಬಾಡಿಗೆ ಮನೆಯನ್ನು ಮಾಡಿ ಕುಳಿತಿದ್ದ. ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು ಎ.18ರಂದು ಸಂಜೆ 7.30ಕ್ಕೆ ಪರ್ಲಿಯಾದಲ್ಲಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದೇ ತಲೆ ಮರಿಸಿಕೊಂಡ ಕಾರಣ ಈತನ ವಿರುದ್ಧ ಮೂಡಬಿದ್ರೆ ಠಾಣೆಯಲ್ಲಿ ಪ್ರಕರಣ ದಾಖಲಿಸಿ ದಸ್ತಗಿರಿ ಮಾಡಲಾಗಿದೆ.



ಅಪ್ರಾಪ್ತ ಬಾಲಕಿಯ ಅತ್ಯಾಚಾರ: ಇಬ್ಬರ ಬಂಧನ

ಬೆಳ್ತಂಗಡಿ : ಅಪ್ರಾಪ್ತ ಬಾಲಕಿ ಮೇಲೆ ಇಬ್ಬರು ಯುವಕರು ಅತ್ಯಾಚಾರ ಮಾಡಿದ ಪ್ರಕರಣ ಸಂಬಂಧ ಆ ಇಬ್ಬರೂ ಯುವಕರನ್ನು ಧರ್ಮಸ್ಥಳ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳು ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ಗ್ರಾಮದ ಸುಮಂತ್ (28) ಮತ್ತು ಬೆಳ್ತಂಗಡಿ ತಾಲೂಕಿನ ಗರ್ಡಾಡಿ ಗ್ರಾಮದ ನವನೀತ್ (26) ಎಂಬವರಾಗಿದ್ದಾರೆ. ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ 15 ವರ್ಷದ ಅಪ್ರಾಪ್ತ ಬಾಲಕಿಯನ್ನು ಇಬ್ಬರು ಯುವಕರು ಪುಸಲಾಯಿಸಿ ಎರ್ಮಾಯಿ ಫಾಲ್ಸ್ ಬಳಿಯ ಕಾಡಿಗೆ ಏ.16 ರಂದು ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿರುವ ಬಗ್ಗೆ ಮನೆಯವರಿಗೆ ಬಾಲಕಿ ತಿಳಿಸಿದ್ದು ಅದರಂತೆ ಪೋಷಕರು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಏ.17 ರಂದು ದೂರು ನೀಡಿದ್ದು ಅದರಂತೆ ಪೊಲೀಸರು ಪೋಕ್ಸೋ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿನಿ.ಸಿ.ಕೆ ಮಾರ್ಗದರ್ಶನದಲ್ಲಿ ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ.ಬಿ.ಎಸ್. ನೇತೃತ್ವದ ಧರ್ಮಸ್ಥಳ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಮರ್ಥ ಆರ್ ಗಾಣಿಗೇರ ತಂಡ ಪ್ರಕರಣದಲ್ಲಿ ಭಾಗಿಯಾದ ಬೆಳ್ತಂಗಡಿ ತಾಲೂಕಿನ ಕಡುರುದ್ಯಾವರ ಗ್ರಾಮದ ಸುಮಂತ್ (28) ಮತ್ತು ಬೆಳ್ತಂಗಡಿ ತಾಲೂಕಿನ ಗರ್ಡಾಡಿ ಗ್ರಾಮದ ನವನೀತ್ (26) ನನ್ನು ಏ.18 ರಂದು ಸಂಜೆ ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ನವ ವರ ಅಂದರ್

ಈ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾದ ಓರ್ವ ಆರೋಪಿ ಕಡಿರುದ್ಯಾವರ ಗ್ರಾಮದ ಸುಮಂತ್‌ಗೆ ಮೇ 10 ರಂದು ಮದುವೆ ಕಾರ್ಯಕ್ರಮ ನಿಗದಿಯಾಗಿತ್ತು.

ಪೌರಕಾರ್ಮಿಕ ಆತ್ಮಹತ್ಯೆ

ನಾಪೋಕ್ಲು: ಸ್ಥಳೀಯ ಗ್ರಾಮ ಪಂಚಾಯತ್‌ನ ಪೌರಕಾರ್ಮಿಕ ವಿಷ ಸೇವಿಸಿ ಆತ್ಮಹತ್ಯೆ ಯತ್ನಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ನಿಧನರಾಗಿದ್ದಾರೆ.ಗುರುವಾರ ತಡರಾತ್ರಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ವಿಶ್ವನಾಥ್ (33) ಅವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಸಂಜೆ ಮೃತಪಟ್ಟಿದ್ದಾರೆ. ಆತ್ಮಹತ್ಯೆ ಕಾರಣ ತಿಳಿದು ಬಂದಿಲ್ಲ. ಮೂಲತಃ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ನಿವಾಸಿಯಾದ ವಿಶ್ವನಾಥ್ ಹಲವು ವರ್ಷಗಳಿಂದ ಗ್ರಾಮ ಪಂಚಾಯತ್ ನಿರ್ಮಿಸಿಕೊಟ್ಟ ಮನೆಯಲ್ಲಿ ಪತ್ನಿ ಹಾಗೂ ಎರಡು ಮಕ್ಕಳೊಂದಿಗೆ ವಾಸವಾಗಿದ್ದು ಇಲ್ಲಿಯ ಗ್ರಾಮ ಪಂಚಾಯತ್‌ನಲ್ಲಿ ಪೌರಕಾರ್ಮಿಕರಾಗಿ ತ್ಯಾಜ್ಯ ಸಾಗಾಟ ಮಾಡುವ ಟ್ರಾಕ್ಟರ್‌ನಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಬಗ್ಗೆ ಇಲ್ಲಿಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಕಾನೂನಿನ ಕ್ರಮ ಕೈಗೊಂಡಿದ್ದಾರೆ.



ಗೊಬ್ಬರ ಸಹಿತ ಲಾರಿ ಹೊಳೆಗೆ ಬಿದ್ದು ಮೂವರಿಗೆ ಗಾಯ

ಕಾಸರಗೋಡು: ವೆಳ್ಳರಿಕುಂಡು ಮೂಕಡ ಪರಪ್ಪಚ್ಚಾಲ್ ಎಂಬಲ್ಲಿ ಲಾರಿಯೊಂದು ಹೊಳೆಗೆ ಮಗುಚಿ ಬಿದ್ದಿದೆ. ಅಪಘಾತದಲ್ಲಿ ಕಾಞಂಗಾಡು ಇಞಾಣಿರಕಡವ್ ನಿವಾಸಿಗಳಾದ ಅಷ್ಕರ್, ಮೊಯ್ದು, ತಮಿಳುನಾಡು ನಿವಾಸಿ ವರದರಾಜ್ ಎಂಬವರು ಗಾಯಗೊಂಡಿದ್ದು, ಅವರನ್ನು ವಿವಿಧ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ.

ಶನಿವಾರ ಬೆಳಗ್ಗೆ ಮೂಕಡ ಪರಪ್ಪಚ್ಚಾಲ್‌ನಲ್ಲಿ ಅಪಘಾತ ಸಂಭವಿಸಿದೆ. ಗೊಬ್ಬರ ಸಹಿತ ಲಾರಿ ಅಪಘಾತಕ್ಕೀಡಾಗಿದ್ದು, ಹೊಳೆಯಲ್ಲಿ ನೀರು ಕಡಿಮೆ ಇದ್ದಕಾರಣ ದೊಡ್ಡ ದುರಂತ ತಪ್ಪಿಹೋಯಿತು.

ಕರೆ ಮಾಡಿದ ಜಸ್ಟ್ 14 ನಿಮಿಷದಲ್ಲಿ ನಿಮ್ಮ ಮನೆ ಬಾಗಿಲಿಗೆ ಬಂದು ನಿಲ್ಲುತ್ತದೆ ಪೊಲೀಸ್ ವಾಹನ

ಉಡುಪಿ ಪಾಲಿನ ಆಪ್ತರಕ್ಷಕ ಈ ನಮ್ಮ 112!

▸ ಸುದೀಪ್ ರಾಜ್ ಸುಳ್ಯ

ದಿಗಂತ ವಿಶೇಷ

ಉಡುಪಿ: ಒಂದು ಕಾಲದಲ್ಲಿ ತುರ್ತು ಸಂದರ್ಭ ಪೊಲೀಸ್ ನೆರವು ಪಡೆಯಲು ಪರದಾಡಬೇಕಿತ್ತು. ಆದರೆ ಈಗ ಕಾಲ ಬದಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕರು ಸಂಕಷ್ಟದಲ್ಲಿದ್ದಾಗ ಪೊಲೀಸ್ ನಿಯಂತ್ರಣ ಕೊಠಡಿಯ 'ತುರ್ತು ಸ್ಪಂದನಾ ಸಹಾಯ ವ್ಯವಸ್ಥೆ 112ಕ್ಕೆ ಕರೆ ಮಾಡಿದರೆ, ಕೇವಲ ಹದಿನಾಲ್ಕೇ ನಿಮಿಷದಲ್ಲಿ ಪೊಲೀಸ್ ವಾಹನ ನಿಮ್ಮ ಮುಂದೆ ಬಂದು ನಿಲ್ಲುತ್ತಿದೆ!

ಇಲ್ಲಿನ ಜಿಲ್ಲಾ ಪೊಲೀಸ್ ಇಲಾಖೆಯ ಚುರುಕಾದ ಕಾರ್ಯ ವೈಖರಿಗೆ ಈ '14 ನಿಮಿಷದ' ಸರಾಸರಿ ಪ್ರತಿಕ್ರಿಯೆ ಸಮಯವೇ ಸಾಕ್ಷಿಯಾಗಿದೆ.

ಮೂರು ವರ್ಷಗಳ ಅಂಕಿ ಅಂಶ

ಕಳೆದ ಮೂರು ವರ್ಷಗಳ ಅಂಕಿಅಂಶಗಳನ್ನು ಗಮನಿಸಿದರೆ, ಜಿಲ್ಲೆಯಲ್ಲಿ 112 ಸಹಾಯ ವಾಣಿಯ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಮತ್ತು ಜಾಗೃತಿ ಹೆಚ್ಚುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

2023ರಲ್ಲಿ ಒಟ್ಟು 3,980 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ ಈ ಸಂಖ್ಯೆ 5,499ಕ್ಕೆ ಏರಿಕೆಯಾಗಿತ್ತು. ಕಳೆದ 2025ನೇ ಸಾಲಿನಲ್ಲಿ ದಾಖಲೆಯ 6,460 ಕರೆಗಳನ್ನು ಸ್ವೀಕರಿಸಿ ಪೊಲೀಸರು ಸ್ಪಂದಿಸಿದ್ದಾರೆ. 2026ರಲ್ಲಿ ಈಗಾಗಲೇ 2,350 ಪ್ರಕರಣಗಳಲ್ಲಿ ಪೊಲೀಸರು ಅತ್ಯಂತ ಯಶಸ್ವಿಯಾಗಿಯೇ ಕಾರ್ಯನಿರ್ವಹಿಸಿದ್ದಾರೆ.





17ರಿಂದ 14ಕ್ಕೆ ಇಳಿದ 'ರೆಸ್ಪಾನ್ಸ್ ಟೈಮ್'!

ಯಾವುದೇ ತುರ್ತು ಸೇವೆಯ ಯಶಸ್ಸು ಅಡಗಿರುವುದು ಅದು ಎಷ್ಟು ಬೇಗನೆ ಸಂತ್ರಸ್ತರನ್ನು ತಲುಪುತ್ತದೆ ಎಂಬುದರ ಮೇಲೆ. ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ಈ ವಿಷಯದಲ್ಲಿ ಅಭೂತಪೂರ್ವ ಸಾಧನೆ ಮಾಡಿದೆ. ಕಳೆದ 2025ನೇ ಸಾಲಿನಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ತಲುಪಲು ಸರಾಸರಿ 17 ನಿಮಿಷಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಸತತ ಪ್ರಯತ್ನ ಮತ್ತು ಗಸ್ತು ವಾಹನಗಳ ದಕ್ಷ ನಿರ್ವಹಣೆಯಿಂದಾಗಿ 2026ರಲ್ಲಿ ಈ ಸಮಯವನ್ನು ಕೇವಲ 14 ನಿಮಿಷಕ್ಕೆ ಇಳಿಸಲಾಗಿದೆ. ಅಂದರೆ ಕರೆ ಮಾಡಿದ ಕೆಲವೇ ಕ್ಷಣಗಳಲ್ಲಿ ಖಾಕಿ ಪಡೆ ನಿಮ್ಮ ರಕ್ಷಣೆಗೆ ಸನ್ನದ್ಧವಾಗಿರುತ್ತದೆ ಎಂಬುದು ಇಲ್ಲಿ ಸಾಬೀತಾಗಿದೆ.

ಘಟನಾ ಸ್ಥಳಕ್ಕೆ ತಲುಪುವ ಸಮಯ ಕ್ಷಿಪ್ತ

ಈ ವ್ಯವಸ್ಥೆಯ ಅತ್ಯಂತ ಗಮನಾರ್ಹ ಸಾಧನೆಯೆಂದರೆ ಪೊಲೀಸರು ಸ್ಥಳಕ್ಕೆ ತಲುಪುವ ವೇಗ. 2025ರಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ತಲುಪಲು ಸರಾಸರಿ 17 ನಿಮಿಷಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ, ಈಗ 2026ರಲ್ಲಿ ಈ ಅವಧಿಯನ್ನು ಕೇವಲ 14 ನಿಮಿಷಕ್ಕೆ ಇಳಿಸುವ ಮೂಲಕ ಜಿಲ್ಲಾ ಪೊಲೀಸ್ ಇಲಾಖೆ ಅತ್ಯಂತ ವೇಗವಾಗಿ ಜನಸಾಮಾನ್ಯರ ನೆರವಿಗೆ ಧಾವಿಸುತ್ತಿದೆ.

ಇದರಿಂದಾಗಿ ಅಲ್ಲಲ್ಲಿ ನಡೆಯುವ ಅಪರಾಧ ತಡೆ ಹಾಗೂ ತುರ್ತು ವೈದ್ಯಕೀಯ ನೆರವು ನೀಡುವ ಸಂದರ್ಭದಲ್ಲಿ ಹೆಚ್ಚಿನ ಯಶಸ್ಸು ಸಿಗುತ್ತಿದೆ.

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಜನರ ನಂಬಿಕೆ

ಪೊಲೀಸ್ ಇಲಾಖೆಯ 112 ತುರ್ತು ಸೇವೆಗೆ ಬರುತ್ತಿರುವ ಕರೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಸಾರ್ವಜನಿಕರಲ್ಲಿ ಈ ವ್ಯವಸ್ಥೆಯ ಮೇಲಿರುವ ನಂಬಿಕೆಯನ್ನು ಸಾಬೀತುಪಡಿಸುತ್ತಿದೆ. 2023ರಲ್ಲಿ ಕೇವಲ 3,980 ಕರೆಗಳು ದಾಖಲಾಗಿದ್ದರೆ, 2025ರಲ್ಲಿ ಈ ಸಂಖ್ಯೆ 6,460ಕ್ಕೆ ತಲುಪಿದೆ. ಅಂದರೆ ಎರಡು ವರ್ಷಗಳಲ್ಲಿ ಶೇ. 60ಕ್ಕಿಂತಲೂ ಹೆಚ್ಚು ಪ್ರಗತಿ ಕಂಡುಬಂದಿದೆ. ಕೇವಲ ಮಾಹಿತಿ ನೀಡುವುದಷ್ಟೇ ಅಲ್ಲದೆ, ಗಂಭೀರ ಪ್ರಕರಣಗಳಲ್ಲಿ ಪೊಲೀಸರು ದಾಖಲಿಸುತ್ತಿರುವ ಎಫ್.ಐ.ಆರ್. ಸಂಖ್ಯೆಯೂ ಹೆಚ್ಚಿದೆ. 2025ರಲ್ಲಿ ದಾಖಲೆಯ 106 ಎಫ್.ಐ.ಆರ್. ಸಂಬಂಧಿತ ಪ್ರಕರಣಗಳಿಗೆ ಈ ಸಹಾಯವಾಣಿ ಮುನ್ನುಡಿ ಬರೆದಿದೆ.

ಎಲ್ಲಾ ಸಮಸ್ಯೆಗಳಿಗೂ ಇವರು ಸ್ಪಂದಿಸುತ್ತಾರೆ!

ಕೇವಲ ಕರೆಗಳಿಗೆ ಸ್ಪಂದಿಸುವುದು ಮಾತ್ರವಲ್ಲದೆ, ಗಂಭೀರ ಸ್ವರೂಪದ ದೂರುಗಳನ್ನು ಕಾನೂನುಬದ್ಧವಾಗಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಕೆಲಸವೂ ನಿರಂತರವಾಗಿ ನಡೆಯುತ್ತಿದೆ. 2023ರಲ್ಲಿ ಬಂದ ಕರೆಗಳ ಆಧಾರದ ಮೇಲೆ 44 ಎಫ್.ಐ.ಆರ್.ಗಳು ದಾಖಲಾಗಿದ್ದರೆ, 2025ರಲ್ಲಿ ಈ ಸಂಖ್ಯೆ 106ಕ್ಕೆ ಏರಿಕೆಯಾಗಿದೆ. 2026ರ ಸಾಲಿನಲ್ಲಿ ಇದುವರೆಗೆ 40 ಎಫ್.ಐ.ಆರ್.ಗಳು ಹಾಗೂ 7 ಅಸ್ವಾಭಾವಿಕ ಮರಣ ಪ್ರಕರಣಗಳು ಈ ವ್ಯವಸ್ಥೆಯ ಮೂಲಕ ದಾಖಲಾಗಿವೆ. ಸಾರ್ವಜನಿಕರು ಮಾಡುವ ಪ್ರತಿಯೊಂದು ಕರೆಯನ್ನು ಗಂಭೀರವಾಗಿ ಪರಿಗಣಿಸುವ ಪೊಲೀಸರು, ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸುವುದಲ್ಲದೆ, ಅಗತ್ಯವಿದ್ದರೆ ತಕ್ಷಣವೇ ಕಾನೂನು ಕ್ರಮ ಕೈಗೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ಹಗಲು-ರಾತ್ರಿ ಎನ್ನದೆ ಗಸ್ತಿನಲ್ಲಿರುವ 112 ವಾಹನಗಳು ಇಂದು ಉಡುಪಿಯ ಜನರ ಪಾಲಿಗೆ ನಿಜವಾದ ರಕ್ಷಣಾ ಕವಚವಾಗಿ ಮಾರ್ಪಟ್ಟಿವೆ.



ಧರ್ಮಸ್ಥಳದಲ್ಲಿ ಏ. 14 ರಿಂದ ನಡೆಯುತ್ತಿರುವ ಕಾಲಾವಧಿ ಜಾತ್ರೆಯ ಅಂಗವಾಗಿ ಶನಿವಾರ ರಾತ್ರಿ ಶ್ರೀ ಮಂಜುನಾಥ ಸ್ವಾಮಿಯ ಲಲಿತೋದ್ಯಾನ ಉತ್ಸವದ ಸಂದರ್ಭ ಬೆಳ್ಳಿರಥ ಉತ್ಸವ ನಡೆಯಿತು. ನಾಡಿನೆಲ್ಲೆಡೆಯಿಂದ ಬಂದ ಭಕ್ತರು ಬೆಳ್ಳಿರಥ ಉತ್ಸವ ವೀಕ್ಷಿಸಿ ಧನ್ಯತೆಯನ್ನು ಹೊಂದಿದರು.

ಸ್ನೇಹಿತರೊಂದಿಗೆ ನೀರಾಟವಾಡಲು ತೆರಳಿದ್ದ ವೇಳೆ ದುರ್ಘಟನೆ

ನಾಲೆಯ ಕೆಸರಿನಲ್ಲಿ ಸಿಲುಕಿ ಪಿಯುಸಿ ವಿದ್ಯಾರ್ಥಿ ಸಾವು

ಉಳ್ಳಾಲ: ಬೇಸಿಗೆಯ ರಜೆಯಲ್ಲಿ ಸ್ನೇಹಿತರೊಂದಿಗೆ ಕೆರೆಯಲ್ಲಿ ನೀರಾಟವಾಡಲು ತೆರಳಿದ್ದ ಬಾಲಕನೋರ್ವ ಪಕ್ಕದ ನಾಲೆಯೊಂದರ ಕೆಸರಲ್ಲಿ ಸಿಲುಕಿ ಸಾವನ್ನಪ್ಪಿರುವ ಘಟನೆ ಅಂಬ್ಲಮೊಗರು ಗ್ರಾಮದ ಕಂಡಿಲ ಎಂಬಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಅಂಬ್ಲಮೊಗರು ಗ್ರಾಮದ ಜರಿ ಹೌಸ್ ನಿವಾಸಿ ಸೃಜನ್(17) ಮೃತಪಟ್ಟ ಬಾಲಕನಾಗಿದ್ದಾನೆ.

ಮೃತ ಸೃಜನ್ ಮಂಗಳೂರಿನ ಖಾಸಗಿ ಕಾಲೇಜೊಂದರಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮುಗಿಸಿದ್ದು ಬೇಸಿಗೆ ರಜೆ ಇದ್ದ ಕಾರಣ ಶನಿವಾರ ಮಧ್ಯಾಹ್ನ ತನ್ನ ಮೂವರು ಸ್ನೇಹಿತರೊಂದಿಗೆ ಅಂಬ್ಲ ಮೊಗರುವಿನ ಕಂಡಿಲ ಎಂಬಲ್ಲಿನ ಖಾಸಗಿ ವಿವಿಗೆ ಸೇರಿದ ಜಮೀನಿನ ಕೆರೆಯಲ್ಲಿ ನೀರಾಟವಾಡಲು ತೆರಳಿದ್ದನೆನ್ನ ಲಾಗಿದೆ. ನೀರಾಟದ ಬಳಿಕ ಕೈಕಾಲು ತೊಳೆಯಲು ಪಕ್ಕದ ನಾಲೆಯೊಂದಕ್ಕೆ ಸೃಜನ್ ಏಕಾಂಗಿಯಾಗಿ ಇಳಿದಿದ್ದು, ಈ ವೇಳೆ ಆತನ ಕಾಲುಗಳು ನಾಲೆಯ ಕೆಸರಿನಲ್ಲಿ ಸಿಲುಕಿ ನೀರುಪಾಲಾಗಿದ್ದಾನೆ. ಸೃಜನ್‌ನನ್ನು ಮತ್ತೋರ್ವ ಸ್ನೇಹಿತ ರಕ್ಷಿಸಲು ಪ್ರಯತ್ನಿಸಿದ್ದು ಆತನೂ ನೀರು ಪಾಲಾಗಲು ಮುಂದಾದಾಗ ಉಳಿದ ಸ್ನೇಹಿತರು ಎಳೆದು ರಕ್ಷಿಸಿದ್ದಾರೆ.



ಘಟನೆಯಿಂದ ಆಘಾತಕ್ಕೊಳಗಾದ ಬಾಲಕರು ವಿಚಾರವನ್ನು ಯಾರಲ್ಲೂ ತಿಳಿಸದೆ ತಮ್ಮ ಮನೆ ಸೇರಿದ್ದರು. ರಾತ್ರಿ 8 ಗಂಟೆಯಾದರೂ ಸೃಜನ್ ಮನೆಗೆ ಮರಳದಹಿನ್ನೆಲೆಯಲ್ಲಿಕುಟುಂಬದವರು ಹುಡುಕಾಟ ನಡೆಸಿ ಆತನ ಸ್ನೇಹಿತರಲ್ಲಿ ವಿಚಾರಿಸಿದಾಗ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಲಭಿಸಿದೆ.

ಕೂಡಲೇ ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ, ಕೊಣಾಜೆ ಪೊಲೀಸರು ಧಾವಿಸಿ ಸೃಜನ್ ಗಾಗಿ ನಾಲೆಯಲ್ಲಿ ಶೋಧ ಕಾರ್ಯ ನಡೆಸಿದ್ದಾರೆ. ನಾಲೆಯಲ್ಲಿ ಭಾರೀ ಹೂಳು ತುಂಬಿದ್ದರಿಂದ ರಕ್ಷಣಾ ಕಾರ್ಯವೂ ಕಷ್ಟ ಸಾಧ್ಯವಾಗಿತ್ತು. ರಾತ್ರಿ ವೇಳೆ ನಿರ್ಜನ, ದುರ್ಗಮ ಪ್ರದೇಶದಲ್ಲಿ ರಕ್ಷಣಾ ಕಾರ್ಯಕ್ಕೆ ಬೆಳಕಿನ ವ್ಯವಸ್ಥೆಯೂ ಇಲ್ಲದ ಕಾರಣ ಟಿಪ್ಪರ್ ಲಾರಿಗಳ ಹೆಡ್‌ಲೈಟ್ ಸಹಾಯದಿಂದ ಮಧ್ಯರಾತ್ರಿವರೆಗೂ ಕಾರ್ಯಾಚರಣೆ ನಡೆಸಲಾಗಿತ್ತು. ಸ್ಥಳೀಯರು ಹಾಗೂ ಉತ್ತರ ಭಾರತದ ನುರಿತ ಮುಳುಗು ತಜ್ಞ ಕಾರ್ಮಿಕರು ಹರಸಾಹಸ ಪಟ್ಟು ಕೊನೆಗೂ ಶನಿವಾರ ಮಧ್ಯರಾತ್ರಿಯೇ ಬಾಲಕನ ಮೃತದೇಹವನ್ನು ನಾಲೆಯಿಂದ ಮೇಲಕ್ಕೆತ್ತಿದ್ದಾರೆ.

ಕೊಣಾಜೆ ಪೊಲೀಸರು ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೃತ ಸೃಜನ್ ತಂದೆ ಶಿವರಾಮ ಅವರು ರಿಕ್ಷಾ ಚಾಲಕರಾಗಿದ್ದು, ತಾಯಿ ಜಯಲಕ್ಷ್ಮಿ, ಅಂಬ್ಲಮೊಗರು ಗಾಂಧಿ ನಗರದ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿದ್ದಾರೆ. ದಂಪತಿಗೆ ಸೃಜನ್ ಹಿರಿಯ ಮಗನಾಗಿದ್ದು, ಮತ್ತೋರ್ವ ಮಗಳು ಇದ್ದಾಳೆ.

▸▸ ಘಟನೆಯಿಂದ ಆಘಾತಕ್ಕೊಳಗಾದ ಬಾಲಕರು ವಿಚಾರವನ್ನು ಯಾರಲ್ಲೂ ತಿಳಿಸದೆ ತಮ್ಮ ಮನೆ ಸೇರಿದ್ದರು.

▸▸ ರಾತ್ರಿ 8 ಗಂಟೆಯಾದರೂ ಹುಡುಕಾಟ ನಡೆಸಿ ಆತನ ಸ್ನೇಹಿತರಲ್ಲಿ ವಿಚಾರಿಸಿದಾಗ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಲಭಿಸಿದೆ.

ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ 11 ತಿಂಗಳಲ್ಲಿ 2805ಗೆ ಚಿಕಿತ್ಸೆ

ಹೆಚ್ಚುತ್ತಿವೆ ಕ್ಯಾನ್ಸರ್, ಹೃದಯದ ಸಂಬಂಧಿ ಕಾಯಿಲೆ ಪ್ರಕರಣಗಳು

ಮಂಗಳೂರು: ಇತ್ತೀಚಿನ ದಿನಗಳಲ್ಲಿ ಹೃದಯ ಸಂಬಂಧಿ ಮತ್ತು ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚಾಗಿದ್ದು, ಸಾರ್ವಜನಿಕರು ತಮ್ಮ ಆರೋಗ್ಯದ ಬಗ್ಗೆ ವಿಶೇಷ ನಿಗಾ ವಹಿಸಬೇಕಿದೆ. ಅದರಲ್ಲೂ ಹೃದಯದ ಬಗ್ಗೆ ಹೆಚ್ಚು ಮುಂಜಾಗ್ರತೆ ವಹಿಸಬೇಕಿದೆ. ಯುವಜನತೆಯೇ ಹೆಚ್ಚಾಗಿ ಹೃದಯಾಘಾತಕ್ಕೊಳಗಾಗುವ ಪ್ರಕರಣಗಳು ಅಲ್ಲಲ್ಲಿ ಸಂಭವಿಸುತ್ತಿದ್ದು, ವೈದ್ಯರ ಸಲಹೆ ಪಡೆದು ಅಗತ್ಯ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳಬೇಕಿದೆ.

14 ವರ್ಷದಲ್ಲಿ 10,467 ಹೃದಯ ಸಂಬಂಧಿ ಕೇಸ್

ಮಂಗಳೂರಿನ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯೊಂದರಲ್ಲಿಯೇ 2012ರಿಂದ 2026ರ ಫೆಬ್ರವರಿವರೆಗೆ ಒಟ್ಟು 10, 467 ಮಂದಿ ಚಿಕಿತ್ಸೆ ಪಡೆದಿದ್ದಾರೆ. ಈ ಪೈಕಿ ಪುರುಷರ ಸಂಖ್ಯೆಯೇ ಅಧಿಕವಿದೆ. 6738 ಮಂದಿ ಪುರುಷರು ಮತ್ತು 3,729 ಮಹಿಳೆಯರು ಹೃದಯ ಸಂಬಂಧಿ ಚಿಕಿತ್ಸೆ ಪಡೆದಿದ್ದಾರೆ. ಒಟ್ಟು 1,792 ಮಂದಿ ಸಾವನ್ನಪ್ಪಿದ್ದಾರೆ. ಈ ಪೈಕಿ 1186 ಪುರುಷರು ಮತ್ತು 606 ಮಹಿಳೆಯರಾಗಿದ್ದಾರೆ.



11 ತಿಂಗಳಲ್ಲಿ 2805 ಪ್ರಕರಣ

2025ರ ಏಪ್ರಿಲ್‌ನಿಂದ 2026ರ ಫೆಬ್ರವರಿವರೆಗೆ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆ ಸೇರಿ ಒಟ್ಟು 2805 ಮಂದಿ ಹೃದಯಾಘಾತಕ್ಕೆ ಒಳಗಾಗಿ ಚಿಕಿತ್ಸೆ ಪಡೆದಿದ್ದಾರೆ ಈ ಪೈಕಿ ಒಟ್ಟು 78 ಮಂದಿ ಸಾವನ್ನಪ್ಪಿದ್ದಾರೆ. ಇದೇ ಅವಧಿಯಲ್ಲಿ ವೆನ್ಲಾಕ್‌ನಲ್ಲಿ ಒಟ್ಟು 1540 ಕ್ಯಾನ್ಸರ್ ಪ್ರಕರಣಗಳು ದಾಖಲಾಗಿವೆ.

9,708 ಕ್ಯಾನ್ಸರ್ ಪ್ರಕರಣ

ವೆನ್ಲಾಕ್‌ನಲ್ಲಿ ಇದೇ ಅವಧಿಯಲ್ಲಿ ಒಟ್ಟು 9,708 ಮಂದಿ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆದಿದ್ದಾರೆ. ಈ ಪೈಕಿ 5999 ಪುರುಷರು ಮತ್ತು 3,709 ಮಹಿಳೆಯರು. ಇದೇ ಅವಧಿಯಲ್ಲಿ 219 ಪುರುಷರು ಮತ್ತು 159 ಮಹಿಳೆಯರು ಸೇರಿದಂತೆ ಒಟ್ಟು 478 ಮಂದಿ ಕ್ಯಾನ್ಸರ್‌ಗೆ ಬಲಿಯಾಗಿದ್ದಾರೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆಯವರೂ ಸೇರಿದ್ದಾರೆ. ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳ ಬಗ್ಗೆ ಜನತೆ ವಿಶೇಷ ಕಾಳಜಿಯನ್ನು ಜನತೆ ವಹಿಸಬೇಕಿದೆ.

▸▸ 2012ರಿಂದ 2026ರ ಫೆಬ್ರವರಿವರೆಗೆ ಒಟ್ಟು 10, 467 ಮಂದಿ ಚಿಕಿತ್ಸೆ ಪಡೆದಿದ್ದಾರೆ.

▸▸ ಒಟ್ಟು 1,792 ಮಂದಿ ಸಾವನ್ನಪ್ಪಿದ್ದಾರೆ.

ಮೋದಿ ತನ್ನ ತಾಯಿಯೊಂದಿಗೆ ಇರುವ ಚಿತ್ರ ಬಿಡಿಸಿದ ಕಾಲೇಜು ವಿದ್ಯಾರ್ಥಿಗೆ ಮೆಚ್ಚುಗೆ ಪತ್ರ

ಹೆಬ್ರಿ : ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತನ್ನ ತಾಯಿಯೊಂದಿಗೆ ಇರುವ ಚಿತ್ರವನ್ನು ಹೆಬ್ರಿ ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆಯ ಪಿಯುಸಿ ವಿದ್ಯಾರ್ಥಿ ಪರೀಕ್ಷಿತ್ ಮಂದಾರ ಆಚಾರ್ ಬಿಡಿಸಿ ಉಡುಪಿಗೆ ಪ್ರದಾನ ಮಂತ್ರಿ ನರೇಂದ್ರ ಮೋದಿಯವರು ಆಗಮಿಸಿದ ವೇಳೆ ಪ್ರಧಾನಿ ಜೊತೆ ಆಗಮಿಸಿದ ತಂಡಕ್ಕೆ ಹಸ್ತಾಂತರಿಸಿದ್ದರು. ಪ್ರಧಾನಿ ನರೇಂದ್ರ ಮೋದಿಯವರು ತಾಯಿಯೊಂದಿಗೆ ಇರುವ ಚಿತ್ರವನ್ನು ಬಿಡಿಸಿ ಪರೀಕ್ಷಿತ್ ಮಂದಾರ ಆಚಾರ್ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇದೀಗ ಪ್ರಧಾನಿಯಿಂದ ಚಿತ್ರಕಲಾವಿದ ಪರೀಕ್ಷಿತ್ ಮಂದಾರ ಆಚಾರ್ ಅವರಿಗೆ ಅಭಿನಂದನಾ ಪತ್ರ ಲಭಿಸಿದೆ.

ಪತ್ರಿಕಾ ಮಾಧ್ಯಮಗಳು ಮತ್ತು ದೃಶ್ಯ ಮಾಧ್ಯಮಗಳು ಆ ಚಿತ್ರವನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದರು. ಬಹುಮುಖ ಪ್ರತಿಭೆಯ ಪರೀಕ್ಷಿತ್ ಆಚಾರ್ ಬ್ರಹ್ಮಾವರ ತಾಲ್ಲೂಕು ನಾಲ್ಕೂರು ಗ್ರಾಮ ಮಾರಾಳಿಯ ಮಂದಾರ ಆಚಾರ್ -ವೀಣಾ ಆಚಾರ್ ದಂಪತಿಯ ಪುತ್ರ. ಪರೀಕ್ಷಿತ್ ಸಹೋದರಿ ಎಸ್. ಆರ್. ವಿದ್ಯಾರ್ಥಿನಿ ಪ್ರಣಮ್ಯ ಆಚಾರ್ ಕೂಡ ಬಹುಮುಖ ಪ್ರತಿಭೆಯಾಗಿದ್ದಾರೆ.







ಬಜರಂಗದಳ ದಕ್ಷಿಣ ಪ್ರಾಂತ ಸಂಯೋಜಕರ ಸಮಾವೇಶದಲ್ಲಿ ನಶೆ ಮುಕ್ತ ಭಾರತ ಸಂಕಲ್ಪ । ಗೋ ಹತ್ಯೆ ನಿಷೇಧ ಕಾನೂನು ಕಟ್ಟುನಿಟ್ಟಾಗಿ ಜಾರಿಗೆ ಆಗ್ರಹ

ಬಜರಂಗದಳಕ್ಕೆ ಒಂದು ಕೋಟಿ ಸದಸ್ಯರ ಹೊಂದುವ ಗುರಿ: ಮಿಲಿಂದ್ ಪರಾಂಡೆ

ಮಂಗಳೂರು: ಗೋ ಹತ್ಯೆ ನಿಷೇಧ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು ಎಂದು ವಿಶ್ವಹಿಂದು ಪರಿಷತ್‌ನ ಕೇಂದ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸಂಘನಿಕೇತನದಲ್ಲಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ನಡೆದ ಬಜರಂಗದಳ ದಕ್ಷಿಣ ಪ್ರಾಂತ ಸಂಯೋಜಕರ ಸಮಾವೇಶದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ 2020ರಲ್ಲಿ ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತಂದಿದ್ದರೂ ಕಟ್ಟುನಿಟ್ಟಾಗಿ ಜಾರಿಯಾಗಿಲ್ಲ.

ರಾಜ್ಯದಲ್ಲಿ ಮಾತ್ರವಲ್ಲ ದೇಶದಲ್ಲೂ ಈ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು ಎಂದರು.

ಕೇರಳ, ತಮಿಳುನಾಡು ರಾಜ್ಯ ಕರ್ನಾಟಕದ ನೆರೆಯರಾಜ್ಯಗಳಾಗಿದ್ದು, ಕೇರಳದಲ್ಲಿ ಗೋ ಹತ್ಯಾ ನಿಷೇಧ ಕಾನೂನು ಇಲ್ಲದಿರುವುದರಿಂದ, ದೊಡ್ಡಪ್ರಮಾಣದಲ್ಲಿ ಗೋಕಳ್ಳತನ ನಡೆಯುತ್ತಿದೆ. ಅಕ್ರಮ ಜಾನುವಾರು ಸಾಗಾಟವನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಬಜರಂಗದಳ ಪ್ರಾಂತ ಸಂಯೋಜಕ್ ಸಮಾವೇಶದಲ್ಲಿ ವಿವಿಧ ವಿಚಾರಗಳ ಬಗ್ಗೆ ಚರ್ಚಿಸಲಾಗಿದೆ. ಬಜರಂಗದಳಕ್ಕೆ ಹೊಸ ಕಾರ್ಯಕರ್ತರ ಜೋಡಿಸುವ ಮೂಲಕ ಸಂಘಟನಾ ವ್ಯಾಪ್ತಿಯನ್ನುವಿಸ್ತರಿಸುವ ಬಗ್ಗೆ ಚರ್ಚಿಸಲಾಗಿದೆ. ಕಳೆದ ವರ್ಷ ಸಂಘಟನೆ 72 ಲಕ್ಷ ಸದಸ್ಯರನ್ನುಹೊಂದಿದ್ದು, ಈ ವರ್ಷದ ನವೆಂಬರ್‌ನಲ್ಲಿ ಸದಸ್ಯತ್ವ ಅಭಿಯಾನ ನಡೆಸಿ ಒಂದು ಕೋಟಿ ಸದಸ್ಯರ ಹೊಂದುವ ಗುರಿ ಹೊಂದಿದ್ದೇವೆ. ಆ ಮೂಲಕ ನಮ್ಮ ಹೋರಾಟಗಳನ್ನು ತೀವ್ರವಾಗಿನಡೆಸಲಿದ್ದೇವೆ ಎಂದು ಮಿಲಿಂದ್ ಪರಾಂಡೆ ಹೇಳಿದರು.



ನಶಮುಕ್ತ ಸಮಾಜ ನಿರ್ಣಯ:

ಸಮಾವೇಶದಲ್ಲಿ ನಶ ಮುಕ್ತ ಭಾರತ ನಿರ್ಮಾಣದ ಸಂಕಲ್ಪ ಮಾಡಲಾಗಿದೆ. ದೇಶದಲ್ಲಿ ವ್ಯಾಪಕ ರೀತಿಯಲ್ಲಿ ಯುವ ಜನತೆ ಡ್ರಗ್ಸ್ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ದೇಶದ ಕಠಿಣವಾದ ಗಡಿಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತು ಅಕ್ರಮವಾಗಿ ಸಾಗಾಟ ನಡೆಯುತ್ತಿದೆ. ಕೇಂದ್ರಸರ್ಕಾರವಿವಿಧಸಂಘಟನೆಗಳು ಡ್ರಗ್ಸ್ ವಿರುದ್ಧ ಕೆಲಸ ಮಾಡುತ್ತಿದ್ದು,ಬಜರಂಗದಳ ಹಾಗೂ ದುರ್ಗಾ ವಾಹಿನಿ ಮೂಲಕ ಡ್ರಗ್ಸ್ ವಿರುದ್ಧ ಜಾಗೃತಿಗಾಗಿ 6 ಸಾವಿರಕ್ಕೂಅಧಿಕ ಕಾರ್ಯಕ್ರಮ ನಡೆಸಲಾಗಿದೆ. ಈ ಕಾರ್ಯಕ್ರಮವನ್ನು ದೇಶದೆಲ್ಲೆಡೆ ಮುಂದುವರಿಸಲು ನಿರ್ಧರಿಸಲಾಗಿದೆ ಎಂದರು.

ಲವ್‌ಜಿಹಾದ್ ಪ್ರಕರಣಗಳು ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿದ್ದು, ಕೇವಲ ಮುಸ್ಲಿಂಯುವಕರು ಮಾತ್ರವಲ್ಲದೇ ಮಹಿಳೆಯರು ಕೂಡ ಇದರಲ್ಲಿ ಭಾಗಿಯಾಗುತ್ತಿರುವುದು ಬೆಳಕಿಗೆ ಬಂದಿದೆ. ಇದಕ್ಕೆ ಇತ್ತೀಚೆಗೆ ಬೆಳಕಿಗೆ ಬಂದ ಪ್ರಮುಖ ಎರಡು ಪ್ರಕರಣಗಳೇ ಸಾಕ್ಷಿ. ಐಟಿಕ್ಷೇತ್ರ ಇಂದು ಬೃಹತ್ ಆಗಿ ಬೆಳೆದಿದ್ದು, ಆ ಕ್ಷೇತ್ರದಲ್ಲೂ ಲವ್‌ಜಿಹಾದ್ ನಂತಹಪ್ರಕರಣಗಳು ನಡೆಯುತ್ತಿರುವುದು ಹಿಂದು ಸಮಾಜಕ್ಕೆದೊಡ್ಡಆಪತ್ತು. ದೂರುಗಳನ್ನೂನೀಡಿದರೂ ಕ್ರಮವಹಿಸಿದ ಕಂಪೆನಿಗಳ ಪ್ರಮುಖರನ್ನು ವಿಹಿಂಪ ಮುಂದಿನ ದಿನಗಳಲ್ಲಿಭೇಟಿಯಾಗಿ ಚರ್ಚಿಸಲಿದೆ ಎಂದವರು ಹೇಳಿದರು. ಸಂಘಟನೆಯ ಕೇಂದ್ರೀಯ ಕೋಶಾಧ್ಯಕ್ಷ ಹಾಗೂ ದಕ್ಷಿಣ ಪ್ರಾಂತ್ಯದ ಅಧ್ಯಕ್ಷ ದೀಪಕ್ ರಾಜ್ ಗೋಪಾಲ್, ಕರ್ನಾಟಕ ದಕ್ಷಿಣ ಪ್ರಾಂತ್ಯದ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್, ಪ್ರಾಂತಸಂಯೋಜಕ ಪ್ರಭಂಜನ್ ಸೂರ್ಯ ಉಪಸ್ಥಿತರಿದ್ದರು.

▸▸ ಬಜರಂಗದಳಕ್ಕೆ ಹೊಸ ಕಾರ್ಯಕರ್ತರ ಜೋಡಿಸುವ ಮೂಲಕ ಸಂಘಟನಾ ವ್ಯಾಪ್ತಿಯನ್ನುವಿಸ್ತರಿಸುವ ಬಗ್ಗೆ ಚರ್ಚಿಸಲಾಗಿದೆ.

▸▸ ಕಳೆದ ವರ್ಷ ಸಂಘಟನೆ 72 ಲಕ್ಷ ಸದಸ್ಯರನ್ನುಹೊಂದಿದ್ದು, ಈ ವರ್ಷದ ನವೆಂಬರ್‌ನಲ್ಲಿ ಸದಸ್ಯತ್ವ ಅಭಿಯಾನ ನಡೆಸಿ ಒಂದು ಕೋಟಿ ಸದಸ್ಯರ ಹೊಂದುವ ಗುರಿ ಹೊಂದಿದ್ದೇವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 36° 26°
ಉಡುಪಿ 33° 27°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 20, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಬಸ್‌ಗಳ ಪೈಪೋಟಿಯಿಂದ ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಅಪಘಾತ!
ಪುಟ 5



ಮರುಜನ್ಮಕ್ಕೆ ಸಜ್ಜಾಗಿದೆ ಐತಿಹಾಸಿಕ 'ರಾಮಸಮುದ್ರ ಕೆರೆ'
ಪುಟ 6

ಬೆಳ್ಳಿ ರಥೋತ್ಸವ ಸಂಭ್ರಮದ ಪುಣ್ಯ ಕ್ಷಣಗಳಲ್ಲಿ ಮಿಂದೆದ್ದ ಕಟೀಲು ಅಮ್ಮನ ಸಹಸ್ರಾರು ಭಕ್ತರು







ಪುರಾಣ ಪ್ರಸಿದ್ಧ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಶನಿವಾರ ರಾತ್ರಿ ಸಂಭ್ರಮದ ಬೆಳ್ಳಿ ರಥೋತ್ಸವ ನಡೆಯಿತು. ಸಾವಿರಾರು ಭಕ್ತರು ಭಾಗವಹಿಸಿ ಕೃತಾರ್ಥರಾದರು. ಇಂದು ಬೆಳಿಗ್ಗೆ 10 ಗಂಟೆಗೆ ಹಗಲು ರಥೋತ್ಸವ ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ದೇವರು ಹೊರಟು ರಥ ಬಲಿ, ರಥಾರೋಹಣದ ಬಳಿಕ ರಥ ಹೂವಿನ ಪೂಜೆ, ಹಗಲು ಬ್ರಹ್ಮರಥೋತ್ಸವ ನಡೆಯಲಿದೆ.

ಸುತ್ತಮುತ್ತ

ಬಿಸಿಲ ಬೇಗೆಯ ನಡುವೆ ಎಲ್ಲೆಡೆ ಸಖತ್ ಬೇಡಿಕೆ ಹೆಚ್ಚಿಸಿಕೊಂಡ ಬೊಂಡ!

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬೇಸಿಗೆಯ ಬಿಸಿಲಿನ ಪರಿಣಾಮವಾಗಿ ಎಳನೀರಿಗೆ ಅಪಾರ ಬೇಡಿಕೆ ಉಂಟಾಗಿದ್ದು ಇದರ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಮಂಗಳೂರು ನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಪ್ರತಿ ಎಳನೀರಿಗೆ 60ರಿಂದ 65 ರೂ.ಗಳ ದರದಲ್ಲಿ ಮಾರಾಟವಾಗುತ್ತಿದೆ. ನಗರ ಪ್ರದೇಶಗಳಲ್ಲಿ ಕೆಲವೆಡೆ 70 ಕ್ಕೂ ಮೀರಿದ ಬೆಲೆಯಲ್ಲಿ ಮಾರಾಟವಾಗುತ್ತಿದ್ದು ಭರ್ಜರಿಯಾಗಿ ಬೇಡಿಕೆ ಹೆಚ್ಚಿಸಿಕೊಂಡಿದೆ.

ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ: ಜಿಲ್ಲಾ ಜಾರಿ ದಳದಿಂದ ದಂಡ

ಕಾಸರಗೋಡು: ತೃಕ್ಕರೀಪುರ ಪಂಚಾಯತ್ ವ್ಯಾಪ್ತಿಯ ಮನೋರಂಜನಾ ಉದ್ಯಾನವನ ಮತ್ತು ರೆಸಾರ್ಟ್‌ನಲ್ಲಿ ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಹಿನ್ನೆಲೆಯಲ್ಲಿ ಜಿಲ್ಲಾ ಜಾರಿ ದಳವು 50 ಸಾವಿರ ರೂ. ದಂಡ ವಿಧಿಸಿದೆ. ಸಂಸ್ಥೆಯ ತ್ಯಾಜ್ಯವನ್ನು ಸಮೀಪದಲ್ಲಿ ಹೂಳಲಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಯಿತು. ಇದಕ್ಕೂ ಮುನ್ನ ಗ್ರಾಮ ಪಂಚಾಯತ್‌ನ ಹೆಚ್ಚಿನ ಪರಿಶೀಲನೆ ಮತ್ತು ವರದಿಯನ್ನು ದಳವು ಕೇಳಿತ್ತು.

ಮುಂದಿನ ನಾಲ್ಕು ದಿನ ಬಿಸಿ ಗಾಳಿ, ಅಚಾನಕ್ ಗುಡುಗು ಸಹಿತದ ಮಳೆ?

ಮಂಗಳೂರು: ಮುಂದಿನ ನಾಲ್ಕು ದಿನಗಳ ಕಾಲ ಕರಾವಳಿ ಭಾಗದಲ್ಲಿ ಬಿಸಿ ಗಾಳಿ ಹಾಗೂ ಅಚಾನಕ್ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಿಸಿಲಿನ ತೀವ್ರತೆಯೂ ಇದೇ ಮಾದರಿಯಲ್ಲಿ ಮುಂದುವರಿಯಲಿದ್ದು, ನಾಗರಿಕರು ಅದರಲ್ಲೂ ವಿಶೇಷವಾಗಿ ಮಕ್ಕಳು ಹಾಗೂ ವಯೋವೃದ್ಧರು ಹೆಚ್ಚಿನ ಜಾಗ್ರತೆ ವಹಿಸಬೇಕು ಎಂದು ಆರೋಗ್ಯ ಇಲಾಖೆ ಕೂಡಾ ಎಚ್ಚರಿಕೆ ನೀಡಿದೆ.

ಬಿಳಿಯೂರು: ಸದ್ಯಕ್ಕಿದೆ ಅಗತ್ಯ ಪ್ರಮಾಣದಲ್ಲಿ ಜೀವಜಲದ ಸಂಗ್ರಹ

ಮಂಗಳೂರು: ಬಿಳಿಯೂರು ಅಣೆಕಟ್ಟಿನಲ್ಲಿ ಸದ್ಯ ಅಗತ್ಯ ಪ್ರಮಾಣದ ನೀರು ಸಂಗ್ರಹ ಇರುವ ಹಿನ್ನೆಲೆಯಲ್ಲಿ ಉಪ್ಪಿನಂಗಡಿ ಪರಿಸರದ ಜನತೆ ಸದ್ಯ ಆತಂಕ ಮುಕ್ತರಾಗಿದ್ದಾರೆ. ಈ ನಡುವೆ ಒಂದೆರಡು ಬೇಸಿಗೆ ಮಳೆ ಬಿದ್ದಲ್ಲಿ ಇನ್ನಷ್ಟು ಅನುಕೂಲವಾಗಲಿದೆ.

ಕಾವೇರುತ್ತಿದೆ ಇಳೆ | ಬಿದ್ದಿಲ್ಲ ಬೇಸಿಗೆ ಮಳೆ

ನಿತ್ಯವೂ ಬಿಸಿಲೂಟ!


ಭಯ ಹುಟ್ಟಿಸಿದೆ ಉಷ್ಣಾಂಶದ ಸತತ ಏರಿಕೆ

ಮಂಗಳೂರು: ದಿನದಿಂದ ದಿನಕ್ಕೆ ಏರುತ್ತಿರುವ ಬಿಸಿಲಿನ ತಾಪಮಾನ ಜನಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದು, ಕರಾವಳಿ ಭಾಗದಲ್ಲಿ ಪರಿಸ್ಥಿತಿ ದಿನೇದಿನೇ ಗಂಭೀರಗೊಳ್ಳುತ್ತಿದೆ.

ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಕಳೆದ ಒಂದು ವಾರದಿಂದ ಬೆಳಿಗ್ಗೆ ಮೋಡ ಕವಿದ ವಾತಾವರಣ ಕಂಡುಬಂದರೂ, ಮಳೆಯ ಕೊರತೆ ಜನರಲ್ಲಿ ಆತಂಕ ಮೂಡಿಸಿದೆ. ಬೆಳಿಗ್ಗೆಯಲ್ಲೇ ಉರಿ ಬಿಸಿಲು ತೀವ್ರವಾಗುತ್ತಿದ್ದು, ಮಧ್ಯಾಹ್ನ ವೇಳೆಗೆ ತಾಪಮಾನ ಅಸಹನೀಯ ಮಟ್ಟಕ್ಕೆ ಏರುತ್ತಿದೆ. ಸಂಜೆ ವೇಳೆಯಲ್ಲೂ ಮೋಡ ಕವಿದರೂ ಮಳೆ ಬೀಳದೆ ಬಿಸಿ ಗಾಳಿ ಬೀಸುತ್ತಿರುವುದು ಜನರನ್ನು ಕಂಗೆಡಿಸುತ್ತಿದೆ.

ಯಾಕೆ ಹೀಗೆ? ಎಲ್ಲಿ ಏನಾಗಿದೆ?

ಹವಾಮಾನ ತಜ್ಞರ ಪ್ರಕಾರ, ಗಾಳಿಯ ದಿಕ್ಕು ಬದಲಾವಣೆ, ಸಮುದ್ರ ಭಾಗದಿಂದ ತೇವಾಂಶದ ಕೊರತೆ ಈ ಸ್ಥಿತಿಗೆ ಕಾರಣವಾಗಿದೆ. »»ಪುಟ 6



ಮಕ್ಕಳು, ಕಾರ್ಮಿಕರು, ವೃದ್ಧರನ್ನು ಕಾಡುತ್ತಿದೆ ಬಿಸಿಲು

ಬಿಸಿಲಿನಿಂದ ಮಕ್ಕಳಲ್ಲಿ ವೈರಲ್, ಫಂಗಲ್, ಚರ್ಮ ಸಂಬಂಧಿ ಸೋಂಕುಗಳು ಹೆಚ್ಚಾಗುತ್ತಿದ್ದರೆ ಹಿರಿಯರು, ಕಾರ್ಮಿಕರು ತಲೆ ಸುತ್ತು, ದಣಿವು, ಹೀಟ್ ಸ್ಟ್ರೋಕ್‌ಗಳಿಗೆ ಒಳಗಾಗುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಈ ರೀತಿಯ ಪ್ರಕರಣಗಳ ಸಂಖ್ಯೆ ಈಗ ಹೆಚ್ಚುತ್ತಿದೆ.

ಪ್ರತಿನಿತ್ಯ ಮಧ್ಯಾಹ್ನ 12 ರಿಂದ 3 ಹೆಚ್ಚು ಎಚ್ಚರ ವಹಿಸಿ

ಬಿಸಿಲಿನ ಆಘಾತದಿಂದ ಪಾರಾಗಲು ತಜ್ಞರು ಅಗತ್ಯ ಮುನ್ನೆಚ್ಚರಿಕೆ ಕ್ರಮ ಪಾಲಿಸುವಂತೆ ಸೂಚಿಸಿದ್ದಾರೆ. ಮಧ್ಯಾಹ್ನ 12ರಿಂದ 3ರ ವರೆಗೆ ಯಾವ ಕಾರಣಕ್ಕೂ ಬಿಸಿಲಿಗೆ ಮೈಯೊಡ್ಡದಂತೆ ಎಚ್ಚರ ವಹಿಸಲು ಅವರು ಹೇಳಿದ್ದಾರೆ.

ಆಳಸಮುದ್ರದತ್ತ ಸಾಗಿದೆ ಪಯಣ?

ಕಡಲಲ್ಲಿ ಕಾಣಿಸಿದೆ ಮೀನಿಗೂ ಕೊರತೆ

ಮಾರುಕಟ್ಟೆಯಲ್ಲಿ ಧಾರಣೆ ಏರಿಕೆ

ಮಂಗಳೂರು: ನಾಡನ್ನೇ ಕಾಡುತ್ತಿರುವ ಸುಡು ಬಿಸಿಲು ಕರಾವಳಿಯ ಮೀನುಗಾರಿಕೆ ಕ್ಷೇತ್ರದ ಮೇಲೂ ಭಾರೀ ಪ್ರಭಾವ ಬೀರಿದೆ.

ಬಿಸಿಲಿನ ತೀವ್ರತೆಗೆ ಸಮುದ್ರದ ಮೇಲ್ಮೈ ತಾಪಮಾನವೂ ಈಗ ಏರಿಕೆಯಾಗಿದ್ದು, ಎಲ್ಲೆಡೆ ಮೀನುಗಳಿಗೆ ಬರ ಉಂಟಾಗಿದೆ. »»ಪುಟ 6



ಕಾಸರಗೋಡಿನ ತೋಟಗಳಲ್ಲಿ ಕೋತಿ ಕಾಟ: ಕೃಷಿಕ ಕಂಗಾಲು

ಅಡಿಕೆ, ಬಾಳೆ, ಬೊಂಡ ಕಣ್ಣೆದುರಲ್ಲೇ ಮಟಾಶ್

ಕಾಸರಗೋಡು: ಮಳೆಹಾನಿ, ರೋಗಬಾಧೆ, ಕಾಡುಹಂದಿಗಳ ಉಪಟಳ ಮೊದಲಾದ ಕಾರಣಗಳಿಂದ ಈಗಾಗಲೇ ಕಷ್ಟನಷ್ಟ ಅನುಭವಿಸಿದ್ದ ಜಿಲ್ಲೆಯ ಕೃಷಿಕರು ಈಗ ಕೃಷಿ ತೋಟಗಳಲ್ಲಿ ಲಗ್ಗೆಯಿಡುತ್ತಿರುವ ಕೋತಿಗಳ ಉಪಟಳಕ್ಕೆ ಹೈರಾಣಾಗಿದ್ದಾರೆ.

ಎಲ್ಲೆಲ್ಲಿ ಇದೆ ಸಮಸ್ಯೆ?

ಕಾಸರಗೋಡಿನ ಬಂದಡ್ಕ, ದೇಲಂಪಾಡಿ, ಮುಳಿಯಾರು, ಕಾರಡ್ಕ, ಬೆಳ್ಳೂರು, ಕುಂಬಳೆ, ಪುತ್ತಿಗೆ, ಪೈವಳಿಕೆ, ಎಣ್ಮಕಜೆ, ಬದಿಯಡ್ಕ ಪಂಚಾಯತ್ ವ್ಯಾಪ್ತಿಗಳಲ್ಲಿನ ಕೃಷಿ ಭೂಮಿಗೆ ಮಂಗಗಳ ಕಾಟ ತೀವ್ರಗೊಂಡಿದೆ.

ತೋಟಗಳಿಗೆ ಗುಂಪು ಗುಂಪಾಗಿ ಬರುತ್ತವೆ

ಕೃಷಿ ತೋಟಗಳಿಗೆ ಗುಂಪುಗಳಾಗಿ ಬರುವ ವಾನರ ಅಡಿಕೆ ಗೊನೆಗಳು, ಬಾಳೆಗೊನೆಗಳನ್ನು ಅಲ್ಲದೆ ತೆಂಗಿನಮರದ ಎಳನೀರುಗಳನ್ನು ಹಾಳು ಮಾಡುತ್ತಿವೆ. ಜೊತೆಗೆ ದಾರಿಬದಿಗಳಲ್ಲಿ ವಾನರರ ಚೇಷ್ಟೆ ಪುಟ್ಟಮಕ್ಕಳನ್ನು ಭೀತರನ್ನಾಗಿಸುತ್ತಿದೆ.



ಹಣ್ಣು ಹಂಪಲು ಗಿಡ ನೆಡುವ ಯೋಜನೆ ಠುಸ್

ಕಾಡುಪ್ರಾಣಿಗಳು ನಾಡಿಗೆ ಬಾರದಂತೆ ಕಾಡಿನಲ್ಲಿ ಅವುಗಳಿಗೆ ಆಹಾರ ಒದಗಿಸುವ ನಿಟ್ಟನಲ್ಲಿ ಕಾಡಿನಲ್ಲಿ ಹಣ್ಣುಹಂಪಲು ಗಿಡಗಳನ್ನು ನೆಟ್ಟು ಬೆಳೆಸುವ ಯೋಜನೆ ಇರಿಸಲಾಗಿತ್ತಾದರೂ ಅದು ಸಮರ್ಪಕವಾಗಿ ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲ.

ಬೀದಿ ದೀಪಗಳಲ್ಲಿ ಜಗಮಗಿಸುತ್ತಿದೆ ಬಿ.ಸಿ.ರೋಡು To ಮೆಲ್ಕಾರ್ ರಸ್ತೆ

ರಾಷ್ಟ್ರೀಯ ಹೆದ್ದಾರಿಗೆ 'ಬೆಳಕಿನ ತೋರಣ'!


ಬಂಟ್ವಾಳ: ಬಿ.ಸಿ.ರೋಡ್– ಅಡ್ಡಹೊಳೆ ನಡುವಿನ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದು, ಇದರ ಭಾಗವಾಗಿ ಬಿ.ಸಿ. ರೋಡಿನಿಂದ ಮೆಲ್ಕಾರ್ ವರೆಗಿನ ಹೆದ್ದಾರಿ ದಾರಿದೀಪಗಳಿಂದ ಜಗಮಗಿಸುತ್ತಿದೆ.

ಹೊಳೆಯುತ್ತಿದೆ ರಾಷ್ಟ್ರೀಯ ಹೆದ್ದಾರಿ!

ಸದ್ಯ ಪ್ರಾಯೋಗಿಕವಾಗಿ ಹೆದ್ದಾರಿಯ ದಾರಿದೀಪ ಉರಿಸಲಾಗುತ್ತಿದ್ದು, ಈ ದಾರಿದೀಪದ ಬೆಳಕಿನಿಂದ ಈಗ ಹೆದ್ದಾರಿ ಜಗಮಗಿಸುತ್ತಿದೆ. ಇದು ವಾಹನ ಚಾಲಕರಲ್ಲಿಯೂ ಖುಷಿ ಮೂಡಿಸಲು ಕಾರಣವಾಗಿದೆ. ಇದೀಗ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಿದ್ದು, ಬಳಿಕ ಮೆಸ್ಕಾಂ ಸಂಪರ್ಕ ಪಡೆದು ಶಾಶ್ವತವಾಗಿ ದೀಪಗಳು ಉರಿಯಲಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮೇ ತಿಂಗಳ ಮೊದಲ ವಾರದಿಂದ ಶಾಶ್ವತವಾಗಿ ಹೆದ್ದಾರಿಗೆ ದಾರಿದೀಪದ ಬೆಳಕು ಹರಿಯಲಿದೆ ಎಂದು ತಿಳಿದು ಬಂದಿದೆ.

ನೆಲ್ಯಾಡಿ ಹಾಗೂ ಪೆರ್ನೆ ಸಮೀಪ ಒಂದಷ್ಟು ರಸ್ತೆಯ ಕಾಮಗಾರಿಗಳು ಬಾಕಿಯಿದ್ದು, ಉಳಿದಂತೆ ಬಿರುಸಿನಿಂದ ನಡೆಯುತ್ತಿದೆ.

ಬಿ.ಸಿ. ರೋಡು– ಪೆರಿಯಶಾಂತಿವರೆಗೆ ವಿದ್ಯುತ್ ಕಂಬ ಅಳವಡಿಸಲಾಗಿದ್ದು, ದೀಪಗಳ ಅಳವಡಿಸುವ ಕಾರ್ಯ ಕೂಡ ಅಂತಿಮ ಹಂತದಲ್ಲಿದೆ.



ಎಲ್ಲಿ, ಹೇಗೆ ಮಾಡಲಾಗಿದೆ ಬೀದಿ ದೀಪಗಳ ವ್ಯವಸ್ಥೆ?

ರಾಷ್ಟ್ರೀಯ ಹೆದ್ದಾರಿಯ ಎರಡೂ ರಸ್ತೆಯ ಮಧ್ಯ ಭಾಗದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ, ದೀಪಗಳನ್ನು ಹಾಕಲಾಗಿದೆ. ಫ್ಲೈ ಓವರ್ ಆರಂಭ ಮತ್ತು ಕೊನೆಯ ಭಾಗದಲ್ಲಿ ಸರ್ವೀಸ್ ರಸ್ತೆ ಹಾಗೂ ಫ್ಲೈ ಓವರ್ ಎರಡಕ್ಕೂ ಅನ್ವಯವಾಗುವಂತೆ ವಿದ್ಯುತ್ ದೀಪಗಳನ್ನು ಜೋಡಿಸಲಾಗಿದೆ.

ಹತ್ತೂರ ಒಡೆಯನ ಸಂಭ್ರಮದ ಜಾತ್ರೋತ್ಸವಕ್ಕೆ ಅದ್ದೂರಿ ತೆರೆ 2

ದೈವಾನುಗ್ರಹ ಇದ್ದರೆ ಮಾತ್ರ ಬದುಕಿನಲ್ಲಿ ಸಾಧನೆ ಸಾಧ್ಯ : ಭೀಮೇಶ್ವರ ಜೋಷಿ 3

ಸುತ್ತಮುತ್ತ

ಶಿವಾಜಿ ಫ್ರೆಂಡ್‌ನ ನೂತನ ಅಧ್ಯಕ್ಷರಾಗಿ ಗುರುಪ್ರಸಾದ್

ಮಂಗಳೂರು: ಶಿವಾಜಿ ಫ್ರೆಂಡ್ಸ್ ಶಿವಾಜಿನಗರ ಕೋಡಿಕೆರೆ–ಕುಳಾಯಿ ಸಂಘದ ನೂತನ



ಪದಾಧಿಕಾರಿಗಳ ಆಯ್ಕೆ ಸರ್ವಾನುಮತದಿಂದ ನಡೆಯಿತು. ಗೌರವಾಧ್ಯಕ್ಷರಾಗಿ ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿಯಾಗಿ ಬಾಲಕೃಷ್ಣ ಜೊತೆ ಕಾರ್ಯದರ್ಶಿಯಾಗಿ ಶಿವಾನಂದ ಶೆಟ್ಟಿ, ಕೋಶಾಧಿಕಾರಿಯಾಗಿ ಹರೀಶ್ ಕೋಟ್ಯಾನ್, ಲೆಕ್ಕ ಪರಿಶೋಧಕರಾಗಿ ವಿದ್ಯಾರಾಜ್ ಶೆಟ್ಟಿ ಕ್ರೀಡಾಕಾರ್ಯದರ್ಶಿಯಾಗಿ ನಿತಿನ್ ಬಂಗೇರ, ಮೋಹನ್ ಜಿ., ಸಂದೀಪ್ ಶೆಟ್ಟಿ ಕಿಶೋರ್ ಶೆಟ್ಟಿ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಶ್ರೀಕಾಂತ್ ಕುಲಾಲ್, ರತನ್ ಬಂಗೇರ, ಮಿಥುನ್ ಅವರು ಮುಂದಿನ ಎರಡು ವರ್ಷಕ್ಕೆ 2026–28ನೇ ಸಾಲಿನ ಅಧಿಕಾರವನ್ನು ವಹಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ನೃತ್ಯ ನಿನಾದ ಸಂಸ್ಥೆಯ ರಜತ ಸಂಭ್ರಮ

ಕಡಬ: ಕಡಬವನ್ನು ಕೇಂದ್ರೀಕರಿಸಿಕೊಂಡು ಕಾರ್ಯಾಚರಿಸುತ್ತಿರುವ ವಿದುಷಿ ಪ್ರಮೀಳಾ ಲೋಕೇಶ್ ಅವರ ನೇತೃತ್ವದ ಭಾರತೀಯ ಕಲೆಗಳ ತರಬೇತಿ ಕೇಂದ್ರ ನೃತ್ಯ ನಿನಾದ ಸಂಸ್ಥೆಯ ರಜತ ಮಹೋತ್ಸವ ಸಂಭ್ರಮದ ಪ್ರಯುಕ್ತ ಏ.20ರಂದು ಕಡಬದ ಶ್ರೀ ಜಯ ದುರ್ಗಾಪರಮೇಶ್ವರೀ ದೇವಸ್ಥಾನದ ವಠಾರದಲ್ಲಿ ರಜತಾರ್ಣವಮ್ ಸಮಾರಂಭ ನಡೆಯಲಿದೆ. ಸಂಜೆ ನಡೆಯವ ಸಮಾರಂಭವನ್ನು ಕರ್ನಾಟಕ ಕಲಾಶ್ರೀ ವಿದುಷಿ ನಯನಾ ವಿ. ರೈ ಅವರು ಉದ್ಘಾಟಿಸಲಿದ್ದು ನೃತ್ಯ ನಿನಾದ ವಿದ್ಯಾರ್ಥಿ , ವಿದ್ಯಾರ್ಥಿನಿಯರಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ. ಬಳಿಕ ನಡೆಯುವ ಸಭಾ ಕರ್ಯಕ್ರಮದಲ್ಲಿ ಕರ್ನಾಟಕ ಕಲಾಶ್ರೀ ರಾಜಶ್ರೀ ಉಳ್ಳಾಲ್ ಅಧ್ಯಕ್ಷತೆವಹಿಸಲಿದ್ದಾರೆ. ತುಂಬೆ ಬಿ.ಎ. ಕೈಗಾರಿಕಾ ಸಂಸ್ಥೆಯ ಪ್ರಾಂಶುಪಾಲ ನವೀನ್ ಕುಮಾರ್ ಕೆ.ಎಸ್. ಹಾಗೂ ಶ್ರೀ ಜಯದುರ್ಗಾ ಪರಮೇಶ್ವರೀ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ಅರುಣ್ ಕುಮಾರ್ ಜೆಡೆಮನೆ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮ ಬಳಿಕ ಸಪ್ತ ಮಾತೃಕಾ ನಡೆಯಲಿದೆ ನೃತ್ಯ ರೂಪಕ ಪ್ರದರ್ಶನಗೊಳ್ಳಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ದೇವಳದ ರಕ್ಷಣೆಯ ಹೊಣೆ ನಿರ್ವಹಿಸಿದ ರಕ್ತೇಶ್ವರಿ ದೈವ

ಪುತ್ತೂರು: ಇತಿಹಾಸ ಪ್ರಸಿದ್ಧ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಆಚರಿಸಲ್ಪಡುವ ಶಿಷ್ಟ ಸಂಪ್ರದಾಯಗಳು ವಿಶೇಷವಾಗಿದ್ದು ಮಹಾಲಿಂಗೇಶ್ವರ ದೇವರು ದೂರದ ವೀರಮಂಗಲಕ್ಕೆ



ಅವಭೃತ ಸವಾರಿಗೆ ತೆರಳುವ ಸಂದರ್ಭ ದೇವಾಲಯದ ಸಂಪೂರ್ಣ ರಕ್ಷಣೆಯ ಹೊಣೆ ಇಲ್ಲಿನ ರಕ್ತೇಶ್ವರಿ ದೈವದ್ದಾಗಿದೆ. ಈ ವರ್ಷವೂ ಕೂಡ ಶ್ರೀದೇವರು ಏ.18ರಂದು ಸಂಜೆ ಅವಭೃತ ಸವಾರಿಗೆ ತೆರಳಿ ದೇವಾಲಯಕ್ಕೆ ಮರಳಿ ಬರುವ ಏ.19ರ ಬೆಳಗ್ಗಿನವರೆಗೆ ಶ್ರೀ ದೇವಾಲಯವನ್ನು ಕಾಯುವ ಜವಾಬ್ದಾರಿಯನ್ನು ದೇವಾಲಯದ ಹೊರಾಂಗಣದಲ್ಲಿ ನೆಲೆಯಾಗಿರುವ ಶ್ರೀ ರಕ್ತೇಶ್ವರಿ ದೈವವು ನಿರ್ವಹಿಸಿದೆ. ಏ. 18ರಂದು ಶ್ರೀ ದೇವರು ವೀರಮಂಗಲಕ್ಕೆ ಅವಭೃತ ಸವಾರಿಗೆ ಹೊರಡುವ ಮೊದಲು ರಕ್ತೇಶ್ವರಿ ದೈವಕ್ಕೆ ಕಟ್ಟುಕಟ್ಟಲೆಯ ನೇಮ ನಡೆಯುತ್ತದೆ. ನೇಮ ಕಟ್ಟನಿಂತ ದೈವವು ದೇವರ ಜತೆಗೆ ದೇವಾಲಯದ ಎದುರು ಗದ್ದೆಯವರೆಗೆ ತೆರಳಿ ದೇವಾಲಯವನ್ನು ಕಾಯುವ ಹೊಣೆಗಾರಿಕೆಯನ್ನು ಒಪ್ಪಿಕೊಂಡು ಶ್ರೀ ದೇವರು ಅವಭೃತಕ್ಕೆ ತೆರಳುವಂತೆ ಭಿನ್ನವಿಸಿಕೊಳ್ಳಲಾಗುತ್ತದೆ. ರಾತ್ರಿಯಿಡೀ ಜಾಗರಣೆಯಿಂದ ಇದ್ದು ಬೆಳಗ್ಗೆ ಶ್ರೀ ದೇವರು ವೀರಮಂಗಲದಿಂದ ಮರಳುವವರೆಗೆ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಮಹಾಲಿಂಗೇಶ್ವರ ದೇವರ ಸಕಲ ಭಂಡಾರಗಳನ್ನು ಕಾಯುವ ಮೂಲಕ ತನ್ನ ಒಡೆಯನ ಸೇವೆಯನ್ನು ದೈವ ಸಲ್ಲಿಸುವುದು ಇಲ್ಲಿನ ವಿಶೇಷ.

ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ವಿಷು ಆಚರಣೆ

ಬಂಟ್ವಾಳ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಇದರ ವತಿಯಿಂದ ಅನಂತಾಡಿ ಗ್ರಾಮದ ಬಂಟ್ರಿಂಜ ಶಾಲೆಯಲ್ಲಿ ನಡೆಯುತ್ತಿರುವ ಮಕ್ಕಳ 21 ದಿನಗಳ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಬುಧವಾರ ಬೆಳಿಗ್ಗೆ ಮಕ್ಕಳೊಂದಿಗೆ ವಿಷು ಹಬ್ಬವನ್ನು ಆಚರಿಸಲಾಯಿತು. ಸಾಮೂಹಿಕ ನಿತ್ಯಯೋಗ, ಭಜನೆ, ದೇವರಿಗೆ ದೀಪ ಹಚ್ಚಿ ಹಣ್ಣು ವಿವಿಧ ತರಕಾರಿಗಳನ್ನು ದೇವರಿಗೆ ಕಾಣಿಕೆ ಇಟ್ಟು ಸಾಮೂಹಿಕ ಪ್ರಾರ್ಥನೆಯೊಂದಿಗೆ ಶಿಕ್ಷಕ ದಿವಾಕರ ಶಾಂತಿಲ ಅವರು ವಿಷುವಿನ (ಬಿಸು) ಮಹತ್ವವನ್ನು ತಿಳಿಸಿದರು. ಶಿಕ್ಷಕರಾದ ಹೇಮಲತಾ ದಿವಾಕರ್ ಹಾಗೂ ಭವ್ಯ ಜಯರಾಮ್ ಉಪಸ್ಥಿತರಿದ್ದರು. ಅನ್ನಪೂರ್ಣ ಮಂತ್ರದೊಂದಿಗೆ ಎಲ್ಲರಿಗೂ ಪ್ರಸಾದ ವಿತರಿಸಲಾಯಿತು.

ಬಪ್ಪನಾಡು ಶ್ರೀ ಕೋಟೆದ ಬಬ್ಬು ದೈವಸ್ಥಾನದಲ್ಲಿ ನೇಮ

ಮುಲ್ಕಿ: ಬಪ್ಪನಾಡು ಶ್ರೀ ಕೋಟೆದ ಬಬ್ಬು ದೈವಸ್ಥಾನದಲ್ಲಿ ಶ್ರೀ ಕೋಟೆದ ಬಬ್ಬು ದೈವದ ಮತ್ತು ತನ್ನಿಮಾನಿಗ ದೈವದ ನೇಮವು ಏ18ರಂದು ನಡೆಯಿತು. ಏ.19ರಂದು ಸಂಜೆ 6 ಗಂಟೆಗೆ ಶ್ರೀ ಧೂಮಾವತಿ ಹಾಗೂ ಬಂಟ ದೈವಗಳ ನೇಮ ನಡೆಯಿತು. ನೂರಾರು ಭಕ್ತರು ಆಗಮಿಸಿ, ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.

ಪುತ್ತೂರ ದೇವಳಲ್ಲಿ ಧ್ವಜಾವರೋಹಣ | ವೀರಮಂಗಲ ಕುಮಾರಧಾರಾ ನದಿಯಲ್ಲಿ ಅವಭೃತ ಸ್ನಾನ

ಹತ್ತೂರ ಒಡೆಯನ ಸಂಭ್ರಮದ ಜಾತ್ರೋತ್ಸವಕ್ಕೆ ಅದ್ದೂರಿ ತೆರೆ

ಪುತ್ತೂರು: ಸೀಮೆಯ ಒಡೆಯ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವರ ವಾರ್ಷಿಕ ಜಾತ್ರೆಯು ಭಾನುವಾರ ಬೆಳಗ್ಗೆ ಧ್ವಜಾವರೋಹಣದೊಂದಿಗೆ ಸಮಾಪನಗೊಂಡಿತು.

ಶನಿವಾರ ಸಂಜೆ 5ಕ್ಕೆ ದೇವಾಲಯದಿಂದ ತೆರಳಿದ ಶ್ರೀ ದೇವರ ಅವಭೃತ ಸವಾರಿ ಭಾನುವಾರ ಬೆಳಗ್ಗೆ 6.15 ಕ್ಕೆ ಸುಮಾರು 13 ಕಿ.ಮೀ. ದೂರದ ವೀರಮಂಗಲ ಕುಮಾರಧಾರಾ ನದಿಗೆ ತಲುಪಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅವಭೃತ ಮುಗಿಸಿ ದೇವಾಲಯಕ್ಕೆ ಭಾನುವಾರ ಮರಳಿ ಬೆಳಗ್ಗೆ 11 ಗಂಟೆಗೆ ಆಗಮಿಸಿತು.

ದಾರಿಯುದ್ದಕ್ಕೂ ಕಟ್ಟೆಪೂಜೆಗಳು, ಸುಮಾರು 10,000ಕ್ಕೂ ಹೆಚ್ಚು ಹಣ್ಣುಕಾಯಿ ಸೇವೆಯನ್ನು ಸ್ವೀಕರಿಸಿ ದೇವರ ಸವಾರಿ ವೀರಮಂಗಲಕ್ಕೆ ತೆರಳಿತು. ಭಾನುವಾರ ಬೆಳಗ್ಗೆ ದೇವರ ಮೂಲ ಉತ್ಸವ ಮೂರ್ತಿಯೊಂದಿಗೆ ಸವಾರಿಯು ದೇವಾಲಯದ ಒಳಾಂಗಣ ಪ್ರವೇಶಿಸಿತು. ಒಂದು ಸುತ್ತು ಉತ್ಸವ ನಡೆದು ಬಳಿಕ ಧ್ವಜಾವರೋಹಣ ನಡೆಯಿತು. ಬಳಿಕ ಭಕ್ತರು ದೇವರ ಧರ್ಮನಡೆಯಲ್ಲಿ ನಿಂತು ಪ್ರಾರ್ಥಿಸಿ, ಕಾಣಿಕೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ಧ್ವಜಾವರೋಹಣ ಮುಗಿದ ಬೆನ್ನಲ್ಲೇ ದೇವಾಲಯದಲ್ಲಿ ಅನ್ನಸಂತರ್ಪಣೆ ಆರಂಭವಾಯಿತು.







ಅವಭೃತ ಸ್ನಾನ

ಭಾನುವಾರ ಬೆಳಗ್ಗೆ ವೀರಮಂಗಲ ಕುಮಾರಧಾರಾ ನದಿಯಲ್ಲಿ ಶ್ರೀ ದೇವರ ಅವಭೃತ ಸ್ನಾನ ವಿವಿಧ ವಿಧಿ ವಿಧಾನಗಳೊಂದಿಗೆ ನಡೆಯಿತು. ತುಪ್ಪ ಜೇನು, ಸೀಯಾಳ ಸೇರಿದಂತೆ ಪಂಚ ದ್ರವ್ಯಗಳಿಂದ ಶ್ರೀ ದೇವರ ಅವಭೃತ ಸ್ನಾನ ನಡೆಯಿತು. ಬಳಿಕ ಸಾವಿರಾರು ಸಂಖ್ಯೆಯ ಭಕ್ತರು ನದಿಯಲ್ಲಿ ಮಿಂದು ಪುನೀತರಾದರು. ಅನಂತರ ಶ್ರೀ ದೇವರ ಪ್ರಭಾವಳಿಯೊಂದಿಗೆ ನದಿ ದಡದಲ್ಲಿರುವ ಕಟ್ಟೆಯಲ್ಲಿ ಪೂಜೆ ನಡೆದು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ತೆರಳಿ ಅಲ್ಲಿಂದ ಶ್ರೀ ದೇವರ ಸವಾರಿ ಮರಳಿ ಶ್ರೀ ಮಹಾಲಿಂಗೇಶ್ವರ ದೇವಾಲಯಕ್ಕೆ ಆಗಮಿಸಿತು.

ಶ್ರೀ ದೇವರ ಸವಾರಿ ಮರಳಿ ಬರುವ ಸಂದರ್ಭದಲ್ಲಿ ವಿವಿಧ ವಾಹನಗಳಲ್ಲಿ ವಾದ್ಯಘೋಷ, ಶ್ರೀ ಮಹಾಲಿಂಗೇಶ್ವರ ದೇವರ ಭಕ್ತಿ ಗೀತೆ, ಭಕ್ತಾದಿಗಳಿಂದ ಶಿವನಾಮ ಸ್ಮರಣೆ ನಡೆಯಿತು.

ಈ ಬಾರಿ ಹೆಚ್ಚಿನ ಭಕ್ತರು

ಶನಿವಾರ ಸಂಜೆ ಶ್ರೀ ದೇವರೊಂದಿಗೆ ಅವಭೃತ ಸ್ನಾನಕ್ಕೆ ಬರಿಗಾಲಿನಲ್ಲಿ ಭಕ್ತಿ, ಶ್ರದ್ಧೆಯೊಂದಿಗೆ ತೆರಳಿದ ಸಹಸ್ರಾರು ಸಂಖ್ಯೆಯ ಭಕ್ತರು ವೀರಮಂಗಲ ಕುಮಾರಧಾರಾ ನದಿಯಲ್ಲಿ ಶ್ರೀ ದೇವರೊಂದಿಗೆ ಸ್ನಾನ ಮುಗಿಸಿ ಮರಳಿ ದೇವರೊಂದಿಗೆ ದೇವಾಲಯಕ್ಕೆ ಬಂದು ಪುನೀತರಾದರು. ಈ ಬಾರಿ ದೇವರ ಜತೆ ಅವಭೃತಕ್ಕೆ ತೆರಳಿದ ಭಕ್ತರ ಸಂಖ್ಯೆ ವೃದ್ಧಿಯಾಗಿತ್ತು. ಜಾತ್ರೋತ್ಸವದ ಆರಂಭದಿಂದ ಹಿಡಿದು ಧ್ವಜಾವರೋಹಣದವರೆಗೆ ಸುಮಾರು 200ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿರಂತರ ಬಂದೋಬಸ್ತ್ ನಡೆಸಿದರು. ಅವಭೃತ ಸವಾರಿಯ ಉದ್ದಕ್ಕೂ ಹಾಗೂ ದೇವರ ವೀರಮಂಗಲ ಅವಭೃತ ಸ್ನಾನದ ಬಳಿ ಭಕ್ತರು ಅಪಾಯಕಾರಿ ಸ್ಥಳದಲ್ಲಿ ನೀರಿಗೆ ಇಳಿಯದಂತೆ ಪೊಲೀಸರು ನಿಗಾ ವಹಿಸಿದರು.

ದೈವಗಳ ನೇಮ

ಏ.10 ರಿಂದ ಕೊಡಿ ಏರಿ ಜಾತ್ರೆ ನಡೆದು ಏ. 19ರಂದು ಕೊಡಿ ಇಳಿದ ಬಳಿಕ ಎರಡು ದಿನ ದೈವಗಳ ನೇಮ, ಚೂರ್ಣೋತ್ಸವ, ವಸಂತಕಟ್ಟೆ ಪೂಜೆ ನಡೆಯುತ್ತದೆ. ಭಾನುವಾರ ರಾತ್ರಿ ಹುಲಿಭೂತ, ರಕ್ತೇಶ್ವರಿ ನೇಮ ನಡೆದು ಮಂತ್ರಾಕ್ಷತೆ, ಅಂಜಣತ್ತಾಯ, ಪಂಜುರ್ಲಿ ವಗೈರೆ ದೈವಗಳ ನೇಮ ಜರಗಿತು.

'ಚಿಗುರು' ಬೇಸಿಗೆ ಶಿಬಿರ ಸಮಾರೋಪದಲ್ಲಿ ದಿನೇಶ್ ನಾಯಕ್ ಅಭಿಮತ

ಶಿಬಿರಗಳಿಂದ ಮಕ್ಕಳ ಸುಪ್ತ ಪ್ರತಿಭೆ ಅನಾವರಣ

ಉಳ್ಳಾಲ: ಹೆಚ್ಚಿನ ಪೋಷಕರು ಮತ್ತು ಶಿಕ್ಷಕರು ಪುಸ್ತಕಗಳಲ್ಲಿ ಇರೋ ವಿಚಾರ ಗಳನ್ನಷ್ಟೆ ಮಕ್ಕಳ ಮನಸ್ಸಿನೊಳಗೆ ತುಂಬಿಸುವುದರಲ್ಲಿ ನಿರತರಾಗಿರುತ್ತಾರೆ.ಬಿಡುವಿಲ್ಲದ ಕಲಿಕೆಯಲ್ಲಿ ಮಕ್ಕಳ ಮನಸ್ಸಿನೊಳಗಿರುವ ವಿಶೇಷ ಪ್ರತಿಭೆಗಳನ್ನ ಹೊರ ತರುವ ಕೆಲಸ ನಡೆಯುತ್ತಿರುವುದು ತೀರಾ ಕಡಿಮೆ. ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನ ಅನಾವರಣಗೊಳಿಸಲು ಬೇಸಿಗೆ ಶಿಬಿರಗಳು ಪರಿಣಾಮಕಾರಿ ಆಗಿವೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಳ್ಳಾಲ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ದಿನೇಶ್ ನಾಯಕ್ ಅಭಿಪ್ರಾಯಪಟ್ಟರು.

ಕುಂಪಲದ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್, ರೋಟರಿ ಕ್ಲಬ್ ಮಂಗಳೂರು, ರೋಟರಿ ಸಮುದಾಯ ದಳ ಕುಂಪಲ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಂಪಲ ಇದರ ಸಹಭಾಗಿತ್ವದಲ್ಲಿ ಚಿತ್ತಾರ ಪ್ರತಿಷ್ಠಾನ ಪಿಲಾರು ಇವರ ಸಹಯೋಗದೊಂದಿಗೆ ಆರು ದಿನಗಳ ಕಾಲ ನಡೆದ 'ಚಿಗುರು 2026' ಬೇಸಿಗೆ ಶಿಬಿರದ ಪ್ರಯುಕ್ತ ಭಾನುವಾರದಂದು ಕುಂಪಲದ ಕೇಸರಿ ಮಿತ್ರವೃಂದ ಸಭಾಭವನದಲ್ಲಿ ನಡೆದ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಗಳನ್ನು ಗುರುತಿಸಿದಾಗ ಆ ಪ್ರತಿಭೆಗೆ ಸೂಕ್ತ ಸಮಯದಲ್ಲಿ ಅಗತ್ಯ ಪ್ರೋತ್ಸಾಹ, ತರಬೇತಿಗಳು ಲಭಿಸಿದಲ್ಲಿ ವಿದ್ಯಾರ್ಥಿಗಳು ಕಲಿಕೆ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲೂ ಸಾಧಿಸಲು ಸಾಕಷ್ಟು ಅವಕಾಶಗಳು ಲಭಿಸುತ್ತವೆಯೆಂದರು.



ಕಾರ್ಯಕ್ರಮದಲ್ಲಿ ಸಂವಿಂಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಪ್ರಯುಕ್ತ ಅಂಬೇಡ್ಕರ್ ಸಂಸ್ಮರಣೆ ನಡೆಯಿತು. ಕುಂಪಲ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಚಂದ್ರಕಲಾ ಅವರು ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಬಗ್ಗೆ ಶಿಬಿರಾರ್ಥಿ ಮಕ್ಕಳಿಗೆ ಉಪನ್ಯಾಸ ನೀಡಿದರು.

ರಾಷ್ಟ್ರೀಯಸ್ವಯಂಸೇವಕಸಂಘದಉಳ್ಳಾಲ ತಾಲೂಕು ಪರ್ಯಾವರಣ ಗತಿವಿಧಿಯ ತಾಲೂಕು ಸಂಯೋಜಕ ಮನೋಹರ ಗಟ್ಟಿ ಕುಂಪಲ ಉಪನ್ಯಾಸ ನೀಡಿದರು. ಶಿಬಿರ ನಡೆಸಿಕೊಟ್ಟ ಚಿತ್ತಾರ ಪ್ರತಿಷ್ಠಾನದ ಸಂಚಾಲಕ ನವೀನ್ ಪಿಲಾರು ಅವರನ್ನ ವೇದಿಕೆಯಲ್ಲಿ ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳು ಮತ್ತು ಶಿಬಿರಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಯಿತು. ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಅಧ್ಯಕ್ಷರಾದ ಸುಧಾಕರ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಯೋಧ ನಾಗರಾಜ್ ಗಟ್ಟಿ ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಮಾತೃ ಮಂಡಳಿ ಅಧ್ಯಕ್ಷೆ ದಿವ್ಯಾ ರಾಕೇಶ್, ರಾಷ್ಟ್ರೀಯ ಸ್ವಯಂಸೇವಕ ಸಂಘ ಮಂಗಳೂರು ಗ್ರಾಮಾಂತರ ಜಿಲ್ಲೆಯ ಸಾಮರಸ್ಯ ಗತಿವಿಧಿಯ ಜಿಲ್ಲಾ ಸಹ ಸಂಯೋಜಕ್ ಭರತ್ ಮಂಜನಾಡಿ ಮೊದಲಾದವರು ಉಪಸ್ಥಿತರಿದ್ದರು. ಸಮೃದ್ಧಿ ಶೆಟ್ಟಿ ಸ್ವಾಗತಿಸಿ, ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ನಾರಾಯಣ ಕುಂಪಲ ನಿರೂಪಿಸಿದರು. ದಿಶಾ ವಂದಿಸಿದರು.

ಸೂಡದಿಂದ ರಾಜ್ಯದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್‌ಗೆ ಮನವಿ

ನದಿಗೆ ಸೇರುವ ತ್ಯಾಜ್ಯ ಸಂಸ್ಕರಿಸಲು ಯೋಜನೆ

ಸುಳ್ಯ: ನದಿಗೆ ಸೇರುವ ತ್ಯಾಜ್ಯಗಳನ್ನು ತಂತ್ರಜ್ಞಾನ ಅಳವಡಿಸಿ ಸಂಸ್ಕರಿಸುವ ಯೋಜನೆ ಅನುಷ್ಠಾನಕ್ಕೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಭೈರತಿ ಸುರೇಶ್ ಅವರಿಗೆ ಸುಳ್ಯ ನಗರ ಯೋಜನಾ ಪ್ರಾಧಿಕಾರ (ಸೂಡ) ಅಧ್ಯಕ್ಷ ಕೆ.ಎಂ. ಮುಸ್ತಫ ಮನವಿ ಮಾಡಿದರು.

ಮಲಿನವಾಗುತ್ತಿದೆ ನದಿ

ಸುಳ್ಯ ನಗರವು ಎತ್ತರ, ತಗ್ಗುಗಳಿಂದ ಕೂಡಿದ ಪ್ರದೇಶವಾಗಿದ್ದು ನಗರ ವ್ಯಾಪ್ತಿ ಯುದ್ದಕ್ಕೂ ಪಯಶ್ವಿನಿ ನದಿ, ಕಂದಕ, ಹೊಳೆ, ಪಳ್ಳ ಹಳ್ಳ ಹರಿದು ಹೋಗುವ ವಿಶಿಷ್ಟ ಭೋಗೋಳಿಕ ಹಿನ್ನಲೆಯ ಪ್ರದೇಶವಾಗಿರುತ್ತದೆ. ಚರಂಡಿ, ಕಾಲುವೆಗಳಲ್ಲಿ ಹರಿಯುವ ಮಲಿನ ನೀರುಗಳು ಅಲ್ಲಲ್ಲಿ ಹೊಳೆಗೆ ಸೇರುತ್ತಿದ್ದು ಸದ್ರಿ ತ್ಯಾಜ್ಯಗಳು ನದಿಗೆ ಸೇರುವ ನಾಲ್ಕೈದು ಕಡೆಗಳಲ್ಲಿ ತಂತ್ರಜ್ಞಾನದಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಕಡಿಮೆ ಜಾಗದಲ್ಲಿ ನಿರ್ಮಿಸುವ ಮಿನಿ ಪ್ಲಾಂಟ್, ಶುದ್ದೀಕರಣ ಘಟಕಗಳನ್ನು ಸ್ಥಾಪಿಸಲು ಅನುದಾನ ಒದಗಿಸಿ ಕಾಮಗಾರಿ ಅನುಷ್ಠಾನಗೊಳಿಸುವಂತೆ ಮನವಿಯಲ್ಲಿ ವಿನಂತಿಸಲಾಗಿದೆ.

ಯೋಜನೆಗೆ ಸೇರ್ಪಡೆಗೊಳಿಸಿ

ಈ ಯೋಜನೆಗಳು ಈಗಾಗಲೇ ಕೆಯುಡಬ್ಲ್ಯೂಎಸ್ ಮಾರ್ಗದರ್ಶನದಲ್ಲಿ ಕೆಯುಐಡಿಎಫ್‌ಸಿ ಮೂಲಕ ಬೇರೆ ಬೇರೆ



ನಗರಗಳಲ್ಲಿ ಅನುಷ್ಠಾನಗೊಳ್ಳುತ್ತಿದ್ದು ಇದೇ ಮಾದರಿಯ ಯೋಜನೆ ಶಿಕ್ಷಣ ಕಾಶಿ ಎನಿಸಿಕೊಂಡಿರುವ, ರಬ್ಬರ್, ಅಡಿಕೆ ಮೊದಲಾದ ವಾಣಿಜ್ಯ ಕೇಂದ್ರ, ಪ್ರವಾಸಿ ತಾಣ ಕೊಡಗು ಜಿಲ್ಲೆ, ಕೇರಳ ರಾಜ್ಯದ ಗಡಿ ಪ್ರದೇಶವಾಗಿರುವ ಸುಳ್ಯ ನಗರಕ್ಕೆ ಅತೀ ಅಗತ್ಯವಾಗಿರುತ್ತದೆ ಎಂದು ಸಚಿವರಿಗೆ ಕೆ.ಎಂ. ಮುಸ್ತಫ ಮನವರಿಕೆ ಮಾಡಿಕೊಟ್ಟರು.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ಈ ನೆಟ್ ವರ್ಕ್‌ನಲ್ಲಿ ಸುಳ್ಯ ನಗರವನ್ನು ಸೇರಿಸಲು ಕ್ರಮ ವಹಿಸುವುದಾಗಿ ಮತ್ತು ಈ ಬಗ್ಗೆ ಪರಿಶೀಲಿಸಲು ತಜ್ಞರ ತಂಡವನ್ನು ಕಳುಹಿಸುವುದಾಗಿ ತಿಳಿಸಿದರು.

ಕಡಬ ಪ.ಪಂ. ಅಭಿವೃದ್ಧಿಗೆ ಮನವಿ

ಕಡಬ: ಕಡಬ ಪ.ಪಂ. ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ರಾಜ್ಯ ಸರಕಾರದಿಂದ ವಿಶೇಷ ಅನುದಾನ ಒದಗಿಸಬೇಕು ಎಂದು ಕಡಬ ಪಟ್ಟಣ ಪಂಚಾಯಿತಿ ವತಿಯಿಂದ ನಗರಾಭಿವೃದ್ಧಿ ಸಚಿವ ಸುರೇಶ್ ಬಿ.ಎಸ್.ಅವರಿಗೆ ಮನವಿ ಸಲ್ಲಿಸಲಾಯಿತು. ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 200 ಕೋ.ರೂ. ಅನುದಾನದ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಲು ಆಗಮಿಸಿದ್ದ ನಗರಾಭಿವೃದ್ಧಿ ಸಚಿವ ಭೈರತೀ ಸುರೇಶ್ ಅವರಿಗೆ ಕಡಬ ಪ.ಪಂ. ಅಧ್ಯಕ್ಷೆ ತಮನ್ನಾ ಜಬೀನ್ ಅವರು ಮನವಿ ಸಲ್ಲಿಸಿದರು. ಮನವಿಗೆ ಪೂರಕವಾಗಿ ಸ್ಪಂದಿಸಿದ ಸಚಿವರು ಅನುದಾನ ನೀಡುವ ಭರವಸೆ ನೀಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಉಷಾ ಅಂಚನ್, ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್ ಪಿ.ಕೆ., ಸಯ್ಯದ್ ಇಕ್ಬಾಲ್ ಇದ್ದರು.

ಜ್ಞಾನ ವಿಕಾಸಕ್ಕೆ ಬೇಸಿಗೆ ಶಿಬಿರಗಳು ಪೂರಕ: ಮಮತಾ ಗಟ್ಟಿ ಅಭಿಪ್ರಾಯ



ಮಂಗಳೂರು: ತುಳು ಜನಪದ ಕಥೆಗಳನ್ನು, ತುಳುನಾಡಿನ ಆಟ ಕೂಟಗಳನ್ನು ಮಕ್ಕಳಿಗೆ ಪರಿಚಯಿಸಿದ 'ತೆಲಿಕೆ ನಲಿಕೆ' ಮಕ್ಕಳ ಶಿಬಿರವು ಒಳ್ಳೆಯ ಪ್ರಯತ್ನ ಹಾಗೂ ನಮ್ಮ ಮಣ್ಣಿನ ಕಂಪನ್ನು ಈ ಶಿಬಿರದಲ್ಲಿ ಮಕ್ಕಳು ಅನುಭವಿಸಲು ಸಾಧ್ಯವಾಗಿರುವುದು ಸಂತಸದ ವಿಚಾರ ಎಂದು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಹೇಳಿದ್ದಾರೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಉರ್ವಾಸ್ಟೋರಿನ ತುಳು ಭವನದಲ್ಲಿ ಹಮ್ಮಿಕೊಂಡ 1 ವಾರಗಳ ಅವಧಿಯ 'ತೆಲಿಕೆ ನಲಿಕೆ' ಮಕ್ಕಳ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಅತಿಥಿಯಾಗಿ ಪಾಲ್ಗೊಂಡ ಬೃಂದಾವನ ಯೋಗ ಮತ್ತು ನೇಚರ್ ಕೇರ್ ಸಂಸ್ಥೆಯ ಅಧ್ಯಕ್ಷೆ ಡಾ. ಶಾರದಾ ಬಂಗೇರ ಅವರು ಮಾತನಾಡಿ, ಮಕ್ಕಳ ಶಿಬಿರಗಳು ಬೇಸಿಗೆಯಲ್ಲಿ ಮಕ್ಕಳ ಆರೋಗ್ಯದ ವಿಚಾರಗಳ ಬಗ್ಗೆ ಕೂಡ ಗಮನ ಹರಿಸಬೇಕು ಎಂದು ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿದ್ದರು. ತೆಲಿಕೆ ನಲಿಕೆ ಶಿಬಿರದ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ ರಂಗ ಕಲಾವಿದ ವಿನೋದ್ ಶೆಟ್ಟಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಅಕಾಡೆಮಿ ಸದಸ್ಯೆ ಅಕ್ಷಯ ಆರ್ .ಶೆಟ್ಟಿ ನಿರೂಪಿಸಿ, ವಂದಿಸಿದರು. ಶಿಬಿರಾರ್ಥಿಗಳು ತುಳು ಹಾಡು, ತುಳು ಕಥೆ, ತುಳು ರೂಪಕಗಳನ್ನು ಪ್ರಸ್ತುತ ಪಡಿಸಿದರು.

ಬಾರೆಕಾಡು ಕ್ರಾಸ್‌ನಲ್ಲಿ ನಿರ್ಮಾಣಗೊಂಡ ನೂತನ ರೋಟರಿ ತಂಗುದಾಣ ಉದ್ಘಾಟನೆ



ಬಂಟ್ವಾಳ: ಇಲ್ಲಿನ ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್ ವತಿಯಿಂದ ಬಂಟ್ವಾಳ–ಮೂಡುಬಿದ್ರೆ ರಸ್ತೆ ನಡುವಿನ ಬಾರೆಕಾಡು ಕ್ರಾಸ್ ಎಂಬಲ್ಲಿ ರೂ 1.30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ ಬಿರೋಟರಿ ಬಸ್ ತಂಗುದಾಣವನ್ನು ರೋಟರಿ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ. ಅವರು ಲೋಕಾರ್ಪಣೆಗೊಳಿಸಿದರು.

ಮಂಗಳೂರು ಧರ್ಮಗುರು ಜೆರಾಲ್ಡ್ ಲೋಬೋ ಆಶೀರ್ವಚನ ನೀಡಿದರು. ಅಮ್ಟಾಡಿ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷ ವಿಜಯ ಕುಮಾರ್, ಸಹಾಯಕ ಗವರ್ನರ್ ಉಮೇಶ್ ರಾವ್ ಮಿಜಾರ್, ಪ್ರಮುಖರಾದ ರಿತೇಶ್ ಬಾಳಿಗಾ, ಡಾ.ಶಿವಪ್ರಸಾದ್ ಹಾಜರಿದ್ದರು. ಕ್ಲಬ್‌ನ ವಲಯ ಸೇನಾನಿ ರಾಮಚಂದ್ರ ಶೆಟ್ಟಿಗಾರ್, ಮಾಜಿ ಅಧ್ಯಕ್ಷ ಆಂಟೋನಿ ಸಿಕ್ವೇರಾ, ರಾಘವೇಂದ್ರ ಭಟ್, ಶ್ರುತಿ ಮಾಡ್ತಾ, ಎಂ. ಪದ್ಮರಾಜ ಬಲ್ಲಾಳ್ ಮಾವಂತೂರು, ಪ್ರಮುಖರಾದ ಕೆ.ರಮೇಶ್ ನಾಯಕ್ ರಾಯಿ, ಸೆಬೆಸ್ಟಿನ್ ಮಿನೇಜಸ್, ಅರುಣ್ ಮಾಡ್ತಾ, ಪ್ರೀತಂ ರಾಡ್ರಿಗಸ್, ಸೆರಾಲ್ಡ್ ಕ್ರಾಸ್ತ, ಸುಧೀರ್ ಕುಮಾರ್, ಗೀತಾ ಪಿ.ಬಲ್ಲಾಳ್, ಪ್ರೀತಾ ಸಿಕ್ವೇರಾ, ಸುರ್ಯುನ್ ವಾಸ್, ಡಾ. ಕ್ಲಾರೆಟ್ ಡಿಸೋಜ, ಲವಿನಾ ಶಲ್ಡಾ ಮತ್ತಿತರರು ಇದ್ದರು. ಕ್ಲಬ್‌ನ ಅಧ್ಯಕ್ಷ ವಿಜಯ ಫೆರ್ನಾಂಡಿಸ್ ಸ್ವಾಗತಿಸಿ, ಕಾರ್ಯದರ್ಶಿ ಮೋಹನ್ ಕೆ. ಶ್ರೀಯಾನ್ ರಾಯಿ ವಂದಿಸಿದರು. ನಿಕಟಪೂರ್ವ ಅಧ್ಯಕ್ಷ ಸುರೇಶ್ ಶೆಟ್ಟಿ ಸಿದ್ದಕಟ್ಟೆ ನಿರೂಪಿಸಿದರು.



ಬಿಜೆಪಿ ಪುತ್ತೂರು ಗ್ರಾಮಾಂತರ ಮಂಡಲದ ವತಿಯಿಂದ ಏ.25, 26ರಂದು ನಡೆಯುವ ಪ್ರಶಿಕ್ಷಣ ವರ್ಗ ಹಾಗೂ ಪಕ್ಷ ಸಂಘಟನೆಯ ಇನ್ನಿತರ ಕಾರ್ಯಕ್ರಮಗಳ ಬಗ್ಗೆ ವಿಶೇಷ ಕಾರ್ಯಾಗಾರ ಪುತ್ತೂರು ಸಹಕಾರ ಜ್ಯೋತಿ ಸಭಾಭವನದಲ್ಲಿ ನಡೆಯಿತು. ಪುತ್ತೂರು ಬಿಜೆಪಿ ಮಂಡಲ ಪದಾಧಿಕಾರಿಗಳು ಹಾಗೂ ಪ್ರಮುಖರು ಮತ್ತು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.



ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಉತ್ಸವದ ಅಂಗವಾಗಿ ಸಾಂಸ್ಕೃತಿಕ ವೇದಿಕೆಯಲ್ಲಿ ಖ್ಯಾತ ಕಲಾವಿದ ಶರತ್ ಹಳೆಯಂಗಡಿ ಬಳಗದವರಿಂದ ಗಿಟಾರ್ ವಾದನ ನಡೆಯಿತು.

ಕುಲಶೇಖರ ಪದವು ಶ್ರೀ ಶನೈಶ್ಚರ ಮಹಾಗಣಪತಿ, ದುರ್ಗಾದೇವಿ ದೇವಸ್ಥಾನದ ಬಿಂಬ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ

ನೃತ್ಯ ಭಜನೆ, ವಾದ್ಯ ಮೇಳಗಳೊಂದಿಗೆ ಹಸಿರು ಹೊರೆಕಾಣಿಕೆ ಮೆರವಣಿಗೆ

ಮಂಗಳೂರು: ಹಿಂದೂ ಯುವಸೇನೆ ಪದವು ಶಾಖೆ, ಶ್ರೀ ಶನೈಶ್ಚರ ಪೂಜಾ ಸಮಿತಿ ಟ್ರಸ್ಟ್‌ನಿಂದ ಕುಲಶೇಖರ ಪದವು ವ್ಯಾಪ್ತಿಯಲ್ಲಿ ನಿರ್ಮಾಣಗೊಂಡ ಶ್ರೀ ಶನೈಶ್ಚರ ಮಹಾಗಣಪತಿ, ದುರ್ಗಾದೇವಿ ದೇವಸ್ಥಾನದ ಬಿಂಬ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಅಂಗವಾಗಿ ಭಾನುವಾರ ಸಂಭ್ರಮದ ಹೊರೆಕಾಣಿಕೆ ಮೆರವಣಿಗೆ ನಡೆಯಿತು.

ಬೆಳಗ್ಗೆ 10.30ಕ್ಕೆ ಶರವು ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಶ್ರೀ ಶರವು ರಾಘವೇಂದ್ರ ಶಾಸ್ತ್ರಿಗಳು ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು. ಶ್ರೀ ಮಹಾಗಣಪತಿ, ಶ್ರೀ ದುರ್ಗಾದೇವಿ, ಶನೀಶ್ವರ ಶಿಲಾಬಿಂಬಗಳು, ನಿತ್ಯೋಪಯೋಗಿ ಪೂಜಾ ಪರಿಕರಗಳು, ಬ್ರಹ್ಮಕಲಶಕ್ಕೆ ಬೇಕಾದ ಪರಿಕರಗಳು, ದಿನಸಿ ವಸ್ತುಗಳು ಹೊರೆಕಾಣಿಕೆ ಮೆರವಣಿಗೆಯಲ್ಲಿ ಸಾಗಿದವು. ನಾನಾ ದೇವಸ್ಥಾನ, ದೈವಸ್ಥಾನ, ಹಿಂದೂ ಯುವಸೇನೆ ನಾನಾ ಘಟಕಗಳು ಸೇರಿದಂತೆ ನಾನಾ ಸಂಘ–ಸಂಸ್ಥೆಗಳಿಂದ ವಾಹನಗಳಲ್ಲಿ ಹೊರೆಕಾಣಿಕೆ ಸಮರ್ಪಣೆಯಾದವು.



ನಗರದಲ್ಲಿ ಮೆರವಣಿಗೆ

ಶರವು ದೇವಸ್ಥಾನದಿಂದ ವಾಹನದಲ್ಲಿ ಹೊರಟ ಮೆರವಣಿಗೆ, ಬಿಕರ್ನಕಟ್ಟೆ ಕೈಕಂಬದ ಪಾಂಡುರಂಗ ಭಜನಾ ಮಂದಿರದಿಂದ ಭಕ್ತಸಮೂಹದಲ್ಲಿ ಪಾದಯಾತ್ರೆ ಮೂಲಕ ಸಾಗಿತು. ಈ ಸಂದರ್ಭ ನೃತ್ಯ ಭಜನಾ, ಕೊಂಬು, ಚೆಂಡೆ ವಾದ್ಯ ತಂಡಗಳು ಮೆರವಣಿಗೆಗೆ ಶೋಭೆ ನೀಡಿದವು. ಕ್ಷೇತ್ರದಲ್ಲಿ ನಿರ್ಮಾಣವಾದ ಛಾಯಾನಂದನ ಉಗ್ರಾಣದಲ್ಲಿ ವೇದಮೂರ್ತಿ ಎಂ. ಗಿರಿಧರ್ ಭಟ್ ಅವರು ಪೂಜೆ ನೆರವೇರಿಸಿದ ಬಳಿಕ ಹೊರೆಕಾಣಿಕೆ ಮೆರವಣಿಗೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು, ಉಗ್ರಾಣದ ಮೇಲ್ವಿಚಾರಕ ವಿನಯಾನಂದ ಜೋಗಿ ಬರಮಾಡಿಕೊಂಡರು.

ಈ ಸಂದರ್ಭ ದೇವಸ್ಥಾನ ನಿರ್ಮಾಣ ಸಮಿತಿ ಅಧ್ಯಕ್ಷ ಕದ್ರಿ ನವನೀತ ಶೆಟ್ಟಿ, ಗೌರವಾಧ್ಯಕ್ಷರಾದ ಊರ್ಮಿಳಾ ರಮೇಶ್ ಕುಮಾರ್, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಭಾಸ್ಕರ್‌ಚಂದ್ರ ಶೆಟ್ಟಿ, ಹೊರೆಕಾಣಿಕೆ ಸಮಿತಿ ಅಧ್ಯಕ್ಷ ಗಿರಿಧರ್ ಶೆಟ್ಟಿ, ಶ್ರೀ ಶನೈಶ್ಚರ ಪೂಜಾ ಸಮಿತಿ ಅಧ್ಯಕ್ಷ ರಾಮಚಂದ್ರ ಚೌಟ, ಮಾತೃಮಂಡಳಿ ಅಧ್ಯಕ್ಷೆ ವಿಜಯ ಅರುಣ್, ನಿರ್ಮಾಣ ಸಮಿತಿ ಗೌರವಾಧ್ಯಕ್ಷರಾದ ಮೋನಪ್ಪ ಭಂಡಾರಿ, ನಿಕಟಪೂರ್ವ ಕಾರ್ಪೊರೇಟರ್‌ಗಳಾದ ಭಾಸ್ಕರ್ ಕೆ., ಕಿಶೋರ್ ಕೊಟ್ಟಾರಿ, ಶಕೀಲಾ ಕಾವ, ಪ್ರಮುಖರಾದ ಕಿರಣ್ ರೈ ಬಜಾಲ್, ಯಶೋಧರ ಚೌಟ, ವಿಕ್ರಮ್ ಚೌಟ, ವಿಠೋಭ ನಾಗುರಿ, ಪ್ರದೀಪ್ ಕುಮಾರ್ ಕಲ್ಕೂರಾ, ಜಗದೀಶ್ ಶೇಣವ, ರಕ್ಷಿತ್ ಕೊಟ್ಟಾರಿ, ಶರವು ಗಣೇಶ್ ಭಟ್, ಪ್ರವೀಣ್ ಕುಂಪಲ, ಬೇಬಿಕುಮಾರ್, ಸತೀಶ್ ಪೂಜಾರಿ, ದೇವಿಪ್ರಸಾದ್ ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಸುತ್ತ ಮುತ್ತ

ಏ.22-24: ಕುಬೆವೂರು ಶ್ರೀ ಜಾರಂದಾಯ ದೈವಸ್ಥಾನ ನೇಮ

ಮೂಲ್ಕಿ: ಸಮೀಪದ ಕುಬೆವೂರು ಶ್ರೀ ಜಾರಂದಾಯ ದೈವಸ್ಥಾನದಲ್ಲಿ ವರ್ಷಾವಧಿ ನೇಮ ಏ.22ರಿಂದ 24 ರವರೆಗೆ ನಡೆಯಲಿದೆ. ಏ.22 ರಂದು ಸಂಜೆ 5ಕ್ಕೆ ಕುಬೆವೂರುಗುತ್ತಿನಿಂದ ದೈವಸ್ಥಾನಕ್ಕೆ ಭಂಡಾರ ಆಗಮನ, ರಾತ್ರಿ 7ರಿಂದ ಧ್ವಜಾರೋಹಣ, ದೀಪಾರಾ ಧನೆ ಬಲಿ, ಅನ್ನಸಂತರ್ಪಣೆ, ಏ.23ರಂದು ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಶ್ರೀ ಜಾರಂದಾಯ, ಬಂಟ ದೈವದ ನೇಮ, ಏ.24ರಂದು ಬೆಳಿಗ್ಗೆ ಧ್ವಜಾವರೋಹ ಣವಾಗಿ ಕುಬೆವೂರುಗುತ್ತುವಿಗೆ ಭಂಡಾರ ನಿರ್ಗಮನ, ಸಂಜೆ 4ಕ್ಕೆ ಮಾಯಂದಲ ದೈವದ ನೇಮ ನಡೆಯಲಿದೆ.

ಏ.29: ಕೊಳಚಿಕಂಬಳ ಬೊಬ್ಬರ್ಯ ದೈವಸ್ಥಾನ ಪುನರ್ ಪ್ರತಿಷ್ಠೆ, ನೇಮ

ಮುಲ್ಕಿ: ಬಪ್ಪನಾಡು ಗ್ರಾಮದ ಕೊಳಚಿಕಂಬಳದ ಶ್ರೀ ಬೊಬ್ಬರ್ಯ ದೈವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯಲ್ಲಿ ಪುನರ್ ಪ್ರತಿಷ್ಠೆ ಕಲಶಾಭಿಷೇಕ , ನೇಮ ಏ.28ರಿಂದ 29 ರವರೆಗೆ ನಡೆಯಲಿದೆ. ಏ.28ರಂದು ಸಂಜೆ ದೇವತಾ ಪ್ರಾರ್ಥನೆ, ವಾಸ್ತು ಪೂಜೆ, ಧಾರ್ಮಿಕ ವಿಧಿ, ವಿಧಾನಗಳು ಏ.29 ರಂದು ಬೆಳಿಗ್ಗೆ 10 ಕ್ಕೆ ಗಣಪತಿ ಹವನ, ಕಲಶ ಆದಿವಾಸ ಹೋಮ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಮಹಾ ಅನ್ನಸಂತರ್ಪಣೆ, ಸಂಜೆ 5ಕ್ಕೆ ಭಂಡಾರ ಇಳಿದು ಧ್ವಜಾರೋಹಣ, ರಾತ್ರಿ 10ಕ್ಕೆ ಬೊಬ್ಬರ್ಯ ದೈವದ ನೇಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಖಾಸಗಿ ಕೃಷಿ ಕಾಲೇಜು ಆರಂಭಿಸಲು ಅರ್ಜಿ ಆಹ್ವಾನ

ಉಡುಪಿ: ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿ ಇವರ ವತಿಯಿಂದ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಖಾಸಗಿ ಕೃಷಿ ಕಾಲೇಜುಗಳ ಸಂಯೋಜನೆಗಾಗಿ ಆಸಕ್ತಿ ಹೊಂದಿರುವ, ರಾಜ್ಯದ ಸೊಸೈಟಿ ನೊಂದಣಿ ಕಾಯ್ದೆಯಡಿ ನೋಂದಾಯಿಸಲಾದ ಮಂಡಳಿಗಳು, ಸೊಸೈಟಿಗಳು, ಟ್ರಸ್ಟ್‌ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸಂಸ್ಥೆಗಳು ಬಿ.ಎಸ್ಸಿ ಕೃಷಿ, ಬಿ.ಟೆಕ್ ಕೃಷಿ ಇಂಜಿನಿಯರಿಂಗ್, ಬಿ.ಟೆಕ್ ಕೃಷಿ ಬಯೋಟೆಕ್ನಾಲಜಿ, ಬಿ.ಟೆಕ್ ಫುಡ್ ಟೆಕ್ನಾಲಜಿ, ಬಿ.ಎಸ್ಸಿ ಅರಣ್ಯ, ಬಿ.ಎಸ್ಸಿ ಕಮ್ಯೂನಿಟಿ ವಿಜ್ಞಾನ, ಬಿ.ಎಸ್ಸಿ ಫುಡ್ ನ್ಯೂಟ್ರೀಶನ್ ಮತ್ತು ಡಯಟ್ರಿಕ್ಸ್, ಬಿ.ಎಸ್ಸಿ ತೋಟಗಾರಿಕೆ ಮತ್ತು ಬಿ.ಎಸ್ಸಿ ರೇಷ್ಮೆ, ಕೃಷಿ ಪದವಿ ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದು. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿ ಅಫಿಲಿಯೇಶನ್‌ಗಾಗಿ ಕನಿಷ್ಠ ಮಾನದಂಡಗಳನ್ನು www.uahs.edu.in ಜಾಲತಾಣದಲ್ಲಿ ಪ್ರಕಟಿಸಿದ್ದು, ಅಧಿಸೂಚಿಸಿದ ಮಾನದಂಡಗಳಂತೆ ಪ್ರಸಕ್ತ ಶೈಕ್ಷಣಿಕ ಸಾಲಿಗೆ ವಿವಿ ವ್ಯಾಪ್ತಿಯಲ್ಲಿರುವ ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಚಿತ್ರದುರ್ಗ, ಉಡುಪಿ, ದ.ಕ.ಜಿಲ್ಲೆಗಳಲ್ಲಿ ಕಾಲೇಜು ಅಫಿಲಿಯೇಶನ್ ಬಯಸುವ , ಕಾನೂನು ಬದ್ಧ ಶೈಕ್ಷಣಿಕ ಸಂಸ್ಥೆಗಳು ಮೇ 6 ರೊಳಗೆ ಅರ್ಜಿ ಸಲ್ಲಿಸಬಹುದು.

ಅಧ್ಯಕ್ಷರಾಗಿ ಸುದರ್ಶನ್ ಅಬೆರೊಟ್ಟು ಆಯ್ಕೆ

ಬಂಟ್ವಾಳ : ತಾಲೂಕಿನ ನರಿಕೊಂಬು ಗ್ರಾಮದ



ಕೆದ್ದೇಲ್ ಶ್ರೀ ಕಲ್ಲುರ್ಟಿ - ಕಲ್ಕುಡ ಸೇವಾ ಟ್ರಸ್ಟ್ ಇದರ 2026-27 ಸಾಲಿನ ಅಧ್ಯಕ್ಷರಾಗಿ ಸುಧರ್ಶನ್ ಅಬೆರೊಟ್ಟು ಆಯ್ಕೆಯಾಗಿದ್ದಾರೆ. ಉಳಿದಂತೆ ಗೌರವಾಧ್ಯಕ್ಷರಾಗಿ ರಂಜಿತ್ ಕೇದ್ದೆಲ್, ಉಪಾಧ್ಯಕ್ಷರಾಗಿ ಕೇಶವ ಕೇದ್ದೆಲ್, ಕಾರ್ಯದರ್ಶಿಯಾಗಿ ಯಶವಂತ ಗಟ್ಟಿ ಜೊತೆ ಕಾರ್ಯದರ್ಶಿಗಳಾಗಿ ರಮೇಶ್ ದೋಟ, ಕಿರಣ್ ದೋಟ, ಕೋಶಾಧಿಕಾರಿಗಳಾಗಿ ಹರೀಶ್ ಕೇದ್ದೆಲ್, ಲೋಕೇಶ್ ನಿರ್ಮಲ್, ಸಂಘಟನಾ ಕಾರ್ಯದರ್ಶಿಗಳಾಗಿ ಸೀತಾರಾಮ್ ದೋಟ, ಪ್ರತಾಪ್ ದೋಟ, ದಿವಾಕರ ದೋಟ, ಸಂಚಾಲಕರಾಗಿ ಸುಕೇಶ್ ನಿರ್ಮಲ್, ಗೌರವ ಸಲಹೆ ಗಾರರಾಗಿ ಕೊರಗಪ್ಪ ಬಂಗೇರ ಕೆದ್ದೆಲ್, ಜಗನಾಥ ಬಂಗೇರ ನಿರ್ಮಲ್, ಹೊನ್ನಪ್ಪ ಬಂಗೇರ ಕೆದ್ದೆಲ್ ಅವರನ್ನು ಆಯ್ಕೆ ಮಾಡಲಾಯಿತು.

ಸ್ನೇಹ ಸ್ಪರ್ಶ ಯೋಜನೆ

ಕಾಸರಗೋಡು: ಕುತ್ತಿಕೋಲ್ ಗ್ರಾಮ ಪಂಚಾಯತ್‌ನ 9ನೇ ವಾರ್ಡ್ ಸದಸ್ಯ ಮಹೇಶ್ ಗೋಪಾಲ್ ಅವರ ನೇತೃತ್ವದಲ್ಲಿ ಸ್ನೇಹ ಸ್ಪರ್ಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರಿಗೆ ಸಹಾಯಕವಾಗುವ ನಿಟ್ಟಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ದಿನದಂದು ವಾರ್ಡ್ ವ್ಯಾಪ್ತಿಯ ಎಲ್ಲಾ ಆರ್ಥಿಕವಾಗಿ ಹಿಂದುಳಿದ ಜನರನ್ನು ಈ ಯೋಜನೆಯಡಿ ಸೇರ್ಪಡೆಗೊಳಿಸಿ ಸಹಕಾರಿಯಾಗುವಂತೆ ಮಾಡಲಾಗಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶ | ಭೀಮೇಶ್ವರ ಜೋಷಿ ಅಭಿಪ್ರಾಯ

ದೈವಾನುಗ್ರಹ ಇದ್ದರೆ ಮಾತ್ರ ಬದುಕಿನಲ್ಲಿ ಸಾಧನೆ ಸಾಧ್ಯ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವವು ಶುಕ್ರವಾರ ಪ್ರಾರಂಭವಾಗಿದ್ದು ಎರಡನೇ ದಿನವಾದ ಶನಿವಾರ ಧಾರ್ಮಿಕ ಸಭಾ ಕಾರ್ಯಕ್ರಮಗಳ ಉದ್ಘಾಟನೆ ಜರಗಿತು. ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮದರ್ಶಿ ಭೀಮೇಶ್ವರ ಜೋಷಿ ದೀಪಬೆಳಗಿಸಿ ಉದ್ಘಾಟಿಸಿ, ಸಮಾಜದ ಸರ್ವಾಂಗೀಣ ಬೆಳವಣಿಗೆಗೆ ಧಾರ್ಮಿಕ ಶ್ರದ್ಧಾಕೇಂದ್ರಗಳು , ಗುರುಪೀಠಗಳು ಕಾರಣ ಎಂದು ನುಡಿದರು.

ಹೃದಯ ಶುದ್ಧತೆ ಇರಬೇಕು

ದೈವಾನುಗ್ರಹವಿದ್ದರೆ ಮಾತ್ರ ಬದುಕಿನಲ್ಲಿ ಏನನ್ನಾದರೂ ಸಾಧಿಸಲು, ಪಡೆಯಲು ಸಾಧ್ಯವಿದೆ. ತನ್ನನ್ನು ತಾನು ದೇವರಿಗೆ, ಧರ್ಮಕ್ಕೆ, ಗುರುಪೀಠಕ್ಕೆ ಸಮರ್ಪಿಸುತ್ತಾ ಪವಿತ್ರವಾದ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ದೇವರ ಸಾಮೀಪ್ಯ ಪಡೆಯಲು ಹೃದಯ ಶುದ್ಧತೆ ಇರಬೇಕು ಎಂದರು.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ಜಗದ್ಗುರು ಶ್ರೀಮದ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಮ್ ಶ್ರೀ ಚಿತ್ರಾಪುರ ಮಠದ ಶ್ರೀ ವಿದ್ಯೇಂದ್ರ ತೀರ್ಥ ಶ್ರೀಪಾದಂಗಳವರು ಆಶೀರ್ವಚನ ನೀಡಿದರು. ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಳ ಆನುವಂಶಿಕ ಮೊಕ್ತೇಸರ ವಾಸುದೇವ ಭಟ್ ಉಪ್ಪಂಗಳ ಉಪಸ್ಥಿತರಿದ್ದರು. ವಿಶ್ರಾಂತ ಪ್ರಾಂಶುಪಾಲ ಡಾ.ಪಾದೆಕಲ್ಲು ವಿಷ್ಣು ಭಟ್ ಧಾರ್ಮಿಕ ಭಾಷಣ ಮಾಡಿದರು. ಬದಿಯಡ್ಕ ಗ್ರಾ.ಪಂ.ಅಧ್ಯಕ್ಷ ಶಂಕರ ಡಿ., ವಕೀಲ ಎನ್.ಸುಬ್ರಹ್ಮಣ್ಯ ಕೊಳತ್ತಾಯ, ಉದ್ಯಮಿ ಶಿವಶಂಕರ ನೆಕ್ರಾಜೆ ಅಭ್ಯಾಗತರಾಗಿದ್ದರು.

ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ, ಆಡಳಿತ ಮೊಕ್ತೇಸರ, ವಕೀಲ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಕೃಷ್ಣಯ್ಯ ಬಲ್ಲಾಳ್ ಕೊಡ್ಯಮ್ಮೆ ಅರಮನೆ, ಉದ್ಯಮಿ ಮಧುಸೂದನ ಭಟ್ ಬಾಯಾರು, ಡಾ.ಸೂರ್ಯ ಎನ್.ಶಾಸ್ತ್ರಿ ಶ್ರೀರಾಮಪ್ರಸಾದ್ ಮಾತೃಪ್ಪಾಡಿ, ಜಗನ್ನಾಥ ರೈ ಪೆರಡಾಲಗುತ್ತು, ಪದ್ಮನಾಭ ಶೆಟ್ಟಿ ಕಾಟುಕುಕ್ಕೆ, ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಮೊಕ್ತೇಸರರಾದ ಕೃಷ್ಣ ಬದಿಯಡ್ಕ, ಸೀತಾರಾಮ ಏ., ಈಶ್ವರ ಭಟ್ ಪೆರ್ಮುಖ, ಕೃಷ್ಣಕಾಂತ ಶೆಟ್ಟಿ ಪೆರಡಾಲಗುತ್ತು, ವೆಂಕಟ್ರಮಣ ಭಟ್ ಪೆರ್ಮುಖ ಉಪಸ್ಥಿತರಿದ್ದರು. ಡಾ.ಶ್ರೀಶಕುಮಾರ ಪಂಜಿತ್ತಡ್ಕ ನಿರೂಪಿಸಿದರು. ನಿರಂಜನ ರೈ ಪೆರಡಾಲ ಸ್ವಾಗತಿಸಿ, ಉದಯಶಂಕರ ಪಿ.ಎಸ್. ಪೆರಡಾಲ ವಂದಿಸಿದರು.

ಇಂದಿನ ಕಾರ್ಯಕ್ರಮಗಳು

ಪ್ರಾತಃಕಾಲ ಗಣಪತಿ ಹೋಮ, ಶಾಂತಿ ಹೋಮಗಳು, ದಹನ ಪ್ರಾಯಶ್ಚಿತ್ತ, ಅಂಕುರ ಪೂಜೆ, ಮಹಾಪೂಜೆ ನಡೆಯಲಿದೆ. ಸಂಜೆ ಹೋಮ ಕಲಶಾಭಿಷೇಕ, ಅಂಕುರ ಪೂಜೆ, ತ್ರಿಕಾಲ ಪೂಜೆ, ಅನುಜ್ಞಾಕಲಶ ಪೂಜೆ, ಕಲಶಾಧಿವಾಸ ನಡೆಯಲಿದೆ. ನಟರಾಜ ವೇದಿಕೆಯಲ್ಲಿ ಬೆಳಿಗ್ಗೆ 9.30ರಿಂದ ಭಕ್ತಿರಸಮಂಜರಿ, ಶಾಸ್ತ್ರೀಯ ಸಂಗೀತ, ಅಪರಾಹ್ನ 2 ಗಂಟೆಗೆ ಭರತನಾಟ್ಯ, 4 ಕ್ಕೆ ಧಾರ್ಮಿಕ ಸಭೆಯಲ್ಲಿ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಶ್ರೀ ಸುಬ್ರಹ್ಮಣ್ಯ ಮಠ ಇವರಿಂದ ಆಶೀರ್ವಚನ ನಡೆಯಲಿದೆ. ಸಂಜೆ 7ರಿಂದ ಸಂಘನೃತ್ಯ, 7.15ರಿಂದ ಭರತನಾಟ್ಯ, ರಾತ್ರಿ 8 ರಿಂದ ಯಕ್ಷಗಾನ ಬಯಲಾಟ ಪಂಚಕಲ್ಯಾಣ ಪ್ರದರ್ಶನಗೊಳ್ಳಲಿದೆ.

ಕುಂದಾಪುರ ಮೊಗವೀರ ಭವನ: ನೌಕರರ ಸಮಾವೇಶ, ಮಾಹಿತಿ ಕಾರ್ಯಾಗಾರ



ಕುಂದಾಪುರ: ಕುಂದಾಪುರ ತಾಲೂಕು ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ಆಶ್ರಯದಲ್ಲಿ ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಸಹಯೋಗದಲ್ಲಿ ನೌಕರರ ಸಮಾವೇಶ, ಮಾಹಿತಿ ಕಾರ್ಯಾಗಾರ ಕುಂದಾಪುರ ಚಿಕ್ಕನ್ ಸಾಲ್ ರಸ್ತೆಯ ಮೊಗವೀರ ಭವನದಲ್ಲಿ ಶನಿವಾರ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಒಕ್ಕೂಟದ ಅಧ್ಯಕ್ಷ ಕೆ. ರವಿರಾಜ ಹೆಗ್ಡೆ ಉದ್ಘಾಟಿಸಿ, ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಂದಾಪುರ ತಾಲೂಕು ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ ಕೊಮೆ ವಹಿಸಿದ್ದರು. ಶಾಸಕ ಕಿರಣ್ ಕುಮಾರ್ ಕೊಡ್ಗಿ, ಉಡುಪಿ ಸಹಕಾರಿ ಯೂನಿಯನ್ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಮೊದಲಾದವರು ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಒಕ್ಕೂಟದ ನಿರ್ದೇಶಕರಾದ ಪ್ರಕಾಶ್ಚಂದ್ರ ಶೆಟ್ಟಿ, ಮಮತಾ ಆರ್. ಶೆಟ್ಟಿ ಉಪ ವ್ಯವಸ್ಥಾಪಕ ಶಂಕರ ನಾಯ್ಕ್, ಹೆಮ್ಮಾಡಿ ಮೀನುಗಾರರ ಸೇವಾ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಉದಯ ಕುಮಾರ್ ಹಟ್ಟಿಯಂಗಡಿ, ನೌಕರರ ಒಕ್ಕೂಟದ ಅಧ್ಯಕ್ಷೆ ಸುಲೇಖಾ ಎಸ್. ಶೆಟ್ಟಿ , ಸಹಕಾರಿ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನುಷಾ ಕೋಟ್ಯಾನ್, ಟ್ರಸ್ಟ್ ಗೌರವಾಧ್ಯಕ್ಷ ಎಸ್. ದಯಾನಂದ ರಾವ್, ಕೋಶಾಧಿಕಾರಿ ರವಿರಾಜ್ ಬಸ್ರೂರು, ಪದಾಧಿಕಾರಿಗಳು, ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ತಲ್ಲೂರಿನ ದೇವರಾಜ್ ಸ್ವಾಗತಿಸಿ, ಕಾರ್ಯದರ್ಶಿ ಯೋಗೀಶ್ ಬಳ್ಕೂರು ವಂದಿಸಿದರು. ರತ್ನಾಕರ ಶೆಟ್ಟಿ, ಅಶೋಕ್, ಸುಜಾತ ಕಾರ್ಯಕ್ರಮ ನಿರೂಪಿಸಿದರು.

ಏ.24ರಿಂದ ಕಾರಡ್ಕ ಮುಂಡೋಳು ಶ್ರೀ ಕ್ಷೇತ್ರದಲ್ಲಿ ವಾರ್ಷಿಕ ಪಾಟು ಮಹೋತ್ಸವ

- ಏ.24- 28ರವರೆಗೆ ನಡೆಯಲಿದೆ ಕಾರಡ್ಕ ಮುಂಡೋಳು ಶ್ರೀ ಮಹಾ ವಿಷ್ಣು ದುರ್ಗಾಪರಮೇ ಶ್ವರಿ ಶಾಸ್ತಾರ ಕ್ಷೇತ್ರದ ವಾರ್ಷಿಕ ಮಹೋತ್ಸವ
- ಏ.24: ಹೊರೆಕಾಣಿಕೆ ಮೆರವಣಿಗೆ

ಮುಳ್ಳೇರಿಯ: ಕಾರಡ್ಕ ಮುಂಡೋಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರಿ ಶಾಸ್ತಾರ ಕ್ಷೇತ್ರದ ವಾರ್ಷಿಕ ಪಾಟು ಮಹೋತ್ಸವ ಏ.24ರಿಂದ 28ರವರೆಗೆ ಜರಗಲಿದೆ. ಇದರ ಅಂಗವಾಗಿ ಏ.23ರಂದು ಬೆಳಿಗ್ಗೆ ಗಣಪತಿ ಹೋಮ, ಮಧ್ಯಾಹ್ನಮಹಾಪೂಜೆ, ರಾತ್ರಿ 7 ಕ್ಕೆ ದೀಪ ಪ್ರತಿಷ್ಠೆ, ಉಗ್ರಾಣ ತುಂಬಿಸುವುದು, 7.30ಕ್ಕೆ ಅತ್ತಾಳ ಪೂಜೆ ನಡೆಯಲಿದೆ.

ಏ.24ರಂದು ಬೆಳಿಗ್ಗೆ 8 ಗಂಟೆಗೆ ವೀಳ್ಯದೆಲೆ ಅಡಿಕೆ ಕೊಡುವ ಸಂಪ್ರದಾಯ, 10 ಗಂಟೆಗೆ ಧ್ವಜಾರೋಹಣ, ಬಲಿ ಉತ್ಸವ, 11ರಿಂದ ವಿವಿಧ ಪ್ರಾದೇಶಿಕ ಸಮಿತಿ ವತಿಯಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಆಯುಧ ಪೂಜೆ, ಪಾಟುಪೂಜೆ, 11.30ಕ್ಕೆ ತುಲಾಭಾರ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ದೀಪಾರಾಧನೆ, ರಾತ್ರಿ 7 ಗಂಟೆಗೆ ಬಲಿ ಉತ್ಸವ, 9ಕ್ಕೆ ಮಹಾಪೂಜೆ, ಮಂಡಲ ಪೂಜೆ, ಆಯುಧ ಪೂಜೆ, ಪಾಟು, ಪೂರಕ್ಕಳಿ ನಡೆಯಲಿದೆ.

ಏ.25 ಮತ್ತು 26ರಂದು ಬೆಳಿಗ್ಗೆ 6.30ಕ್ಕೆ ಶ್ರೀ ಬಲಿ ಉತ್ಸವ, 7 ಗಂಟೆಗೆ ಅನ್ನ ಸಂತರ್ಪಣೆ, 8.30ಕ್ಕೆ ಪಾಟು, 9.30ಕ್ಕೆ ತುಲಾಭಾರ ಸೇವೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಪಾಟು, ಅನ್ನ ಸಂತರ್ಪಣೆ, ಸಂಜೆ 6ಕ್ಕೆ ದೀಪಾರಾಧನೆ, ಶ್ರೀ ಬಲಿ ಉತ್ಸವ, ರಾತ್ರಿ 8 ಗಂಟೆಗೆ ಮಹಾ ಪೂಜೆ, ಮಂಡಲ ಪೂಜೆ, ಆಯುಧಪೂಜೆ, ಪೂರಕ್ಕಳಿ ನಡೆಯಲಿದೆ.

ಏ.27ರಂದು ಬೆಳಿಗ್ಗೆ6.30ಕ್ಕೆಶ್ರೀ ಬಲಿ ಉತ್ಸವ, 7 ಗಂಟೆಗೆ ಅನ್ನ ಸಂತರ್ಪಣೆ, ಆಯುಧ ಪೂಜೆ, ಕಳತ್ತಿಲರಿ ಪೂಜೆ, 10 ಗಂಟೆಗೆ ನವಕಾಭಿಷೇಕ, ತಲಾಭಾರ, ಮಧ್ಯಾಹ್ನ ಮಹಾಪೂಜೆ, ಪಾಟು, ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ದೀಪಾರಾಧನೆ, ಚೆಂಡೆಮೇಳ, ರಾತ್ರಿ 8.30ಕ್ಕೆ ಮಹಾಪೂಜೆ, ಶ್ರೀಭೂತ ಬಲಿ ಉತ್ಸವ, ಕಟ್ಟೆಪೂಜೆ, ಪುಂಡಿಕಾಯಿ ಅಶ್ವತ್ಥಕಟ್ಟೆಗೆ ದೇವರ ಶೋಭಾಯಾತ್ರೆ, 12 ಗಂಟೆಗೆ ನೃತ್ಯೋತ್ಸವ, ಬಳಿಕ ಶಯನ ಕವಾಟ ಬಂಧನ ನಡೆಯಲಿದೆ. ಏ.28ರಂದು ಬೆಳಗ್ಗೆ 6.30ಕ್ಕೆ ಕವಾಟೋದ್ಘಾಟನೆ, ಕಣಿದರ್ಶನ, 7 ಕ್ಕೆ ಅನ್ನ ಸಂತರ್ಪಣೆ, 9ಕ್ಕೆ ಶ್ರೀ ದೇವರ ಅವಭೃತ ಸ್ನಾನ, ಮಧ್ಯಾಹ್ನ 12 ಕ್ಕೆ ದರ್ಶನ ಬಲಿ, ಬಟ್ಟಲುಕಾಣಿಕೆ, ಧ್ವಜಾವರೋ ಹಣ, ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ. ಮೇ 5ರಂದು ಬೆಳಗ್ಗೆ 9ಕ್ಕೆ ಶ್ರೀ ಧೂಮಾವತಿ ದೈವದ ಕೋಲ ಬಳಿಕ ಶ್ರೀ ಪಡ್ನೈ ಧೂಮಾವತಿ ದೈವದ ಕೋಲ, ಸಂಜೆ 3 ಗಂಟೆಗೆ ಶ್ರೀ ಮೂವಾಳಂಕುಯಿ ಚಾಮುಂಡಿ ದೈವದ ಕೋಲ ನಡೆಯಲಿದೆ.

ಮೂಲ್ಕಿ ಬಪ್ಪನಾಡು ಶ್ರೀ ಕೋಟೆದ ಬಬ್ಬು ದೈವಸ್ಥಾನದಲ್ಲಿ ದೈವದ ನೇಮ



ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ಕೋಟೆದ ಬಬ್ಬು ದೈವಸ್ಥಾನದಲ್ಲಿ ಶ್ರೀ ಕೋಟೆದ ಬಬ್ಬು ಮತ್ತು ತನ್ನಿಮಾನಿಗ ದೈವದ ನೇಮ ಶನಿವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮಧ್ಯಾಹ್ನ ಚಪ್ಪರ ಏರುವ ಕಾರ್ಯಕ್ರಮ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು

ರಾತ್ರಿ ಶ್ರೀ ಕೋಟೆದಬಬ್ಬು ಮತ್ತು ತನ್ನಿಮಾನಿಗ ದೈವದ ನೇಮ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭ ದೈವಸ್ಥಾನಕ್ಕೆ ದೈವದ ಹಾಗೂ ತನ್ನಿಮಾನಿಗ ದೈವದ ಮೂರ್ತಿಯನ್ನು ಗುರಿಕಾರ ರಮೇಶ್ ಹಾಗು ಮಹಿಳಾ ಸದಸ್ಯರಿಂದ ಸಮರ್ಪಣೆ ಕಾರ್ಯ ನಡೆಯಿತು.

ಶ್ರೀಧರ್ ಆಳ್ವ ಸುನಿಲ್ ಆಳ್ವ ಬಪ್ಪನಾಡು ಗುತ್ತು, ದಾಮೋದರ ಎಂ. ಸಾಲ್ಯಾನ್, ದಿನೇಶ್ ದೇವಾಡಿಗ, ರಾಮಚಂದ್ರ ಎಸ್.ಬಂಗೇರ ಹಾಗೂ ಗ್ರಾಮಸ್ಥರು, ಶ್ರೀ ಕೋಟೆದ ಬಬ್ಬು ದೈವಸ್ಥಾನದ ಗುರಿಕಾರರು, ಹತ್ತು ಸಮಸ್ತರು ಹಾಗೂ ಮಹಿಳಾ ಸದಸ್ಯರು, ಬಡಗುಹಿತ್ಲು ಗ್ರಾಮಸ್ಥರು ಉಪಸ್ಥಿತರಿದ್ದರು

ಭಾನುವಾರ ಶ್ರೀ ಧೂಮಾವತಿ ಹಾಗೂ ಬಂಟ ದೈವಗಳ ನೇಮ ನಡೆಯಿತು.



ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಎರಡನೇ ದಿನ ಶನಿವಾರ ಸಂಜೆ ಶ್ರೀ ವಿಷ್ಣುಮೂರ್ತಿ ಮಾತೃಮಂಡಳಿ ಬೇಳ ಇವರಿಂದ ಕೈಕೊಟ್ಟುಕಳಿ ನಡೆಯಿತು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 'ವಿಶ್ವ ಧ್ವನಿ' ದಿನಾಚರಣೆ, ಶಿಕ್ಷಕಿಗೆ ಸನ್ಮಾನ



ಮಡಿಕೇರಿ: ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಿವಿ, ಮೂಗು, ಗಂಟಲು ವಿಭಾಗದಿಂದ 'ನಮ್ಮ ಧ್ವನಿಯ ಆರೈಕೆ' ಎಂಬ ವಿಷಯದಡಿ 'ವಿಶ್ವ ಧ್ವನಿ' ದಿನವನ್ನು ಆಚರಿಸಲಾಯಿತು.

ವೃತ್ತಿಪರ ಧ್ವನಿ ಬಳಕೆದಾರರಲ್ಲಿ ಧ್ವನಿಯ ಆರೋಗ್ಯದ ಮಹತ್ವ ಮತ್ತು ಧ್ವನಿಯ ಆರೈಕೆಯ ಅಗತ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ, ವಾಕ್ ಮತ್ತು ಭಾಷಾ ತಜ್ಞೆ ಡಾ.ದಿವ್ಯಾ ಸೇಠ್ ಅವರು ಧ್ವನಿಯ ಆರೈಕೆ, ಧ್ವನಿಯ ಅಸ್ವಸ್ಥತೆಗಳನ್ನು ಗುರುತಿಸುವುದು ಮತ್ತು ವಿಶೇಷವಾಗಿ ತಮ್ಮ ವೃತ್ತಿಗಳಲ್ಲಿ ಧ್ವನಿ ಹೆಚ್ಚು ಅವಲಂಬಿಸಿರುವ ವ್ಯಕ್ತಿಗಳಲ್ಲಿ ಆರೋಗ್ಯಕರ ಧ್ವನಿ ಕಾಪಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಿದರು.

ಸ್ನಾತಕೋತ್ತರ ಇಎನ್ಟಿ ವಿದ್ಯಾರ್ಥಿನಿ ಡಾ. ಪೂಜಾ, ಧ್ವನಿ ಕೇವಲ ಒಂದು ಪ್ರಮುಖ ಅಂಗವಲ್ಲದೆ, ಮಾನವರನ್ನು ಸುತ್ತಮುತ್ತಲಿನ ಪ್ರಪಂಚದೊಂದಿಗೆ ಅರ್ಥಪೂರ್ಣವಾಗಿ ಸಂಪರ್ಕಿಸಲು ಸ್ವರ ಪೆಟ್ಟಿಗೆ ಹೇಗೆ ಶಕ್ತಗೊಳಿಸುತ್ತದೆ ಎಂಬುದರ ಕುರಿತು ವಿವರಿಸಿದರು. ಕಳೆದ 3 ದಶಕದಿಂದ ಉತ್ಸಾಹದಿಂದ ಸಂಗೀತ ಬೋಧಿಸುತ್ತಿರುವ ಮತ್ತು ತಮ್ಮ ಸಮರ್ಪಣೆ, ಬದ್ಧತೆಯಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತಿರುವ ಖ್ಯಾತ ಸಂಗೀತ ಶಿಕ್ಷಕಿ ವಿದುಷಿ ಸರೋಜಾ ಸುಧಾಕರ್ ಅವರನ್ನು ಸನ್ಮಾನಿಸಲಾಯಿತು.

ಪ್ರಾಂಶುಪಾಲ ಡಾ.ವಿಶಾಲ್ ಕುಮಾರ್ ದೈನಂದಿನ ಜೀವನದಲ್ಲಿ ಧ್ವನಿ ಆರೋಗ್ಯದ ಮಹತ್ವ ಕುರಿತು ಮಾಹಿತಿ ನೀಡಿದರು.

ಇಎನ್ಟಿ ವಿಭಾಗದ ಪ್ರಾಧ್ಯಾಪಕಿ- ಮುಖ್ಯಸ್ಥೆ ಡಾ.ಶ್ವೇತಾ, ಉಪ-ಪ್ರಾಂಶುಪಾಲೆ ಡಾ.ಇಶಾ ರಾವ್, ಸಿಎಓ ರೋಹಿಣಿ ಮತ್ತು ಆರೆಂಓ ಡಾ.ಧನಂಜಯ ಕುಮಾರ್ ಉಪಸ್ಥಿತರಿದ್ದರು. ಡಾ.ಪೂಜಾ ಪ್ರಾರ್ಥಿಸಿ, ಐಶ್ವರ್ಯ- ಪ್ರತೀಕ್ಷಾ ನಿರೂಪಿಸಿದರು. ಇಎನ್ಟಿ ಸಹಾಯಕ ಪ್ರಾಧ್ಯಾಪಕಿ ಡಾ. ನಳಿನಾ ವಂದಿಸಿದರು.

ಯುವ ಸಂಗಮ ಯೂತ್ ಕ್ಲಬ್‌ನ 15ನೇ ವಾರ್ಷಿಕೋತ್ಸವ ಕಾರ್ಯಕ್ರಮ



ಪೆರ್ಲ: ಹಲಸು ಮರದಲ್ಲೇ ಇದ್ದರೆ ಕೊಳೆತು ನಾಶವಾಗುತ್ತದೆ. ಹಲಸನ್ನು ಕೊಯ್ದು ಮೌಲ್ಯವರ್ಧಿತ ಉತ್ಪನ್ನವಾಗಿ ಪರಿವರ್ತಿಸಿದರೆ ಅದರ ಬೇಡಿಕೆ ಹಾಗೂ ಮೌಲ್ಯ ಹೆಚ್ಚುತ್ತದೆ. ಅದೇ ರೀತಿ ಯುವ ಚೈತನ್ಯದ ಸದ್ಬಳಕೆಯಿಂದ ನಮ್ಮ ನಾಡು ಹಾಗೂ ದೇಶ ಅಭಿವೃದ್ಧಿಯಾಗುವುದು ಎಂದು ಪೆರ್ಲ ಶ್ರೀ ಸತ್ಯನಾರಾಯಣ ಶಾಲೆಯ ನಿವೃತ್ತ ಶಿಕ್ಷಕ ಉಮೇಶ್ ಪೆರ್ಲ ಆಶಯ ವ್ಯಕ್ತಪಡಿಸಿದರು.

ಪಡ್ರೆ ವಾಣಿನಗರ ಶಾಲಾ ವಠಾರದಲ್ಲಿ ಗುರುವಾರ ರಾತ್ರಿ ನಡೆದ ಯುವ ಸಂಗಮ ಯೂತ್ ಕ್ಲಬ್‌ನ 15ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಲಬ್‌ನ ಅಧ್ಯಕ್ಷ ರವೀಂದ್ರ ಮಣಿಯಾಣಿ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಜಯ ಮಣಿಯಂಪಾರೆ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸುವ ಸಣ್ಣ ಪುಟ್ಟ ಕಾರ್ಯಕ್ರಮಗಳು ಹಳ್ಳಿಯ ಮಕ್ಕಳ ಬೆಳವಣಿಗೆಗೆ ಪೂರಕವಾಗುತ್ತವೆ. ವಾಣಿನಗರದಲ್ಲಿ ಕಳೆದ 15 ವರ್ಷಗಳಿಂದ ಹಮ್ಮಿಕೊಳ್ಳಲಾಗುತ್ತಿರುವ ಕ್ಲಬ್‌ನ ವಾರ್ಷಿಕೋತ್ಸವವು ಪುಟಾಣಿಗಳು ಸೇರಿದಂತೆ ಮಕ್ಕಳ ಪ್ರತಿಭೆ ಅನಾವರಣಗೊಳಿಸುವ ಜೊತೆಗೆ ಯಕ್ಷಗಾನ ಕಲೆ ಆಸ್ವಾದನೆಯಲ್ಲಿ ಮಕ್ಕಳಲ್ಲಿ ಉತ್ಸಾಹ ಮೂಡಿಸಲಾಗುತ್ತಿದೆ ಎಂದರು.

ಕ್ಲಬ್‌ನ ಸ್ಥಾಪಕಾಧ್ಯಕ್ಷ, ಎಣ್ಮಕಜೆ ಗ್ರಾ.ಪಂ.ನ ಮಾಜಿ ಸದಸ್ಯ ನರಸಿಂಹ ಪೂಜಾರಿ ಎಸ್.ಬಿ. ಮಾತನಾಡಿ, ಊರಿನ ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕ್ಲಬ್ ರಚಿಸಲಾಗಿದೆ. ಪ್ರತಿ ವರ್ಷ ಕ್ಲಬ್ ಕಾರ್ಯಕ್ರಮದಲ್ಲಿ ಊರಿನ ಕೃಷಿಕರು, ನಾಟಿ ವೈದ್ಯರು, ಸಾಧಕರನ್ನು ಗೌರವಿಸಲಾಗುತ್ತಿದೆ ಎಂದರು.

ಭುವನೇಶ್ವರ ಪೊಯ್ಯೆ ಸ್ವಾಗತಿಸಿ, ರವಿ ವಾಣಿನಗರ ವಂದಿಸಿದರು. ಸುಧೀರ್ ನಿರೂಪಿಸಿದರು. ಬಳಿಕ ಮಂಗಳೂರು ಸಸಿಹಿತ್ಲು ಶ್ರೀ ಭಗವತೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯವರಿಂದ ಮುಗುರು 'ಮಲ್ಲಿಗೆ ತುಳು' ಯಕ್ಷಗಾನ ಪ್ರದರ್ಶನಗೊಂಡಿತು.



ನುಳ್ಳಿಪ್ಪಾಡಿ ಶ್ರೀ ದೇವಳದಲ್ಲಿ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಬ್ರಹ್ಮಕಲಶ ಮಹಿಳಾ ಸಮಿತಿಯಿಂದ ಶನಿವಾರ ರಾತ್ರಿ ಮೆಗಾ ತಿರುವಾದಿರ ಜರಗಿತು.



ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಾ.ವಾಣಿಶ್ರೀ ಕಾಸರಗೋಡು ನೇತೃತ್ವದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ವತಿಯಿಂದ 204ನೇ ಸಾಹಿತ್ಯ ಗಾನ ನೃತ್ಯ ವೈಭವ ಕಾರ್ಯಕ್ರಮವು ವಿಜೃಂಭಣೆಯಿಂದ ಜರಗಿತು.

ನಾಳೆ ವಿವೇಕಾನಂದ ಕಾಲೇಜಿನಲ್ಲಿ ಪ್ರಥಮ ಪದವಿ ಪ್ರದಾನ

ಪುತ್ತೂರು: ನಗರದ ವಿವೇಕಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ(ಸ್ವಾಯತ್ತ) ಕಾಲೇಜಿನ 2024-25ನೇ ಶೈಕ್ಷಣಿಕ ವರ್ಷದ ಪದವಿ ಹಾಗೂ 2023-24 ಮತ್ತು 2024-25ನೇ ಶೈಕ್ಷಣಿಕ ವರ್ಷಗಳ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರಥಮ ಪದವಿ ಪ್ರದಾನ ಸಮಾರಂಭ 'ಸಪ್ತಪರ್ಣೋತ್ಸವ' ಕಾರ್ಯಕ್ರಮ ಏ.21ರಂದು ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷತೆಯನ್ನು ವಹಿಸಲಿದ್ದು, ಮುಖ್ಯ ಅಭ್ಯಾಗತರಾಗಿ ಪ್ರಥಮ ಸಪ್ತಪರ್ಣೋತ್ಸವ ಭಾಷಣವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್. ಧರ್ಮ ಮಾಡಲಿದ್ದಾರೆ. ವಿಶೇಷ ಅಭ್ಯಾಗತರಾಗಿ ಕಾಲೇಜ್ ಶಿಕ್ಷಣ ಇಲಾಖೆಯ ಮಂಗಳೂರು ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕಿ



ಡಾ. ಕವಿತಾ ಕೆ.ಆರ್., ಅಭ್ಯಾಗತರಾಗಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ. ಶ್ರೀಪತಿ ಕಲ್ಲೂರಾಯ ಹಾಗೂ ಸಂಚಾಲಕ ಮುರಳಿಕೃಷ್ಣ ಕೆ.ಎನ್. ಭಾಗವಹಿಸಲಿದ್ದಾರೆ.

ರ್‍ಯಾಂಕ್ ಪ್ರದಾನ ಕಾರ್ಯಕ್ರಮ

ವಿವೇಕಾನಂದ ಕಾಲೇಜ್ 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ಪದವಿ ಪರೀಕ್ಷೆಯಲ್ಲಿ ಒಟ್ಟು 8 ರ್‍ಯಾಂಕ್‌ಗಳನ್ನು ಘೋಷಿಸಿದೆ. ಬಿ.ಎ. ವಿಭಾಗದಲ್ಲಿ ವೈಷ್ಣವಿ ಶೆಟ್ಟಿ (ಶೇ.98.62), ಬಿಎಸ್ಸಿ ವಿಭಾಗದಲ್ಲಿ ಧನ್ಯಶ್ರೀ ಸಿ.ಡಿ.(96.17), ಬಿಬಿಎ ವಿಭಾಗದಲ್ಲಿ ತನಿಷಾ ಬಿ.(93.37), ಬಿಕಾಂ ವಿಭಾಗದಲ್ಲಿ ಪ್ರಜ್ಞಾ ಕೆ.(96.65) ಪ್ರಥಮ ರ್‍ಯಾಂಕ್, ಅಮೃತಾ (96.51) ದ್ವಿತೀಯ, ಬಿಸಿಎ ವಿಭಾಗದಲ್ಲಿ ಚೈತ್ರಾ ಯು.ಎಂ.(96.29) ಪ್ರಥಮ, ಮೇಘನಾ (95.82) ದ್ವಿತೀಯ , ದೀಕ್ಷಾ ಬಿ.(94.22) ತೃತೀಯ ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ.

ಸ್ನಾತಕೋತ್ತರ ಪದವಿಯಲ್ಲಿ 2023-24ರ ಸಾಲಿನಲ್ಲಿ ಒಟ್ಟು 4 ರ್‍ಯಾಂಕ್‌ಗಳು ಲಭಿಸಿದ್ದು, ಎಂಕಾಂ ವಿಭಾಗದಲ್ಲಿ ಧನ್ಯಾಶ್ರೀ ಐ.(9.03 ಸಿಜಿಪಿಎ), ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ವಂದನಾ ಎಸ್.ಎಂ.(8.01 ಸಿಜಿಪಿಎ), ಎಂಎಸ್ಸಿ ಗಣಿತಶಾಸ್ತ್ರ ವಿಭಾಗದಲ್ಲಿ ವಿದ್ಯಾ ವಿ.(7.05 ಸಿಜಿಪಿಎ) ಪ್ರಥಮ ರ್‍ಯಾಂಕ್ ಹಾಗೂ ಜೆಎಂಸಿ ವಿಭಾಗದಲ್ಲಿ ಲಾವಣ್ಯ ಎಸ್.(8.66 ಸಿಜಿಪಿಎ) ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಒಟ್ಟು 3 ರ್‍ಯಾಂಕ್‌ಗಳು ಲಭಿಸಿದ್ದು, ಎಂಕಾಂ ವಿಭಾಗದಲ್ಲಿ ಲಾವಣ್ಯ ಕೆ.(8.83 ಸಿಜಿಪಿಎ), ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಮನಸ್ವಿ ಪಿ. (7.57 ಸಿಜಿಪಿಎ), ಜೆಎಂಸಿಯಲ್ಲಿ ಸುಲಕ್ಷಣಾ ಕೆ. (8.22 ಸಿಜಿಪಿಎ) ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ.

ಈ ನಿಟ್ಟಿನಲ್ಲಿ ರ್‍ಯಾಂಕ್ ವಿಜೇತರಿಗೆ ಕಾಲೇಜಿನಲ್ಲಿ ನಡೆಯಲಿರುವ ಸಪ್ತಪರ್ಣೋತ್ಸವ ಪ್ರಥಮ ಪದವಿ ಪ್ರದಾನ ಸಮಾರಂಭದಲ್ಲಿ ರ್‍ಯಾಂಕ್ ಪ್ರಮಾಣ ಪತ್ರವನ್ನು ಪ್ರದಾನ ಮಾಡಲಾಗುವುದು ಹಾಗೂ ದತ್ತಿ ನಿಧಿ ಮತ್ತು ಪ್ರಾವೀಣ್ಯತಾ ಬಹುಮಾನಗಳ ಪ್ರದಾನ ಕಾರ್ಯಕ್ರಮವೂ ಈ ಸಂದರ್ಭ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಮತ್ತು ಪರೀಕ್ಷಾಂಗ ಕುಲಸಚಿವ ಡಾ. ಶ್ರೀಧರ ಎಚ್.ಜಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ತುಳುಕೂಟದಿಂದ ಬಿಸು ಹೊಸ ವರ್ಷಾಚರಣೆ

ಪುತ್ತೂರು: ತುಳುಕೂಟ ಪುತ್ತೂರು ಇದರ ವತಿಯಿಂದ ಪೊಪ್ಯುಲರ್ ಸೆಲೆಬ್ರೇಷನ್ ಮತ್ತು ಜಿ.ಎಲ್.ವನ್ ಮಾಲ್ ಸಹಯೋಗದಲ್ಲಿ ತುಳುವರ ಹೊಸ ವರ್ಷ ಬಿಸು ಆಚರಣೆಯು ಜಿ. ಎಲ್. ವನ್ ಮಾಲ್‌ನಲ್ಲಿ ಜರಗಿತು.

ನಿವೃತ್ತ ಅಧ್ಯಾಪಕ, ಯಕ್ಷಗಾನ ಅರ್ಥದಾರಿ ಹಾಗೂ ಸಾಹಿತಿ ರಾಧಾಕೃಷ್ಣ ಕಲ್ಚಾರ್ ಅವರು ಬಿಸು ಹೊಸವರ್ಷದ ಸಂದೇಶ ನೀಡಿದರು. ಉದ್ಯಮಿ ಜಿ.ಎಲ್. ಬಲರಾಮ ಆಚಾರ್ಯ ಶುಭ ಹಾರೈಸಿದರು. ತುಳುಕೂಟದ ಅಧ್ಯಕ್ಷ ಪ್ಯಾಟ್ರಿಕ್ ಸಿಪ್ರಿಯನ್ ಮಸ್ಕರೇನಸ್ ಅಧ್ಯಕ್ಷತೆ ವಹಿಸಿದ್ದರು.

ಪ್ರೊ. ದತ್ತಾತ್ರೇಯ ರಾವ್ ಬಿಸು ಗೀತೆ ಹಾಡಿದರು. ಕಾರ್ಯದರ್ಶಿ ಡಾ. ರಾಜೇಶ್ ಬೆಜ್ಜಂಗಳ ಅವರು ತುಳುವರ ಹೊಸವರ್ಷ ಹಾಗೂ ಮೊದಲ ತಿಂಗಳಿಗೆ



ಸಂಬಂಧಿಸಿದ ರಸಪ್ರಶ್ನೆ ನಡೆಸಿಕೊಟ್ಟರು. ಜತೆ ಕಾರ್ಯದರ್ಶಿ ನಯನಾ ರೈ ವಂದಿಸಿದರು. ಉಪಾಧ್ಯಕ್ಷೆ ಹೀರಾ ಉದಯ್ ನಿರ್ವಹಿಸಿದರು.

ತುಳುಕೂಟದ ಜತೆ ಕಾರ್ಯದರ್ಶಿ ಪಿ. ಉಲ್ಲಾಸ್ ಪೈ, ಕೋಶಾಧಿಕಾರಿ ರವಿಪ್ರಸಾದ್ ಬಿ.ವಿ., ನಿರ್ದೇಶಕರಾದ ರಮೇಶ್ ಉಳಯ, ಬಿ.ಟಿ. ಮಹೇಶ್ಚಂದ್ರ ಸಾಲಿಯಾನ್, ಹಿರಿಯರಾದ ವೆಂಕಟ್ರಮಣ ಗೌಡ ಕಳುವಾಜೆ, ನಿವೃತ್ತ ಪ್ರಾಂಶುಪಾಲ ಗೋಪಾಲಕೃಷ್ಣ ಉಪಾಧ್ಯಾಯ, ಪುತ್ತೂರು ನಗರಸಭೆಯ ಮಾಜಿ ಅಧ್ಯಕ್ಷ ರಾಜೇಶ್ ಬನ್ನೂರು, ಗಾಯಕ ಚಂದ್ರಶೇಖರ ಹೆಗ್ಡೆ, ಕವಿ ಪಂಕಜ್ ಭಟ್ ಸವಣೂರು, ರಾಧಾಕೃಷ್ಣಎಂ., ವತ್ಸಲಾ ಪಿ. ಶೆಟ್ಟಿ ಅಮಿತಾ ಆರ್. ಶೆಟ್ಟಿ ನುಳಿಯಾಲು, ಸರಿತಾ ಟಿ., ಚಾರ್ವಿ ಬಿ.ಆರ್., ಮಾಲಿನಿ ಕಶ್ಯಪ್, ಎ. ಪದ್ಮನಾಭ ಬಂಗೇರ, ಅನಿಲ್ ಪಾಯಸ್, ಚಿದಾನಂದ್, ಪುನೀತ್, ಯಜ್ಞೇಶ್, ರೋಹಿತ್, ಕೀರ್ತಿ ಎನ್. ಮತ್ತಿತರರಿದ್ದರು.

ಸುತ್ತಮುತ್ತ

ಮುಲ್ಕಿ: ನ.ಪಂ. ಆಸ್ತಿ ತೆರಿಗೆ ಪಾವತಿ: 30ರ ವರೆಗೆ ರಿಯಾಯಿತಿ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಹಾಗೂ ಅನುಭೋಗದಾರರಿಗೆ ಸರ್ಕಾರದ ಆದೇಶದಂತೆ 2026–27ನೇ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು 2026ನೇ ಏಪ್ರಿಲ್ ತಿಂಗಳಲ್ಲಿ ಪಾವತಿ ಮಾಡಿದರೆ ಶೇ. 5ರಷ್ಟು ರಿಯಾಯಿತಿ ನೀಡಲಾಗುತ್ತದೆ. 2026–27ನೇ ಸಾಲಿನ ಆಸ್ತಿ ತೆರಿಗೆ ಪಾವತಿಗೆ ಏ.30ರವರೆಗೆ ಶೇ. 5ರಷ್ಟು ರಿಯಾಯಿತಿ ಇದ್ದು, ಮೇ ಮತ್ತು ಜೂನ್ ತಿಂಗಳಲ್ಲಿ ತೆರಿಗೆ ಪಾವತಿಸಿದರೆ ದಂಡವಿಲ್ಲ, ಜುಲೈ ತಿಂಗಳಿಂದ 2026–27ನೇ ಸಾಲಿನ ಆಸ್ತಿ ತೆರಿಗೆಗೆ ಪ್ರತಿ ತಿಂಗಳಿಗೆ ಶೇ. 2 ರಷ್ಟು ದಂಡ ವಿಧಿಸಲಾಗುವುದು. ಆಸ್ತಿ ತೆರಿಗೆ ಪಾವತಿಸಲು ಬಾಕಿ ಇದ್ದವರು ಕೂಡಲೇ ಪಾವತಿಸತಕ್ಕದ್ದು ಹಾಗೂ ಉದ್ಯಮ ಪರವಾನಗಿಯನ್ನು 2026 –27ನೇ ಸಾಲಿಗೆ ನವೀಕರಿಸುವುದು, ನೀರಿನ ಶುಲ್ಕ ಪಾವತಿಸುವಂತೆ ನಗರ ಪಂಚಾಯತ್ ತಿಳಿಸಿದೆ.

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಹಗಲು ರಥೋತ್ಸವ

ಮುಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮೀ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಹಗಲು ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ಅರ್ಚಕರ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಗಂಟೆ 10:30ಕ್ಕೆ ರಥಾರೋಹಣ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳಿಗೆ ಉಚಿತ ಕಲ್ಲಂಗಡಿ ಹಣ್ಣು, ಕಬ್ಬಿನ ಜ್ಯೂಸ್ ಹಾಗೂ ಮಹಿಳೆಯರಿಗೆ ಬಳೆ ವಿತರಿಸಲಾಗಿತ್ತು ಈ ಸಂದರ್ಭ ಕ್ಷೇತ್ರದ ಧರ್ಮದರ್ಶಿ, ಡಾ. ಯಾಜಿ ನಿರಂಜನ ಭಟ್, ಆಡಳಿತ ಮೊಕ್ತೇಸರ ಎಂ. ಶಶೀಂದ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸಾಮಾಜಿಕ ಕಾಳಜಿಗೆ ವ್ಯಾಪಕ ಪ್ರಶಂಸೆ

ಕೋಟ: ವಡ್ಡರ್ಸೆ ಗ್ರಾಮಪಂಚಾಯತ್ ವ್ಯಾಪ್ತಿಯ ಎಂ.ಜಿ ಕಾಲೇಜಿನ ಸೂರಿಬೆಟ್ಟು ಹೋಗುವ ರಸ್ತೆಯಲ್ಲಿದ್ದ ಬಾರಿ ಪ್ರಮಾಣದ ತ್ಯಾಜ್ಯವನ್ನು ಇಲ್ಲಿನ ಪಂಚಾಯತ್ ಮಾಜಿ ಸದಸ್ಯ ಕೋಟಿ ಪೂಜಾರಿ ತಮ್ಮ ಸ್ವಂತ ಕರ್ಚಿನೊಂದಿಗೆ ತೆರವುಗೊಳಿಸಿದ ಘಟನೆ ಶನಿವಾರ ನಡೆದಿದೆ. ಎಂ.ಜಿ ಕಾಲೇಜಿನ ಸೂರಿಬೆಟ್ಟು ಭಾಗದ ಅರ್ಧ ಕಿ.ಮೀ ರಸ್ತೆಯ ಉದ್ದಕ್ಕೂ ಸಾಕಷ್ಟು ಪ್ರಮಾಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಗಮನಿಸಿದ ಕೋಟಿ ಪೂಜಾರಿ ಸುಮಾರು 180 ಕ್ಕೂ ಅಧಿಕ ಚೀಲ ತ್ಯಾಜ್ಯ ಸ್ವತಃ ತಾವೇ ನಿಂತು ತೆರವುಗೊಳಿಸಿದರು ಈ ಬಗ್ಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದ್ದು ಇವರ ಕಾರ್ಯವನ್ನು ಪರಿಸರಪ್ರೇಮಿಗಳು ಅಭಿನಂದಿಸಿದ್ದಾರೆ. ಕಸವನ್ನು ಕಂಡಕಂಡಲ್ಲಿ ಎಸೆಯದಿರಿ ಇದರಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಪ್ರಸ್ತುತ ತಾಪಮಾನಕ್ಕೆ ಈ ತ್ಯಾಜ್ಯಗಳು ಮನುಕುಲದ ಆರೋಗ್ಯದ ಮೇಲೆ ಬಾರಿ ದುಸ್ಥಿತಿಯನ್ನು ತಂದಿಡಲಿದೆ ಆದಕ್ಕಾಗಿಯೇ ಸ್ವತಃ ನಾನೆ ಸ್ವಂತ ಹಣದಲ್ಲಿ ತೆರವುಗೊಳಿಸಲು ಮುಂದಾಗಿದ್ದೇನೆ ಎಂದು ಪಂಚಾಯತ್ ಮಾಜಿ ಹಿರಿಯ ಸದಸ್ಯ ಕೋಟಿ ಪೂಜಾರಿ ಹೇಳಿದರು.

ಎಸ್‌ಡಿಎಂ ವಿದ್ಯಾರ್ಥಿಗಳಿಂದ ಸಿನೆಮಾ ನಿರ್ಮಾಣ

ಬೆಳ್ತಂಗಡಿ: ನಗರ ಪ್ರದೇಶದಲ್ಲಿ ಮಾತ್ರ ಸೀಮಿತವಾಗದೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳೂ ಸಿನಿಮಾ ಮಾಡಲು ಶಕ್ತರು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿಗೆ ತಕ್ಕಂತೆ ಕಾಲೇಜು ತರಬೇತಿ



ನೀಡಿರುವುದೇ ಸಿನಿಮಾ ನಿರ್ಮಾಣಕ್ಕೆ ಕಾರಣವಾಗಿದೆ. ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳನ್ನು ಅಳವಡಿಸಿ ಅವಕಾಶ ಕಲ್ಪಿಸಿಕೊಡುತ್ತಿದೆ. ಬಿ ವೋಕ್ ಹೊಸ ವಿಭಾಗದಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ ಎಂದು ಎಸ್. ಡಿ.ಎಂ.ಕಾಲೇಜಿನ ಪ್ರಾಚಾರ್ಯ ಪ್ರೊ. ವಿಶ್ವನಾಥ ಪಿ. ಹೇಳಿದರು.

ಅವರು ಎಸ್.ಡಿ.ಎಂ. ಕಾಲೇಜಿನ ಸೆಮಿನಾರ್ ಹಾಲ್ ನಲ್ಲಿ ಏರ್ಪಡಿಸಲಾದ ಅವ್ಯಾಹತ ಎಂಬ ಕಿರು ಚಿತ್ರ ದ ಪ್ರೀಮಿಯರ್ ಶೋ ಸಂದರ್ಭ ಮಾತನಾಡಿದರು.

ವಿಭಾಗ ಮುಖ್ಯಸ್ಥ ಮಾಧವ ಹೊಳ್ಳ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ಅತಿ ಕಡಿಮೆ ವೆಚ್ಚದಲ್ಲಿ ಉನ್ನತ ಗುಣಮಟ್ಟದ ಚಿತ್ರ ನಿರ್ಮಾಣ ಬಗ್ಗೆ ಉಜಿರೆ ಎಸ್‌ಡಿಎಂ ಕಾಲೇಜಿನ ಬಿ ವೋಕ್ ಡಿಜಿಟಲ್ ಮೀಡಿಯಾ ಮತ್ತು ಫಿಲಂ ಮೇಕಿಂಗ್ ವಿಭಾಗ ಕಳೆದ 2019ರಲ್ಲಿ ಪ್ರಾರಂಭಗೊಂಡು ಇದುವರೆಗೆ 5 ಬ್ಯಾಚ್‌ಗಳು ಕೋರ್ಸ್ ಪೂರ್ಣಗೊಳಿಸಿದ್ದು ಡಿಜಿಟಲ್ ಮಾಧ್ಯಮ ಮತ್ತು ಸಿನಿಮಾ ನಿರ್ಮಾಣದ ವಿಷಯಗಳನ್ನು ಪ್ರಾಯೋಗಿಕವಾಗಿ ಅಧ್ಯಯನ ನಡೆಸಿ ರಾಜ್ಯದ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಪಡೆದಿರುವುದು ಹೆಮ್ಮೆಯ ವಿಚಾರ ಎಂದು ಹೇಳಿದರು.

ಲೋಹಿತ್ ಎಸ್. ಕಳೆಂಜ ನಿರ್ದೇಶನದಲ್ಲಿ ಪ್ರಜ್ವಲ್ ಗೌಡ ಅವರ ಛಾಯಾಗ್ರಹಣ,ಯೋಗೀಶ್ ಅವರ ನಿರ್ವಹಣೆ, ಶರತ್ ಅವರ ವಿನ್ಯಾಸ, ತರುಣ್ ಮತ್ತು ಸಹನಾ ಅವರ ಮಾರ್ಕೆಟಿಂಗ್ ಕಾರ್ಯದಲ್ಲಿ ಸಹಕರಿಸಿದ್ದಾರೆ ಎಂದರು. ಪದವಿ ಮಟ್ಟದ ವಿದ್ಯಾರ್ಥಿಗಳು ಕನಿಷ್ಠ ವೃತ್ತಿಪರರ ಸಹಕಾರದೊಂದಿಗೆ ಫೀಚರ್ ಫಿಲಂ ನಿರ್ಮಿಸಿರುವುದು ಗಮನಾರ್ಹ ಸಾಧನೆಯಾಗಿದೆ. ವಿಭಾಗದ 6 ವಿದ್ಯಾರ್ಥಿಗಳು 3 ತಿಂಗಳ ಅಲ್ಪಾವಧಿಯಲ್ಲಿ 45 ನಿಮಿಷದ ಕಿರುಚಿತ್ರವನ್ನು ರೂ 6000 ವೆಚ್ಚದಲ್ಲಿ ನಿರ್ಮಿಸಿ ದಾಖಲೆ ನಿರ್ಮಿಸಿದ್ದಾರೆ ಎಂದು ವಿದ್ಯಾರ್ಥಿಗಳ ಕಾರ್ಯವನ್ನು ಮಾಧವ ಹೊಳ್ಳ ಅವರು ಪ್ರಶಂಸಿಸಿದರು.

ಸಿಲಿಕಾನ್ ಬೀಚ್ ಪ್ರೋಗ್ರಾಂನಿಂದ ಬೇಸ್ ಕ್ಯಾಂಪ್‌ಗೆ ಚಾಲನೆ | ಡಾ.ಭರತ್ ಶೆಟ್ಟಿ ಬಣ್ಣನೆ

ಮಂಗಳೂರು ನಗರ ಆರೋಗ್ಯ, ಮೂಲಸೌಕರ್ಯದ ಹಬ್

ಮಂಗಳೂರು: ಶಿಕ್ಷಣ ಹಬ್ ಆಗಿರುವ ಮಂಗಳೂರು ಆರೋಗ್ಯ ಹಾಗೂ ಮೂಲಭೂತ ಸೌಕರ್ಯಗಳ ಹಬ್ ಕೂಡಾ ಆಗಿದೆ. ಮರಳಿ ಊರಿಗೆ ಅಭಿಯಾನದ ಮೂಲಕ ಈಗಾಗಲೇ ವಿದೇಶಗಳಲ್ಲಿ ಸ್ಟಾರ್ಟ್‌ಅಪ್ ಗಳು ಹಾಗೂ ಉದ್ದಿಮೆಗಳನ್ನು ಹೊಂದಿರುವವರು ಮರಳಿ ಮಂಗಳೂರಿಗೆ ಬರಲು ಬಯಸುತ್ತಿದ್ದಾರೆ. ಅಂತಹವರಿಗೆ ಈ ಬೇಸ್‌ಕ್ಯಾಂಪ್ ಸಹಕಾರ ನೀಡಲಿದೆ ಎಂದು ಶಾಸಕ ಡಾ.ಭರತ್ ಶೆಟ್ಟಿ ಹೇಳಿದರು.

ರಾಜ್ಯದ ಕಂಪನಿಗಳಿಗೆ ಮಾರ್ಗದರ್ಶನ

ಕರಾವಳಿ ಕರ್ನಾಟಕದಲ್ಲಿ ನ್ಯಾನೋ ಜಿಸಿಸಿ ಹಾಗೂ ಉಪ ಕಚೇರಿಗಳನ್ನು ಸ್ಥಾಪಿಸಲು ಮುಂದಾಗುವ ಬಹುರಾಷ್ಟ್ರೀಯ, ದೇಶೀಯ ಹಾಗೂ ರಾಜ್ಯದ ಕಂಪನಿಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಕೊಟ್ಟಾರದ ವರ್ಕ್‌ವರ್ಕ್ ಟ್ರಿಯಾಂಗಲ್‌ನಲ್ಲಿ ಶನಿವಾರ ಅವರು ಸಿಲಿಕಾನ್ ಬೀಚ್ ಪ್ರೋಗ್ರಾಂ ವತಿಯಿಂದ ಆರಂಭಿಸಲಾಗಿರುವ ಬೇಸ್ ಕ್ಯಾಂಪ್‌ಗೆ ಚಾಲನೆ ನೀಡಿ ಮಾತನಾಡಿದರು. ನಗರದ ಅಭಿವೃದ್ಧಿಯ ವಿಚಾರದಲ್ಲಿ ರಾಜಕೀಯ, ಸಿದ್ಧಾಂತಗಳನ್ನು ಬದಿಗೊತ್ತಿ ಎಲ್ಲರೂ ಕೈಜೋಡಿಸುವ



ಅಗತ್ಯವಿದೆ. ಈ ನಿಟ್ಟಿನಲ್ಲಿ ಸಿಲಿಕಾನ್ ಬೀಚ್ ಪ್ರೋಗ್ರಾಂ ಸಂಸ್ಥೆಯು ಮಂಗಳೂರಿನಲ್ಲಿ ಐಟಿ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗುವ ಕಂಪನಿಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ನೀಡಲು ಮುಂದಾಗಿದೆ. ಇದು ಮಂಗಳೂರಿನಲ್ಲಿ ಹೊಸ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಲಿದೆ ಎಂದು ಅವರು ಹೇಳಿದರು.

ಬೇಸ್ ಕ್ಯಾಂಪ್‌ನ ಪ್ರಯೋಜನದಿಂದ ಈಗಾಗಲೇ ಉದ್ಯಮವನ್ನು ಆರಂಭಿಸಿರುವ ಅಮೆರಿಕ ಮೂಲದ ವಿನಾಯಲ್ ಸಂಸ್ಥೆಯ ನಿರ್ದೇಶಕ ನಾಗರಾಜ್ ಆಚಾರ್ಯ ಹಾಗೂ ಎಂತ್ರಪಿ ಸಂಸ್ಥೆಯ ನಿರ್ದೇಶಕ ವಿಶಾಲ್ ಅವರು ತಮ್ಮ ಅನುಭವಗಳನ್ನು ಈ ಸಂದರ್ಭ ಹಂಚಿಕೊಂಡರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಲಿಕಾನ್ ಬೀಚ್ ಪ್ರೋಗ್ರಾಂನ ಸಂಚಾಲಕ ರೋಹಿತ್ ಭಟ್‌ರವರು ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಕರಾವಳಿಯಲ್ಲಿ 40ಕ್ಕೂ ಅಧಿಕ ಹೊಸ ಐಟಿ ಕಂಪನಿಗಳು ಆರಂಭಗೊಂಡಿದ್ದು 8000 ಉದ್ಯೋಗಗಳು ಸೃಷ್ಟಿಯಾಗಿವೆ. ಮಂಗಳೂರನ್ನು ಜಾಗತಿಕ ಐಟಿ ನಕ್ಷೆಯಲ್ಲಿ ಪ್ರಮುಖ ಸ್ಥಾನದಲ್ಲಿ ಮಾಡುವ ಉದ್ದೇಶದೊಂದಿಗೆ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದರು.

ಅನನ್ಯ ಲಕ್ಷ್ಮಿ ಬೆನನ್ ಕಾರ್ಯಕ್ರಮ ನಿರೂಪಿಸಿದರು. ಪ್ರಮುಖರು ಉಪಸ್ಥಿತರಿದ್ದರು.

> ಕರಾವಳಿ ಕರ್ನಾಟಕದಲ್ಲಿ ಕಂಪನಿ ತೆರೆಯಲು ಮುಂದಾಗುವವರಿಗೆ ಪ್ರಕ್ರಿಯೆಯನ್ನು ಸರಳ ಮತ್ತು ಸುಲಭ ಗೊಳಿಸುವ ಕಾರ್ಯವನ್ನು ಬೇಸ್ ಕ್ಯಾಂಪ್ ಮೂಲಕ ಮಾಡಲಾಗುತ್ತದೆ. ಆರಂಭಿಕ ಸಮಾಲೋಚನೆಯಿಂದ ಹಿಡಿದು, ನೇಮಕಾತಿ, ಕಾನೂನು ಪಾಲನೆ, ಪ್ರತಿಭಾಶೋಧ, ಕ್ಷೇತ್ರ ಮಟ್ಟದ ಸಿದ್ಧತೆ ಕುರಿತಂತೆ ಬೇಸ್ ಕ್ಯಾಂಪ್ ಮೂಲಕ ಸಹಕಾರ ನೀಡಲಾಗುತ್ತದೆ. ಮುಂದಿನ ನಾಲ್ಕು ವರ್ಷಗಳವರೆಗೆ ಮಂಗಳೂರಿನಲ್ಲಿ ಐಟಿ ಉದ್ಯಮ ಕ್ಷೇತ್ರ ವಿಸ್ತಾರಗೊಳ್ಳುವವರೆಗೆ ಈ ಕ್ಯಾಂಪ್ ತನ್ನ ಸಹಾಯ ಹಸ್ತವನ್ನು ಮುಂದುವರಿಸಲಿದೆ.
>
> ● **ರೋಹಿತ್ ಭಟ್**, ಸಿಲಿಕಾನ್ ಬೀಚ್ ಪ್ರೋಗ್ರಾಂ ಸಂಚಾಲಕ ಹಾಗೂ ರೋಬೋಸಾಫ್ಟ್ ಸಂಸ್ಥಾಪಕರು.

> **ಕ್ಯಾಂಪ್ ಅಗತ್ಯ**
>
> ಹೊರ ದೇಶ, ರಾಜ್ಯಗಳಿಂದ ಮಂಗಳೂರಿನಲ್ಲಿ ಐಟಿ ಉದ್ಯಮಗಳನ್ನು ಸ್ಥಾಪಿಸುವಲ್ಲಿ ಸಿಲಿಕಾನ್ ಬೀಚ್ ಪ್ರೋಗ್ರಾಂನ ಬೇಸ್ ಕ್ಯಾಂಪ್ ಇಂದಿನ ತುರ್ತು ಅಗತ್ಯವಾಗಿದೆ.
>
> ● **ಭರತ್ ಶೆಟ್ಟಿ**, ಶಾಸಕರು

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಕೌಶಲ್ಯ ತರಬೇತಿ ಶಿಬಿರ



ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಇಂಗ್ಲೀಷ್ ವಿಭಾಗದ ಜಾಯ್ಸ್ ಲಿಟರರಿ ಕ್ಲಬ್ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಪುಸ್ತಕಗಳನ್ನು ಮೀರಿ; ನೈಜ ಪ್ರಪಂಚಕ್ಕಾಗಿ ಕೌಶಲ್ಯಗಳು' ಎಂಬ 2 ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರ ಸಮಾನಗೊಂಡಿತು.

ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಮಾತನಾಡಿ, ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತ. ಅವರ ವ್ಯಕ್ತಿತ್ವ ವಿಕಾಸಕ್ಕೆ ಸಹಾಯ ಮಾಡುತ್ತವೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಪ್ರೊ. ಜೋಸೆಲಿನ್ ಟಿ.ಲೋಬೋ ಎರಡು ದಿನಗಳ ಕಾರ್ಯಾಗಾರವು ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಹೊರತೆಗೆದು, ಅವರ ಸಾಮರ್ಥ್ಯವನ್ನು ಅರಿಯಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಭಾರ ಪ್ರಾಂಶುಪಾಲ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ತಿಪ್ಪೇಸ್ವಾಮಿ ಮಾತನಾಡಿದರು. ಚಿಯಕಪೂವಂಡ ಸಚಿನ್ ಪೂವಯ್ಯ ಅವರನ್ನು ಸನ್ಮಾನಿಸಲಾಯಿತು.

2 ದಿನದ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಹಲವಾರು ಕೌಶಲ್ಯಾಧಾರಿತ ಮತ್ತು ಸೃಜನಾತ್ಮಕ ಚಟುವಟಿಕೆಗಳನ್ನು ಮಾಡಲಾಯಿತು. ಮತ್ತು ಕೊನೆಯಲ್ಲಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಡಾ. ವಿಜಯಲತಾ, ಡಾ. ಸೌಮ್ಯ ಕೆ., ವಿನೀತಾ ದೇವಮ್ಮ, ಮೋನಿಕಾ, ಡಾ. ಭೈರವಿ, ರಮಾಲಕ್ಷ್ಮಿ ಇದ್ದರು ವಿದ್ಯಾರ್ಥಿನಿ ವರ್ಷಾ ಟಿ. ವಿ. ಮತ್ತು ಅಮೃತಾ. ಆರ್ ಕಾರ್ಯಕ್ರಮ ನಿರೂಪಿಸಿದರು. ಜಾಯ್ಸ್ ಸಾಹಿತ್ಯ ಸಂಘದ ಕಾರ್ಯದರ್ಶಿ ಅಲೋಕ್ ಬಿಜೈ ವಂದಿಸಿದರು. ಒಟ್ಟಿನಲ್ಲಿ, ಈ ಕೌಶಲ್ಯ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಪಾಠ ಪುಸ್ತಕಗಳನ್ನು ಮೀರಿದ ಜೀವನ ಕೌಶಲ್ಯಗಳನ್ನು ಕಲಿಸುವಲ್ಲಿ ಯಶಸ್ವಿಯಾಯಿತು.

ಗಾಡಿ ಕೂಸ ಪೂಜಾರಿ ಕಂಬಳ ಕ್ಷೇತ್ರದಲ್ಲಿ ಛಾಪು ಮೂಡಿಸಿದ ಸಾಧಕ: ಶಾಂತರಾಮ



ಕೋಟ: ಗಾಡಿ ಕೂಸ ಪೂಜಾರಿ ತನ್ನ ವೃತ್ತಿ ಕಾಯಕದ ಜತೆ ಅವಿಭಜಿತ ಜಿಲ್ಲೆಗಳ ಕಂಬಳ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಾರಕೂರು ಶಾಂತರಾಮ ಶೆಟ್ಟಿ ಹೇಳಿದರು.

ಶನಿವಾರ ಕೋಟ ಮಾಂಗಲ್ಯ ಮಂದಿರದಲ್ಲಿ ಇತ್ತೀಚಿಗೆ ಅಗಲಿದ ಕಾಯಕ ಯೋಗಿ ಗಾಡಿ ಕೂಸ ಪೂಜಾರಿಯವರ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಾತನಾಡಿದರು.

ತನ್ನ ಜೀವತ ಅವಧಿಯಲ್ಲಿ ಗಾಡಿ ಕೂಸ ಪೂಜಾರಿ ಯವರ ಸೇವೆ ಅನನ್ಯ. ಎತ್ತಿನ ಗಾಡಿಯಲ್ಲಿ ಪ್ರಸಿದ್ಧ ಮಾತ್ರವಲ್ಲದೆ ಎರಡು ಜಿಲ್ಲೆಗಳ ಕಂಬಳ ಕ್ಷೇತ್ರದಲ್ಲಿ ಅಸಾಮಾನ್ಯ ಸಾಧನೆಯ ಪುಟ ತೆರೆದಿದ್ದಾರೆ. ಆ ಕಾಲಘಟ್ಟದಲ್ಲಿ ಎತ್ತಿನಗಾಡಿಯ ಮೂಲಕ ಜನಸಾಮಾನ್ಯರ ಹೃದಯದಲ್ಲಿ ಗಾಡಿ ಕೂಸಣ್ಣ ಎಂಬ ಪ್ರೀತಿಗೆ ಪಾತ್ರರಾಗಿದ್ದರು ಎಂದು ತಮ್ಮ ಮತ್ತು ಅವರ ಸ್ನೇಹದ ದಿನಗಳನ್ನು ಅವರು ನೆನಪಿಸಿದರು.

ಈ ಸಂದರ್ಭದಲ್ಲಿ ಚಿತ್ರಪಾಡಿಯ ಕಾರ್ತಟ್ಟು ಅಘೋರೇಶ್ವರ ದೇಗುಲದ ಅಧ್ಯಕ್ಷ ಚಂದ್ರಶೇಖರ ಕಾರಂತ್ ನುಡಿನಮನ ಸಲ್ಲಿಸಿದರು. ಈ ವೇಳೆ ಹಲವು ಗಣ್ಯರು ಉಪಸ್ಥಿತರಿದ್ದು ಕೂಸ ಪೂಜಾರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಗಾಡಿ ಕೂಸ ಪೂಜಾರಿ ಪುತ್ರ ಭೋಜ ಪೂಜಾರಿ,ಸಂತೋಷ್ ಪೂಜಾರಿ ಸಹಿತ ಕುಟುಂಬದ ಸದಸ್ಯರು ಇದ್ದರು. ಶಿಕ್ಷಕ ನರೇಂದ್ರ ಕುಮಾರ್ ಕೋಟ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಟಿ.ಮಂಜುನಾಥ್ ಗಿಳಿಯಾರು ಕೂಸ ಪೂಜಾರಿ ಕುಟುಂಬದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಅದಮಾರು ಶಿಕ್ಷಣ ಸಂಸ್ಥೆಗೆ ಕುಡಿಯುವ ನೀರಿನ ಘಟಕ ಕೊಡುಗೆ



ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗೆ ಬೆಳ್ಮಣ್ ಲಯನ್ಸ್ ಕ್ಲಬ್ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿದ್ದಾರೆ.

ಇದರ ಉದ್ಘಾಟನೆಯನ್ನು ಲಯನ್ಸ್ ಕ್ಲಬ್‌ನ ಜಿಲ್ಲಾ ಗವರ್ನರ್ ಸಪ್ನಾ ಸುರೇಶ್ ನೆರವೇರಿಸಿದರು. ಬಳಿಕ ಮಾತನಾಡಿ ಅವರು, ಶಾಲೆಯ ಮಕ್ಕಳು ಆಟವಾಡಿ ದಣಿದಾಗ ಅವರಿಗೆ ಹತ್ತಿರದಲ್ಲೇ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದ್ದರೆ ಅದು ಅನುಕೂಲವಾಗುತ್ತದೆ. ಆದಕ್ಕಾಗಿ ಈ ಶಿಕ್ಷಣ ಸಂಸ್ಥೆಗೆ ಬೆಳ್ಮಣ್ ಲಯನ್ಸ್ ಕ್ಲಬ್ ಕೊಡುಗೆ ನೀಡಿರುವುದು ನಿಜಕ್ಕೂ ಅಭಿನಂದನಾರ್ಹ ಎಂದರು.

ಬೆಳ್ಮಣ್ ಲಯನ್ಸ್ ಕ್ಲಬ್‌ನ ಅಧ್ಯಕ್ಷ ರಂಜಿತ್ ಕೆ.ಎಸ್., ಹಾಗೂ ಕಾರ್ಯದರ್ಶಿ ಸದಾನಂದ ಶೆಟ್ಟಿಗಾರ್ ಕೋಶಾಧಿಕಾರಿ ಸದಾನಂದ ಭಟ್,ಎನ್ ಎಂ ಹೆಗಡೆ,ಸೀತಾರಾಂ ಭಟ್,ವಿಶ್ವನಾಥ ಪಾಟ್ಕರ್ ,ಶಿವರಾಮ್ ಆಚಾರ್, ಅದಮಾರು ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯಕ್, ಪೂರ್ಣ ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯನೀ ಕಾಂತಿ ಭಟ್, ಬೆಳ್ಮಣ್ ಲಯನ್ಸ್ ಕ್ಲಬ್ ಸದಸ್ಯರು ಉಪಸ್ಥಿತರಿದ್ದರು. ಸಂಸ್ಕೃತ ಉಪನ್ಯಾಸಕ, ಎನ್‌ಎಸ್‌ಎಸ್ ಉಡುಪಿ ಜಿಲ್ಲಾ ನೋಡಲ್ ಅಧಿ ಕಾರಿ ಡಾ. ಜಯಶಂಕರ ಕಂಗಣ್ಣಾರು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಮನೆ ಮನೆಯಲ್ಲಿ ಅಂಬೇಡ್ಕರ್ ವಿಚಾರಧಾರೆ, ಸಂವಿಧಾನ ಆಶಯ ಅರಿವು



ಕೊಣಾಜೆ: ಬಾಳೆ ಪುಣಿ ಪಂಚಾಯತ್ ವ್ಯಾಪ್ತಿಯ ಪರಿಶಿಷ್ಟ ಜಾತಿ ಪಂಗಡದ ಜನವಸತಿ ಪ್ರದೇಶಗಳ ಮನೆಯಂಗಳಗಳಲ್ಲಿ ಅಂಬೇಡ್ಕರ್ ವಿಚಾರ ಧಾರೆ ಸಂವಿಧಾನದ ಆಶಯಗಳ ಅರಿವು ಮೂಡಿಸುವ ಮೂಲಕ ಅಂಬೇಡ್ಕರ್ ಜಯಂತಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಜನ ಶಿಕ್ಷಣ ಟ್ರಸ್ಟ್ ಗ್ರಾಮ ಸ್ವರಾಜ್ ಅಭಿಯಾನ ದಡಿ ಬಾಳೆ ಪುಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಂಗಾರ್ ಗುಡ್ಡೆಯ ಜಾನಕಿ, ಕುಕ್ಕುದ ಕಟ್ಟೆಯ ಸುರೇಖಾ, ನಾರ್ಯದ ಸಬಿತಾ ಸುಂದರ್, ಮೋಂಟು ಗೋಳಿಯ ಯಮುನಾ ನರಿಂಗಾನ ಪೊಟ್ಟೊಳಿಕೆಯ ಬೇಬಿ ಯವರ ಮನೆಯಂಗಳಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಸಂವಿಧಾನ ಓದು ಪುಸ್ತಕ ವಿತರಿಸಿ ಪೀಠಿಕೆಯನ್ನು ಓದಿ ಸಂವಿಧಾನದ ಆಶಯ, ಅಂಬೇಡ್ಕರ್ ರವರ ವಿಚಾರಧಾರೆ ಅಭಿವೃದ್ಧಿ ಸೂತ್ರದ ಬಗ್ಗೆ ಚರ್ಚಿಸಲಾಯಿತು.

ಶಿಕ್ಷಣದ ಶಕ್ತಿ, ಸ್ವಚ್ಚತೆಯ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು. ಕಸ- ನಶೆ -ಹಿಂಸಾ ಮುಕ್ತ ಸಂಸಾರ ಸುಸ್ಥಿರ ಅಭಿವೃದ್ಧಿಗೆ ಸಂಕಲ್ಪ ಮಾಡಲಾಯಿತು. ನರೇಗಾ ಮಾಜಿ ಒಂಬುಡ್ಸ್ ಮೆನ್ ಶೀನ ಶೆಟ್ಟಿ ಮಾಹಿತಿ ನೀಡಿ ಸಂವಾದ ನಡೆಸಿದರು. ಟ್ರಸ್ಟ್ ನಿರ್ದೇಶಕರು, ಗ್ರಾಮ ಸ್ವರಾಜ್ ಅಭಿಯಾನದ ಚೇತನ್ ಕುಮಾರ್, ಕಾರ್ತಿಕ, ಲತಾ ಕುಮಾರಿ, ಶ್ವೇತಾ ಸಂವಾದದಲ್ಲಿ ಭಾಗವಹಿಸಿದ್ದರು.

ಎಲ್ಲಾ ವರ್ಗದ ಜನರು ಬಲಿಷ್ಠರಾದರೆ ದೇಶ ಸದೃಢವಾಗಲಿದೆ: ರಮಾನಾಥ ರೈ



ಬಂಟ್ವಾಳ: ಸಮಾಜ ವೇಗವಾಗಿ ಬೆಳೆಯುತ್ತಿದ್ದು, ನಾವು ಪರಿವರ್ತನ ಕಾಲಘಟ್ಟದಲ್ಲಿದ್ದೇವೆ, ಸಂಘ ಸಂಸ್ಥೆಗಳು ಬಡವರು, ದುರ್ಬಲರಿಗೆ ಸಹಕಾರ ನೀಡುವುದರೊಂದಿಗೆ ಅವರ ಮಕ್ಕಳ ಶಿಕ್ಷಣಕ್ಕೆ ನೆರವು ನೀಡಬೇಕು. ಸಮಾಜದಲ್ಲಿ ಎಲ್ಲಾ ವರ್ಗದ ಜನರು ಬಲಿಷ್ಠರಾದರೆ ಮಾತ್ರ ದೇಶ ಸದೃಢವಾಗುತ್ತದೆ ಎಂದು ಮಾಜಿ ಸಚಿವ ಬಿ.ರಮಾನಾಥ ರೈ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ಕಳ್ಳಿಗೆ ಗ್ರಾಮದ ದೇವಂದಬೆಟ್ಟು ಶ್ರೀ ಲಕ್ಷ್ಮೀ ವಿಷ್ಣುಮೂರ್ತಿ ದೇವಸ್ಥಾನದ ವಠಾರದಲ್ಲಿ ನಡೆದ ಕಳ್ಳಿಗೆ ಯುವಕರ ಸಂಘ ಮತ್ತು ಮಹಿಳಾ ಸಂಘದ 42ನೇ ವರ್ಷದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನಪಾಡಿ ಕನಪಾಡಿತ್ತಾಯ ದೈವದ ಪಾತ್ರಿ ಧೂಮ ಮೂಲ್ಯ ಇವರು ದೀಪಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಾಜಿ ಜಿ.ಪಂ. ಸದಸ್ಯ ಚಂದ್ರಪ್ರಕಾಶ ಶೆಟ್ಟಿ ತುಂಬೆ, ಉದ್ಯಮಿ ಭುವನೇಶ್ ಪಚ್ಚಿನಡ್ಕ, ಕರಿಯಂಗಳ ಗ್ರಾ ಪಂ ಮಾಜಿ ಅಧ್ಯಕ್ಷ ಚಂದ್ರಹಾಸ ಪಲ್ಲಿಪಾಡಿ, ಜ್ಯೋತಿಷಿ ಅನಿಲ್ ಪಂಡಿತ್, ನಿವೃತ್ತ ಸೈನಿಕ ಹರೀಶ್ ಡಿ. ಬಂಟ್ವಾಳ ಅತಿಥಿಗಳಾಗಿ ಭಾಗವಹಿಸಿ ಶುಭಹಾರೈಸಿದರು.

ದೇವಂದಬೆಟ್ಟುಶ್ರೀ ಲಕ್ಷ್ಮೀವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶಿವರಾಮ ಶಿಬಿರಾಯ, ದೇವಳದ ವ್ಯವಸ್ಥಾಪನಾ ಸಮಿತಿ ಕೋಶಾಧಿಕಾರಿ ಗಣೇಶ ಜಿ. ಕರ್ಕೇರ, ಸಮಾಜ ಸೇವಕಿ ಪ್ರಿಯದರ್ಶಿನಿ ದರಿಬಾಗಿಲು, ವಿನೋದ ಗಿರಿಯಪ್ಪ ಬದ್ಯಾರು,ಯುವಕ ಸಂಘದ ಅಧ್ಯಕ್ಷ ಶಶಿಧರ ಕನಪಾಡಿ, ಮಹಿಳಾ ಮಂಡಲದ ಅಧ್ಯಕ್ಷೆಸುಜಿತಾ ದೇವಂದಬೆಟ್ಟು ಉಪಸ್ಥಿತರಿದ್ದರು. ಈ ಸಂದರ್ಭ ಸಾಧಕರಾದ ಮನೋಜ್ ಕನಪಾಡಿ, ಸುಧೀರ್ ಕುಮಾರ್ ಜಾರಂದಗುಡ್ಡೆ, ಮಲ್ಲಿಕಾ ಜ್ಯೋತಿಗುಡ್ಡೆ,ದಕ್ಷಿಣ್ ದೇವಂದ ಬೆಟ್ಟು,ಯಶ್ವಿನಿ ಜಾರಂದಗುಡ್ಡೆ,ಸಾನಿಕಾ ಕಂಜತ್ತೂರು, ಇವರನ್ನು ಅಭಿನಂದಿಸಲಾಯಿತು. ಕ್ರೀಡಾ ಸಾಧನೆಗಾಗಿ ಇಶಾ ಅನ್ವಿ ಇವರನ್ನು ಸನ್ಮಾನಿಸಲಾಯಿತು. ಯುವಕ ಸಂಘದ ಮಾಜಿ ಅಧ್ಯಕ್ಷ ಜಗದೀಶ ಕಂಜತ್ತೂರುಪ್ರಸ್ತಾವನೆಗೈದರು.ಚಂದ್ರಹಾಸ ದೇವಂದಬೆಟ್ಟು ಸ್ವಾಗತಿಸಿ,ಪ್ರಶಾಂತ್ ಕನಪಾಡಿ ವಂದಿಸಿದರು, ಮನೋಜ್ ಕನಪಾಡಿ ಹಾಗೂ ಸೌಮ್ಯ ಮನೋಜ್ ಕಾರ್ಯಕ್ರಮ ನಿರೂಪಿಸಿದರು.

ಓಂ ಶ್ರೀ ಗೆಳೆಯರ ಬಳಗದ ವಾರ್ಷಿಕೋತ್ಸವ



ಬಂಟ್ವಾಳ: ದ.ಕ.ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಾಣೆಮಂಗಳೂರಿನ ನಾಯಿಲ ಓಂ ಶ್ರೀ ಗೆಳೆಯರ ಬಳಗದ 20 ನೇ ವರ್ಷದ ವಾರ್ಷಿಕೋತ್ಸವ ಸಂಭ್ರಮವು ಶನಿವಾರ ಸಂಘದ ವಠಾರದಲ್ಲಿ ನಡೆಯಿತು.

ಮಾಜಿ ಸಚಿವ ಬಿ.ರಮಾನಾಥ ರೈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅತಿಥಿಯಾಗಿ ಭಾಗವಹಿಸಿದ್ದ ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಆರೆಬೆಟ್ಟು, ಮಾತನಾಡಿ, ಸಂಘಟನೆಯ ಕಾರ್ಯವನ್ನು ಶ್ಲಾಘಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯುವ ಉದ್ಯಮಿ ರೋ. ಸತೀಶ್ ಕುಮಾರ್ ಕೆ.ವಹಿಸಿದ್ದರು.

ಬಿ.ಸಿ.ರೋಡಿನ ಹಿರಿಯ ವಕೀಲ ಅಶ್ವನಿ ಕುಮಾರ್ ರೈ, ಬೂಡ ಅಧ್ಯಕ್ಷ ಬೇಬಿ ಕುಂದರ್,ಬಂಟ್ವಾಳ ತಾಲೂಕು ಬಿಲ್ಲವ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಉದ್ಯಮಿ ಉಮೇಶ್ ಬೋಳಂತರು, ಶೈಲೇಶ್ ಕುಚ್ಚಿಗುಡ್ಡೆ, ಸುದೀರ್ ರೈ, ಉಮೇಶ್ ನೆಲ್ಲಿಗುಡ್ಡೆ, ಚೈತ್ರೇಶ್ ಶೆಣೈ, ಕರುಣಾಕರ, ವಕೀಲ ಉಮೇಶ್ ಕುಮಾರ್ ವೈ, ಪ್ರದೀಪ್ ಎನ್.ಕೆ., ಸಂಘದ ಅಧ್ಯಕ್ಷ ದಿನೇಶ್ ನೆಲ್ಲಿಗುಡ್ಡೆ, ಗೌರವಾಧ್ಯಕ್ಷ ನಾಗೇಶ್ ಕುಲಾಲ್, ಮಹಿಳಾ ಮಂಡಲದ ಅಧ್ಯಕ್ಷೆ ನಳಿನಿ ಶುಭಕರ ಉಪಸ್ಥಿತರಿದ್ದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಅನಿಲ್ ದಾಸ್ (ಸೇವಾ ಕ್ಷೇತ್ರ), ಮಹಮ್ಮದ್ ಯಾಸೀರ್ ಕಲ್ಲಡ್ಕ (ಕಲಾ ಕ್ಷೇತ್ರ), ಜನಾರ್ದನ ಪೂಜಾರಿ ಬೋಳಂಗಡಿ (ಸಾಮಾಜಿಕ ಕ್ಷೇತ್ರ), ಪ್ರಶಾಂತ್ ಪುಂಜಾಲಕಟ್ಟೆ (ಮಾಧ್ಯಮ ಕ್ಷೇತ್ರ) ಅವರನ್ನು ಸನ್ಮಾನಿಸಲಾಯಿತು. ಸಂಘದ ನಿಕಟಪೂರ್ವ ಅಧ್ಯಕ್ಷ ಕಿರಣ್ ಕುಮಾರ್ ಅಟ್ಲೂರು ಸ್ವಾಗತಿಸಿ, ಮಹಿಳಾ ಸಂಘದ ಕಾರ್ಯದರ್ಶಿ ಮೋಹಲತಾಹರೀಶ್ ವಂದಿಸಿದರು. ಎಚ್ಕೆ ನಯನಾಡು ನಿರೂಪಿಸಿದರು.

ಬೆಳಿಗ್ಗೆ ಗಣಹೋಮ, ಮಧ್ಯಾಹ್ನ ಸಾಮೂಹಿಕ ಶ್ರೀಸತ್ಯನಾರಾಯಣ ಪೂಜೆ,ಪ್ರಸಾದ ವಿತರಣೆ, ಸಾರ್ವಜನಿಕ ಅನ್ನಸಂತರ್ಪಣೆ, ಸಂಜೆ ಸ್ಥಳೀಯರಿಂದ ಸಾಂಸ್ಕೃಕ ಕಾರ್ಯಕ್ರಮ ನಡೆಯಿತು.

ಕುಂದಾಪುರ ಪುರಸಭೆ ವ್ಯಾಪ್ತಿಯ ಅಧಿಕಾರಿಗಳೊಂದಿಗೆ ಶಾಸಕ ಕಿರಣ್ ಕುಮಾರ್ ಕೊಡ್ಗಿ ಪ್ರಗತಿ ಪರಿಶೀಲನಾ ಸಭೆ

ಮುಂದಿನ 10 ವರ್ಷಗಳಿಗೆ ನೀರಿನ ಬೇಡಿಕೆ ಕುರಿತು ವರದಿ ಸಿದ್ಧಪಡಿಸಲು ಸೂಚನೆ

ಕುಂದಾಪುರ: ಈಗಿರುವ ನೀರಿನ ಪೂರೈಕೆ, ಲಭ್ಯತೆಯು ಮುಂದಿನ ವರ್ಷದ ಬೇಸಗೆಗೆ ಸಾಕಾಗಲ್ಲ, ಆದಕ್ಕಾಗಿ ಮುಂದಿನ 10 ವರ್ಷಗಳಿಗೆ ಎಷ್ಟು ನೀರಿನ ಬೇಡಿಕೆ ಬರಬಹುದು. ಆದಕ್ಕಾಗಿ ಏನೆಲ್ಲ ಯೋಜನೆಗಳನ್ನು ಕೈಗೊಳ್ಳಬೇಕು. ಎಷ್ಟು ಸಾಮರ್ಥ್ಯದ ಮೋಟಾರು, ಶುದ್ಧಿಕರಣ ಘಟಕ ಅಗತ್ಯವಿದೆ. ಪೈಪ್ ಲೈನ್ ವಿಸ್ತರಣೆ, ಇನ್ನಿತರ ಕಾಮಗಾರಿಗೆ ಅಂದಾಜು ಎಷ್ಟು ಖರ್ಚಾಗಬಹುದು ಅನ್ನುವುದರ ಬಗ್ಗೆ ವರದಿ ಸಿದ್ಧಪಡಿಸಿ ಎಂದು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರ ಪುರಸಭೆ ವ್ಯಾಪ್ತಿಯ ಅಧಿಕಾರಿಗಳೊಂದಿಗೆ ಪುರಸಭೆಯ ಡಾ.ವಿ.ಎಸ್.ಆಚಾರ್ಯ ಸಭಾಂಗಣದಲ್ಲಿ ಶನಿವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಈಗ 100 ಎಚ್‌ಪಿ ಸಾಮರ್ಥ್ಯದ ಮೋಟಾರಿನಿಂದ ನೀರೆತ್ತಲಾಗುತ್ತಿದ್ದು, ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಪಂಪ್ ಬಳಸಿದರೆ ಪೈಪ್ ಲೈನ್ ಸಾಕಾಗಲ್ಲ, ಇನ್ನಷ್ಟು ದೊಡ್ಡ ಪೈಪ್ ಲೈನ್ ಮಾಡಬೇಕು. ಸರಾಸರಿ ತಿಂಗಳಿಗೆ 25–30 ಅರ್ಜಿ ಬರುತ್ತಿದ್ದು ವರ್ಷಕ್ಕೆ ಸುಮಾರು 300ರಷ್ಟು ಹೆಚ್ಚುವರಿ ಸಂಪರ್ಕ ಆಗುತ್ತದೆ. ಹಾಗಾಗಿ ಜಲಸಿರಿಯ ಈಗಿರುವ ಯೋಜನೆಯನ್ನು ಮುಂದಿನ ವರ್ಷದೊಳಗೆ ಮೇಲ್ದರ್ಜೆಗೇರಿಸದಿದ್ದರೆ ನೀರಿನ ಕೊರತೆ ಆಗಬಹುದು ಎನ್ನುವುದಾಗಿ ಜಲಸಿರಿ ಯೋಜನೆ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಲಸಿರಿ ಯೋಜನೆಯಡಿ ಕಳೆದ 4 ವರ್ಷಗಳಿಂದ ಒಟ್ಟು 6,450 ಮನೆಗಳಿಗೆ ಸಂಪರ್ಕ ಬೇಡಿಕೆಯಿತ್ತು. ಆ ಪೈಕಿ 4,952 ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಇನ್ನು 736 ಮನೆಗಳಿಗೆ ಬಾವಿ ಇರುವ ಕಾರಣಕ್ಕೆ ಬೇಡ ಅಂದಿದ್ದಾರೆ. ಕೆಲವು ಮನೆಗಳಿಗೆ ದಾಖಲಾತಿ ಸರಿಯಿಲ್ಲದ್ದಕ್ಕೆ ಸಂಪರ್ಕ ಸಾಧ್ಯವಾಗಿಲ್ಲ, ಅರ್ಜಿ ಬಂದಿರುವ ಪೈಕಿ ಇನ್ನು 142 ಮನೆಗಳಿಗೆ ಸಂಪರ್ಕ ಕಲ್ಪಿಸಲು ಬಾಕಿಯಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

> **ಪಾರ್ಕಿಂಗ್‌ಗೆ ವ್ಯವಸ್ಥೆ**
>
> ಕುಂದಾಪುರ ಬೆಳೆಯುತ್ತಿರುವ ನಗರವಾಗಿದ್ದು, ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ನಗರದಲ್ಲಿ ಖಾಲಿ ಇರುವ ಜಾಗ ಗುರುತಿಸಿ, ಅಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಿ ಎಂದು ಶಾಸಕರು ಸೂಚಿಸಿದರು.

ಪುರಸಭೆ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ತ್ಯಾಜ್ಯದ ವಿಲೇವಾರಿಗೆ ಇದೇ ಸಂದರ್ಭ ಸೂಚಿಸಿದರು. ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 13 ಸಾವಿರ ಇ- ಖಾತಾ ಅರ್ಜಿ ಆಗಬೇಕಿದ್ದು, ಈ ಪೈಕಿ ಈವರೆಗೆ ಒಟ್ಟು 4,800 ರಷ್ಟು ಆಗಿದೆ. 122 ಬಿ- ಖಾತಾ ಆಗಿದೆ. ಇನ್ನು 8 ಸಾವಿರದಷ್ಟು ಬಾಕಿಯಿದೆ. ಕಳೆದ ವರ್ಷದಿಂದ 960 ಅರ್ಜಿ ವಿಲೇ ಆಗಿದೆ. ಬೇರೆ ಕಾರಣಗಳಿಂದ 188 ಅರ್ಜಿ ಬಾಕಿಯಿದೆ ಎಂದು ಅಧಿಕಾರಿಗಳು ತಿಳಿಸಿದರು. ಈ ಬಗ್ಗೆ ಗಮನಹರಿಸಿ, ಬೇಗ ಅರ್ಜಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಿ ಎಂದರು.

ಪುರಸಭೆ ಆಡಳಿತಾಧಿಕಾರಿ, ಕುಂದಾಪುರ ಎಸಿ ರಶ್ಮೀ ಎಸ್.ಆರ್., ಮುಖ್ಯಾಧಿಕಾರಿ ಆನಂದ್, ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸುತ್ತಮುತ್ತ

ಪಾರಕಡವು ಸಾಮಾಜಿಕ ಅಧ್ಯಯನ ಕೇಂದ್ರದಲ್ಲಿ ಕಲಿಕೋತ್ಸವ

ಕಾಸರಗೋಡು: ಪಾಣತ್ತೂರು ಪಾರಕ್ಕಡವು ಸಾಮಾಜಿಕ ಅಧ್ಯಯನ ಕೇಂದ್ರದಲ್ಲಿ ಕಲಿಕೋತ್ಸವ ಕಾರ್ಯಕ್ರಮ ಜರಗಿತು. ವಾರ್ಡ್ ಸದಸ್ಯ ಎಂ.ಶಿಬು ಪಾಣತ್ತೂರು ಉದ್ಘಾಟಿಸಿದರು. ಪರಿಶಿಷ್ಟ ಜಾತಿಯ ಗ್ರಾಮಗಳಲ್ಲಿನ ಮಕ್ಕಳ ಸಾಮಾಜಿಕ ಪರಿಸರ ಬದಲಾಯಿಸಲು, ಮಕ್ಕಳಲ್ಲಿ ಅಧ್ಯಯನದಲ್ಲಿ ಆಸಕ್ತಿ ಹೆಚ್ಚಿಸಲು ಶಾಲೆಗಳಿಂದ ಹೊರಗುಳಿಯುವುದನ್ನು ಮತ್ತು ಮಕ್ಕಳಿಗೆ ಮಾನಸಿಕ ಸಂತೋಷವನ್ನು ನೀಡಲು, ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆ ನೇತೃತ್ವದಲ್ಲಿ ಗ್ರಾಮಗಳಲ್ಲಿ ನಡೆಸಲಾಗುವ ಸಾಮಾಜಿಕ ಅಧ್ಯಯನ ಕೇಂದ್ರಗಳಲ್ಲಿ ಕಲಿಕೋತ್ಸವಗಳನ್ನು ಆಯೋಜಿಸಲಾಗಿತ್ತು. ಗ್ರಾಮದ ಹಿರಿಯರಾದ ರಮೇಶ್ ಆರ್. ಅಧ್ಯಕ್ಷತೆ ವಹಿಸಿದ್ದರು. ಎಸ್‌ಟಿ ಕಾರ್ಯಕರ್ತೆ ಸುಮಿತ್ರಾ ಆರ್. ಉಪಸ್ಥಿತರಿದ್ದರು. ಕಾಸರಗೋಡು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರೇವತಿ ಎನ್. ಮತ್ತು ಆಸಿಮಾ ತಸ್ಲಿಮ್ ಜಾತೃತಿ ತರಗತಿ ನಡೆಸಿದರು. ಕುಂಡಂಗುಳಿ ಸರಕಾರಿ ಹೈಯರ್ ಸೆಕೆಂಡರಿ ಶಾಲಾ ಶಿಕ್ಷಕ ರತೀಶ್ ಆರ್. ಅಧ್ಯಯನ ಶಿಬಿರವನ್ನು ನಡೆಸಿದರು. ವಾರ್ಡ್ ಸದಸ್ಯೆ ಸೌಮ್ಯಾ ಟೀಚರ್ ಮತ್ತು ಪುಲಿಕಾಲ್ ಕ್ಷೇತ್ರ ಮಾತೃ ಸಮಿತಿ ವತಿಯಿಂದ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ವಾರ್ಡ್ ಸದಸ್ಯ ಎಂ.ಶಿಬು ಮತ್ತು ಸುಕುಮಾರನ್ ಪಿ.ಸಿ. ಅಧ್ಯಯನ ಕೇಂದ್ರದ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಉದಾರವಾಗಿ ನೀಡಿದರು. ಮಾಜಿ ಸಹಾಯಕಿ ಕಾವ್ಯ ಸ್ವಾಗತಿಸಿ, ಸಹಾಯಕಿ ಶಾಲಿನಿ ಬಿನು ವಂದಿಸಿದರು.

ಕೇರಳದಲ್ಲಿ 11 ಸ್ಥಾನಗಳ ಗೆಲುವು ನಿರೀಕ್ಷೆಯಲ್ಲಿ ಬಿಜೆಪಿ

ಕಾಸರಗೋಡು: ಕೇರಳದಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಕನಿಷ್ಠ 11 ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದೆಂದು ಬಿಜೆಪಿ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮಂಜೇಶ್ವರ, ಕಾಸರಗೋಡು, ಪಾಲಕ್ಕಾಡು, ಮಲಂಪುಳ, ನಾಚ್ಚಿಗ, ಮಣಲೂರು, ತ್ರಿಶೂರು, ಕುನ್ನತ್‌ನಾಡು, ಚಾತನ್ನೂರು, ಕಳಕ್ಕೂಟಂ, ನೇಮಂ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿನ ನಿರೀಕ್ಷೆ ಇರಿಸಿಕೊಂಡಿದೆ. ಕೇರಳದಲ್ಲಿ ಎನ್‌ಡಿಎ ಗೆಲುವಿನ ಸಾಧ್ಯತೆಯ ಕುರಿತು ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ನಡೆಸಿದ ಸಮೀಕ್ಷೆಯಲ್ಲಿ ರಾಜ್ಯದಲ್ಲಿ ಕನಿಷ್ಠ 11 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಬಹುದೆಂದು ಲೆಕ್ಕಾಚಾರ ಹಾಕಲಾಗಿದೆ.

ಏ.21: ಜಿಲ್ಲಾ ಕ್ರಿಕೆಟ್ ತಂಡಕ್ಕೆ ಆಯ್ಕೆ ಟ್ರಯಲ್ಸ್

ಕಾಸರಗೋಡು: ಜಿಲ್ಲೆಯಲ್ಲಿ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರ ಜಿಲ್ಲಾ ಕ್ರಿಕೆಟ್ ತಂಡಕ್ಕೆ ಆಯ್ಕೆ ಟ್ರಯಲ್ಸ್ ಏ.21ರಂದು ಬೆಳಗ್ಗೆ 9ರಿಂದ ಕಾಸರಗೋಡು ಕ್ರೀಡಾಂಗಣದಲ್ಲಿ ಜರಗಲಿದೆ. 01-09-2011 ರಿಂದ 31-08-2014 ರ ನಡುವೆ ಜನಿಸಿದವರು ಆಯ್ಕೆ ಪ್ರಕ್ರಿಯೆಗಳಲ್ಲಿ ಭಾಗವಹಿಸಬಹುದು. ಆಸಕ್ತ ಅಭ್ಯರ್ಥಿಗಳು ಅದೇ ದಿನ ಬೆಳಗ್ಗೆ 9 ಗಂಟೆಯ ಮೊದಲು ತಮ್ಮ ವಯಸ್ಸಿನ ಪುರಾವೆ ನೀಡುವ ಮೂಲ ಜನನ ಪ್ರಮಾಣಪತ್ರ, ಕ್ರಿಕೆಟ್ ಕಿಟ್ ಮತ್ತು ಬಿಳಿ ಉಡುಪುಗಳೊಂದಿಗೆ ಆಯ್ಕೆ ಸ್ಥಳಕ್ಕೆ ತಲುಪಬೇಕು ಎಂದು ಸಂಬಂಧಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಏ.25: ಸ್ವರ್ಗ ಸಂಗಮ ವಿಶೇಷ ಸಭೆ ಆಯೋಜನೆ

ಪೆರ್ಲ: 1928ರಲ್ಲಿ ಸಣಗೋಲು ಹೃಷಿಕೇಶ ಭಟ್ ಅವರಿಂದ ಸ್ಥಾಪನೆಗೊಂಡ ಪಡ್ರೆ ತೋಟದ ಬಯಲು ಶಾಲೆಯು ಮುಂದೆ ಸ್ವರ್ಗ ಸ್ವಾಮಿ ವಿವೇಕಾನಂದ ಎಯುಪಿ ಶಾಲೆಯಾಗಿ ಶೈಕ್ಷಣಿಕ ಅಭಿಯಾನ ಮುಂದುವರಿಸುತ್ತಿದ್ದು, ಈ ವಿದ್ಯಾಸಂಸ್ಥೆ ಶತಮಾನೋತ್ಸವ ಆಚರಣೆ ಭಾಗವಾಗಿ ಏ.25ರಂದು ಬೆಳಿಗ್ಗೆ 10ಗಂಟೆಗೆ ಶಾಲೆಯಲ್ಲಿ ಸ್ವರ್ಗ ಸಂಗಮ ವಿಶೇಷ ಸಭೆ ಆಯೋಜಿಸಲಾಗಿದೆ.



ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ದೇವಳದ ಗರ್ಭಗುಡಿ ಬಾಗಿಲಿಗೆ ಬೆಳ್ಳಿ ಹೊದಿಕೆ ಮತ್ತು ಗರ್ಭಗುಡಿಯ ಮುಂಭಾಗಕ್ಕೆ ಹಿತ್ತಾಳೆ ಹೊದಿಕೆ ಸಮರ್ಪಣೆಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ನೆರವೇರಿಸಿದರು.

ಚಾಲಕರ ನಡುವಿನ ಪೈಪೋಟಿಯಿಂದ ಸಮಸ್ಯೆ | ಪ್ರಯಾಣಿಕರಿಗೆ ಪ್ರಾಣಸಂಕಟ

ಬಸ್‌ಗಳ ನಾಗಾಲೋಟದಿಂದ ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಅಪಘಾತ

ಕಾಸರಗೋಡು: ಜಿಲ್ಲೆಯ ವಿವಿಧ ರಸ್ತೆಗಳಲ್ಲಿ ಸರಕಾರಿ ಹಾಗೂ ಖಾಸಗಿ ಬಸ್‌ಗಳ ನಾಗಾಲೋಟದಿಂದಾಗಿ ಅಪಘಾತಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದರಿಂದ ಸಾವು ನೋವುಗಳು ಹೆಚ್ಚುತ್ತಿದೆ.

ಅಪಘಾತ ಹೆಚ್ಚಾಗಲು ಮೂಲ ಕಾರಣ ಬಸ್‌ಗಳ ನಡುವಿನ ಅಪಾಯಕಾರಿ ಪೈಪೋಟಿ. ಇದರಿಂದ ಪ್ರಯಾಣಿಕರು ಜೀವ ಕೈಯಲ್ಲಿ ಹಿಡಿದು ಸಂಚರಿಸಬೇಕಾದ ಪರಿಸ್ಥಿತಿ ಎದುರಾಗಿದೆ. ನಾಗಾಲೋಟದ ಸಂಚಾರದಿಂದ ಬಸ್‌ಗಳು ಬಹುತೇಕವಾಗಿ ಸಾರಿಗೆ ನಿಯಮ ಉಲ್ಲಂಘಿಸುತ್ತಿವೆ. ಇಂತಹ ವೇಗದೂತ ಬಸ್‌ಗಳನ್ನು ಏರಿದರೆ ಯಾವಾಗ ಅವಘಡಗಳು ನಡೆಯಬಹುದೆಂಬ ಚಿಂತೆ ಪ್ರಯಾಣಿಕರದ್ದಾಗಿದೆ.

ಕಾಸರಗೋಡು - ಮಂಗಳೂರು ರಾಷ್ಟ್ರೀಯ ಹೆದ್ದಾರಿ, ಕಾಸರಗೋಡು- ಕಲ್ಲಡ್ಕ ರಾಜ್ಯ ಹೆದ್ದಾರಿ, ಕಾಸರಗೋಡು- ಜಾಲ್ಸೂರು ರಾಜ್ಯ ಹೆದ್ದಾರಿ, ಕಾಸರಗೋಡು - ಕಾಞಂಗಾಡು ರೂಟ್ ಹಾಗೂ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುವ ಸರಕಾರಿ ಮತ್ತು ಖಾಸಗಿ ಬಸ್‌ಗಳು



ನಿರಂತರ ಒಂದನ್ನು ಹಿಂದಿಕ್ಕುವ ಭರದಲ್ಲಿ ಇನ್ನೊಂದು ಪೈಪೋಟಿಯ ಓಡಾಟಕ್ಕಿಳಿಯುತ್ತಿವೆ.

ಈ ಮಧ್ಯೆ ಬಸ್‌ಗಳ ನಾಗಾಲೋಟದ ಬಗ್ಗೆ ಟ್ರಾಫಿಕ್ ಪೊಲೀಸರು ಗಮನಿಸಿದರೂ ಮೌನಕ್ಕೆ ಶರಣಾಗುತ್ತಿರುವುದು ವಿಪರ್ಯಾಸವಾಗಿದೆ. ವೇಗದಲ್ಲಿ ಸಾಗುವ ಬಸ್‌ಗಳು ಅಪಘಾತಕ್ಕೆ ಒಳಗಾಗುತ್ತಿರುವುದು ಒಂದೆಡೆಯಾದರೆ ನಿಗದಿಪಡಿಸಿದ ಸಮಯದಲ್ಲಿ ಬಸ್‌ಗಳು ನಿಲ್ದಾಣಗಳಿಗೆ ಬಾರದೆ ಅನೇಕ ಸಂದರ್ಭ ವಿವಿಧ

ಪ್ರಯಾಣಿಕರಿಗೆ ಸಂಕಷ್ಟ

ವಿವಿಧ ಕಡೆಗಳಿಗೆ ತೆರಳುವ ಖಾಸಗಿ ಬಸ್‌ಗಳಂತೂ ಪ್ರಯಾಣಿಕರನ್ನು ತುಂಬುವ ಭರದಲ್ಲಿ ಅತಿಯಾದ ವೇಗದಲ್ಲಿ ಸಂಚರಿಸುತ್ತಿವೆ. ಇದೇ ವೇಳೆ ಕಾಸರಗೋಡಿನಿಂದ ಮಂಗಳೂರಿಗೆ ತೆರಳುವ ಕೇರಳ , ಕರ್ನಾಟಕ ಸರಕಾರಿ ಬಸ್‌ಗಳಿಗೆ ಕಾಸರಗೋಡಿನಿಂದ ತಲಪಾಡಿಗೆ ತೆರಳುವ ಖಾಸಗಿ ಬಸ್‌ಗಳು ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತಿದ್ದು, ಪ್ರಯಾಣಿಕರಿಗೆ ಕಿರಿಕಿರಿ ಎನಿಸುತ್ತಿದೆ.

ರೂಟ್‌ಗಳಲ್ಲಿ ಬಸ್‌ಗಳು ಒಟ್ಟೊಟ್ಟಿಗೆ ಸಂಚರಿಸಿ ಬಸ್‌ಗಾಗಿ ಕಾಯುವ ಪ್ರಯಾಣಿಕರು ಪರದಾಡುವ ಸ್ಥಿತಿ ಇನ್ನೊಂದೆಡೆ ಕಂಡುಬರುತ್ತಿದೆ.

ಸಾರಿಗೆ ನಿಯಮ ಗಾಳಿಗೆ ತೂರಿದಾಗ ವಿಧಿಸುವ ದಂಡ ಮೊತ್ತವನ್ನು ಅರ್ಧದಷ್ಟು ಕಡಿತಗೊಳಿಸಿ ಪಾವತಿಸಬಹುದೆಂಬ ಯೋಜನೆ ಜಾರಿಗೊಳಿಸಲು ಕೇರಳ ಸರಕಾರ ಚಿಂತನೆ ನಡೆಸಿದೆ. ಈ ಯೋಜನೆ

ಪೈಪೋಟಿ

ಜಿಲ್ಲೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿಂದ ಪ್ರಯಾಣಿ ಕರನ್ನು ಸೆಳೆಯುವ ನಿಟ್ಟಿನಲ್ಲಿ ಖಾಸಗಿ ಬಸ್‌ಗಳು ವೇಗವಾಗಿ ಓಡಾಟ ನಡೆಸುತ್ತಿದ್ದು, ಕೆಲವು ಸಂದರ್ಭ ಸರಕಾರಿ ಬಸ್‌ಗಳ ಮುಂದಕ್ಕೆ ಹೋಗಲು ಅವಕಾಶ ನೀಡದಿರುವ ಘಟನೆಗಳೂ ಸಂಭವಿಸುತ್ತಿರುತ್ತವೆ. ಕೆಲವು ಬಸ್‌ಗಳು ರಸ್ತೆ ಮಧ್ಯೆ ಪ್ರಯಾಣಿಕರನ್ನು ಇಳಿಸುವುದು , ಏರಿಸುವುದು ಗೋಚರಿಸುತ್ತಿದ್ದು, ಇದರಿಂದ ಮುಕ್ತ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿರುವುದಾಗಿ ಆಕ್ರೋಶ ವ್ಯಕ್ತಗೊಂಡಿದೆ.

ಜಾರಿಗೊಂಡರೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ಸಾರಿಗೆ ನಿಯಮ ಸಂಪೂರ್ಣ ನಿರ್ಲಕ್ಷಿಸಿ ವಾಹನ ಚಲಾಯಿಸುವುದಕ್ಕೆ ಉತ್ತೇಜನ ನೀಡಿದಂತಾಗುತ್ತದೆ. 2024ರ ವರೆಗೆ ರಾಜ್ಯದಲ್ಲಿ ಸಾರಿಗೆ ನಿಯಮ ಉಲ್ಲಂಘನೆಗೆ ವಾಹನ ಮಾಲಕರಿಗೆ ವಿಧಿಸಿದ್ದ ದಂಡ ಮೊತ್ತ ಕಡಿತಗೊಳಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ. 2026ನೇ ಏಪ್ರಿಲ್ 30ರೊಳಗೆ ದಂಡ ಪಾವತಿಸಲು ಸೂಚಿಸಲಾಗಿದೆ. ಸುಮಾರು 933 ಕೋ.ರೂ. ಮೊತ್ತ 2024ರ ಅವಧಿಯಲ್ಲಿ ಸರಕಾರದ ಬೊಕ್ಕಸ ಸೇರಲು ಬಾಕಿಯಿರುವುದನ್ನು ಗಮನಿಸಿದರೆ ಸಾರಿಗೆ ನಿಯಮ ಎಷ್ಟರ ಮಟ್ಟಿಗೆ ಉಲ್ಲಂಘನೆಯಾಗುತ್ತದೆ ಎಂಬುದನ್ನು ಊಹಿಸಬಹುದು.

ಬಸ್‌ಗಳ ಅನಿಯಂತ್ರಿತ ಓಡಾಟ ಅವಘಡಗಳಿಗೆ ಕಾರಣ

ಖಾಸಗಿ ಬಸ್‌ಗಳ ಜೊತೆಗೆ ಸರಕಾರಿ ಬಸ್‌ಗಳು ಪರಸ್ಪರ ಹಾಗೂ ಇತರ ಬಸ್‌ಗಳೊಂದಿಗೆ ಸ್ಪರ್ಧಾತ್ಮಕವಾಗಿ ಚಲಿಸುತ್ತಿರುವುದು ಅಪಘಾತಗಳಿಗೆ ದಾರಿಮಾಡಿ ಕೊಟ್ಟಂತಾಗಿದೆ. ಕಳೆದ ವಾರ ಮೊಗ್ರಾಲ್ ಪುತ್ತೂರಿನಲ್ಲಿ ಸ್ಪರ್ಧಾತ್ಮಕ ಓಡಾಟದಿಂದ ಖಾಸಗಿ ಮತ್ತು ಸರಕಾರಿ ಬಸ್‌ಗಳು ಪರಸ್ಪರ ಡಿಕ್ಕಿ ಹೊಡೆದು ಪ್ರಯಾಣಿಕರು ಗಾಯಗೊಂಡಿದ್ದರು. ಜಿಲ್ಲೆಯ ವಿವಿಧ ಕಡೆಗಳಲ್ಲಿ ಅತಿಯಾದ ವೇಗದ ಸಂಚಾರದಿಂದ ನಿತ್ಯವೂ ಹಲವಾರು ಬಸ್‌ಗಳು ಅವಘಡಕ್ಕೀಡಾಗುತ್ತಿವೆ. ತಮ್ಮ ಪಾಡಿಗೆ ನಡೆದು ಹೋಗುವ ಪಾದಚಾರಿಗಳಿಗೂ ಬಸ್‌ಗಳ ನಾಗಾಲೋಟ ಸಂಕಷ್ಟ ತಂದೊಡ್ಡುತ್ತಿದೆ.

ಬಾವಿಕ್ಕೆರೆ ಕುಡಿಯುವ ನೀರು ಯೋಜನಾ ಪ್ರದೇಶಕ್ಕೆ ಬಸ್ ಸಂಚಾರಾರಂಭಿಸಲು ಆಗ್ರಹ

ಕಾಸರಗೋಡು: ಹಲವಾರು ಪ್ರವಾಸಿಗಳು ಭೇಟಿ ನೀಡುವ ಬಾವಿಕ್ಕೆರೆ ಶುದ್ಧ ಕುಡಿಯುವ ನೀರು ಯೋಜನಾ ಪ್ರದೇಶಕ್ಕೆ ಬಸ್ ಸಂಚಾರ ಆರಂಭಿಸಬೇಕು ಎಂಬ ಬೇಡಿಕೆ ತೀವ್ರಗೊಳ್ಳುತ್ತಿದೆ. ಜಿಲ್ಲೆಯ ಗ್ರಾಮೀಣ ಪ್ರವಾಸೋದ್ಯಮ ಯೋಜನಾ ಅಭಿವೃದ್ಧಿಗೆ ಬಾವಿಕ್ಕೆರೆ ಶುದ್ಧ ಕುಡಿಯುವ ನೀರು ನಿಯಂತ್ರಕ ಯೋಜನಾ ಪ್ರದೇಶವು ವಿಪುಲ ಅವಕಾಶ ತೆರೆದಿರಿಸಿದೆ.

ಜಿಲ್ಲೆಯ ಅತ್ಯಂತ ದೊಡ್ಡ ನೀರು ಸಂಗ್ರಹವಾದ ಬಾವಿಕ್ಕೆರೆ ಕಡಿಯುವ ನೀರು ಯೋಜನೆಯ ಅಣೆಕಟ್ಟು ಇದರ ಮೂಲಕ ನೀರು ಹರಿದು ಹೋಗುವ ಮನೋಹರವಾದ ದೃಶ್ಯ, ಪ್ರಕೃತಿ ರಮಣೀಯತೆಯನ್ನು ಆಸ್ವಾದಿ ಸಲು ಹಲವಾರು ಮಂದಿ ದಿನನಿತ್ಯವೂ ಬಾವಿಕ್ಕೆರೆ ಕುಡಿಯುವ ನೀರು ಯೋಜನಾ ಪ್ರದೇಶಕ್ಕೆ ತೆರಳುತ್ತಾರೆ. ಆದರೆ ರಸ್ತೆಗಳ ಶೋಚನೀಯಾವಸ್ಥೆ , ಸಂಚಾರ ಸೌಕರ್ಯವಿಲ್ಲದ ಕಾರಣ ಪ್ರವಾಸಿಗರಿಗೆ ಇಲ್ಲಿಗಾಗಮಿಸಲು ಸಾಧ್ಯವಾಗದ ಸ್ಥಿತಿ ಉಂಟಾಗಿದೆ.

ಪಯಸ್ವಿನಿ, ಕರಿಚ್ಚೇರಿ ಹೊಳೆಗಳು ಸೇರಿ ಚಂದ್ರಗಿರಿ ಹೊಳೆಯಾಗಿ ಹರಿಯುವ ಆಲೂರಿನಲ್ಲಿ ಬಾವಿಕ್ಕೆರೆ ಶುದ್ಧಜಲ ನಿಯಂತ್ರಕ ಕಾರ್ಯಾಚರಿಸುತ್ತಿದೆ. ಇಲ್ಲಿನ ಪ್ರವಾಸೋದ್ಯಮ ಯೋಜನೆಗೆ 4.91 ಕೋಟಿ ರೂ.ನ ಅನುಮತಿ ಲಭಿಸಿ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಆದರೆ ಮುಂದಿನ



ಪ್ರಕ್ರಿಯೆಗಳು ವಿಳಂಬಗೊಳ್ಳುತ್ತಿವೆ. ಪ್ರವಾಸೋದ್ಯಮ ಕೇಂದ್ರವಾಗಿ ರೂಪುಗೊಳ್ಳುತ್ತಿರುವ ಈ ಪ್ರದೇಶಕ್ಕೆ ದಿನಂ ಪ್ರತೀ ನೂರಾರು ಪ್ರವಾಸಿಗಳು ಭೇಟಿ ನೀಡುತ್ತಾರೆ. ಇರಿಯಣ್ಣಿ ಬೇವಿಂಜೆ ಯೋರ್ಘುನಾ ಪ್ರದೇಶ ಸಮೀಪದಿಂದ ಹಾದು ಹೋಗುತ್ತದೆ.

ಆಲೂರು ಮುಂಡಕ್ಕೈ ಬೇವಿಂಜೆ ಕಲ್ಲುವಳ ಮೂಲಕ ತೆರಳುವ ಈ ರಸ್ತೆ ನಿರ್ಮಿಸಿದ್ದರೂ ಇದುವರೆಗೆ ಯಾವುದೇ ಕಾಮಗಾರಿಗಳು ನಡೆದಿಲ್ಲ. ರಸ್ತೆ ನವೀಕರಣ ನಡೆಸಿ ಹಲವಾರು ಕುಟುಂಬಗಳು ವಾಸವಿರುವ ಇಲ್ಲಿ ಕೆಎಸ್ಸಾರ್ಟಿಸಿ ಬಸ್, ಖಾಸಗಿ ಬಸ್ ಸಂಚಾರ ಆರಂಭಗೊಂಡರೆ ಇಲ್ಲಿಗೆ ತೆರಳುವ ಪ್ರವಾಸಿಗರಿಗೆ ಹೆಚ್ಚಿನ ಪ್ರಯೋಜನಕಾರಿಯಾಗಲಿದೆ. ಆದ್ದರಿಂದ ಕೂಡಲೇ ಈ ಪ್ರದೇಶಕ್ಕೆ ಬಸ್ ಮಂಜೂರುಗೊಳಿಸಿ ಪ್ರವಾಸಿಗರಿಗೆ ಸುಗಮ ವಾಹನ ಸಂಚಾರವನ್ನಾಗಿಸಬೇಕೆಂದು ಈ ಪ್ರದೇಶದ ನಾಗರಿಕರು ಸಂಬಂಧಪಟ್ಟ ಪಂಚಾಯತ್ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ನಮ್ಮ ಸನಾತನ ಧರ್ಮವನ್ನು ಉಳಿಸುವ ಪ್ರಯತ್ನ ಇಂದಿನ ಅಗತ್ಯ : ಎಡನೀರು ಶ್ರೀ



ಕಾಸರಗೋಡು: ಪ್ರತಿಯೊಂದು ಆತ್ಮದಲ್ಲಿರುವ ಪರಮಾತ್ಮನ ಚೈತನ್ಯ ಉದ್ದೀಪನಗೊಳಿಸಲು ಭಗವತ್ ಆರಾಧನೆ ಅತೀ ಅಗತ್ಯ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಬ್ರಹ್ಮಕಲಶದ ತತ್ವಮಸಿ ವೇದಿಕೆಯಲ್ಲಿ ಶನಿವಾರ ರಾತ್ರಿ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು.

ಕ್ಷೇತ್ರದ ಅಭಿವೃದ್ಧಿಯೊಂದಿಗೆ ಆಯಾ ಪ್ರದೇಶಗಳ ಜನರ ಏಳಿಗೆಯೂ ಸಾಧ್ಯ. ಇಂದಿನ ಕಾಲಘಟ್ಟದಲ್ಲಿ ಯುವಜನಾಂಗವು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ವಿರಳವಾಗಿ ಕಾಣುತ್ತಿದೆ. ಈ ನಿಟ್ಟಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಯುವ ಜನರು ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ನಮ್ಮ ಸನಾತನ ಧರ್ಮವನ್ನು ಉಳಿಸಲು ಪ್ರಯತ್ನಿಸಬೇಕು ಎಂದು ಶ್ರೀಗಳು ತಿಳಿಸಿದರು.

ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿತ್ತಾಯ ವಿಷ್ಣು ಆಸ್ರ ಮಾತನಾಡಿದರು. ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಕೆ.ಎನ್. ಬಾಲಕೃಷ್ಣನ್ ಚೆನ್ನಿಕೆರೆ ಅಧ್ಯಕ್ಷತೆ ವಹಿಸಿದ್ದರು.

ಶಾಸ್ತರ ಗಣನಾಥರಿಗೆ ಗೌರವ

ಈ ಸಂದರ್ಭ ವೇದಿಕೆಯಲ್ಲಿ ಶ್ರೀ ಕ್ಷೇತ್ರದ ಅರ್ಚಕ ಶಾಸ್ತರ ಗಣನಾಥ ಅವರನ್ನು ಗೌರವಿಸಲಾಯಿತು.

ಭಕ್ತಿಯ ಪ್ರಾರ್ಥನೆಗೆ ಭಗವಂತನ ಅನುಗ್ರಹ

ಅಯ್ಯಪ್ಪ ಸ್ವಾಮಿಯ ತತ್ವಮಸಿ ಎಂಬ ಸಂದೇಶದಂತೆ ಭಕ್ತರು ನಡೆದರೆ ತಮ್ಮ ಇಷ್ಟಾರ್ಥಗಳು ಈಡೇರುವುದು. ನಾವು ಮನಸ್ಸಿನಲ್ಲಿ ಯಾವುದೇ ಕಳಂಕವಿಲ್ಲದೆ ಶುದ್ಧ ಮನಸ್ಸಿನಿಂದ ನಿಷ್ಠೆಯಿಂದ ವ್ರತಧಾರಣೆ ಮಾಡಿ ಪ್ರಾರ್ಥಿಸಿದರೆ ಭಗವಂತನುತಮ್ಮ ಇಷ್ಟಾರ್ಥ ಈಡೇರಿಸುತ್ತಾನೆ.

● ಎಡನೀರು ಶ್ರೀ

ಬ್ರಹ್ಮಕಲಶೋತ್ಸವ ಸಮಿತಿ ರಕ್ಷಾಧಿಕಾರಿ, ವಕೀಲ ಎ.ಸದಾನಂದ ರೈ, ಶ್ರೀ ನುಳ್ಳಿಪ್ಪಾಡಿ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಟ್ರಸ್ಟ್ ಅಧ್ಯಕ್ಷ ಗಣೇಶ್ ಅಮ್ಮೆ, ಪ್ರಧಾನ ಕಾರ್ಯದರ್ಶಿ ಹರೀಶ್‌ಕುಮಾರ್ ಕೆ.ಎಂ.ಕೋಟೆಕಣಿ, ಉಪಾಧ್ಯಕ್ಷರಾದ ರವೀಂದ್ರ ಕೋಟೆಕಣಿ, ರಾಮನ್ ಚೆನ್ನಿಕೆರೆ, ಕೋಶಾಧಿಕಾರಿ ಕಿಶೋರ್‌ಕುಮಾರ್ ಉಪಸ್ಥಿತರಿದ್ದರು.

ಬ್ರಹ್ಮಕಲಶ ಸಮಿತಿ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ರಸಾದ್ ಪಿ.ಎಸ್.ಕೋಟೆಕಣಿ ಸ್ವಾಗತಿಸಿ, ಸಮಿತಿ ಕಾರ್ಯದರ್ಶಿ ಬಿ.ಲೋಕೇಶ್ ಶೆಟ್ಟಿ ವಂದಿಸಿ, ಬ್ರಹ್ಮಕಲಶ ಸಮಿತಿ ಕೋಶಾಧಿಕಾರಿ ದೇವದಾಸ್ ನುಳ್ಳಿಪ್ಪಾಡಿ ನಿರೂಪಿಸಿದರು.

ಕಣಿಪುರ ಶ್ರೀ ದೇವಳದಿಂದ ಪೆರಡಾಲ ಬ್ರಹ್ಮಕಲಶಕ್ಕೆ ಹೊರೆಕಾಣಿಕೆ ಸಮರ್ಪಣೆ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಳ ಬ್ರಹ್ಮಕಲಶೋತ್ಸವಕ್ಕೆ ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಿಂದ ಹಸಿರುವಾಣಿ ಹೊರೆಕಾಣಿಕೆ ಸಮರ್ಪಿಸಲಾಯಿತು. ಕುಂಬಳೆ ಸೀಮೆಯ ಪ್ರಧಾನ ದೇವಸ್ಥಾನದಿಂದ ಆಗಮಿಸಿದ ಸುವಸ್ತುಗಳನ್ನು ಶ್ರೀ ಕ್ಷೇತ್ರದ ವತಿಯಿಂದ ಭಕ್ತಿಪೂರ್ವಕ ಸ್ವೀಕರಿಸಲಾಯಿತು. ಶ್ರೀ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಪ್ರಸಾದ ನೀಡಲಾಯಿತು.

ವೈದಿಕ ಕಾರ್ಯಕ್ರಮಗಳು

ಪ್ರಾತಃಕಾಲ ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮಗಳು, ಪ್ರೋಕ್ತ ಹೋಮ, ಚತುಃಶುದ್ಧಿ ಧಾರಾ, ಅವಗಾಹ, ಪಂಚಕ, ಅಂಕುರ ಪೂಜೆ, ಮಹಾಪೂಜೆ, ಸಂಜೆ ಹೋಮ ಕಲಶಾಭಿಷೇಕ, ಅಂಕುರ ಪೂಜೆ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮಗಳು ಬೆಳಗ್ಗೆ ನಟರಾಜ ವೇದಿಕೆಯಲ್ಲಿ ನಂದಿತಾ ಪೈಮತ್ತು ಬಳಗ ಮಂಗಳೂರು ಇವರಿಂದ ಹಿಂದೂಸ್ಥಾನಿ ಸಂಗೀತ ಮತ್ತು ಭಜನ್, ಅನ್ವಿತಾ ಕೈಪಂಗಳ ಇವರಿಂದ ನೃತ್ಯ ಕಾರ್ಯಕ್ರಮ, ಸಮನ್ವಿತಾ ಗಣೇಶ್ ಅಣಂಗೂರು ಇವರಿಂದ ಭಕ್ತಿ ತರಂಗಿಣಿ, ಮಧ್ಯಾಹ್ನ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರಿಂದ ದಾಸವಾಣಿ, ಪ್ರಸಿದ್ಧ ಯುವ ಗಾಯಕ ರಾಹುಲ್ ವೆಳ್ಳಾಲ್ ಬಳಗದವರಿಂದ ಸಂಗೀತ ಸಂಧ್ಯಾ, ವಿದುಷಿ ಡಾ. ವಿದ್ಯಾಲಕ್ಷ್ಮೀ ಕೆ.ಕುಂಬಳೆ ಇವರ ಶಿಷ್ಯವೃಂದದವರಿಂದ ನೃತ್ಯ ಸಂಭ್ರಮ ನಡೆಯಿತು.

ಕೈಲಾಸ ವೇದಿಕೆಯಲ್ಲಿ ಪ್ರತಿಭಾ ಕೃಷ್ಣಮೂರ್ತಿ ಪುದುಕೋಳಿ ಹಾಗೂ ಅಚಿಂತ್ಯ ಪುದುಕೋಳಿ ಇವರಿಂದ , ಅಶ್ವಿನಿರಾಜ್ ಪಟ್ಟಾಜೆ ಶ್ರೀ ದುರ್ಗಾ ಸಂಗೀತ ಶಾಲೆ ಇವರಿಂದ ಶಾಸ್ತ್ರೀಯ ಸಂಗೀತ, ಶ್ರೀ ಮಹಮ್ಮಾಯಿ ಯಕ್ಷಗಾನ ಕಲಾಸಂಘ ಬಾಯಾರುಪದವು ಇವರಿಂದ ತಾಳಮದ್ದಳೆ, ಸುರೇಶ್ ಗಿನ್ನೆಸ್ ಜಯನಗರ ಇವರಿಂದ ಮಿಮಿಕ್ರಿ, ಅಭಿಜ್ಞಾ ಭಟ್ ಬೊಳುಂಬು ಇವರಿಂದ ಹರಿಕಥಾ ಸತ್ಸಂಗ, ಕೀರ್ತನಾ - ನಂದನಾ ಇವರಿಂದ ಜಾನಪದ ನೃತ್ಯ, ಸಂಜೆ ವಿದುಷಿ ವಿದುಷಿ ಡಾ.ನಿಶಿತಾ ಪುತ್ತೂರು ಇವರಿಂದ ಭರತನಾಟ್ಯ ಪ್ರದರ್ಶನಗೊಂಡಿತು.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ಜರಗುವ ಬ್ರಹ್ಮಕಲಶ , ಭರಣಿ ಮಹೋತ್ಸವದಂಗವಾಗಿ ಶನಿವಾರ ಸಂಜೆ ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ದೈವ ಕ್ಷೇತ್ರದ ಪರಿಸರದಿಂದ ಹಸಿರುವಾಣಿ ಹೊರೆಕಾಣಿಕೆ ವಾಹನಗಳ ಮೂಲಕ ಹೊರಟು ಕನಿಲ ಶ್ರೀ ಭಗವತೀ ಭಂಡಾರ ನಿಲಯದಿಂದ ಶೋಭಾಯಾತ್ರೆ ಮುಖೇನ ಶ್ರೀ ಕ್ಷೇತ್ರಕ್ಕೆ ಆಗಮಿಸಿತು.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ನಡೆಯುವ ಪ್ರತಿಷ್ಠಾ ಬ್ರಹ್ಮಕಲಶ ಹಾಗೂ ಭರಣಿ ಮಹೋತ್ಸವದ ಪ್ರಯುಕ್ತ ಭಾನುವಾರ ಬೆಳಗ್ಗೆ ತಂತ್ರವರ್ಯ ಬ್ರಹ್ಮಶ್ರೀ ಬಡಾಜಿಬೂಡು ಗೋಪಾಲಕೃಷ್ಣ ತಂತ್ರಿಯವರಿಗೆ ಮತ್ತು ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು.

ಸಂಪೂರ್ಣ ಸಾಕ್ಷರತಾ ಘೋಷಣೆ: 35ನೇ ವಾರ್ಷಿಕೋತ್ಸವ ಆಚರಣೆ



ಕಾಸರಗೋಡು: ಕೇರಳ ರಾಜ್ಯ ಸಂಪೂರ್ಣ ಸಾಕ್ಷರತಾ ಘೋಷಣೆಯ 35ನೇ ವಾರ್ಷಿಕೋತ್ಸವವನ್ನು ಕಾಸರಗೋಡು ಜಿಲ್ಲಾ ಸಾಕ್ಷರತಾ ಮಿಷನ್‌ನ ಆಶ್ರಯದಲ್ಲಿ ಹೊಸದುರ್ಗ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಭಾನುವಾರ ಆಚರಿಸಲಾಯಿತು.

ಸ್ಥಳೀಯಾಡಳಿತ ಇಲಾಖೆಯ ಕಾಸರಗೋಡು ಜಿಲ್ಲಾ ಸಹಾಯಕ ನಿರ್ದೇಶಕ ಎನ್. ಮನೋಜ್ ಸಮಾರಂಭವನ್ನು ಉದ್ಘಾಟಿಸಿ, ಕೇರಳವು ಸಾಕ್ಷರ ನಾಡು ಎಂದು ಹೇಳಲು ಹೆಮ್ಮೆಯಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕಾಸರಗೋಡು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಅಧ್ಯಕ್ಷತೆ ವಹಿಸಿದ್ದರು. ಸಾಕ್ಷರತಾ ಆಂದೋಲನದ ನೇತೃತ್ವ ವಹಿಸಿದ್ದ ಪಪ್ಪನ್ ಕುಟ್ಟಮತ್, ಕೆ.ವಿ.ರಾಘವನ್ ಮಾಸ್ಟರ್, ಕೆ.ವಿ.ವಿಜಯನ್ ಮಾಸ್ಟರ್, ಪಿ.ಪಿ.ರಾಜನ್, ಸಿ.ಪಿ.ವಿ.ವಿನೋದ್ ಕುಮಾರ್, ಸಮಾನ ಶಿಕ್ಷಕಿ ಕೆ.ಸರಿತಾ, ಕಚೇರಿ ಸಿಬ್ಬಂದಿ ಎನ್. ಕೆ.ಲಕ್ಷ್ಮಿ, ಕಾಞಂಗಾಡು ನಗರಸಭೆಯ ನಿವೃತ್ತ ನೋಡಲ್ ಪ್ರೇರಕಿ ಆಯೇಷಾ, ರಿಯಾ ಪೌಲ್, ಪ್ರೇರಕಿ ಎಂ.ಗೀತಾ ಮುಂತಾದವರು ಮಾತನಾಡಿದರು.

ಜಿಲ್ಲಾ ಸಾಕ್ಷರತಾ ಮಿಷನ್ ಸಂಯೋಜಕ ಸಿ.ಅಬ್ದುಲ್ ರಶೀದ್ ಸ್ವಾಗತಿಸಿ, ಪ್ರೇರಕ್ ವಿ.ರಜನಿ ವಂದಿಸಿದರು.

ನಿರಂತರ ಕಾರ್ಯಕ್ರಮ ನಡೆಸಲು ರೂಪರೇಷೆ

ಕಾಸರಗೋಡು ಜಿಲ್ಲೆಯ ಪ್ರತಿಯೊರ್ವರೂ ಸಾಕ್ಷರರಾಗಿದ್ದು, ಯಾರೊಬ್ಬರೂ ನಿರಕ್ಷರರು ಇಲ್ಲ ಎಂಬುದು ಅಧ್ಯಯನದಿಂದ ಸಾಬೀತಾಗಿದೆ. ಸಾಕ್ಷರ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲು ರೂಪರೇಷೆ ತಯಾರಿಸಲಾಗಿದೆ.

● ಎನ್.ಮನೋಜ್

ಏ.22-23: ಮೋಪಾಲ ಶ್ರೀ ಮಹಾವಿಷ್ಣು ಕ್ಷೇತ್ರದಲ್ಲಿ ಬಾಲಾಲಯ ಪ್ರತಿಷ್ಠೆ, ನಾಗಪ್ರತಿಷ್ಠೆ

ಕಾಸರಗೋಡು: ಎಡನೀರು ಸಮೀಪವಿರುವ ಮೋಪಾಲ ಶ್ರೀ ಮಹಾ ವಿಷ್ಣು ಕ್ಷೇತ್ರದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ತಂತ್ರಿವರ್ಯರಾದ ಬ್ರಹ್ಮಶ್ರೀ ನೀರ್ಚಾಲು ಶ್ರೀ ರಾಮ ಭಟ್ ನೇತೃತ್ವದಲ್ಲಿ ಏ.22 ಮತ್ತು 23ರಂದು ಬಾಲಾಲಯ ಪ್ರತಿಷ್ಠೆ ಹಾಗೂ ನಾಗ ಪ್ರತಿಷ್ಠೆಯು ವಿವಿಧ ವೈದಿಕ ಕಾರ್ಯಕ್ರಮಗಳೊಂದಿಗೆ ನಡೆಸಲಾಗುವುದು. ಅಲ್ಲದೆ ಏ.26ರಂದು ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ.

ಇತಿಹಾಸ ಹೊಂದಿದೆ

ಮೋಪಾಲ ಶ್ರೀ ಮಹಾವಿಷ್ಣು ಕ್ಷೇತ್ರ ಅನೇಕ ವರ್ಷಗಳ ಇತಿಹಾಸ ಹೊಂದಿದೆ. ಕಾಲದ ಪ್ರಭಾವ ಹಾಗೂ ಬಿಸಿಲು ಮಳೆಯ ಹೊಡೆತಕ್ಕೆ ಸಿಲುಕಿ ಇದು ನಾಶಹೊಂದಿದೆ ಎಂದು ಹೇಳಲಾಗುತ್ತದೆ. ಅನಾಥವಾಗಿ ಬಿದ್ದಿರುವ ಪಾಣಿ ಪೀಠ ಕಂಡು ಮರುಗಿದವರು ಅದೆಷ್ಟೋ ಮಂದಿ. ಅನೇಕ ದೇವಾಲಯಗಳು ನಾಶಹೊಂದಿದ ಭಾರತ ಭೂಮಿಯಲ್ಲಿ



ಸನಾತನ ಸಂಸ್ಕೃತಿ ನಾಶಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ.

ಈ ಪುಣ್ಯಕ್ಷೇತ್ರದ ಹಿಂದಿನ ಸ್ಥಿತಿಗತಿಗಳ ಕುರಿತು ಸಾಕಷ್ಟು ಮಾಹಿತಿಗಳು ಸಂಗ್ರಹವಾಗಿಲ್ಲವಾದರೂ ಇಲ್ಲಿ ಕ್ಷೇತ್ರ ಅಥವಾ ಸಾನಿಧ್ಯ ಇತ್ತು ಎಂಬುದಕ್ಕೆ ಅನೇಕ ಸಾಕ್ಷ್ಯಗಳಿವೆ.

ಈ ಕ್ಷೇತ್ರದ ಅಭಿವೃದ್ಧಿಗೆ ಅನೇಕ ವರ್ಷಗಳ ಹಿಂದೆ ಪ್ರಯತ್ನ ನಡೆಯುತ್ತಾ ಬಂದಿದೆ. ಆದರೆ ಇಂದಿಗೆ ಅದು ಕೂಡಿಬಂದಿದೆ.

ಅನೇಕ ಶತಮಾನಗಳ ಹಿಂದೆ ನಾಶಗೊಂಡಿರುವ ಈ ಕ್ಷೇತ್ರದ ನಿರ್ಮಾಣ ಕಾರ್ಯವು ಭರದಿಂದ ನಡೆಯುತ್ತಿದ್ದು, ಇದೀಗ ನೂತನ ಶಿಲಾಮಯ ಗರ್ಭಗುಡಿ, ನಮಸ್ಕಾರ ಮಂಟಪ ಮತ್ತು ಸುತ್ತು ಗೋಪುರದೊಂದಿಗೆ ನವೀಕರಣಗೊಂಡಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶ ಸಂಭ್ರಮ | ಧಾರ್ಮಿಕ ಸಭೆಯಲ್ಲಿ ಆಶೀರ್ವಚನ

ನಮ್ಮಲ್ಲಿರುವ ಒಳ್ಳೆಯತನ, ಉತ್ತಮ ಭಾವ ಜಾಗೃತಗೊಳಿಸಬೇಕು: ಕೊಂಡೆವೂರು ಶ್ರೀ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ 3ನೇ ದಿನವಾದ ಭಾನುವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಭಾಗವಹಿಸಿ ಆಶೀರ್ವಚನ ನೀಡಿದರು.

ಸನಾತನ ಸಂಸ್ಕೃತಿಯ ಕೇಂದ್ರ ಬಿಂದು ಧಾರ್ಮಿಕ ಕೇಂದ್ರಗಳು. ಒಂದು ದೇವಸ್ಥಾನವು ಆ ಗ್ರಾಮದ ಅಳತೆಗೋಲು ಎಂದರೆ ತಪ್ಪಾಗಲಾರದು. ಅಂತಃಕರಣ ಶುದ್ಧವಾಗಿದ್ದರೆ ಲೋಕವನ್ನು ನೋಡುವ ದೃಷ್ಟಿ ಬದಲಾಗುತ್ತದೆ. ಪ್ರಾಚೀನ ಗ್ರಂಥಗಳು ನಮ್ಮ ಜೀವನಕ್ಕೆ ಅದೆಷ್ಟೋ ಒಳ್ಳೆಯ ಸಂದೇಶ ನೀಡಿವೆ. ನಮ್ಮಲ್ಲಿರುವ ಒಳ್ಳೆಯತನ, ಉತ್ತಮ ಭಾವ



ಜಾಗೃತಗೊಳಿಸಬೇಕು. ದೇವರು ಬಿಂಬವಾದರೆ ನಾವು ದೇವರ ಪ್ರತಿಬಿಂಬ ಎಂಬುದು ಎಲ್ಲಾ ಭಕ್ತರ ಮನದಲ್ಲಿರಬೇಕು ಎಂದರು.

ದೈವ ನರ್ತಕ ಡಾ.ರವೀಶ ಪರವ ಪಡುಮಲೆ ಧಾರ್ಮಿಕ ಭಾಷಣ ಮಾಡಿ, ಪೆರಡಾಲ ಎಂಬ ಹೆಸರು ನಾಡಿನಾದ್ಯಂತ ವಿಸ್ತಾರಗೊಂಡಿದೆ. ಕೇಸರಿ ತೋರಣದೊಂದಿಗೆ ಪೆರಡಾಲ ಶೃಂಗಾರಗೊಂಡಿದೆ. ಬ್ರಹ್ಮಕಲಶ ಎಂದು ಬೆವರು ಸುರಿಸುವ ಸ್ವಯಂಸೇವಕರ ಶ್ರಮಕ್ಕೆ ಬೆಲೆ ಕಟ್ಟಲಾಗದು. ಅವರ ಶ್ರಮದ ಫಲವಾಗಿ ಹತ್ತೂರಿನಲ್ಲಿ ಪೆರಡಾಲ ಎಂಬ ಹೆಸರು ಇಂದು ಮನೆಮಾತಾಗಿದೆ. ಧಾರ್ಮಿಕ ಶ್ರದ್ಧಾಕೇಂದ್ರ ಪೆರಡಾಲದಂತಿರಬೇಕು ಎಂದರು.

ಮಾಜಿ ಶಾಸಕಿ ಶಕುಂತಲಾ ಟಿ.ಶೆಟ್ಟಿ ಪುತ್ತೂರು ಮಾತನಾಡಿ, ಇಂದಿನ ಕಾಲದಲ್ಲಿ ಧಾರ್ಮಿಕತೆಯತ್ತ ಜನರ ಒಲವು ಕಡಿಮೆಯಾಗದೇ ಹಿರಿಯರ ಆದರ್ಶ ಪಾಲಿಸಿಕೊಂಡು ಮುಂದುವರಿಯಬೇಕು ಎಂದರು.

ಖ್ಯಾತ ವಾಸ್ತುಶಿಲ್ಪಿ ಕೃಷ್ಣಪ್ರಸಾದ ಮುನಿಯಂಗಳ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭಾರತ ಸರಕಾರದ ಹುಡ್ಕೋ ಸಂಸ್ಥೆಯ ಮಾಜಿ ಕಾರ್ಯನಿರ್ವಹಣಾಧಿಕಾರಿ ರವೀಂದ್ರ ಆಳ್ವ ಕೋಟೆಕುಂಜ, ಪ್ರಸಿದ್ಧ ವೈದ್ಯ ಡಾ.ನಾಗರಾಜ ಭಟ್ ಚೇತನಡ್ಕ, ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು, ಬ್ರಹ್ಮಶ್ರೀ ವಾಸುದೇವ ಕೊಳತ್ತಾಯ ಕುಂಬಳೆ ಉಪಸ್ಥಿತರಿದ್ದರು.

ಬ್ರಹ್ಮಕಲಶ ಸಮಿತಿ ರಕ್ಷಾಧಿಕಾರಿ ಯೋಗೀಶ ಕಡಮಣ್ಣಾಯ ಅರಿಕ್ಕಾಡಿ, ಕಾಟಿಪಳ್ಳ ಸುಬ್ರಹ್ಮಣ್ಯ ಭಟ್, ಮಲಬಾರ್ ದೇವಸ್ವಂ ಬೋರ್ಡ್‌ನ ಎ.ಕೆ.ಶಂಕರ, ಡಾ.ಎಂ.ಮನೋಹರ ಮುಳ್ಳೇರಿಯ, ಪ್ರಗತಿಪರ ಕೃಷಿಕ ಶಂಕರನಾರಾಯಣ ಭಟ್ ಪೆರುಮುಂಡ, ಉದ್ಯಮಿ ಜಯಪ್ರಸಾದ್ ರೈ ಕಾರಿಂಜ, ಕಾಟುಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳ ಆಡಳಿತ ಮಂಡಳಿ ಸದಸ್ಯ ನಾರಾಯಣ ಕಾಟುಕುಕ್ಕೆ, ಹಿರಿಯರಾದ ಪ್ರಭಾಕರ ಕಲ್ಲೂರಾಯ ಬನದಗದ್ದೆ ಪಾಲ್ಗೊಂಡಿದ್ದರು. ಪ್ರಮುಖರಾದ ಸುಬ್ರಾಯ ಭಟ್ ಪುದ್ಯೋಡು, ಕೃಷ್ಣ ಪ್ರಸಾದ ರೈ ಪೆರಡಾಲ, ಸೂರ್ಯನಾರಾಯಣ ಬಿ., ಶಿವರಾಮ ಭಟ್ ಪೆರ್ಮುಖ, ಶಿವಪ್ರಕಾಶ್ ಎಂ., ಮಂಜುನಾಥ ಆಳ್ವ ಮಡ್ವ ಬಿ.ನಾರಾಯಣ, ಜಯರಾಮ ಪೊನ್ನಂಗಳ, ಸದಾಶಿವ ಪೆರಡಾಲ ಇದ್ದರು. ಬ್ರಹ್ಮಕಲಶ ಸಮಿತಿ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಸ್ವಾಗತಿಸಿ, ಅನಂತಕುಮಾರ್ ಬರ್ಲ ವಂದಿಸಿ, ಪ್ರೊ.ಎ.ಶ್ರೀನಾಥ್ ನಿರೂಪಿಸಿದರು.

ಪರಿಸರ ಸಂರಕ್ಷಣೆ ಮಾಡಬೇಕು

ಹಿರಿಯರು ನೀಡಿದ ಈ ಪುಣ್ಯಭೂಮಿ, ಉತ್ತಮ ಪ್ರಕೃತಿಯನ್ನು ಹಾಗೆ ಉಳಿಸಿಕೊಂಡು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕು. ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗಬೇಕು. ಪ್ಲಾಸ್ಟಿಕ್ ಬಳಕೆ ಆದಷ್ಟು ಕಡಿಮೆಗೊಳಿಸಿ ಕೋಟಿಗಿಂತ ಹೆಚ್ಚು ಬೆಲೆ ಬಾಳುವ ಮನುಷ್ಯ ಜೀವ ಉಳಿಸಿಕೊಳ್ಳಬೇಕು. ಪ್ಲಾಸ್ಟಿಕ್ ಮುಕ್ತ ವಾತಾವರಣ ಸೃಷ್ಟಿಸುವ ಕಾರ್ಯ ನಮ್ಮದಾಗ ಬೇಕು.

● ಕೊಂಡೆವೂರು ಶ್ರೀ

ಸುತ್ತ ಮುತ್ತ

ಭೂ ಅಗೆತ ಕಾಮಗಾರಿ ಕೈಗೊಳ್ಳದಂತೆ ಮೆಸ್ಕಾಂನಿಂದ ಸೂಚನೆ

ಉಡುಪಿ: ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ಹಾಲಿ ಇರುವ 33 ಕೆ.ವಿ ಎಣ್ಣೆಹೊಳೆ ವಿದ್ಯುತ್ ಮಾರ್ಗದಿಂದ 33/11 ಕೆ.ವಿ ಬೈಲೂರು ವಿದ್ಯುತ್ ಕೇಂದ್ರದವರೆಗೆ, 33 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣದ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, 33 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗವು ಬೈಲೂರು ಕಾರ್ಕಳ ಮುಖ್ಯರಸ್ತೆಯ ಎಡಭಾಗದಲ್ಲಿ ಬೈಲೂರು ಪೇಟೆಯ ಟ್ರಿನಿಟಿ ಕಾಂಪ್ಲೆಕ್ಸ್‌ನಿಂದ ಎರ್ಲಪಾಡಿ ತಿರುವಿನವರೆಗೆ, ಎರ್ಲಪಾಡಿ ತಿರುವಿನಿಂದ ಬೈಲೂರು 33 ಕೆ.ವಿ ವಿದ್ಯುತ್ ಕೇಂದ್ರದವರೆಗೆ ಸುಮಾರು 1.5 ಕಿ.ಮೀ. ನಷ್ಟು ಭೂಗತ ಕೇಬಲ್ ಮೂಲಕ ಹಾದು ಹೋಗಿದ್ದು, ಏ.20ರ ಅನಂತರದ ಯಾವುದೇ ದಿನದಿಂದ ಈ ಪ್ರಸರಣ ಮಾರ್ಗದಲ್ಲಿ ವಿದ್ಯುತ್ ಹಾಯಿಸಲು ಉದ್ದೇಶಿಸಲಾಗಿದೆ. ಸದರಿ ವಿದ್ಯುತ್ ಪ್ರಸರಣ ಮಾರ್ಗವು ಹಾದು ಹೋಗುವ ಗ್ರಾಮಗಳ ಪ್ರದೇಶಗಳಲ್ಲಿ ವಾಸಿಸುವವರು ಭೂ–ಅಗತ ಕಾಮಗಾರಿಗಳನ್ನು ಮಾಡುವುದಾಗಲೀ ಅಥವಾ ವಿದ್ಯುತ್ ಪ್ರಸರಣ ಮಾರ್ಗದ ಕೆಳಭಾಗದಲ್ಲಿ ಯಾವುದೇ ತರಹದ ಚಟುವಟಿಕೆಗಳನ್ನು ಕೈಗೊಳ್ಳಬಾರದು. ಈ ಸೂಚನೆಗಳನ್ನು ಉಲ್ಲಂಘಿಸಿದರೆ ಅದರಿಂದ ಉಂಟಾಗಬಹುದಾದ ಕಷ್ಟ ನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆಯೇ ಹೊರತು ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತವು (ಮೆಸ್ಕಾಂ) ಜವಾಬ್ದಾರರಾಗಿರುವುದಿಲ್ಲ ಜೊತೆಗೆ ವಿದ್ಯುಚ್ಛಕ್ತಿ ಕಾಯಿದೆ 2005ರ ಅನ್ವಯ ಶಿಕ್ಷೆಗೆ ಅರ್ಹರಾಗಿರುತ್ತಾರೆ ಎಂಬುವುದನ್ನು ಸಾರ್ವಜನಿಕರು ಗಮನದಲ್ಲಿರಿಸಿಕೊಂಡು ಮೆಸ್ಕಾಂನೊಂದಿಗೆ ಸಹಕರಿಸುವಂತೆ ಮಂಗಳೂರು ಮ.ವಿ.ಸ.ಕಂ.ನಿ.ದ ಉಪನಿಯಂತ್ರಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಅಜೆಕಾರು ಶ್ರೀಕ್ಷೇತ್ರದ ವಾರ್ಷಿಕ ಜಾತ್ರೆ



ಕಾರ್ಕಳ: ಅಜೆಕಾರು ಶ್ರೀ ಮಹಾವಿಷ್ಣು ದೇವರ ವಾರ್ಷಿಕ ರಥೋತ್ಸವವು ಏ. 17 ರಂದು ಜರುಗಿತು.ವೇದಮೂರ್ತಿ ಉಡುಪಿ ವಾದಿರಾಜ ತಂತ್ರಿಯವರ ನೇತೃತ್ವದಲ್ಲಿ ದೇವರ ಉತ್ಸವ ಬಲಿ, ರಂಗಪೂಜೆ, ಪಲ್ಲಪೂಜೆ ಮುಂತಾದ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಷ್ಣುಮೂರ್ತಿ ದೇವರ ಉತ್ಸವ ಮೂರ್ತಿಯ ರಥಾರೋಹಣ ನಡೆಯಿತು. ಈ ಸಂದರ್ಭದಲ್ಲಿ ವ್ಯವಸ್ಥಾನ ಸಮಿತಿಯ ಅಧ್ಯಕ್ಷ ಭರತ್ ಶೆಟ್ಟಿ ಅಜೆಕಾರು, ದೇವಸ್ಯ ಶಿವರಾಮ ಶೆಟ್ಟಿ ವಿಜಯ ಶೆಟ್ಟಿ,ಭಾಸ್ಕರ ಶೆಟ್ಟಿ,ಕುಂರಿನಿ, ಸುಜಯ ಶೆಟ್ಟಿ ಸಮಿತಿ ಸದಸ್ಯರಾದ ಮಜಲುಮನೆ ಪ್ರಕಾಶ್ ಶೆಟ್ಟಿ ಯಶೋಧಾ ಶೆಟ್ಟಿ ಪ್ರೀತೇಶ್ ಶೆಟ್ಟಿ,ಸತೀಶ್ ನಾಯಕ್, ಅರ್ಚಕರಾದ ರಂಗನಾಥ ಭಟ್, ಕೃಷ್ಣಮೂರ್ತಿ ಭಟ್ ಸೇರಿದಂತೆ ಸಾವಿರಾರು ಭಕ್ತಾದಿಗಳು ಪಾಲ್ಗೊಂಡಿದ್ದರು. ಸಂಜೆ ರಥೋತ್ಸವ , ಕೆರೆ ದೀಪ, ಉತ್ಸವ ಬಲಿ ಹಾಗೂ ಧರ್ಮದೈವಗಳ ನೇಮೋತ್ಸವ, ಅವಭೃತ ಸ್ನಾನ ಸೇರಿದಂತೆ ಧಾರ್ಮಿಕ ವಿಧಿವಿಧಾನಗಳು ನಡೆದವು.

ಮೊದಲನೇ ಪುಟದಿಂದ

ಬಿಸಿಲೂಟ!

ಅರಬ್ಬಿ ಸಮುದ್ರದಿಂದ ಬರುವ ಮಾರುತಗಳು ದುರ್ಬಲಗೊಂಡು ಬಂಗಾಳ ಕೊಲ್ಲಿಯತ್ತ ಸಾಗುತ್ತಿರುವುದರಿಂದ ಮಳೆಯ ಪ್ರಮಾಣ ಕುಸಿದಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಬೇಸಿಗೆ ಮಳೆಯ ಕೊರತೆ ದಾಖಲಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದರ ಪರಿಣಾಮವಾಗಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ದುಷ್ಪರಿಣಾಮ ಕಾಣಿಸಿಕೊಳ್ಳುತ್ತಿದೆ.

ಮೀನಿಗೂ ಕೊರತೆ

ಬಿಸಿಲ ತಾಪಕ್ಕೆ ಕೆಲವು ಮೀನು ಜಾತಿಗಳು ಆಳ ಸಮುದ್ರದ ಕಡೆಗೆ ಸರಿಯುತ್ತಿರುವುದಾಗಿ ಮೀನುಗಾರರು ತಿಳಿಸಿದ್ದಾರೆ. ಪರಿಣಾಮವಾಗಿ ಕರಾವಳಿಗೆ ಸಮೀಪದ ಪ್ರದೇಶಗಳಲ್ಲಿ ಮೀನು ಸಿಗುವ ಪ್ರಮಾಣ ಸ್ವಲ್ಪ ಕುಸಿತ ಕಂಡಿದೆ. ವಿಶೇಷವಾಗಿ ಸಣ್ಣ ಬೋಟುಗಳಲ್ಲಿ ಮೀನುಗಾರಿಕೆ ಮಾಡುವವರಿಗೆ ಇದರಿಂದ ತೊಂದರೆ ಉಂಟಾಗಿದೆ.
ಗಾಳಿಯ ದಿಕ್ಕು ಬದಲಾವಣೆ ಹಾಗೂ ಸಮುದ್ರದ ಅಲೆಗಳ ವ್ಯತ್ಯಾಸವೂ ಮೀನುಗಾರಿಕೆಗೆ ಪ್ರಭಾವ ಬೀರುತ್ತಿವೆ. ಕೆಲ ದಿನಗಳಲ್ಲಿ ಸಮುದ್ರ ಸಾಧಾರಣವಾಗಿದ್ದರೂ, ಕೆಲ ಸಂದರ್ಭಗಳಲ್ಲಿ ಬಿಸಿ ಗಾಳಿ ಮತ್ತು ತೇವಾಂಶ ಹೆಚ್ಚಿರುವುದರಿಂದ ಮೀನುಗಾರಿಕೆಗಾಗಿ ಸಮುದ್ರಕ್ಕೆ ತೆರಳುವುದು ಕಷ್ಟವಾಗುತ್ತಿದೆ. ಆದರೂ ದೊಡ್ಡ ಟ್ರಾಲರ್‌ಗಳು ದೂರ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಸಂಪೂರ್ಣ ಕೊರತೆ ಸಲುಂಟಾಗಿಲ್ಲ, ಮತ್ತೊಂದೆಡೆ, ಸ್ಥಳೀಯ ಮಾರುಕಟ್ಟೆಯಲ್ಲಿ ಮೀನುಗಳ ಬೆಲೆಯಲ್ಲಿ ಏರಿಳಿತ ಕಂಡುಬರುತ್ತಿದೆ. ಕೆಲವು ಜಾತಿಯ ಮೀನುಗಳ ಪೂರೈಕೆ ಕಡಿಮೆಯಾಗಿರುವುದರಿಂದ ಬೆಲೆ ಹೆಚ್ಚಾಗಿದ್ದು ಗ್ರಾಹಕರಿಗೂ ಹೊರೆ ಆಗುತ್ತಿದೆ. ಹೋಟೆಲ್ ಮತ್ತು ರೆಸ್ಟೋರೆಂಟ್ ವಲಯವೂ ಇದರಿಂದ ಸಂಕಷ್ಟ ಎದುರಿಸುತ್ತಿದೆ.

2.74 ಕೋ. ರೂ ವೆಚ್ಚದ ಬೃಹತ್ ಯೋಜನಾ ವರದಿ ಸಿದ್ಧ | ಕಾರ್ಕಳ ಪಟ್ಟಣದ ಪ್ರಮುಖ ಜಲಮೂಲ

ಮರುಜನ್ಮಕ್ಕೆ ಸಜ್ಜಾಗಿದೆ ಐತಿಹಾಸಿಕ 'ರಾಮಸಮುದ್ರ ಕೆರೆ'

ಸಂಗಮ ವಿಶೇಷ



ಕಾರ್ಕಳ: ರಾಮಸಮುದ್ರ ಕೆರೆ ಈಗ ಆಧುನಿಕ ಸ್ಪರ್ಶದೊಂದಿಗೆ ಪುನಶ್ಚೇತನಗೊಳ್ಳಲು ಸಜ್ಜಾಗಿದೆ. ಕೇಂದ್ರದ ಅಮೃತ್ 2.0 ಯೋಜನೆಯ 'ಜಲಮೂಲ ಪುನಶ್ಚೇತನ ಅಭಿಯಾನ'ದ ಅಡಿಯಲ್ಲಿ ಈ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 2.74 ಕೋ. ರೂ ವೆಚ್ಚದ ಬೃಹತ್ ಯೋಜನಾ ವರದಿ ಸಿದ್ಧಗೊಂಡಿದ್ದು ಅನುಷ್ಠಾನದ ಹಂತಕ್ಕೆ ತಲುಪಿದೆ.

ರಾಮಸಮುದ್ರ ಕೆರೆಯು ಉಡುಪಿ ಜಿಲ್ಲೆಯ ಕಾರ್ಕಳ ಪಟ್ಟಣದಲ್ಲಿರುವ ಸಿಹಿನೀರಿನ ಸರೋವರ ವಾಗಿದೆ. ಇದು ಕಾರ್ಕಳದಿಂದ ಸುಮಾರು 2 ಕಿ.ಮೀ. ದೂರದಲ್ಲಿದೆ. ರಾಮ ಸಮುದ್ರ ಸರೋವರವನ್ನು ರಾಮ ಸರೋವರ ಎಂದೂ ಕರೆಯುತ್ತಾರೆ. ಈ ಸರೋವರವು ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿದ್ದು, ಹಸಿರು ಕಾಡು, ಬೆಟ್ಟಗಳಿಂದ ಆವೃತವಾಗಿದೆ.

ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿರುವ 14ನೇ ಶತಮಾನದ ಐತಿಹಾಸಿಕ ಜಲಾಶಯವಾಗಿದೆ. ಇದು ಕಾರ್ಕಳ ಪಟ್ಟಣಕ್ಕೆ ಪ್ರಮುಖ ಕುಡಿಯುವ ನೀರಿನ ಮೂಲ ವಾಗಿದ್ದು, ಭೈರವ ಅರಸರ ಕಾಲದಲ್ಲಿ ರಾಜಕುಮಾರ ರಮನಾಥನ ಸವಿನೆನಪಿಗಾಗಿ ನಿರ್ಮಿಸಲಾದ ಈ ಸ್ಥಳವು ಪ್ರವಾಸಿಗರಿಗೆ ನೆಚ್ಚಿನ ತಾಣವಾಗಿದೆ. ಅರಸರ ಕಾಲದಲ್ಲಿ ನಿರ್ಮಾಣಗೊಂಡ ಬೃಹತ್ ಕೆರೆ ಇದು ಕೆರೆಯ ಮೂಲ ಸ್ವರೂಪ ಸಂರಕ್ಷಿಸಿ, ನಾಗರಿಕರಿಗೆ ಸುಸಜ್ಜಿತ ಸೌಲಭ್ಯ ಒದಗಿಸುವುದಕ್ಕಾಗಿ 2.74 ಕೋಟಿ ರೂ. ವೆಚ್ಚದ ಯೋಜನೆ ಸಿದ್ಧವಾಗಿದೆ. ಇದರಲ್ಲಿ 2.03 ಕೋ.ರೂ. ನೇರವಾಗಿ ಕಾಮಗಾರಿಗಳಿಗೆ ಬಳಕೆಯಾಗಲಿದೆ. 17.10 ಲ.ರೂ. ಮುಂದಿನ 5 ವರ್ಷಗಳ ಕಾಲ ಕೆರೆಯ ಸುಸ್ಥಿತಿ ಮತ್ತು ನಿರ್ವಹಣೆಗಾಗಿ ಮೀಸಲಿಡಲಾಗಿದೆ.

ತ್ಯಾಜ್ಯದೇ ಸಮಸ್ಯೆ

ಕಾರ್ಕಳದ ಅಮೂಲ್ಯ ಸಂಪತ್ತಾಗಿದ ಈ ಕೆರೆ ಕಲುಷಿತವಾಗದಂತೆ ಎಚ್ಚರ ವಹಿಸುವುದು ಇಂದಿನ ಅಗತ್ಯ. ಕೆಲವರು ಪ್ಲಾಸ್ಟಿಕ್, ಮದ್ಯದ ಬಾಟಲಿಗಳನ್ನು ಕೆರೆಗೆ ಎಸೆಯುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ. ಅಲ್ಲದೇ ಕಲುಷಿತ ನೀರು ಕೆರೆಗೆ ಸೇರುತ್ತಿದೆ ಎಂಬ ದೂರು ಕೇಳಿ ಬಂದಿತ್ತು. ಒಟ್ಟಿನಲ್ಲಿ ಕೆರೆ ಸಂರಕ್ಷಣೆ ಆಡಳಿತ ಕ್ರಮ ವಹಿಸಲಿ ಎಂಬುದು ಜನರ ಆಗ್ರಹವಾಗಿದೆ.



"ಕೇಂದ್ರ ಸರಕಾರದ ಅಮೃತ್ 2.0 ಯೋಜನೆಯಡಿ ರಾಮಸಮುದ್ರ ಕೆರೆಯನ್ನು ಸಮಗ್ರ ಅಭಿವೃದ್ಧಿ ಪಡಿಸಲಾಗುತ್ತಿದ್ದು ಇದರ ಭಾಗವಾಗಿ ಸುಂದರ ಉದ್ಯಾನವನ ರೂಪಿಸಲಾಗುವುದು. ಜಲಮೂಲ ಸಂರಕ್ಷಣೆ ಮುಖ್ಯ ಆಶಯ ಹೊಂದಿದ್ದು ವ್ಯವಸ್ಥಿತ ತಡೆಗೋಡೆ ನಿರ್ಮಾಣವಾಗಲಿದೆ. ಜೊತೆಗೆ ಪ್ರವಾಸಿಗರಿಗೆ ಹಾಗೂ ಸ್ಥಳೀಯರಿಗೆ ನೆಚ್ಚಿನ ತಾಣವನ್ನಾಗಿಸುವ ನಿಟ್ಟಿನಲ್ಲಿ ಸಮಗ್ರವಾಗಿ 3 ಕೋ.ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.
● ವಿ. ಸುನೀಲ್ ಕುಮಾರ್, ಶಾಸಕ

ಹಲವು ವಿಶೇಷತೆಗಳು

- ಈ ಕೆರೆಯ ದಂಡೆಯುದಕ್ಕೂ 225 ಮೀ. ಉದ್ದದ ಸುಂದರ ನಡಿಗೆ ಪಥ ನಿರ್ಮಾಣಕ್ಕೆ ನೀಲನಕ್ಷೆ
- 92.24 ಲಕ್ಷರೂ. ವೆಚ್ಚದಲ್ಲಿ ಗೇಬಿಯನ್ ತಡೆಗೋಡೆ
- 1194 ಚ. ಮೀ. ವ್ಯಾಪ್ತಿಯಲ್ಲಿ ಪೇವ್ ಪ್ಲಾಜಾ ನಿರ್ಮಿಸಿ ಅಲಂಕಾರಿಕ ದೀಪಗಳು, ಆಸನ ಅಳವಡಿಕೆ.
- ಜಲ ಪ್ರವಾಸೋದ್ಯಮಕ್ಕೆ ಒತ್ತು ನೀಡಲು 12.03 ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತ ಬೋಟ್
- ಈ ಕೆರೆಯ ದಂಡೆಯ ಮೇಲೆ 60 ಲಕ್ಷ ರೂ. ವೆಚ್ಚದಲ್ಲಿ ಸುಂದರವಾದ ಪಾರ್ಕ್ ನಿರ್ಮಾಣ

ಪತ್ರಿಕೆಗಳ ಓದಿನಿಂದ ನಾಗರಿಕ ಪ್ರಜ್ಞೆ ಜಾಗೃತಿ: ಚಾರುಕೀರ್ತಿ ಸ್ವಾಮೀಜಿ ಸಲಹೆ



ಕುಂದಾಪುರ: ಪತ್ರಿಕೆಗಳು ಬಂಧುತ್ವವನ್ನು ನೀಡುತ್ತದೆ. ಸಮಾಜದ ಬಂಧುತ್ವವನ್ನು ಬೆಳೆಸುತ್ತದೆ.ಸಭ್ಯನಾಗರಿಕರನ್ನುಗುರುತಿಸುವ ಕೆಲಸ ಮಾಡುತ್ತಿದೆ. ಸುಸಂಸ್ಕೃತ, ಸಭ್ಯತೆ ಮತ್ತು ನಾಗರಿಕತೆಯನ್ನು ಪ್ರಜ್ಞೆಯನ್ನು ಪತ್ರಿಕೆಗಳು ಬೆಳೆಸುತ್ತವೆ. ಚಿತ್ರಕಲೆ ನಮ್ಮ ಮನಸ್ಸನ್ನು ಕೆರಳಿಸುವ, ಅರಳಿಸುವ ಕೆಲಸ ಮಾಡುತ್ತದೆ. ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮಿಕತೆ ಯಾವುದರಲ್ಲಿ ಇದೆಯೋ ಅದನ್ನು ಸ್ವೀಕಾರ ಮಾಡುವ ಗುಣ ನಮ್ಮಲ್ಲಿ ಇಲ್ಲದಿದ್ದರೆ ನಾವು ಮನುಷ್ಯರಲ್ಲ ಎಂದು ಮೂಡುಬಿದರೆ ಜೈನ ಮಠದ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಪಟ್ಟಾಚಾರ್ಯವರ್ಯ ಸ್ವಾಮಿ ಹೇಳಿದರು.

ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಆರ್. ಎನ್. ಶೆಟ್ಟಿ ಸಭಾಂಗಣದಲ್ಲಿ ಕುಂದಾಪುರದ ಕುಂದಪ್ರಭ ಸಂಸ್ಥೆಯಿಂದ ಶ್ರೇಷ್ಠ ಸಾಧಕರಿಗೆ ನೀಡಲ್ಪಡುತ್ತಿರುವ 'ಕೋ. ಮ. ಕಾರಂತ ಪ್ರಶಸ್ತಿ'ಯನ್ನು ಪ್ರತಿಭಾವಂತ ಕುಂಚ ಕಲಾವಿದ, ಉದ್ಯಮಿ ಬಳ್ಕೂರು ಜಯರಾಮ ಉಡುಪರಿಗೆ ಭಾನುವಾರ ಪ್ರದಾನ ಮಾಡಿ, ಆಶೀರ್ವಚನ ನೀಡಿದರು.

ಜಯರಾಮ ಉಡುಪ ನಮ್ಮ ದೇಶದ ಆತ್ಮನಿರ್ಭರ ಭಾರತಕ್ಕೆ ದೊಡ್ಡ ಕೊಡುಗೆಯನ್ನು ನೀಡಿದ ಶ್ರೇಷ್ಠ ವ್ಯಕ್ತಿ. ಕಾರ್ಟೂನ್ ಚಿತ್ರದ ಮೂಲಕ ಸಭ್ಯ ನಾಗರಿಕತೆಯನ್ನು ಗುರುತಿಸುವ ಕೆಲಸ ಮಾಡುತ್ತಿದ್ದಾರೆ. ಇವರನ್ನು ಸನ್ಮಾನಿಸುವುದು ದೇಶಪ್ರೇಮಿಯನ್ನು, ಸೇನಾನಿಯನ್ನು ಸನ್ಮಾನ ಮಾಡಿದಷ್ಟೇ ಸಂತಸ ನೀಡಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಶುಭ ಹಾರೈಸಿದರು. ಬಳ್ಕೂರು ಜಯರಾಮ ಉಡುಪ ಅವರು ರಚಿಸಿದ ಚಿತ್ರಗಳ ಪ್ರದರ್ಶನವನ್ನು ಹಿರಿಯ ಕಲಾವಿದ, ಕರ್ನಾಟಕ ಬ್ಯಾಂಕ್‌ನ ಮಾಜಿ ನಿರ್ದೇಶಕ ಡಾ. ಎಚ್. ರಾಮಮೋಹನ್ ಉದ್ಘಾಟಿಸಿ ಶುಭಾಶಂಸನೆಗೈದರು. ಭಂಡಾರ್‌ಕಾರ್ಸ್ ಕಾಲೇಜಿನ ವಿಶ್ವಸ್ಥ ಮಂಡಳಿ ಉಪಾಧ್ಯಕ್ಷ ಕೆ. ಶಾಂತಾರಾಮ ಪ್ರಭು ಸಾಧಕರನ್ನು ಗೌರವಿಸಿದರು.

ಕುಂದಪ್ರಭ ಸಂಸ್ಥೆಯ ಯು.ಎಸ್.ಶೆಣೈ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉಪನ್ಯಾಸಕ ವಿಶ್ವನಾಥ ಕರಬ ಕಾರ್ಯಕ್ರಮ ನಿರ್ವಹಿಸಿ ಸನ್ಮಾನ ಪತ್ರ ವಾಚಿಸಿದರು.

ಕೊಡವೂರು ಶ್ರೀ ಶಂಕರನಾರಾಯಣ ದೇವಳ: ಮೇ 14ರಿಂದ ರುದ್ರಯಾಗ



ಉಡುಪಿ: ಲೋಕ ಕಲ್ಯಾಣಾರ್ಥವಾಗಿ ನಾಡಿನ ಜನರ ಸುಭೀಕ್ಷೆಗಾಗಿ ಮೇ 14ರಿಂದ 19ರವರೆಗೆ ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಮಹಾರುದ್ರಯಾಗ ಹಮ್ಮಿಕೊಳ್ಳಲಾಗಿದೆ ಎಂದು ಮಹಾ ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಮತ್ತು ಸೇವಾಕರ್ತ ಪ್ರಸಾದ್ ರಾಜ್ ಕಾಂಚನ್ ಹೇಳಿದರು.

ಈ ಕುರಿತು ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಈ ಮಹಾರುದ್ರ ಯಾಗವನ್ನು ನಾಡ ಹಬ್ಬದಂತೆ ಆಚರಿಸಲು ನಿರ್ಧರಿಸಿದ್ದೇವೆ. ಮೇ 10ರಿಂದ ಮೇ 20ರವರೆಗೆ ಮನೋರಂಜನೆಗಾಗಿ ಜಾಯಿಂಟ್ ವಿಲ್, ಮೋಜು ಮಸ್ತಿಗಳು, ಆಟಿಕೆಗಳು, ಆಟೋಟ ಪರಿಕರಗಳು, ಬೃಹತ್ ವಸ್ತು ಪ್ರದರ್ಶನ ಮಾರಾಟ ಮಳಿಗೆಗಳು ಮನರಂಜಿಸಲಿವೆ.

ಮೇ 14ಕ್ಕೆ ಮಹಾರುದ್ರಾ ಯಾಗ ಪೂರ್ವ ಭಾವಿಯಾಗಿ ಮಲ್ಪೆಯಿಂದ ಕೊಡವೂರು ಮಹತೋಭಾರ ಶಂಕರನಾರಯಣ ದೇವಸ್ಥಾನದವರೆಗೆ ಭವ್ಯ ಹೊರೆಕಾಣಿಕೆ ಮೆರವಣಿಗೆ ನಡೆಯಲಿದೆ. ಮೇ 15ಕ್ಕೆ ಮಹಾರುದ್ರ ಯಾಗ, ಗಣಯಾಗ ಧಾರ್ಮಿಕ ವಿಧಿವಿಧಾನಗಳು ಆರಂಭಗೊಳ್ಳಲಿರುವುದು. ಅದೇ ದಿನ ಸಂಜೆ ಧಾರ್ಮಿಕ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ ಎಂದರು.

ಮೇ 16ಕ್ಕೆ ಆರೋಗ್ಯ ಶಿಬಿರ ನಡೆಯಲಿದೆ. ಮೇ 17ಕ್ಕೆ ಮಲ್ಪೆ ಬೀಚ್‌ನಲ್ಲಿ ವಿವಿಧ ಸಾಂಪ್ರದಾಯಿಕ ಕ್ರೀಡಾಕೂಟ ಸ್ಪರ್ಧೆ ನಡೆಯಲಿದ್ದು, ಅಂದು ಸಂಜೆ 6ಕ್ಕೆ ಮಲ್ಪೆ ಕಡಲ ತೀರದಲ್ಲಿ ವಾರಣಾಸಿಯ ಪುರೋಹಿತರಿಂದ ಗಂಗಾರತಿ ನೆರವೇರಲಿದೆ. ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾತ್ರಿ 8ಕ್ಕೆ ದಕ್ಷಿಣ ಭಾರತದ ಹಾಡುಗಾರ್ತಿ ಮಂಗ್ಲಿ ಅವರು ಸಂಗೀತ ರಸಮಂಜರಿ ಪ್ರಸ್ತುಪಡಿಸಲಿದ್ದಾರೆ. ಮೇ 18ಕ್ಕೆ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, ದೇಶದ ಮೂಲೆ ಮೂಲೆಗಳಿಂದ ವಿವಿಧ ಸಂಸ್ಥೆಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದಾರೆ. ಮೇ 19ರಂದು ಮಹಾರುದ್ರ ಯಾಗ ಕೊನೆಯ ದಿನದಂದು ಪೂರ್ಣಾಹುತಿ ನಡೆಯಲಿದೆ. ಪ್ರತಿದಿನ 5 ರಿಂದ 8 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು. ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಕಾಶ್ ಕೊಡವೂರು, ಪುರೋಹಿತರಾದ ವಾದಿರಾಜ ತಂತ್ರಿ ಪುತ್ತೂರು, ತಾರಾನಾಥ ಪೂಜಾರಿ,ರಮೇಶ್ ತಿಂಗಳಾಯ, ಬಾಲಕೃಷ್ಣ ಕೊಡವೂರು, ನಂದಕಿಶೋರ್, ವಾದಿರಾಜ ಸಾಲಿಯಾನ್, ಡಾ. ವಿಜಯೇಂದ್ರ, ಹರಿಯಪ್ಪ ಇದ್ದರು.

ಏ.26ರಿಂದ ಶಿವಪುರ ಶಂಕರದೇವ ದೇವಳದ ಬ್ರಹ್ಮಕಲಶೋತ್ಸವ, ಜಾತ್ರೆ



ಕಾರ್ಕಳ: ಶಿವಪುರ ಶಂಕರದೇವ ದೇವಸ್ಥಾನದ ಬ್ರಹ್ಮಕಲಶೋತ್ಸವದ ಆಮಂತ್ರಣವನ್ನು ಶುಕ್ರವಾರ ದೇವಸ್ಥಾನದಲ್ಲಿ ಬಿಡುಗಡೆಗೊಳಿಸಲಾಯಿತು.

ಏ.26ರಿಂದ ಮೇ 6ರ ತನಕ ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಜಾತ್ರ ಮಹೋತ್ಸವದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ.


ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ವಿಶ್ವನಾಥ ನಾಯಕ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಾಸುದೇವ ಭಟ್, ವಿವಿಧ ಪ್ರಮುಖರಾದ ಮೂರ್ಸಾಲು ಮೋಹನದಾಸ ನಾಯಕ್, ಚಂದ್ರಶೇಖರ ಶೆಟ್ಟಿ ಶಿವಪುರ ಶ್ರೀನಿವಾಸ ಹೆಬ್ಬಾರ್, ಸಂತೋಷ ಕುಮಾರ್ ಶೆಟ್ಟಿ ಬೈಕಾಡಿ ಮಂಜುನಾಥ ರಾವ್ ಶಿವಪುರ, ಮಹಾಬಲೇಶ್ವರ ಅಡಿಗ, ರಮೇಶ ಕುಮಾರ್, ಸುನಂದ ಕುಲಾಲ್, ವಿಶಾಲಾಕ್ಷಿ ಶೆಟ್ಟಿ, ವಿವಿಧ ಉಪ ಸಮಿತಿಯ ಪ್ರಮುಖರು, ವ್ಯವಸ್ಥಾಪನಾ ಸಮಿತಿಯ ಸದಸ್ಯರು, ಅರ್ಚಕರ ವೃಂದದವರು, ಜೀರ್ಣೋದ್ಧಾರ ಸಮಿತಿಯ ಸದಸ್ಯರು, ಊರಿನ ಪ್ರಮುಖರ, ಗಣ್ಯರು, ಭಕ್ತಸಮೂಹ ಉಪಸ್ಥಿತರಿದ್ದರು.

ಪರಾರಿ ಬೊಬ್ಬರ್ಯ ದೈವಸ್ಥಾನದ ಪುನರ್ ಪ್ರತಿಷ್ಠೆ: ವಿವಿಧ ಕಾರ್ಯಕ್ರಮ



ಬ್ರಹ್ಮಾವರ: ಪರಾರಿ ಬೊಬ್ಬರ್ಯ ದೈವಸ್ಥಾನ ಪುನರ್ ಪ್ರತಿಷ್ಠೆ ಅಂಗವಾಗಿ ಭಾನುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಪೂರ್ವಕವಾಗಿ ನಡೆದವು.

ಸಂಜೆ ಬಿಂಬ ಸಂಕೋಚ, ಸಪ್ತಾದಿವಾಸ ಪೂಜೆ, ಪ್ರತಿಷ್ಠಾದಿವಾಸ ಹೋಮ, ಶಿಖರಾದಿವಾಸ, ಶಯ್ಯಾಕಲ್ಪ ಧಾರ್ಮಿಕ ವಿಧಿ ವಿಧಾನಗಳು ನಾರಾಯಣ ತಂತ್ರಿ ಕೊರಂಗರಪಾಡಿ ಇವರ ಪೌರಾಹಿತ್ಯದಲ್ಲಿ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮವಾಗಿ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು.
ಈ ಸಂದರ್ಭ ಪರಾರಿ ಬೊಬ್ಬರ್ಯ ದೈವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗುರುರಾಜ್ ಭಟ್ ಕೊಳಲಗಿರಿ, ಗೌರವಾಧ್ಯಕ್ಷ ಕೀಳಿಂಜೆ ಸತೀಷ್ ಪೂಜಾರಿ, ಪ್ರಧಾನ ಅರ್ಚಕ ಲಕ್ಷ್ಮೀಶ ಭಟ್ ಪರಾರಿ, ಪದಾಧಿಕಾರಿಗಳು, ಭಕ್ತಾದಿಗಳು ಸೇರಿದ್ದರು.



ನಿಟ್ಟೆ ಸಮೂಹ ವಿದ್ಯಾಸಂಸ್ಥೆಗಳ ಫುಟ್ಬಾಲ್ ಕ್ರೀಡಾಪಟುಗಳು ಹಾಗೂ ಮಣಿಪಾಲದ ವಿಕ್ಟೋರಿಯಾ ಫುಟ್ಬಾಲ್ ಕ್ಲಬ್ ನಡುವಿನ ಹೊನಲುಬೆಳಕಿನ ಫುಟ್ಬಾಲ್ ಪಂದ್ಯಾಟವು ಇತ್ತೀಚೆಗೆ ನಿಟ್ಟೆಯ ಕ್ಯಾಂಪಸ್‌ನ ಆವರಣದ ಫುಟ್ಬಾಲ್ ಮೈದಾನದಲ್ಲಿ ನಡೆಸಲಾಯಿತು. ನಿಟ್ಟೆ ತಂಡವು ಮಣಿಪಾಲದ ವಿಕ್ಟೋರಿಯಾ ಫುಟ್ಬಾಲ್ ಕ್ಲಬ್ ವಿರುದ್ಧ 3–2 ಗೋಲುಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿತು.

ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಳ: ವಸಂತ ವೇದ ಶಿಬಿರ ಉದ್ಘಾಟನೆ



ಕೋಟ: ಪಾಕಿಸ್ತಾನದ ಗಡಿಯಲ್ಲಿದ್ದರೂ ಅಪ್ಪ ಉಪದೇಶಿಸಿದ ಹತ್ತು ಗಾಯತ್ರಿ ಮಂತ್ರ ಪಠಿಸಿದರೆ ಮಾತ್ರ ಸಮಾಧಾನವಾಗುತ್ತಿತ್ತು ಎಂದು ನಿವೃತ್ತ ಸೈನಿಕ ಬೈಂದೂರು ಚಂದ್ರಶೇಖರ ನಾವಡ ಹೇಳಿದರು.

ಸಾಲಿಗ್ರಾಮದ ಶ್ರೀ ಗುರುನರಸಿಂಹ ದೇವಸ್ಥಾನದಲ್ಲಿ ಪ್ರತಿವರ್ಷ ನಡೆಸಲ್ಪಡುವ ವಸಂತ ವೇದ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ನಮಗೆ ಬಾಲ್ಯದಲ್ಲಿ ಸಂಧ್ಯಾ ವಂದನೆ, ಸಂಜೆ ಭಜನೆ ಮೊದಲಾದ ಸಂಸ್ಕಾರಗಳು ಹೇಳಿಕೊಡುತ್ತಿದ್ದರು. ಈಗ ಬೇರೆಯವರು ಅಪಹಾಸ್ಯ ಮಾಡುತ್ತಾರೆ. ಮೊದಲಾದ ಕಾರಣಗಳಿಗೆ ಈ ಸಂಸ್ಕಾರಗಳಿಂದ ವಿಮುಖರಾಗುತ್ತಿದ್ದಾರೆ ಎಂದರು.

ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಕಾಶ್ ಕಾರಂತ್ ಶಿಬಿರ ಉದ್ಘಾಟಿಸಿದರು. ಪರಶುರಾಮ ಭಟ್ ವಿದ್ಯಾರ್ಥಿಗಳಿಗೆ ಶಿಬಿರದ ನಿಯಮಗಳ ಬಗ್ಗೆ ಮಾಹಿತಿ ನೀಡಿದರು. ಆಡಳಿತ ಮಂಡಳಿ ಉಪಾಧ್ಯಕ್ಷ ಚಂದ್ರಶೇಖರ ಉಪಾಧ್ಯ, ಕಾರ್ಯದರ್ಶಿ ಪರುಶರಾಮ ಭಟ್ , ಸದಸ್ಯ ತಾರಾನಾಥ ಹೊಳ್ಳ, ಮಾಜಿ ಅಧ್ಯಕ್ಷ ಜಗದೀಶ್ ಕಾರಂತ, ಕೇಂದ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀಪತಿ ಅಧಿ ಕಾರಿ ಇದ್ದರು. ಅಖಿಲೇಶ್ ನಿರೂಪಿಸಿದರು. ನಾಗರಾಜ್ ಹಂದೆ ಸ್ವಾಗತಿಸಿ, ಕೂಟ ಮಹಾಜಗತ್ತು ಸಾಲಿಗ್ರಾಮ ಅಧ್ಯಕ್ಷ ಪಿ.ಸಿ ಹೊಳ್ಳ ವಂದಿಸಿದರು.

ಬಡಗಬೆಟ್ಟು ಸೊಸೈಟಿಗೆ ಆರ್ಥಿಕ ವರ್ಷದಲ್ಲಿ 18.13 ಕೋ. ರೂ. ಲಾಭ

ಉಡುಪಿ: ರಾಜ್ಯದ ಪ್ರತಿಷ್ಠಿತ ಸಹಕಾರ ಸಂಸ್ಥೆಯಾದ ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು 2025–26ನೇ ಸಾಲಿನಲ್ಲಿ 4,062.29 ಕೋಟಿ ರೂ. ವಾರ್ಷಿಕ ವಹಿವಾಟು ನಡೆಸಿ, 18.13 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘವು ಪ್ರಸ್ತುತ 658.80 ಕೋಟಿ ರೂ. ಠೇವಣಿ ಹಾಗೂ 533.96 ಕೋಟಿ ರೂ. ಹೊರಬಾಕಿ ಸಾಲ ಹೊಂದಿದ್ದು, ಒಟ್ಟು 791.46 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದೆ. ಶೀಘ್ರದಲ್ಲೇ ಕುಂದಾಪುರದಲ್ಲಿ ಸಂಸ್ಥೆಯ 12ನೇ ಶಾಖೆ ಆರಂಭವಾಗಲಿದ್ದು, ಉಡುಪಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ 'ಸಹಕಾರ ಸೌಧ' ನಿರ್ಮಿಸುವ ಗುರಿ ಹೊಂದಲಾಗಿದೆ ಎಂದರು. ಸಂಘಕ್ಕೆ ಈ ಬಾರಿ ರಾಜ್ಯ ಮಟ್ಟದ 'ಸಹಕಾರ ಮಾಣಿಕ್ಯ' ಪ್ರಶಸ್ತಿ ಲಭಿಸಿದ್ದು ಸಾಮಾಜಿಕ ಹೊಣೆಗಾರಿಕೆಯಡಿ ಶಿಕ್ಷಣ ಮತ್ತು ಆರೋಗ್ಯಕ್ಕೆ ವಾರ್ಷಿಕ 25 ಲಕ್ಷ ರೂ. ಮೀಸಲಿಡಲಾಗುತ್ತಿದೆ. ತಾಂತ್ರಿಕ ಪ್ರಗತಿಯ ಭಾಗವಾಗಿ 'ಚೇತನಾ ಮೊಬೈಲ್ ಆ್ಯಪ್' ಮೂಲಕ ಡಿಜಿಟಲ್ ಸೇವೆ ನೀಡಲಾಗುತ್ತಿದೆ. ಮುಂದಿನ ವರ್ಷಕ್ಕೆ 1,400 ಕೋಟಿ ರೂ. ಒಟ್ಟು ವ್ಯವಹಾರದ ಗುರಿ ಹಮ್ಮಿಕೊಳ್ಳಲಾಗಿದೆ.

ಉಪಾಧ್ಯಕ್ಷ ಜಾರ್ಜ್ ಸಾಮ್ಯುಯೆಲ್, ಆಡಳಿತ ಮಂಡಳಿ ಸದಸ್ಯರಾದ ಸಂಜೀವ ಕಾಂಚನ್, ಪುರುಷೋತ್ತಮ ಪಿ. ಶೆಟ್ಟಿ ಉಮಾನಾಥ ಎಲ್., ವಿನಯ ಕುಮಾರ್ ಟಿ.ಎ., ಪದ್ಮನಾಭ ನಾಯಕ್, ಹಾಜಿ ಸೈಯದ್ ಅಬ್ದುಲ್ ರಜಾಕ್, ಸದಾಶಿವ ನಾಯ್ಕ, ಮನೋಹರ ಎಸ್. ಶೆಟ್ಟಿ ಸಾಧು ಸಾಲ್ಯಾನ್, ಜಯಾ ಶೆಟ್ಟಿ ಗಾಯತ್ರಿ ಎಸ್. ಭಟ್, ಪ್ರಧಾನ ವ್ಯವಸ್ಥಾಪಕ ರಾಜೇಶ್ ವಿ. ಶೇರಿಗಾರ್ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

ಭಟ್ರಕೋಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ | ವಿಜ್ಞಾಪನಾ ಪತ್ರ ಬಿಡುಗಡೆ ಕಾರ್ಯಕ್ರಮ

ದೇವಾಲಯಕ್ಕೆ ವಾರಕ್ಕೊಮ್ಮೆ ಹೋಗುವ ರೂಢಿ ಬೆಳೆಸಿಕೊಳ್ಳಿ: ಡಾ. ಬಲ್ಲಾಳ್



ಉಡುಪಿ: ಇಲ್ಲಿನ ಹಿರೇಬೆಟ್ಟು ಗ್ರಾಮದ ಭಟ್ರಕೋಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಅಂಗವಾಗಿ ಸಾರ್ವಜನಿಕರಿಗೆ ವಿಜ್ಞಾಪನಾ ಪತ್ರ ಬಿಡುಗಡೆ ಸಮಾರಂಭವು ಭಾನುವಾರ ನಡೆಯಿತು.

ಮಾಹೆ ಮಣಿಪಾಲದ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ವಿಜ್ಞಾಪನಾ ಪತ್ರ ಬಿಡುಗಡೆಗೊಳಿಸಿ, ಜನರು ಒಂದೆಡೆ ಸೇರಿ ಮಾಡುವ ಕೆಲಸ ಯಶಸ್ವಿಯಾಗುತ್ತದೆ. ಮಣಿಪಾಲ ಇಂದು ಈ ಮಟ್ಟಕ್ಕೆ ಜನರಿಂದಲೇ ಬೆಳೆದಿದೆ. ಇತರ ಧರ್ಮಿಯರು ವಾರದಲ್ಲಿ ಒಂದು ದಿನ ತಮ್ಮ ಆರಾಧನಾ ಸ್ಥಳಗಳಿಗೆ ತಪ್ಪದೇ ಹೋಗುತ್ತಾರೆ. ನಾವು ಕೂಡ ದೇವಾಲಯಗಳಿಗೆ ಹೋಗುವ ಒಳ್ಳೆಯ ಅಭ್ಯಾಸ ರೂಢಿಸಿಕೊಳ್ಳಬೇಕು, ಆಗ ಅಲ್ಲಿ ಧರ್ಮದ ಜಾಗೃತಿಯಾಗುತ್ತದೆ. ದೇವಾಲಯಗಳು ಸುಸ್ಥಿತಿಯಲ್ಲಿ ಉಳಿಯುತ್ತವೆ. ಆದ್ದರಿಂದ ಈ ಪುರಾತನ ದೇವಾಲಯವನ್ನು ಎಲ್ಲರೂ ಸೇರಿ ಜೀರ್ಣೋದ್ಧಾರ ಮಾಡೋಣ ಎಂದು ಆಶಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು, ಜೀರ್ಣೋದ್ಧಾರದಂತಹ ಕೆಲಸಗಳು ಊರವರನ್ನು ಪಕ್ಷಬೇಧ ಮರೆತು ಒಂದೆಡೆ ಸೇರಿಸುವುದಕ್ಕೆ, ಸೌಹಾರ್ದತೆಗೆ ಕಾರಣವಾಗುತ್ತವೆ. ಹಣ ಇಲ್ಲದೇ ದೇವಾಲಯಗಳ ಕೆಲಸ ನಿಂತ ಉದಾಹರಣೆಗಳಿಲ್ಲ, ಊರವರು ಸೇರಿ ನಿಷ್ಠೆಯಿಂದ, ಭಕ್ತಿಯಿಂದ ಕೆಲಸ ಮಾಡಿದಾಗ ಅಸಾಧ್ಯ ಕೆಲಸ ಕೂಡ ಸಾಧ್ಯವಾಗುತ್ತದೆ ಎನ್ನುವುದಕ್ಕೆ ಕುಗ್ರಾಮಗಳಲ್ಲಿರುವ ದೇವಾಲಯಗಳ ಜೀರ್ಣೋದ್ಧಾರವಾಗಿರುವುದೇ ಸಾಕ್ಷಿ ಎಂದರು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು, ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಾಜಿ ಸಚಿವ ವಿನಯಕುಮಾರ್ ಸೊರಕೆ ಅವರು, ನಮ್ಮ ಮನೆಗಳು ಚೆನ್ನಾಗಿದ್ದರೆ ಸಾಲದು, ಊರಿನ ದೇವಸ್ಥಾನಗಳು ಕೂಡ ಚೆನ್ನಾಗಿರಬೇಕು. ಆಗ ಮಾತ್ರ ಊರಿಗೆ ಹಿತ ಆಗುತ್ತದೆ, ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಕೆಲಗಳಿಗೆ ತಾನು ಕೈಜೋಡಿಸುವುದಾಗಿ ಭರವಸೆ ನೀಡಿದರು. ಮಣಿಪಾಲ ವೈಷ್ಣವಿದುರ್ಗಾ ದೇವಾಲಯದ ಅಧ್ಯಕ್ಷ ಜಯರಾಜ್ ಹೆಗ್ಡೆ ಮತ್ತು ದೇವಳದ ಅರ್ಚಕ ಕುಟುಂಬದ ಸೀತಾರಾಮ ಭಟ್ ಇದ್ದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶ್ರೀನಿಧಿ ಹೆಗ್ಡೆ ಹಿರೇಬೆಟ್ಟು ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಬೆಲ್ಚತ್ರೆ ಸಚ್ಚಿದಾನಂದ ನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ದಿನೇಶ್ ನಾಯಕ್ ನಿರೂಪಿಸಿ, ಚಂದ್ರಶೇಖರ ನಾಯಕ್ ವಂದಿಸಿದರು.

"ದೇವಾಲಯಗಳ ಜೀರ್ಣೋದ್ಧಾರ ಎಂದರೇ ದೈವ ಋಣ, ಸಮಾಜ ಋಣ ತೀರಿಸುವುದಕ್ಕೊಂದು ಸದವಕಾಶ. ಈ ಸದವಕಾಶ ಎಲ್ಲರೂ ಸದುಪಯೋಗಪಡಿಸಿಕೊಳ್ಳೋಣ. ಶಾಸಕನಾಗಿ ಸಂಪೂರ್ಣ ಸಹಕಾರ ನೀಡುವೆ.
● ಗುರ್ಮೆ ಸುರೇಶ್ ಶೆಟ್ಟಿ, ಶಾಸಕ